ಗುರುಕರುಣೆ-ಗುರುಸ್ಮರಣೆ



ಪರಮಪೂಜ್ಯ ಶ್ರೀ ಶಾಂತವೀರ ಮಹಾಸ್ವಾಮಿಗಳವರು
ಬಬಲೇಶ್ವರ

ಲಕ್ಕಪ್ಪ ಅವ್ವಪ್ಪ ಶಿರಹಟ್ಟಿ

ಶಾಂತವೀರ ಗ್ರಂಥಮಾಲಾ, ಬಬಲೇಶ್ವರ

ಗುರುಕರುಣೆ-ಗುರುಸ್ಮರಣೆ

ಪರಮಪೂಜ್ಯ ಸದ್ಗುರು

ಶ್ರೀ ಶಾಂತವೀರ ಮಹಾಸ್ವಾಮಿಗಳವರ

ಕರುಣೆ

ಸ್ಮರಣೆ

ಶ್ರೀ ಲಕ್ಕಪ್ಪ ಶಿರಹಟ್ಟಿ ಅವರದು

ಸಮುಚ್ಚಯ ಲೇಖನ ಕೃತಿ

ಲೇ. ಲಕ್ಕಪ್ಪ ಅ. ಶಿರಹಟ್ಟಿ, ತೊರವಿ

ಪ್ರಕಾಶಕರು:
ಶಾಂತವೀರ ಗ್ರಂಥಮಾಲಾ ಪ್ರಕಾಶನ, ಬಬಲೇಶ್ವರ
ತಾ॥ ಜಿ. ವಿಜಾಪುರ

ಪುಟಗಳು: ೧೪೦+xii

ಪ್ರತಿಗಳು: ೧೦೦೦

ಬೆಲೆ: ಇಪ್ಪತ್ತು ರೂಪಾಯಿ

೧೯೬೪

ಮುದ್ರಕರು:
ಫ. ಶಿ. ಯವರ ತ್ವರಿತ ಮುದ್ರಣಾಲಯ
ಕುಂಬಾರಗರಡಿ ಹತ್ತಿರ, ಗಂಗಾಪೂರ ಓಣಿ,
ಗದಗ–೫೮೨ ೧೦೧ **Phone: 8617**

ಮುದ್ರಣದ ಅವಧಿ
ಇಪ್ಪತ್ತು ದಿನಗಳು

ಪ್ರಕಾಶಕರ ನುಡಿ

ವೀರಶೈವ ಧರ್ಮ, ಸಾಹಿತ್ಯಗಳ ಪ್ರಚಾರ, ಪ್ರಕಟನೆ, ಪೂಜ್ಯಶ್ರೀ ಶಾಂತವೀರ ಮಹಾಸ್ವಾಮಿಗಳ ೯೨ನೆಯ ವರ್ಧಂತಿ ಉತ್ಸವ ಸ್ಮಾರಕ ವಿಶ್ವಸ್ಥ ಮಂಡಳಿಯು ಪ್ರಮುಖ ಉದ್ದೇಶವಾಗಿದೆ. ಅಲ್ಲದೆ ಧರ್ಮ, ಸಾಹಿತ್ಯ, ಸಂಸ್ಕೃತಿ, ವಿಜ್ಞಾನ ವಿಷಯಗಳ ಮೇಲೆ ಬರೆದ ಗ್ರಂಥಗಳನ್ನು ಪ್ರಕಟಿಸುವದು, ಇಲ್ಲವೆ ಅಂತಹ ಗ್ರಂಥಗಳನ್ನು ಬರೆದ ಲೇಖಕರಿಗೆ ಅವುಗಳನ್ನು ಪ್ರಕಟಿಸಲು ಧನಸಹಾಯ ಮಾಡುವ ಯೋಜನೆ ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯು ಅಂಗವಾಗಿ ಶ್ರೀ ಶಾಂತವೀರ ಗ್ರಂಥಮಾಲಾ ಪ್ರಾರಂಭಿಸಲಾಗಿದ್ದು ಈ ಗ್ರಂಥಮಾಲೆಯು ವತಿಯಿಂದ ಈಗಾಗಲೇ ಎರಡು ಗ್ರಂಥಗಳು ಪ್ರಕಟವಾಗಿದ್ದು, ಡಾ. ಆರ್. ಸಿ. ಮುದ್ದೇಬಿಹಾಳ ಅವರು ತ್ರಿಪದಿಯಲ್ಲಿ ಬರೆದ ಮಹಾಕಾವ್ಯ "ಸಿಂಧೂರ ಲಕ್ಷ್ಮಣ" ಹಾಗೂ ಶ್ರೀ ವ್ಹಿ. ಎನ್. ಕರಬಂಟನಾಳ ಅವರು ಬರೆದ "ಮಡಿವಾಳ ಮಾಚಿದೇವ" ಗ್ರಂಥಗಳಿಗೆ ಧನಸಹಾಯ ಮಾಡಲಾಗಿದೆ. ಈ ಯೋಜನೆಗೆ ಅನುಗುಣವಾಗಿ ಈ ವರ್ಷ ಶ್ರೀ ಲಕ್ಕಪ್ಪ ಶಿರಹಟ್ಟಿಯವರು ಬರೆದ "ಗುರುಕರುಣೆ-ಗುರುಸ್ಮರಣೆ" ಎಂಬ ಗ್ರಂಥವನ್ನು ಪ್ರಕಟಿಸಲು ಸಂತೋಷವೆನಿಸುತ್ತದೆ. ಇದು ಶ್ರೀ ಶಾಂತವೀರ ಗ್ರಂಥಮಾಲೆಯ ತೃತೀಯ ಕುಸುಮ.

ಪರಮಪೂಜ್ಯ ಶ್ರೀ ಶಾಂತವೀರ ಸ್ವಾಮಿಗಳು ಕೇವಲ ಒಬ್ಬ ಸ್ವಾಮಿಗಳಾಗಿರಲಿಲ್ಲ. ಅವರು ಭಕ್ತರ ಪಾಲಿಗೆ ದೇವರಾಗಿದ್ದರು. ಭಕ್ತರಿಗೆ ತಂದೆ, ತಾಯಿ, ಬಂಧು ಬಳಗ ಎಲ್ಲವೂ ಆಗಿದ್ದರು. ಅವರ ತ್ಯಾಗ, ವೈರಾಗ್ಯ, ತಪ, ಸಿದ್ಧಿ, ಎಲ್ಲವೂ ಭಕ್ತರಿಗಾಗಿ, ಭಕ್ತರ ಉದ್ಧಾರಕ್ಕಾಗಿ, ಅವರ ದಿವ್ಯ ಸನ್ನಿಧಿಯಲ್ಲಿ ಕಾಲ ಕಳೆಯುವದೆಂದರೆ ಅದೊಂದು ಅಪೂರ್ವ ಆಧ್ಯಾತ್ಮಿಕ ಅನುಭವ! ಶ್ರೀ ಲಕ್ಕಪ್ಪ ಶಿರಹಟ್ಟಿಯವರು ಪೂಜ್ಯ ಶ್ರೀ ಶಾಂತವೀರ ಸ್ವಾಮಿಗಳ ಒಡನಾಟದಲ್ಲಿ ಇಪ್ಪತ್ತು ವರುಷ ಕಳೆದಿದ್ದಾರೆ. ಆ ದಿವ್ಯ ಚೇತನದೊಂದಿಗೆ ಅವರ ಒಡನಾಟ ಅತ್ಯಂತ ಅನಿರ್ವಚನೀಯ. ಆ ದಿನಗಳಲ್ಲಿ ಅನುಭವಿಸಿದ ಆನಂದವನ್ನು ಇಂದು ದಿನದಿನಕ್ಕೆ ಅನುಭವಿಸಿ ಆನಂದಪಡುತ್ತಿರುವ ಶ್ರೀ ಶಿರಹಟ್ಟಿಯವರು, ತಮ್ಮ ಆತ್ಮಾನುಭವವನ್ನು ಪೂಜ್ಯಶ್ರೀ ಶಾಂತವೀರ ಮಹಾಸ್ವಾಮಿಗಳವರ ಅಪಾರ ಭಕ್ತ ಸಮೂಹದೊಂದಿಗೆ "ಗುರುಕರುಣೆ-ಗುರುಸ್ಮರಣೆ" ಗ್ರಂಥದ ಮೂಲಕ ಹಂಚಿಕೊಳ್ಳಲು ಮುಂದಾಗಿದ್ದಾರೆ. ಲೇಖಕರು ಹೇಳಿದಂತೆ ಪೂಜ್ಯ ಶ್ರೀ ಶಾಂತವೀರ ಮಹಾಸ್ವಾಮಿಗಳ ಬದುಕಿನ ಚರಿತ್ರಾಂಶಗಳ ಸಮುಚ್ಚಯವೇ ಈ ಗ್ರಂಥವಾಗಿದ್ದು, ಅದನ್ನು

ಪ್ರಕಾಶಿಸುವ ಭಾರವನ್ನು ನಮಗೆ ಒಪ್ಪಿಸಿದ ಶ್ರೀ ಶಿರಹಟ್ಟಿಯವರಿಗೆ ಕೃತಜ್ಞತೆಗಳು. ನಮ್ಮ ಮಹಾಗುರುವಿನ ದಿವ್ಯ ಜೀವನದ ವಿವಿಧ ಮುಖಗಳನ್ನು ತೀರ ಹತ್ತಿರದಿಂದ ನೋಡುವ ಭಾಗ್ಯವನ್ನು ನಮಗೆ ಒದಗಿಸಿದ ಶ್ರೀ ಶಿರಹಟ್ಟಿಯವರಿಗೆ ನಮ್ಮ ವಂದನೆಗಳು.

ಶ್ರೀ ಶಿರಹಟ್ಟಿಯವರು ೬೦ ಸಂವತ್ಸರಗಳನ್ನು ಕಂಡವರು. ಶಿಕ್ಷಣ ಕ್ಷೇತ್ರದಲ್ಲಿ ದುಡಿದು ಹಣ್ಣಾದವರು. ಸಾಹಿತ್ಯದಲ್ಲಿ ಅವರು ಮಾಡಿದ ಕೃಷಿ ಅಪಾರ. ಅವರು ಬರೆದ ತಾತ್ವಿಕ ಕಾವ್ಯಗಳು, ಮಹಾತ್ಮರ ಜೀವನ ಚರಿತ್ರೆಗಳು, ಐತಿಹಾಸಿಕ ಕೃತಿಗಳು. ಅತ್ಯಂತ ಉದ್ಬೋಧಕವಾದವುಗಳು. ಚರಿತ್ರೆ ಬರೆಯುವಲ್ಲಿ ಶ್ರೀ ಶಿರಹಟ್ಟಿಯವರು ಎತ್ತಿದಕೈ. ಅದರಲ್ಲೂ ಶರಣರ ಚರಿತ್ರೆ ಬರೆಯುವಲ್ಲಿ ಅವರನ್ನು ಮೀರಿಸುವವರು ಬಹಳ ಕಡಿಮೆ. ಅವರ ಜೀವನವೇ ಒಂದು ಪವಿತ್ರ ಪುಸ್ತಕ. ಅವರದು ಶರಣ ಜೀವನ. ನಯ, ವಿನಯ, ಸರಳತೆ, ಸಜ್ಜನಿಕೆಗಳ ಸಾಗರಮೂರ್ತಿ ಈ ತೊರವಿಯ ಶರಣ. ಕನ್ನಡನಾಡಿನ ಧೀಮಂತ ಸಾಹಿತಿಗಳಿಗೆ ಆಶ್ರಯವಿತ್ತ ತೊರವಿ ಶರಣ ಸಾಹಿತಿ ಲಕ್ಕಪ್ಪನವರ ಜನ್ಮಭೂಮಿ

ಹರಳೇಶ್ವರದ ತಪೋಮೂರ್ತಿ, ಬಬಲೇಶ್ವರದ ಬೆಳಕು ಪೂಜ್ಯಶ್ರೀ ಶಾಂತವೀರ ಸ್ವಾಮಿಗಳ, ದಿವ್ಯ ಜೀವನದ ಚಾರಿತ್ರಿಕ ಘಟನೆಗಳೂ ಶ್ರೀ ಶಿರಹಟ್ಟಿಯವರ ಅನುಭಾವ ಅಮೃತ ಹಂಚಿಕೊಂಡು ಹೊರಬಂದ "ಗುರುಕರುಣೆ-ಗುರುಸ್ಮರಣೆ" ಸದಾ ಸ್ಮರಿಸಬೇಕಾದ ಗ್ರಂಥ.

"ಗುರುಕರುಣೆ-ಗುರುಸ್ಮರಣೆ" ಈ ಗ್ರಂಥ ಮಹಾಗುರುಗಳಾದ ಶ್ರೀ ಶಾಂತವೀರ ಮಹಾಸ್ವಾಮಿಗಳ ೧೫ನೇ ಪುಣ್ಯತಿಥಿಯ ದಿನ ಪ್ರಕಟವಾಗುತ್ತಿರುವದು ಅತಿ ಆನಂದದ ವಿಷಯ. ನಾವು ಅವಸರದಲ್ಲಿ ಕೇಳಿಕೊಂಡಾಗ ಅಲ್ಪ ಸಮಯದಲ್ಲಿ ಅಂದವಾಗಿ ಮುದ್ರಿಸಿದ ಗದುಗಿನ ತ್ವರಿತ ಮುದ್ರಣಾಲಯದ ಒಡೆಯರಾದ ಶ್ರೀ ಫ. ಶಿ.ಯವರು ಗ್ರಂಥವನ್ನು ಮುದ್ರಿಸಿಕೊಟ್ಟಿದ್ದಕ್ಕಾಗಿ ಅವರಿಗೆ ಕೃತಜ್ಞತೆಗಳು.

ಶ್ರೀ ಎಸ್. ಎಸ್. ಕಬ್ಬಿನ
ಕಾರ್ಯದರ್ಶಿಗಳು
ಪೂಜ್ಯ ಶ್ರೀ ಶಾಂತವೀರ ಸ್ವಾಮಿಗಳ
೬೨ನೆಯ ವರ್ಧಂತಿ ಉತ್ಸವ ಸ್ಮಾರಕ ವಿಶ್ವಸ್ಥ ಮಂಡಳಿ,
ಬಬಲೇಶ್ವರ

೨೪-೧೧-೧೯೭೪

ನಿವೇದನೆ

ಕರುಣಾಕರ ಸದ್ಗುರು

ಶ್ರೀ ಸದ್ಗುರುವಿನ ಕರುಣೆಯ ಸ್ಮರಣೆಯೇ ಈ ಸಮುಚ್ಚಯ ಲೇಖನ ಗ್ರಂಥ! ನನ್ನ ಉತ್ತರ ವಯಸ್ಸಿನ ಜೀವನದ ಬೆಳಕಿನ ಭಾಗದ ಚರಿತ್ರೆಯೆಂದರೂ ಸರಿಯಾದೀತು.

ಬಬಲೇಶ್ವರ ಹಿರಿಯ ಮಠದ ಪಟ್ಟಾಧ್ಯಕ್ಷ ಶ್ರೀ ಷ. ಬ್ರ. ಶಾಂತವೀರ ಮಹಾಸ್ವಾಮಿಗಳವರು ನನ್ನ ಪರಮಪೂಜ್ಯ ಗುರುಗಳು. ಈ ನನ್ನ ಪರಮ ಸದ್ಗುರುಗಳು ಹರಳೇಶ್ವರ ಆಶ್ರಮದಲ್ಲಿದ್ದಾಗಿನ ೧೦ ವರುಷ, ಬಬಲೇಶ್ವರ ಹೊರಗಿನ ಮಠದಲ್ಲಿ ಇದ್ದಾಗಿನ ೧೦ ವರ್ಷ ಆ ಮಹಾಸನ್ನಿಧಿಯ ನಿಕಟ ಒಡನಾಟ ದಲ್ಲಿ ಇದ್ದ ಅವಧಿಯು ನನ್ನ ಜೀವನದಲ್ಲಿ ಒಂದು ಮಹಾಬೆಳಗಿನ ಭಾಗವಾಗಿ ಪರಿಣಮಿಸಿತು. ಅವರ ಅಡಿಯಲ್ಲಿಯ ನನ್ನ ಒಡನಾಟಕ್ಕೆ ಸಂಬಂಧಿಸಿ ಸೇರಿ ಬಂದಿರುವ ಗುರುಗಳ ಬದುಕಿನ ಚರಿತ್ರಾಂಶಗಳೂ ಈ ಸಮುಚ್ಚಯ ಲೇಖನದಲ್ಲಿವೆ.

ಗುರುಶಿಷ್ಯರ ಒಂದು ನಿರ್ದಿಷ್ಟ ಅವಧಿಯ ಈ ಚರಿತ್ರಾಂಶಗಳು ನನ್ನ ದಿನಚರಿ ಟಿಪ್ಪಣೆಗಳಿಂದ ಹಾಗೂ ಲಭ್ಯವಿರುವ ಪತ್ರ ವ್ಯವಹಾರದಿಂದ ಸಪ್ರಮಾಣಿತ ವಾಗಿವೆ.

ಇಪ್ಪತ್ತು ವರ್ಷಗಳಲ್ಲಿ ಸುಮಾರು ೧೧೧ ಸಲ ಗುರು ದರ್ಶನಕ್ಕಾಗಿ ಪ್ರಯಾಣಿಸಿದ್ದೇನೆ. ಒಂದು ದಿನ ಸದ್ಗುರುವಿನ ಹಸ್ತವು ನನ್ನ ಮನ–ಭಾವಗಳಲ್ಲಿ ಪವಾಡ ಸದೃಶ ಕ್ರಾಂತಿಯನ್ನೆಸಗಿತು. ಗುರು ಸನ್ನಿಧಿಯ ಸಹವಾಸದಲ್ಲಿರುವಾಗಿನ ಅನುಭವಾನಂದಗಳೇ, ಈಗ ಇದನ್ನು ಬರೆವಾಗ ಮರುಕಳಿಸಿ ಬಂದು ಅದೇ ಆನಂದವನ್ನು ಅನುಭವಿಸುತ್ತಿದ್ದೇವೆ. ಮುಖ್ಯವಾಗಿ ಇದೇ ಈ ಬರೆಹದ ಉದ್ದೇಶ!

ಇದು ಸಾಹಿತ್ಯಕ ಕೃತಿಯಲ್ಲ. ಇದರಲ್ಲಿ ಸಾಹಿತ್ಯಿಕ ಮೌಲ್ಯ ಇರಬಹುದು, ಇರಲಿಕ್ಕಿಲ್ಲ ಇದ್ದರೆ ಬಲ್ಲವರು ಗುರುತಿಸಬಹುದು.

ನನ್ನ ಚಿತ್ತ ಸರಸ್ಸಿನಲ್ಲಿ ಸ್ಮರಣೆಯು ಅಲೆ ಅಲೆಯಾಗಿ ಬಂದು ನೆನಹಿನಲ್ಲಿ ನಿಲ್ಲುವ, ಸದ್ಗುರು ಸಮ್ಮುಖದ ಬೆಳಕಿನ ಭಾಗದ ನನ್ನ ಜೀವನವನ್ನು ಶಬ್ದಗಳಲ್ಲಿ

ಚಿತ್ರಿಸಲು ಪ್ರೇರಿಸಿದವರು–ಪ್ರೋತ್ಸಾಹಿಸಿದವರು ಈಗ ಈ ಗುರುಪೀಠದಲ್ಲಿ ವಿರಾಜಮಾನರಾಗಿರುವ ಪೂಜ್ಯ ಶ್ರೀ ಮಹಾದೇವ ಶಿವಾಚಾರ್ಯ ಸ್ವಾಮಿಗಳವರು.

ಅವರು ಈ ಗುರುಕರುಣೆ-ಗುರುಸ್ಮರಣೆಗೆ ಹರ್ಷಗೊಂಡು ಈ ಪುಸ್ತಕಕ್ಕೆ ಸುದೀರ್ಘ ಆಶೀರ್ವಚನ ನೀಡಿ ನನ್ನನ್ನೂ ಕೃತಾರ್ಥನನ್ನಾಗಿ ಮಾಡಿದ್ದಾರೆ. ಅವರ ಚರಣಕಮಲಗಳಲ್ಲಿ ನನ್ನ ಅನಂತ ವಂದನೆಗಳು.

ಪೂಜ್ಯ ಶ್ರೀ ಶಾಂತವೀರ ಮಹಾಸ್ವಾಮಿಗಳ ೯೨ನೆಯ ವರ್ಧಂತಿ ಉತ್ಸವ ಸ್ಮಾರಕ ವಿಶ್ವಸ್ಥ ಮಂಡಳಿಯುವರು ಮುಂದೆ ಬಂದು ನನ್ನ ಸದ್ಗುರುವಿನ, ಸಂಸ್ಮರಣೆಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿ, ನನ್ನ ಮಹಾಗುರುವಿನ ನೆನಹುಗಳನ್ನು ಅಜರಾಮರವಾಗಿ ಉಳಿಯುವಂತೆ ಮಾಡಿದ್ದಾರೆ. ಶ್ರೀಗುರು ತಾನೇ ತನ್ನ ಸ್ಮರಣೆ ಉಳಿಯುವಂತೆ ಮಾಡಿದ್ದಾನೆಂದೇ ನನ್ನ ಭಾವನೆ. ಅದಕ್ಕಾಗಿ ವಿಶ್ವಸ್ಥ ಮಂಡಳಿಯ ಸದಸ್ಯರಾದ ಶ್ರೀ ಷ. ಬ್ರ. ಮಹಾದೇವ ಶಿವಾಚಾರ್ಯ ಸ್ವಾಮಿಗಳು, ಶ್ರೀ ವೀರನಗೌಡ ಮಲ್ಲನಗೌಡ ಪಾಟೀಲ, ಶ್ರೀ ಶಂಕರರಾವ್ ಶಿವಲಿಂಗಪ್ಪ ದೇಶಮುಖ ಆಲಮೇಲ, ಶ್ರೀ ಸಿ. ಆರ್. ಬಾಗಾದಿ ನಿವೃತ್ತ ಪ್ರಾಚಾರ್ಯರು, ಪ್ರೊ. ಎಸ್. ಎಸ್. ಕಬ್ಬಿನ ನಿವೃತ್ತ ಪ್ರಿನ್ಸಿಪಾಲರು. 'ಗುರುಕರುಣೆ–ಗುರುಸ್ಮರಣೆ' ಹೊರ ಬರುವಂತೆ ಮಾಡಿದ್ದಕ್ಕಾಗಿ ಅವರೆಲ್ಲರಿಗೂ ನನ್ನ ಅನಂತ ವಂದನೆಗಳು.

ಅಲ್ಪ ಸಮಯದಲ್ಲಿ ಈ ಗ್ರಂಥವನ್ನು ಅಂದವಾಗಿ ಮುದ್ರಿಸಿಕೊಟ್ಟ ಗದುಗಿನ ಶ್ರೀ ಫ. ಶಿ. ಯವರ ತ್ವರಿತ ಮುದ್ರಣಾಲಯದವರಿಗೂ ನನ್ನ ಕೃತಜ್ಞತೆಗಳು.

ಲಕ್ಕಪ್ಪ ಅ. ಶಿರಹಟ್ಟಿ

ತೊರವಿ

ಬಬಲೇಶ್ವರ ಹಿರೇಮಠದ ಪಟ್ಟಾಧ್ಯಕ್ಷ
ಶ್ರೀ ಷ. ಬ್ರ. ಮಹಾದೇವ ಶಿವಾಚಾರ್ಯ ಸ್ವಾಮಿಗಳವರಿಂದ

ಆಶೀರ್ವಚನ

ಬಬಲೇಶ್ವರ ಬೃಹನ್ಮಠ ಪೀಠದ ಧರ್ಮಾಧಿಕಾರವನ್ನೂ ತಪೋಬಲ ಸಮನ್ವಿತವಾದ ಕೃಪಾಕಟಾಕ್ಷವನ್ನೂ ಎನ್ನ ಮೇಲೆ ಅನುಗ್ರಹಿಸಿದ ನನ್ನ ಗುರುವರ್ಯ ಮಾತೃ ಹೃದಯದ ದೇವಪಿತ ಲಿಂ|| ಶ್ರೀ ಶಾಂತವೀರ ಶಿವಯೋಗಿ ಶಿವಾಚಾರ್ಯರು ಈ ಶತಮಾನದಲ್ಲಿ ಬಾಳಿ ಬೆಳಗಿದ ಒಬ್ಬ ಅತಿ ಶ್ರೇಷ್ಠ ಯೋಗಿವರೇಣ್ಯರು ಹಾಗೂ ಆದರ್ಶ ಗುರು ಸಾರ್ವಭೌಮರೆನಿಸಿದ್ದಾರೆ. ಇಂಥ ಗುರುವರನನ್ನು ಕುರಿತೇ ಪ್ರಸ್ತುತ ಗ್ರಂಥ "ಗುರುಕರುಣೆ-ಗುರುಸ್ಮರಣೆ" ಎಂದು ಹೆಸರಿಸಲ್ಪಟ್ಟಿದೆ.

ಓರ್ವ ಸಾಮಾನ್ಯ ಪಟ್ಟಾಧಿಕಾರಿಯೆನಿಸಿದ್ದರೂ ತಮ್ಮ ಕಟ್ಟುನಿಟ್ಟಾದ ಆಚಾರ ವಿಚಾರ, ಸಮನ್ವಯ ಮನೋಭಾವನೆ, ಸಮಾಜೋದ್ಧಾರದ ಕಳಕಳಿ ಹಾಗೂ ಸ್ವತಂತ್ರ ವಿಚಾರಧಾರೆ ಈ ಎಲ್ಲ ಗುಣಗಳಿಂದಾಗಿ ಅವರು ಪಟ್ಟಾಧ್ಯಕ್ಷರಲ್ಲಿಯೇ ತೀರ ಭಿನ್ನವಾಗಿ ವಿಶಿಷ್ಟಪೂರ್ಣವಾಗಿ ಕಂಡು ಬರುತ್ತಿದ್ದರು.

ತಮ್ಮ ಚುಂಬಕೀಯ ವ್ಯಕ್ತಿತ್ವದಿಂದ ಹಾಗೂ ಕ್ರಾಂತಿಕಾರಕ ಚಟುವಟಿಕೆಗಳಿಂದ ಸಮಾಜದ ಮೇಲೆ ಪಂಚಪೀಠದವರ ಪ್ರಭಾವವನ್ನು ಈ ಶತಮಾನದ ಆದಿಯಲ್ಲಿಯೇ ಹೆಚ್ಚಿಸಿದ ಖ್ಯಾತಿ ಅವರದು.

ಅವರನ್ನು ತೀರ ಸಮೀಪದಿಂದ ಕಂಡ ಅನೇಕ ಧರ್ಮಗುರುಗಳೂ ಸ್ವಾಮಿ ಪುಂಗವರೂ, ಜಗದ್ಗುರುಗಳೂ ಅವರನ್ನು ಕುರಿತು ಬಾಯ್ತುಂಬ ಕೊಂಡಾಡಿದ್ದಾರೆ. ತಮ್ಮ ಅನಿಸಿಕೆಗಳನ್ನು ಮುಕ್ತಕಂಠದಿಂದ ಅಭಿವ್ಯಕ್ತಗೊಳಿಸಿದ್ದಾರೆ. ಇಲ್ಲಿ ಕೆಲವನ್ನು ಮಾದರಿಯಾಗಿ ನೋಡಬಹುದು.

ಗದುಗಿನ ತೋಂಟದಾರ್ಯ ಮಠದ ಇಂದಿನ ಜಗದ್ಗುರುಗಳಾದ ಶ್ರೀ ಜ. ಸಿದ್ಧಲಿಂಗ ಮಹಾಸ್ವಾಮಿಗಳವರು ತಮ್ಮ ಒಂದು ಆಶೀರ್ವಚನ ವ್ಯಾಖ್ಯಾನದಲ್ಲಿ ಅಪ್ಪಣೆ ಕೊಡಿಸಿದ್ದೇನೆಂದರೆ:

ನಮ್ಮ ದೇಶದಲ್ಲಿ ಗಾಂಧಿ ಎಂಬ ಹೆಸರಿನವರು ಅನೇಕರು ಸಿಗುತ್ತಾರೆ ಆದರೆ ಅವರಲ್ಲಿ ಮಹಾತ್ಮಾಗಾಂಧಿ ಎನ್ನುವವನು ಒಬ್ಬನೇ ಭಾರತದಲ್ಲಿ ಸ್ವಾಮಿಗಳೆನಿಸಿದವರು ಅನೇಕ ಆದರೆ ಅವರಲ್ಲಿ ಸ್ವಾಮಿ ವಿವೇಕಾನಂದ ಒಬ್ಬನೇ ಅದರಂತೆ ಇಂದು ನಮ್ಮ ನಾಡಿನಲ್ಲಿ ಪಟ್ಟಾಧ್ಯಕ್ಷರೆನಿಸಿಕೊಳ್ಳುವವರು ಅನೇಕ ಆದರೆ ಬಬಲೇಶ್ವರದ ಶ್ರೀ ಶಾಂತವೀರ ಪಟ್ಟಾಧ್ಯಕ್ಷ ಒಬ್ಬರೇ ನಿಜವಾದ ಪಟ್ಟಾಧ್ಯಕ್ಷರು!!! ಎಂದು ಉದ್ಘೋಷಿಸಿದರು.

ನಮ್ಮ ನಾಡಿನಲ್ಲಿಯೇ ಶ್ರೇಷ್ಠ ಶಿವಾಚಾರ್ಯ ಸಾಹಿತಿಗಳೆನಿಸಿದ ಡಾ|| ಜ ಚ.ನಿ. ಯವರು “ಬಬಲೇಶ್ವರ ಶಿವಯೋಗಿಗಳು” ಎಂಬ ನಮ್ಮ ಮಠದ ಚರಿತ್ರ ಗ್ರಂಥದಲ್ಲಿ ಉಪೋದ್ಘಾತ ರೂಪದಲ್ಲಿ ಬರೆಯುತ್ತ

ನಾವು ಈ ಕನ್ನಡನಾಡನ್ನೆಲ್ಲ ಸುತ್ತಿ ಸುಳಿದಿದ್ದೇವೆ ಆದರೆ ಶ್ರೀ ಶಾಂತವೀರ ಶಿವಾಚಾರ್ಯರಷ್ಟು ಸುಸಂಸ್ಕೃತ ಮತ್ತು ಸಾತಿಶಯ ಜನಪ್ರಿಯ ಗುರುದೇವನನ್ನು ಕಾಣಲಿಲ್ಲ ಈ ಇಪ್ಪತ್ತನೆಯ ಶತಮಾನದಲ್ಲಿ ಹೆಸರಿಗೆ ತಕ್ಕಂತೆ ಅವರು ಿಟಕ್ಕೂ ಈ ಶತಮಾನದ ಶಾಂತಿವೀರರೆ! ಶಾಂತಿಧೀರರೆ!! ಜನತೆಯ ಕ್ಷೇಮಕ್ಕಾಗಿ ಅವರಷ್ಟು ಹೃದಯವಂತರನ್ನು ಕಾಣಲು ಸಾಧ್ಯವಿಲ್ಲ ನಿಜಕ್ಕೂ ಅವರು ಆ ಊರಿನ ಹೃದಯ ಬಲೇಶ್ವರ ಜನಪ್ರಿಯಬಲೇಶ್ವರ ಅವರದು ಅತ್ಯಂತ ಕರುಣಾರ್ದ್ರ ಹೃದಯ, ಅದೊಂದು ಅಪೂರ್ವ ಜೀವಂತ ಲೋಹಕಾಂತ ಮಣಿ! ಮಹಂತ ಶಾಂತಿ ಚಿಂತಾಮಣಿ!!

ಇಂದಿನ ಕಾಲದ ನಮ್ಮ ನಾಡಿನ ಮಹಾದಾರ್ಶನಿಕರೂ, ಅಂತರಾಷ್ಟ್ರೀಯ ಯೋಗ ಪ್ರವರ್ತಕರೂ, ಕ್ರಿಶ್ಚನ್ ಜಗದ್ಗುರು ಪೋಪ್ ಪಾಲನಿಗೆ ಇಷ್ಟಲಿಂಗದ ಮಹಿಮೆಯನ್ನು ಮನಗಾಣಿಸಿಕೊಟ್ಟವರೂ, ಆದಂಥ ಧಾರವಾಡ ತಪೋವನದ ತಪಸ್ವಿ ಪೂಜ್ಯಶ್ರೀ ಕುಮಾರ ಮಹಾಸ್ವಾಮಿಗಳಂತೂ ಒಂದು ಸಲ ಬಬಲೇಶ್ವರಕ್ಕೆ ದಯಮಾಡಿಸಿದಾಗ ಬಾಯಿಯಿಂದ ಹೇಳುವದಕ್ಕಿಂತ ಪೂಜ್ಯ ಶ್ರೀಗಳವರ ಜೊತೆ ಬಹಳ ಹೊತ್ತು ಗಾಢಾಲಿಂಗನದಲ್ಲಿಯೇ ತನ್ಮಯರಾಗಿ ಮಾತನಾಡಿದರು ಹಾಗೂ ನಡೆದಾಡಿದರು. ಹೀಗೆ ಅವರೊಡನಿದ್ದ ತಮ್ಮ ತಾದಾತ್ಮಭಾವವನ್ನೂ ಏಕಪ್ರಾಣತೆಯನ್ನೂ ನೆರೆದ ಜನಸ್ತೋಮಕ್ಕೆಲ್ಲ ತೋರಿಸಿ ಕೊಟ್ಟರು.

ಅದೇ ರೀತಿ ಕರ್ನಾಟಕ ಮಹಾರಾಷ್ಟ್ರಗಳಲ್ಲಿಯೇ ಶ್ರೋತ್ರೀಯ ಬ್ರಹ್ಮನಿಷ್ಠ ಗುರುವರೇಣ್ಯರೂ ದೇವರ್ಷಿಪುಂಗವರೂ ವೇದಾಂತ ಕೇಸರಿಗಳೂ ಮುಂತಾಗಿ

ಖ್ಯಾತನಾಮರಾದ ಲಿಂ|| ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳವರಂತೂ ಇವರ ಮಾತೃ-ವಾತ್ಸಲ್ಯ ಸ್ನೇಹಧಾರೆಯಲ್ಲಿ ಮಿಂದು ಕೃತಾರ್ಥರಾಗಿ ತಾವು ಹೋದಲ್ಲೆಲ್ಲ ಭಕ್ತಜನಸ್ತೋಮಕ್ಕೆ ಪ್ರವಚನ ಕಾಲದಲ್ಲಿ— "ಬಬಲೇಶ್ವರ ಅಪ್ಪಾ ಅವರೆಂದರೆ ನನ್ನ ತಾಯಿ ಹಡೆದ ತಾಯಿ" ಎಂದು ಭಾವಪರವಶರಾಗಿ ಹೇಳಿದ್ದುಂಟು.

ಈ ರೀತಿಯಾಗಿ ಪೂಜ್ಯ ಅಪ್ಪಗಳವರು ನಮ್ಮ ನಾಡಿನ ದೊಡ್ಡ ದೊಡ್ಡ ಯೋಗಿ ತ್ಯಾಗಿಗಳನೇಕರ ಮೇಲೆ ಪ್ರಭಾವ ಬೀರಿದ್ದರು ಎಂದು ಅನ್ನುವದಕ್ಕಿಂತ ಅವರೆಲ್ಲ ತಾವೇ ಇವರ ಅನುಪಮ ವ್ಯಕ್ತಿತ್ವಕ್ಕೆ ಮಾರು ಹೋಗಿದ್ದರು ಎಂದರೆ ಹೆಚ್ಚು ಉಚಿತವೆನಿಸೀತು.

ಪೂಜ್ಯ ಅಪ್ಪಗಳವರು ಧರ್ಮರಂಗಕ್ಕೆ ಮೀಸಲಾದ ಒಬ್ಬ ಆದರ್ಶ ಗುರುಗಳೆನಿಸಿದರೂ ಸಾಹಿತ್ಯವನ್ನೂ ಸಾಹಿತಿಗಳನ್ನೂ ಉದ್ಧರಿಸಲು ಎಂದೂ ಮರೆತಿರಲಿಲ್ಲ ಅವರು ತಮ್ಮ ಸುದೀರ್ಘವಾದ ಜೀವಮಾನದುದ್ದಕ್ಕೂ ಸಾಹಿತ್ಯವನ್ನು ಪೋಷಿಸುತ್ತ ಬಂದಿದ್ದಾರೆ, ಸಾಹಿತಿಗಳಿಗೆ ಪ್ರೋತ್ಸಾಹನವಿತ್ತಿದ್ದಾರೆ. ಇದಕ್ಕೆ ಸಾಕ್ಷಿಯಾಗಿ ಈ ಶತಮಾನದ ಪೂರ್ವಾರ್ಧದಲ್ಲಿ ಕನ್ನಡ ಕವಿಗಳಲ್ಲಿ ಖ್ಯಾತನಾಮರಾದ ಹಲಸಂಗಿಯ ಮಧುರಕವಿ ಮಧುರಚೆನ್ನರಿಗೆ ಹಾಗೂ ಅವರ ಸ್ನೇಹಿತರಿಗೆಲ್ಲ ಬಬಲೇಶ್ವರ ಹಿರಿಯ ಮಠವೇ ರಜೆಯ ದಿನಗಳನ್ನು ಕಳೆಯುವ ತಂಗುದಾಣವಾಗಿತ್ತು.

ಅದೇ ರೀತಿ ವಚನ ಪಿತಾಮಹರೆಂದು ಪ್ರಖ್ಯಾತಿ ಪಡೆದ ಹಳಕಟ್ಟಿ ಫಕೀರಪ್ಪನವರಿಗೆ ಅವರ ಮುಂಚಿನ ಬಿಕ್ಕಟ್ಟಿನ ದುರ್ದಿನಗಳಲ್ಲಿ ಶ್ರೀ ಶಾಂತವೀರ ಅಪ್ಪಗಳವರಿಂದಲೇ ಸಮಯೋಚಿತ ಸಹಾಯ ಹಾಗೂ ಪುರಸ್ಕಾರ ಪ್ರಾಪ್ತವಾಗಿರುವ ವಿಷಯ ಶ್ರೀ ಫ. ಗು. ಹಳಕಟ್ಟಿಯವರ ಜೀವನ ಚರಿತೆಯಿಂದಲೇ ನಾಡಿಗೆಲ್ಲ ಸುವೇದ್ಯವಾದ ಸಂಗತಿಯಾಗಿದೆ.

ಇಂಥ ಸಾಹಿತ್ಯ ಪೋಷಕರೂ ಮಹಾನ ತಪಸ್ವಿಗಳೂ ಮಹಿಮಾಶಾಲಿಗಳೂ ಆದ ಶ್ರೀ ಸದ್ಗುರುಗಳ ದಿವ್ಯ ಕರುಣಾಕಟಾಕ್ಷಕ್ಕೆ ಭಾಜನರಾದ ನಮ್ಮ ನಾಡಿನ ಅತಿ ವಿರಳ ಭಾಗ್ಯಶಾಲಿ ಸಾಹಿತಿ, ವಾಗ್ಮಿ, ಕಲಾವಂತರಲ್ಲಿ ಶ್ರೀ ಲಕ್ಕಪ್ಪ ಶಿರಹಟ್ಟಿಯವರೂ ಒಬ್ಬರು. ಇವರು ಬಬಲೇಶ್ವರದ ಶ್ರೀ ಸನ್ನಿಧಿಯವರ ಕರುಣೆಯ ದಾಸ್ತಾನಿಗೆ ಲಗ್ಗೆ ಹಾಕಿದ ಅದ್ವಿತೀಯ ಶರಣಸಾಹಿತಿವರೇಣ್ಯರೆನಿಸಿದ್ದಾರೆ. ಆದರ್ಶ ಶರಣ ಮಾರ್ಗಾನುಯಾಯಿಗಳಾದ ಶ್ರೀ ಲಕ್ಕಪ್ಪನವರು ಶ್ರೀಗಳ ಅಸೀಮ

ಕರುಣಾರ್ಣವದಲ್ಲಿ ಮುಳುಗಿ ತೇಲಾಗಿ ಕೃತಕೃತ್ಯರಾಗಿ ಆ ಅತುಲಾನಂದವನ್ನೇ ಜೀವನವಿಡಿ ಸ್ಮರಿಸುತ್ತ ಪುನೀತಭಾವ ತಾಳಿದ್ದಾರೆ ಅಂತಲೇ ತಮ್ಮ ಈ ಪ್ರಸ್ತುತ ಕೃತಿಗೆ "ಗುರುಕರುಣೆ–ಗುರುಸ್ಮರಣೆ" ಎಂಬ ಸಾರ್ಥಕ ಶೀರ್ಷಿಕೆಯನ್ನು ಇತ್ತಿದ್ದಾರೆ.

ಹಳೆಯ ಕಾಲದವರೆನಿಸಿದರೂ ಆಧುನಿಕ ವಿಚಾರಧಾರೆ ಹೊಂದಿದ, ಪವಾಡವನ್ನೊಪ್ಪದ ಪವಾಡ ಪುರುಷರಾದ, ಸ್ವತಃ ಸಂಸ್ಕೃತ ಪಂಡಿತರಾಗಿದ್ದರೂ ಕನ್ನಡ ಸಾಹಿತ್ಯವನ್ನು ಒಳ್ಳೆ ಅಭಿರುಚಿಯಿಂದ ಆಳವಾಗಿ ಅಧ್ಯಯನ ಗೈದವರಾದ ಇಂಥ ಅಸದೃಶ ವ್ಯಕ್ತಿತ್ವ ಹೊಂದಿದ ಬಬಲೇಶ್ವರದ ಗುರುಪುಂಗವರ ಶ್ರೀ ಸಾನ್ನಿಧ್ಯ ಶರಣ ಲಕ್ಕಪ್ಪನವರಿಗೆ ದೊರೆತದ್ದು ಒಂದು ಯೋಗಾಯೋಗವೇ ಸರಿ. ಈ ವಿಷಯವನ್ನವರು ತಮ್ಮ ಈ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಇಷ್ಟೇ ಅಲ್ಲ ಯಾವದೇ ಸಾಹಿತ್ಯದ ಗಂಧ ಕೂಡ ಇರದ ಒಬ್ಬ ಸರಕಾರಿ ನೌಕರನಾದ ನಾನು ಸಾಹಿತಿಯೆನಿಸಿದ್ದೇ ಬಬಲೇಶ್ವರ ಅಪ್ಪಗಳವರ ದಯಾದೃಷ್ಟಿಯ ಮಹಿಮೆಯಿಂದಲೇ ಎಂದು ಹೃದಯ ಬಿಚ್ಚಿ ಹೇಳಿಕೊಂಡಿದ್ದಾರೆ.

ಶರಣ ಲಕ್ಕಪ್ಪನವರದು ಸತ್ಯ ಶುದ್ಧ ಕಾಯಕವನ್ನವಲಂಬಿಸಿದ ಸರಳ ಸಾತ್ವಿಕ ಬದುಕು ಆರಂಭದಲ್ಲಿ ಶಿಕ್ಷಕ ವೃತ್ತಿಯನ್ನೇ ತಮ್ಮ ಜೀವನೋಪಾಯದ ಸಾಧನವನ್ನಾಗಿ ಆಯ್ದುಕೊಂಡ ಅವರು ತಮ್ಮ ಕರ್ತವ್ಯನಿಷ್ಠೆ, ಯೋಗ್ಯತೆ ಹಾಗೂ ಅನುಭವಗಳ ಬಲದಿಂದ ಶಿಕ್ಷಣಾಧಿಕಾರಿಯ ಹಂತಕ್ಕೆ ತಲುಪಿದರು. ತಮ್ಮ ಕರ್ತವ್ಯದಲ್ಲಿಯೇ ಬಿಡುವು ಮಾಡಿಕೊಂಡು ಕನ್ನಡ ಅನುಭಾವ ಸಾಹಿತ್ಯವನ್ನು ಆಳವಾಗಿ ಅಧ್ಯಯನಗೈದರು. ಅದನ್ನು ಕುರಿತು ಮುಕ್ತ ವಿಚಾರ ಸರಣಿಯಲ್ಲಿ ಚಿಂತನೆ ಮಾಡಿದರು. ಆದರ್ಶ ಸಂತ ಶರಣ ಮಹಾಪುರುಷರ ಅವಾಧವ್ಯ ಮಹಿಮೆ ಪವಾಡಗಳನ್ನು ಬದಿಗೆ ಸರಿಸಿ ಪ್ರಾಮಾಣಿಕ ಬದುಕಿನ ಮಹತಿಯನ್ನು ಅರಿಯಲು ಯತ್ನಿಸಿದರು. ಇಂಥ ಪರಿಪಕ್ವ ಜ್ಞಾನರಾಶಿಯಿಂದ ಕೂಡಿದ ಅವರ ಜ್ಞಾನಗಂಗೆಗೆ ಪ್ರವಹಿಸಲು ತಕ್ಕ ಸಮಯ ಹಾಗೂ ಸ್ಫೂರ್ತಿಗಳ ಅವಶ್ಯಕತೆ ಇತ್ತು. ಆ ಮಣಿಹ ಪೂಜ್ಯ ಸದ್ಗುರುಗಳವರ ಸಾನ್ನಿಧ್ಯದಲ್ಲಿ ಸಾಫಲ್ಯತೆಯನ್ನು ಹೊಂದಿತ್ತು. ಯಾರು ತಮ್ಮ ಜ್ಞಾನಚಕ್ಷುವಿನಿಂದಲೇ ಜ್ಞಾನ ಸಿಂಧುವನ್ನು ಅಳೆದಿದ್ದರೋ ಆ ಗುರುವರ್ಯರೇ ಇವರಿಗೆ ಅದನ್ನು ಹರಿಬಿಡಲು ಒಂದು ದಿನ ಆಣತಿ ನೀಡಿದ್ದರು. ಅದರ ಫಲವಾಗಿಯೇ ಇಂದು ಶ್ರೀ ಲಕ್ಕಪ್ಪನವರ ಕೃತಿ ಕುಸುಮಗಳ ಸರಮಾಲೆ ಹದಿನೆಂಟು–ಇಪ್ಪತ್ತು ವಿವಿಧ ಬಗೆಯ ಅನುಭಾವದ ಸೌರಭವನ್ನು ಸೂಸುವ

ಮೌಲಿಕ ಕೃತಿ ಪುಷ್ಪಗಳಿಂದ ನಿರ್ಮಾಣಗೊಂಡು ಕನ್ನಡ ಸಾಹಿತ್ಯ ದೇವಿಯ ಕೊರಳವನ್ನಲಂಕೃತಗೊಳಿಸುವಂತಾಯಿತು.

ಪ್ರಸ್ತುತ ಕೈ ಬರೆಹದ ಗ್ರಂಥ "ಗುರುಕರುಣೆ–ಗುರುಸ್ಮರಣೆ" ಲೇಖಕರ ಅಪರವಯದಲ್ಲಿ ಸಿದ್ಧವಾದ ಮಾಗಿದ ಬುದ್ಧಿಯ ರಸಪಾಕವಾಗಿದೆ. ಅದರಲ್ಲಿ ಸಾಹಿತ್ಯದ ಹೊಳಪು ಭಕ್ತಿಯ ಸೈಪು ಎರಡೂ ಹಾಸು ಹೊಕ್ಕಾಗಿ ಮೂಡಿ ಬಂದಿವೆ. ಇದೊಂದು ಅನುಭಾವದ ಪರಿಮಳ ಬೀರುವ ಅಪೂರ್ವ ದಿನಚರಿ. ಸಾಹಿತ್ಯದ ಹೊಸ ನಮೂನೆಯಾಗಿದೆ ಎಂದರೆ ತಪ್ಪಾಗಲಾರದು. ಇದರಲ್ಲಿ ಗ್ರಂಥಕರ್ತರ ವೈಯಕ್ತಿಕ ಜೀವನದ ಕೆಲ ಘಟನಾವಳಿಗಳು ಬಂದಿದ್ದರೂ ಅವೆಲ್ಲ ಪೂಜ್ಯ ಸದ್ಗುರುಗಳ ಪಾದ ಸಾನ್ನಿಧ್ಯದಲ್ಲಿ ಜರುಗಿದ ಸಂಗತಿಗಳೇ ಆಗಿವೆ. ಹೀಗಾಗಿ ಈ ಕೃತಿಯು ಪೂಜ್ಯರ ದಿವ್ಯ ಚರಿತ್ರೆಗೆ ಸಂಬಂಧಿಸಿದ ಕೆಲವು ಪ್ರಾಮುಖ್ಯ ಐತಿಹಾಸಿಕ ಘಟನೆಗಳನ್ನು ವಾಸ್ತವಿಕ ರೂಪದಲ್ಲಿ ಒದಗಿಸುತ್ತದೆ. ಬರೆಯುವ ಶೈಲಿತುಂಬ ರಸವತ್ತಾಗಿದೆ.

ಈ ಕೈಬರೆಹ ಗ್ರಂಥವು ದಿನಚರಿಯಂತಿದ್ದರೂ ನಂತರ ಸಹಚರಿಯಂತೆ ನಮ್ಮನ್ನು ಸಂತ ಶಿರೋಮಣಿ ಶ್ರೀ ಶಾಂತವೀರ ಶಿವಯೋಗಿಗಳ ಸತ್ಸಂಗ ಸಾನ್ನಿಧ್ಯದಲ್ಲಿ ಕರೆದೊಯ್ಯುತ್ತದೆ. ಓದುಗರಿಗೆ ಅತುಲ ಆನಂದವನ್ನೀಯುತ್ತದೆ. ಹೀಗೆ ಈ ಗ್ರಂಥ ಸರ್ವರಿಗೂ ಓದಲು ಯೋಗ್ಯ ದಾರಿದೀಪವಾಗಿದೆ. ಅಸಹಾಯಕ ಸ್ಥಿತಿಯಲ್ಲಿದ್ದರೂ ಬೌದ್ಧಿಕ ಬಂಧುರತೆಯ ಪರಿಚಯ ಮಾಡಿಕೊಡುತ್ತಾ ಲೇಖಕರು ಈ ಸಾರ್ಥಕ ಕೃತಿಯನ್ನು ರಚಿಸಿ ಗುರು ಪದಕ್ಕೆ ಸಮರ್ಪಿಸಿ ಕೃತಾರ್ಥರಾಗಿದ್ದಾರೆ.

ತಮ್ಮ ಈ ಸಾರ್ಥಕ ಸೇವೆಯಿಂದ ಗುರುಗೌರವ ತೋರಿ ತಮ್ಮನ್ನೇ ಕೃತ ಕೃತ್ಯರನ್ನಾಗಿ ಮಾಡಿಕೊಂಡ ಶರಣಸಾಹಿತಿ ಶ್ರೀ ಲಕ್ಕಪ್ಪನವರಿಗೆ ಸದ್ಗುರು ಸಾರ್ವಭೌಮರು ಅಖಂಡ ಆಯುರಾರೋಗ್ಯ ಸಕಲ ಸೌಭಾಗ್ಯವನ್ನಿತ್ತು ತಮ್ಮ ಕೊನೆಯ ಉಸಿರಿನವರೆಗೂ ಸಾಹಿತ್ಯ ಸೇವೆಯನ್ನೆಸಗುತ್ತ ಅನುಭಾವದ ರಸಪಾಕ ವನ್ನುಂಡು ಉಣಿಸುವ ಮಣಿಹದಲ್ಲಿ ಅಹರ್ನಿಶ ನಿರತರಾಗಲೆಂದು ಹೃದಯಾರೆ ಹಾರೈಸೋಣವಾಗಿದೆ.

ಓಂ ತತ್‌ಸತ್

ತಿಥಿ ಶ್ರಾವಣ ಶುದ್ಧ ಪ್ರತಿಪದೆ ಇತ್ಯಾಶಿಷಃ

ಗುರುಕರುಣೆ-ಗುರುಸ್ಮರಣೆ

ಹರಳೇಶ್ವರ ಕ್ಷೇತ್ರ

ಪ್ರಥಮ ಕಿರಣ

ನನ್ನ 'ನೀತಿ ಮುಕ್ತಾವಲಿ' (೧೭೭ ಕಂದ ಪದ್ಯಗಳ) ನೈತಿಕ ಖಂಡಕಾವ್ಯ ೧೯೩೧ರಲ್ಲಿ ಪ್ರಕಟವಾಯಿತು. ಅದು ಪ್ರಾಥಮಿಕ ಮಾಧ್ಯಮಿಕ ಶಾಲೆಗಳಲ್ಲಿ ಅಧಿಕ ಪಠ್ಯವಾಗಿ ಉಪಯೋಗಿಸಲು ಸರಕಾರದಿಂದ ಮಾನ್ಯತೆ ಪಡೆದಿತ್ತು ಅದರ ಅಚ್ಚಿಗೆ ಧನ ಸಹಾಯ ಮಾಡಿದವರು ಶ್ರೀಮಾನ ಶಿವಲಿಂಗಪ್ಪನವರು ಹೇರಲಗಿ ಜವಳಿ ಅಂಗಡಿ ಒಡೆಯರು. ಬಬಲೇಶ್ವರದ ಶ್ರೀಶಾಂತವೀರ ಮಹಾಸ್ವಾಮಿಗಳು ಈ ಉದಾರ ಶ್ರೀಮಂತ ಭಕ್ತರ ಮನೆಗೆ ಗೌರವಾಮಂತ್ರಣ ಹೊಂದಿ ಬಂದಾಗ ಈ ಕೃತಿಯು ಪ್ರತಿ ಒಂದು ಕಾಣಿಕೆಯಾಗಿ ಅವರ ಕೈ ಸೇರಿತ್ತು. ಮತ್ತೊಮ್ಮೆ ನಾನು ಅವರ ಮನೆಯಲ್ಲಿಯೇ ಶ್ರೀ ಸ್ವಾಮಿಗಳಿಗೆ ವಂದಿಸಿದಾಗ ಹೆಸರು ಕೇಳಿದರು ನೀತಿ ಮುಕ್ತಾವಲಿಯ ಪ್ರಸ್ತಾಪ ಮಾಡಿ ಮೆಚ್ಚುಗೆ ಸೂಚಿಸಿ ಆಶೀರ್ವದಿಸಿದ್ದರು. ಇದು ನನಗೆ ಅವರ ಪ್ರಥಮದರ್ಶನ! ನನ್ನ ಮನಕ್ಕೆ ಮೂಡಿದ ಅವರ ಕರುಣೆಯ ಪ್ರಥಮ ಕಿರಣ!

ಮುಂದಿನ ವರ್ಷಗಳಲ್ಲಿ ಎರಡು ಮೂರು ಸಲ ಅವರ ದರ್ಶನ ದೊರೆತಾಗಲೆಲ್ಲ ಚುಟುಕು ನುಡಿಗಳಿರುವ ಯಾವದೊಂದು ಪದ್ಯವನ್ನು ನೆನಪಿಸುತ್ತ ನಗುತ್ತ ಆಶೀರ್ವದಿಸಿ ಬೆನ್ನು ತಟ್ಟುತ್ತಿದ್ದರು.

೧೯೩೦ರಲ್ಲಿ ಹೇರಲಗಿಯವರ ಜವಳಿ ಅಂಗಡಿಯ ಬೆಳ್ಳಿ ಹಬ್ಬವು ವ್ಯಾಪಕವಾಗಿ ಜರುಗಿತು. ವಾಣಿಜ್ಯವನ್ನಲ್ಲದೆ ಕೃಷಿ, ಕಲೆ, ಸಾಹಿತ್ಯ ಸಂಸ್ಕೃತಿಗಳನ್ನೊಳಗೊಂಡು ಒಂದು ವಾರದ ಕಾರ್ಯಕ್ರಮ ಹೊಂದಿ ನಡೆಯಿತು. ಅದರಲ್ಲಿ ನಾನು ಇನ್ನೊಬ್ಬ ಹಿರಿಯರೊಡನೆ ಕಾರ್ಯದರ್ಶಿಯಾಗಿದ್ದೆನು. ಆ ಸಮಾರಂಭಕ್ಕೆ ಹಲವಾರು ಸ್ವಾಮಿಗಳಂತೆ ಬಬಲೇಶ್ವರ ಸ್ವಾಮಿಗಳವರೂ ಬರಮಾಡಿಕೊಳ್ಳಲ್ಪಟ್ಟ

ದ್ದರು. ಆಗಿನ ಕಾರ್ಯ ಚಟುವಟಿಕೆಗಳಲ್ಲಿ ಶ್ರೀ ಶಾಂತವೀರ ಅಪ್ಪನವರ ಸಂಪರ್ಕ ಹೆಚ್ಚು ಹೆಚ್ಚಾಗಿ ನನ್ನಲ್ಲಿ ಅವರ ವಾತ್ಸಲ್ಯ ಬೆಳೆಯಲು ಕಾರಣವಾಗಿತ್ತು.

೧೯೪೧ರಲ್ಲಿ ನಾನು ಧಾರವಾಡಕ್ಕೆ ಹೋದೆನು. ೧೯೫೧ರಲ್ಲಿ ಮರಳಿ ವಿಜಾಪುರ ಜಿಲ್ಲೆಗೆ ಬರುವವರೆಗೆ ಅವರ ದರ್ಶನ ಭಾಗ್ಯ ದೊರೆತಿರಲಿಲ್ಲ. ೧೯೫೩ರಲ್ಲಿ ಬಬಲೇಶ್ವರ ಭಾಗಕ್ಕೇನೆ ಅಸಿ.ಡೆ. ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಎಂದು ವರ್ಗ ವಾಯಿತು. ಆಗ ಶ್ರೀ ಸ್ವಾಮಿಗಳವರು ಹೊರಮಠದಲ್ಲಿ ಇರುತ್ತಿದ್ದರು. ನಾನು ದರ್ಶನಕ್ಕೆ ಹೋದಾಗ ಪ್ರಸಾದಕ್ಕಾಗಿ ಮಠಕ್ಕೇ ಬರಬೇಕೆಂದು ಸೂಚಿಸಿದ್ದರು. ಆದರೆ ಅನೇಕ ಕಾಡು ಗ್ರಾಮಗಳನ್ನೊಳಗೊಂಡು ೫೦ ಗ್ರಾಮಗಳಲ್ಲಿ ಸಂಚರಿಸುತ್ತಿದ್ದ ನನಗೆ ಧರ್ಮದ ಕ್ರಿಯಾಚಾರ ಶಿಥಿಲವಾಗಿ ನಡೆಯುತ್ತಿದ್ದುದರಿಂದ ನಾನು ಮಠಕ್ಕೆ ಪ್ರಸಾದಕ್ಕೆ ಹೋಗುತ್ತಿರಲಿಲ್ಲ. ೧೯೫೩ರಲ್ಲಿ ಊರೊಳಗಿನ ಮಠದಲ್ಲಿ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳಿಂದ ಘನ ಪ್ರವಚನ ನಡೆಸಿದ್ದರು. ಸಾಯಂಕಾಲ ಹೊರಗಿನ ಮಠದಿಂದ ಕಾವೀ ಬಟ್ಟೆ ಕಟ್ಟಿಗೆ ಆವುಗೆ ಧರಿಸಿ ಬೆತ್ತ ಬೀಸುತ್ತ ಆರಾಮವಾಗಿ ಒಳಗಿನ ಮಠಕ್ಕೆ ಬರುತ್ತಿದ್ದರು. ಹಾಗೆ ಹಾಯಾಗಿ ಅಡ್ಡಾಡಲು ತಕ್ಕಂತೆ ಅಪ್ಪನವರ ಕಣ್ಣು ಕಾಲು ಸರಿಯಾಗಿದ್ದುದನ್ನು ನಾನು ನೋಡಿದ್ದು ಅದೇ ಕೊನೆಯದು.

ಮುಂದೆ ನನ್ನ ಜೀವನ ಕಾಯಕ ಜಿಲ್ಹೆಯ ಬೇರೆ ಭಾಗಗಳಿಗೆ ಬದಲಾದದ್ದರಿಂದ ೬–೭ ವರ್ಷಗಳ ವರೆಗೆ ಶ್ರೀಗಳವರ ದರ್ಶನ ಲಭ್ಯವಾಗಿರಲಿಲ್ಲ. ಈ ಅವಧಿಯಲ್ಲಿ ಅವರ ಎರಡೂ ಕಣ್ಣು ಕಾಚಬಿಂದು ಆಗಿ ಆಪರೇಶನ್ ಯಶಸ್ವಿಯಾಗಿರಲಿಲ್ಲ ಮತ್ತು ಬಬಲೇಶ್ವರ ಬಿಟ್ಟು ಹರಳೇಶ್ವರದಲ್ಲಿ ವಾಸಿಸಿದ್ದರು. ಇನ್ನೂ ಅವರು ಬಬಲೇಶ್ವರದಲ್ಲಿ ಇರುವಾಗಲೇ ಅಂದರೆ ೧೯೫೬ರಲ್ಲಿ ನನ್ನ ಚಿರಂಜೀವರಿಬ್ಬರ ಮದುವೆಗೆ ಸುದೀರ್ಘ ಮಂಗಲಾಶೀರ್ವಾದ ಸಂದೇಶವನ್ನು ಕರುಣಿಸಿ ಬರೆಯಿಸಿ ಕಳುಹಿಸಿದ್ದರು.

ಬೋಧಾತ್ಮಕ ಪ್ರಶ್ನೆ

ಬಹುಶಃ ೧೯೬೦ ಫೆಬ್ರುವರಿಯಲ್ಲಿ ಕಾಖಂಡಕಿ ಗೌಡರ ಮದುವೆ ಸಮಾರಂಭ ಹರಳೇಶ್ವರದಲ್ಲಿ ನಡೆಯುತ್ತಲಿತ್ತು. ಪ್ರಸಿದ್ಧ ಮನೆ ಅದ್ದೂರಿಯ ಲಗ್ನ ! ಭಾರಿಜನ ಸಮುದಾಯ ಕೂಡಿದ್ದಿತು ಅದರ ಹಿಂದಿನ ವರ್ಷವೇ ಶ್ರೀಶಾಂತವೀರ ಶಿವಾಚಾರ್ಯ ಮಹಾಸ್ವಾಮಿಗಳವರು ಬಬಲೇಶ್ವರ ಮಠ ಬಿಟ್ಟು ಅಲ್ಲಿ ಬಂದು ವಾಸಿಸಿದ್ದರು.

ಲಿಂಗಪೂಜಾನುಷ್ಠಾನ ಪ್ರಸಾದ ವಿಶ್ರಾಂತಿಗಳಿಗಾಗಿ ಎರಡು ಕೋಣೆಗಳನ್ನು ಕಟ್ಟಿಸಿಕೊಟ್ಟಿದ್ದರು. ಅವರ ಬಾಹ್ಯದೃಷ್ಟಿ ಪೂರ್ಣ ಹೋಗಿಬಿಟ್ಟಿದ್ದಿತು.

ಮದುವೆ ಸಮಾರಂಭದಲ್ಲಿ ಭಾಗಿಯಾಗಲು ನಾನೂ ಅಲ್ಲಿಗೆ ಹೋಗಿದ್ದೆನು ಮದುವೆಗೆ ಬಂದವರೆಲ್ಲ ಸ್ವಾಮಿಗಳ ದರ್ಶನಕ್ಕೆ ನೂಕು ನುಗ್ಗಲಾಗಿ ಬರುತ್ತಿದ್ದರು ಕೋಣೆಯ ಒಳಗೆ ಹೋಗುವದಕ್ಕೂ ಗದ್ದಲ ಹೊರಗೆ ಬರುವದೂ ಸುಲಭವಾಗಿರ ಲಿಲ್ಲ. ನಾನೂ ನುಗ್ಗಿಹೋದೆ ಶ್ರೀ ಪಾದಕ್ಕೆ ನಮಸ್ಕರಿಸಿ ಮೇಲಕ್ಕೆದ್ದಾಗ ಹತ್ತಿರಿದ್ದ ಯಾರೋ ನನ್ನ ಹೆಸರು ಹೇಳಿದರು ಅಪ್ಪಗಳು ಕೈಚಾಚಿ ರಟ್ಟೆ ಹಿಡಿದರು, ಕೇಳಿದರು "ನಿವೃತ್ತರಾಗಿದ್ದೀರಾ ಎಲ್ಲಿ ಇದ್ದೀರಿ ಎಷ್ಟು ಕಾಲವಾಯಿತು ಭೇಟಿಯಿಲ್ಲವಲ್ಲ."

'ನಿವೃತ್ತನಾಗಿ ೨ ವರ್ಷ ಆಗತ ಬಂತು ಮನೆಯ ಕೆಲಸಗಳಲ್ಲಿ ದರ್ಶನಕ್ಕೆ ಬರಲು ಆಗೇ ಇಲ್ಲ ಅಪ್ಪಾ.'

ಓಹೋ "ಅವೆಲ್ಲ ಮುಗಿದು ಬಿಟ್ಟ ಬಳಿಕವೇ ಬರಬೇಕೆಂದಿದ್ದೀರಾ?" ಎಂದು ಬಲವಾಗಿ ನಕ್ಕು ಬಿಟ್ಟರು. ನಿಂತವರ ಮೊಗದಲ್ಲಿಯೂ ನಗೆ ಮೂಡಿತ್ತು. ನನ್ನ ಮನಸ್ಸು ನಾಚಿತ್ತು ಇಷ್ಟರಲ್ಲಿ ಬೇರೆ ಹಿರಿಯರ ಹೆಸರು ಪರಿಚಯ ಪರಾಮರ್ಶೆ ನಡೆದು ಬಿಟ್ಟಿತು. ನಿಲ್ಲಲೂ ಸ್ಥಳವಿರಲಿಲ್ಲ ನಾನು ಸರಿದೆ ಸ್ವಾಮಿಗಳನ್ನು ಲಗ್ನ ಮಂಟಪಕ್ಕೆ ಬರಮಾಡಿಕೊಂಡರು ಕ್ರಮವಾಗಿ ಮಂಗಲ ಕಾರ್ಯಗಳು ಜರುಗಿದವು ಭೂರಿ ಭೋಜನವಾಯಿತು ನಮ್ಮ ವಾಹನದ ಅನುಕೂಲ ನೋಡಿಕೊಂಡು ಊರಿಗೆ ಮರಳಿದ್ದೆನು.

ಅಪ್ಪನವರ ಅಂದಿನ ಆ ಪ್ರಶ್ನೆಯು ಒಡಲಲ್ಲಿರುವ ಅವರ ವ್ಯಾಪಕ ಬೋಧೆ ಯನ್ನು ನಾವೆಷ್ಟು ತಿಳಿದುಕೊಂಡೆವು? ನನ್ನ ಮನಸ್ಸಿಗೆ ಲಜ್ಜೆಯೆನಿಸಿತ್ತು ಮಾತ್ರ! ಅದು ಊರಿಗೆ ಬರುವವರೆಗೆ ಇತ್ತು. ಮತ್ತೆ ಸಂಸಾರದ ಕೆಲಸ ಕಾರ್ಯ ಕೈಕೊಳ್ಳದೆ ಇರಲಿಕ್ಕೆ ಆದೀತೇ ಸುಲಭವಲ್ಲ!

ದರ್ಶನಕ್ಕಾಗಿ ಪ್ರಥಮ ಪ್ರಯಾಣ

ಹೊಲ ಮನೆಗಳ ಕೆಲಸ ನಡಿಸುತ್ತಲೇ ವಿಜಾಪುರದಲ್ಲಿ ಶಿವಾನುಭವಗೋಷ್ಠಿ ಯಲ್ಲಿ ಗೆಳೆಯರೊಡನೆ ಭಾಗವಹಿಸುತ್ತಿದ್ದೆ. ಫ.ಗು. ಹಳಕಟ್ಟಿಯವರ 'ಶಿವಾನುಭವ' ಕಟ್ಟುಗಳು ಸಹಿತ ನನ್ನ ಗ್ರಂಥ ಸಂಗ್ರಹ (ತಿರುಗಾಡುವ ನೌಕರನಾಗಿರುವಾಗ) ಒಂದು ಕಡೆ ಇಟ್ಟಲ್ಲೇ ಗೆದ್ದಲು ಹೊಡೆದು ನಾಶವಾಗಿತ್ತು. ಅವುಗಳ ಬಾಯಿಂದ

ಅಳಿದುಳಿದುದರಲ್ಲಿ ವೈ ನಾಗೇಶ ಶಾಸ್ತ್ರಿಗಳು ಪ್ರಕಟಿಸಿದ ಶಿವಾನುಭವದ ಸೂತ್ರಸಾರದ ಪುಟಗಳು ಸಿಕ್ಕಿದ್ದವು. ಅವುಗಳನ್ನು ಹೊಂದಿಸಿಕೊಂಡು ಮೊಗ್ಗೆಯ ಮಾಯಿದೇವರ ಶಿವಾನುಭವ ಸೂತ್ರಸಾರದ ಗದ್ಯಾನುವಾದ ತಯಾರಿಸುತ್ತಿದ್ದೆನು. ಒಂದು ಹಂತದಲ್ಲಿ ಅದು ಮುಗಿಯುತ್ತ ಬಂದಿತ್ತು. ಶ್ರೀಶಾಂತವೀರ ಸ್ವಾಮಿಗಳ ದರ್ಶನ ಪಡೆಯುವ ಆಶೆಯಾದುದಕ್ಕೆ ಈ ಬರೆಹವನ್ನು ಅವರಡಿಯಲ್ಲಿ ಓದಬೇಕೆಂಬ ಲವಲವಿಕೆಯ ಉತ್ಕಟತೆಯೂ ಜತೆಯಾಯಿತು. ೨೫-೨-೬೧ ರಂದು ಅನುವು ಮಾಡಿಕೊಂಡು ಹರಳೇಶ್ವರಕ್ಕೆ ಹೋದೆನು.

ಮನಸ್ಸಿಗೆ ಶಾಂತಿ ಸಮಾಧಾನಗಳ ಬಯಕೆಯಿಂದಲೇ ಹರಳೇಶ್ವರಕ್ಕೆ ಬಂದೆ. ಈ ಆನಂದದ ಐಸಿರಿ ನನಗಾಗಿ ಅಲ್ಲಿ ಕಾಯ್ದಿರುವಂತಿತ್ತು. ಈ ಮೊದಲು ಅಪ್ಪ ನವರ ಶಿವಪ್ರಭಾವ ನನ್ನ ಮೇಲೆ ಉಂಟಾಗಿದ್ದರೂ ಅವರ ಸಹವಾಸ ಲಭಿಸಿರಲಿಲ್ಲ.

ಆಶ್ರಮಕ್ಕೆ ಬಂದಾಗ ಮಧ್ಯಾಹ್ನ ೧೨,೪೫ ಗಂಟೆ ಶ್ರೀಗಳು ಅರ್ಪಿತ ಮುಗಿಸಿ ಹರಳಯ್ಯನ ಗುಡಿಯ ಮೊಗಶಾಲೆಯಲ್ಲಿ ಕುರ್ಚಿಯಲ್ಲಿ ಕುಳಿತಿದ್ದರು ಹತ್ತಿರೊಬ್ಬಿಬ್ಬರು ಇದ್ದರು. ಹೋಗಿ ಪಾದಕ್ಕೆ ವಂದಿಸಿದೆ. ಯಾರು? ಎಂದರು ಅಲ್ಲಿ ಕುಳಿತವರಿಗೆ ನನ್ನ ಪರಿಚಯವಿರಲಿಲ್ಲ. ನಾನೇ ಲಕ್ಕಪ್ಪ ಶಿರಹಟ್ಟಿ ಎಂದು ಹೆಸರು ಹೇಳಿದೆ.

"ಓಹೋ ಶಿರಹಟ್ಟಿ ಸಾಹೇಬರು" ಎನ್ನುತ್ತ ಬಾಗಿ ಮೈದಡವಿ ಹರ್ಷ ಚಿತ್ತರಾಗಿ "ಏನು ಬಂದಿರಾ? ಹೇಗೆ ಬಂದಿರಿ? ಹಲಗಣೆಯ ಕತ್ತರಿಯಿಂದ ನಡೆ ಯುತ್ತಲೇ ಬಂದಿರಾ?"

'ಹೌದರಿ ಅಪ್ಪಾ ಬಹಳ ದೂರಿಲ್ಲ'

'ಬಿಸಿಲು ಹೊತ್ತು, ದಾರಿ ಚೆನ್ನಾಗಿಲ್ಲ. ಒಡ್ಡು ಓರೆ ದಾಟುತ್ತ ಬರಬೇಕು' ಮತ್ತೆ ಮತ್ತೆ ಬೆನ್ನು ಸವರಿದರು "ಚೆನ್ನಬಸಯ್ಯಾ" ಎಂದು ಕೂಗಿದರು ವಾಸದ ಸ್ಥಳದಿಂದ ಎಳೆಪರೆಯದ ತರುಣನು ಬಂದು ನಿಂತನು "ಹೋಗಿರಿ ಕೈಕಾಲು ಮುಖ ತೊಳೆಯಿರಿ ತಮ್ಮಾ ಇವರಿಗೆ...."ಎಂದರಲ್ಲದೆ, ಏನು ಎಡೆಮಾಡಬೇಕೆಂಬುದಕ್ಕೂ ಸಂಕ್ಷಿಪ್ತದಲ್ಲಿಯೇ ಬಹಳ ಸೂಚನೆ ಕೊಟ್ಟರು. ಹೋದೆ ಬಯಲು ರುಚಿಯ ಪ್ರಸಾದ ಸ್ವೀಕರಿಸಿ ತೃಪ್ತನಾದೆ. ಮತ್ತೆ ಹತ್ತಿರ ಬಂದಾಗ 'ಹೇಗಾಯಿತು ಊಟ? ನಮ್ಮದು ಗಂಡಸರ ಅಡಿಗೆ, ನೀವು ತಾಯಿಗಳ ಕೈಯ ವಿವಿಧ ರುಚಿ ಉಂಡವರು' ಎಂದು ನಗೆಯಾಡಿದರು. ಯೋಗಕ್ಷೇಮ ಕೇಳಿ ಪರಾಮರ್ಶಿಸಿದರು.

ಶಿವಾನುಭವದ ಸೂತ್ರ ಸಾರದ ಗದ್ಯಾನುವಾದ

"ಅಪ್ಪಾ ಮಗ್ಗೆಯ ಮಾಯಿದೇವರ ಶಿವಾನುಭವ ಸೂತ್ರ ಸಾರದ ಗದ್ಯಾನುವಾದ ಬರೆಯು ಹತ್ತಿದ್ದೇನೆ ಬಹುಭಾಗ ಆಗಿದೆ"

"ಭೇಷ್ ತಂದಿದ್ದಿರಾ?"

"ತಮ್ಮ ಸನ್ನಿಧಿಯಲ್ಲಿ ಓದಲೆಂದು ತಂದಿದ್ದೇನೆ ಅಪ್ಪಣೆಯಾದರೆ ಓದುತ್ತೇನೆ" ಕೂಡಲೇ ಅಪ್ಪನವರು ಸೇವಾದವನನ್ನು ಕರೆದು ಗೋಡೆಯ ಹತ್ತಿರ ಆಸನ ಚಾಪೆ ಹಾಕಿಸಿ ಚಿಕ್ಕದಿಂಬ ಇರಿಸಿದರು. ಅಲ್ಲಿ ನನಗೆ ಹಾಯಾಗಿ ಕೂಡ್ರ ಹೇಳಿದರು. ತಾವು ಅದೇ ಸಾದಾ ಖುರ್ಚಿಯ ಮೇಲೆಯೇ ಉಳಿದರು. ಅಪರಾಹ್ನ ಪವಡಿಸುವದನ್ನು ಬಿಟ್ಟು ಬಿಟ್ಟರು.

ಕೇವಲಾದ್ವೈತವನ್ನು ಅಲ್ಲಗಳೆದು ವೀರಶೈವದ ದ್ವೈತಾದ್ವೈತ ಸ್ವರೂಪವನ್ನು, ಜಗತ್ತು ಮಿಥ್ಯವಲ್ಲ ಎಂಬುದನ್ನು ನಿರೂಪಿಸುವ ಪೀಠಿಕಾ ಭಾಗವನ್ನು ಓದಿದೆನು. ಗಮನಿಸಿ ಆಲಿಸುತ್ತಿದ್ದವರು "ಸೈ" ಎಂದರು. ನಾಲ್ಕು ಅಧ್ಯಾಯ ಓದಿದೆ ಸ್ಥಲ (ಪರಶಿವ), ವಿಮರ್ಶಾಸಕ್ತಿ, ಪೂಜ್ಯ ಪೂಜಕಭಾವಲೀಲೆ, ಅದಕ್ಕಾಗಿ ಶಕ್ತಿಯ ಆವಿರ್ಭಾವ, ಅದರ ವಿಕಾಸ, ವಿಶ್ವರ ರಚನೆ ಸ್ಥಲದಲ್ಲಿ ಲಿಂಗ ಅಂಗ, ಲಿಂಗದೊಡನೆ ಶಕ್ತಿ, ಅಂಗದೊಡನೆ ಭಕ್ತಿ, ಪ್ರವೃತ್ತಿಯಲ್ಲಿ ಆರು ಲಿಂಗಗಳು, ನಿವೃತ್ತಿಯಲ್ಲಿ ಆರು ಅಂಗ ಸ್ಥಲಗಳು, ಆರು ಭಕ್ತಿಗಳು, ಸಂದವು. ಹರ್ಷಚಿತ್ತರಾಗಿ ಶ್ರೀಗಳು ತಾವೂ ಪೂರಕವಿವರಣೆ ನೀಡುತ್ತಿದ್ದರು ಅನುವಾದ ಸಂಯೋಜನೆ ಚೆನ್ನಾಗಿದೆ ಎಂದು ಪ್ರೋತ್ಸಾಹಿಸಿದರು. ಮೂರು ಲಿಂಗಗಳು ಮೂರು ಅವಸ್ಥೆಯ ಮೂರು ಜೀವತ್ರಯರು. ವಿವೇಚನೆ ಮುಗಿದು ವಿಷಯ ಒಂದು ಹಂತಕ್ಕೆ ನಿಂತಿತು. ಸ್ವಲ್ಪ ವಿಶ್ರಾಂತಿ ತಕ್ಕೊಳ್ಳಿರಿ ವಿವರಿಸುವ ಸರಳ ಶೈಲಿ ಚೆನ್ನಾಗಿದೆ. ಚೆನಬಸಯ್ಯಾ ಸಾಹೇಬರ ಕಂಠಕ್ಕೆ ಶ್ರಮವಾಗಿದೆ ಚಹಾ ಮಾಡು.

"ಚಹಾನ್ರೆ ಅಪ್ಪಾ ಅವರೆ ಇಲ್ಲಿಯೂ ಸಾಗಿ ಬಂದಿದೆಯಷ್ಟೇ?" ನಾನೆಂದೆ.

"ಅದೀಗ ಮುಂಚೂಣಿ ಅಲ್ಲವೇನು? ಆಧುನಿಕ ಮಂದಿ ಬಂದಾಗ ಮಂದಿ ಕೂಡ ಬರದೇ ಬಿಟ್ಟೀತೇ? ದರ್ಶನಕ್ಕೆ ಬಂದ ಆಧುನಿಕರು. ಕಾಖಂಡಕಿ-ಶೇಗುಣಶಿಗಳಿಂದ ತರಿಸಿಕೊಂಡು ಕುಡಿಯಹತ್ತಿದರು. ಅದನ್ನು ತಿಳಿದು ನಾನು ಆಶ್ರಮದಲ್ಲಿಯೇ ಅಂಥವರ ಸಲುವಾಗಿ ಅದರ ಸಾಮಗ್ರಿ ಇಡಿಸಿದೆ" ಅಂತು ಚಹಾ ತಕ್ಕೊಂಡೆ ಅಪ್ಪನವರು ಜಲಬಾಧೆಗೆ ಹೋಗಿ ಬಂದು ತಮ್ಮ

ಯೋಗ ಮಂದಿರದ ಮುಂದೆಯೇ ಕಾಲಿಗೆ ರೂಢಿ ಇರುವಲ್ಲಿಯೇ ಕೆಲವು ಸುತ್ತು ತಿರುಗಾಡಿದರು. ಬಳಿಕ ಮುಂದಿನ ಬಯಲಲ್ಲಿಯೇ ಖುರ್ಚಿ ಹಾಕಿಸಿಕೊಂಡು ನನಗೆ ಚಾಪಿ ಹಾಕಿಸಿ ಕುಳಿತರು. ನಮಸ್ಕರಿಸಿ ಕುಳಿತುಕೊಂಡೆನು.

ಸಾಂಪ್ರದಾಯಿಕ ಗುರು ಶಿಷ್ಯರು

"ಅಪ್ಪಾ ಕೆಲವು ಸ್ವಾಮಿಗಳವರು ತಮ್ಮ ಮಠದ ಶಿಷ್ಯ ಮನೆತನಗಳೆಂದು ಹೇಳುತ್ತಾರೆ; ಅದರಂತೆ ಭಕ್ತರು ಯಾವೊಬ್ಬ ಸ್ವಾಮಿಗಳನ್ನು ಇವರು ನಮ್ಮ ಮನೆಯ ಗುರುಗಳೆಂದು ಹೇಳುತ್ತಾರೆ. ಹೀಗೆ ಪರಂಪರೆಯ ಅಥವಾ ಸಾಂಪ್ರದಾಯಕ ಗುರು ಶಿಷ್ಯತ್ವ ಅನಿವಾರ್ಯವೇ?" ಬಹು ದಿನಗಳಿಂದ ನನ್ನ ತಲೆ ತಿನ್ನುತ್ತಿದ್ದ ಈ ಪ್ರಶ್ನೆಯನ್ನು ಧೈರ್ಯ ಮಾಡಿ ಕೇಳಿ ಬಿಟ್ಟೆನು.

"ಇಲ್ಲ! ನಿಜದ ದಾರೀ ತೋರಿಸಿ ಯಾರು ಅಲ್ಲಿ ನಡಿಸುವರೋ ಅವರು ಗುರುಗಳು. ಬಸವಾದಿ ಪ್ರಮಥರಿಗೆ ಸಾಂಪ್ರದಾಯಿಕ ಗುರುಗಳಿದ್ದರೆ? ಸರಿಯಾಯ್ತು ಅಪ್ಪಾ! ನನ್ನ ಮನಸ್ಸಿಗೆ ಗೊಂದಲ ಹಿಡಿದಿತ್ತು ಗುರು ಪರಂಪರೆಯಲ್ಲಿ ಎಲ್ಲ ಮೂರ್ತಿಗಳು ಯೋಗ್ಯರೇ ಇರಲಿಕ್ಕಿಲ್ಲ ತಾನು ಅಂಥ, ದಾರಿಗೊತ್ತಿಲ್ಲ, ಉಳಿದ ವರನ್ನು ಕೈ ಹಿಡಿದು ಹೇಗೆ ಕರೆದೊಯ್ಯಾನು?"

"ಬಳ್ಳಿ ಗುರುಡರು ನಡೆದು ಹಳ್ಳಕ್ಕೆ ಬೀಳುವರು" ಎಂದು ನಕ್ಕರು ಆ ನಗೆ ಯಲ್ಲಿಯೇ ನೆನಪಾದ ಒಂದು ಉದಾಹರಣೆಯನ್ನು ಹೇಳಿದರು.

"ಒಬ್ಬ ಗುರುಸ್ವಾಮಿ ವರ್ಷಕ್ಕೊಮ್ಮೆ ಪರಸ್ಥಳದ ತಮ್ಮ ಶಿಷ್ಯ ಮನೆತನ ಗಳಲ್ಲಿ ತಿರುಗಾಡಿ ಗುರು ಕಾಣಿಕೆ ತಕ್ಕೊಂಡು ಬರುತ್ತಿದ್ದರು ಒಂದು ಸಲ ಒಬ್ಬ ಬಡ ಶಿಷ್ಯನ ಮನೆಗೆ ಹೋದರು ಆತನಿಗೆ ಗುರುಕಾಣಿಕೆಗೆ ದುಡ್ಡು ಹುಟ್ಟಲಿಲ್ಲ ಗುರುಗಳೇ ಸಾಲದಂತೆ ಆ ಹಣದ ಕಾಗದ ಬರೆಯಿಸಿಕೊಂಡು ಬಂದರು. ಮುಂದೆರಡು ವರ್ಷಗಳಲ್ಲಿಯೂ ಆ ಶಿಷ್ಯ ಮತ್ತಿಷ್ಟು ಬಡವನಾದ್ದರಿಂದ ಹಾಗೆಯೇ ಕಾಗದ ಬರೆಯಿಸಿಕೊಂಡು ಬಂದರು. ನಾಲ್ಕನೆಯ ಸಲ ಹೋದಾಗ ತೀರ ಕಂಗಾಲನಾಗಿದ್ದ ಆ ಶಿಷ್ಯ ತನಗಿದ್ದ ಸ್ವಲ್ಪ ಭೂಮಿಯನ್ನು ಮಾರಲಿಕ್ಕೇ ಸಿದ್ಧನಾಗಿದ್ದನು ಬೆಲೆ ನಿಗದಿಯಾಗಿತ್ತು. ಗುರುಗಳು ಅದೇ ಬೆಲೆಗೆ ತಾವೇ ಭೂಮಿ ತೆಗೆದುಕೊಂಡು, ಮೂರು ವರ್ಷಗಳ ಕಾಣಿಕೆ ಬಡ್ಡಿ ಸಹಿತ ಮುರಕೊಂಡು ಉಳಿದ ಹಣ ಕೊಟ್ಟರು."

"ಶಿಷ್ಯನ ಉದ್ಧಾರ ಆಯ್ತುರಿ ಅಪ್ಪಾ!"

“ಆಗದೇನು? ಗುರುಗಳು, ಅವನಿಗೊಂದು ಜೋಳಿಗೆಯನ್ನೇ ಕೊಟ್ಟರು” ಎಂದು ನಕ್ಕರಾದರೂ “ಏನು ಗುರುಗಳೋ” ಎಂದು ವಿಷಾದಿಸಿದರು.

ಬಳಿಕ ಬೇಗಿನಲ್ಲಿ ಓದಿದ ವೀರಶೈವ ದರ್ಶನದ ವಿಷಯವಾಗಿ ಆಳವಾದ ವಿಚಾರವನ್ನು ಸ್ಥೂಲವಾಗಿ ಹೇಳಿದರು. “ಪರವಸ್ತು, ಪರಬ್ರಹ್ಮ, ಪರಶಿವ, ಲಿಂಗಸ್ಥಲ ಇವೆಲ್ಲ ಸಮಾನಾರ್ಥಕ ಶಬ್ದಗಳು. ಸೃಷ್ಟಿ, ಸ್ಥಿತಿ, ಲಯಗಳಿಗೆ ಆಧಾರವಾಗಿರುವದರಿಂದ ಸ್ಥಲ ಯಥಾರ್ಥವಾಗಿದೆ. ಅನಂತಕಾಲದಿಂದ ಇದ್ದು ಇಲ್ಲದಂತೆ ಇದ್ದುದು ಪರಶಿವ ಒಂದೇ ಅದರಲ್ಲಿ ಪೂಜ್ಯ-ಪೂಜಕಭಾವಲೀಲೆಯೆನ್ನಿರಿ, ಬಹುರೂಪ ಧಾರಣಾಪೇಕ್ಷೆಯೆನ್ನಿರಿ, ಹುಟ್ಟು ಅಳಿವುಲೀಲೆಗಾಗಿಯೆನ್ನಿ. ಈ ವಿನೋದಲೀಲೆಯೆನ್ನಿ ಅದರಲ್ಲಿ ‘ಉಲುಕು’ ಉಂಟಾಯಿತಲ್ಲ! ಅದೇ ಸ್ವಸ್ವರೂಪದ ಅರಿವಾಗಿರುವ ವಿಮರ್ಶಾಶಕ್ತಿ! ದೇವಾತ್ಮಶಕ್ತಿ! ಅದು ಆ ಮೂಲ ಆಶ್ರಮದಲ್ಲಿಯೇ ಸೃಷ್ಟಿಯ ರಚನೆ ಮಾಡಿತು ಅಥವಾ ಆ ಶಕ್ತಿಯ ವಿಕಾಸವೇ ಸೃಷ್ಟಿಯೆನ್ನಬಹುದು. ಒಡೆಯನ ಇಚ್ಛೆಗಾಗಿ ಈ ಬೇಸಾಯವಾಯಿತು. ಹೀಗೆ ತಾನೇ ಕಾರಣವಾದರೂ ತನ್ನಿರವಿನಲ್ಲಿ ವಿಕೃತಿಗೊಳಪಟ್ಟಿಲ್ಲ ಆ ಪರಶಿವ” ಎಂದರು.

“ಅವನಲ್ಲಿ ಈ ವಿನೋದಭಾವಲೀಲೆ ಉಲುಕು ಯಾಕೆ ಉಂಟಾಗಬೇಕು ಅಪ್ಪಾ? ಇದು ನೋಡಿರಿ ಈ ವಿಶ್ವ ಕೋಲಾಹಲ?”

“ಅದನ್ನು ಪ್ರಶ್ನಿಸುವಂತಿಲ್ಲ! ಯಾಕೆ ಉಂಟಾಯಿತೆಂಬುದನ್ನು ಯಾರೂ ಹೇಳಿಲ್ಲ ವಿಶ್ವ ಧರ್ಮವೆನಿಸಿದ ವೀರಶೈವ ಸಿದ್ಧಾಂತದಲ್ಲಿಯೂ ಇದಕ್ಕೆ ಉತ್ತರವಿಲ್ಲ”

“ಸಿದ್ಧಾಂತ ಪದದ ನಿರ್ವಚನವೇನರಿ ಅಪ್ಪಾ?”

“ಪ್ರಮಾಣ, ತಂತ್ರ (ಯುಕ್ತಿ), ಅನುಭವ ಈ ಮೂರರ ಏಕವಾದ ಮಾತು ಸಿದ್ಧಾಂತ” ತುಂಬ ಸರಸೋಕ್ತಿಯೆನಿಸಿತು ಅಪ್ಪನವರ ಈ ಮಾತು. ಹೀಗೆ ತತ್ವ ಸೌರಭದ ಸಂಭಾಷಣೆಯಲ್ಲಿ ಕೆಲ ವೇಳೆ ಕಳೆದ ಬಳಿಕ ಸಂಜೆಯ ಕ್ರಿಯಾದಿಗಳಿಗೆ ತೊಡಗಲಾಯಿತು.

೨೬-೨-೬೧ ಅಂದು ನಾನು ಅಪ್ಪಣೆ ಪಡೆದು ಹೊರಡಬೇಕಾಗಿತ್ತು. ಆದರೆ ಶ್ರೀಗಳು “ಇದೊಂದು ದಿನ ಇದ್ದು ನಾಳೆ ಹೋಗಿರಿ” ಎಂದು ಅಪ್ಪಣೆ ಮಾಡಿದರು. ಆಗಲಿ ಎಂದೆ. ನನಗೂ ಇನ್ನೊಂದು ಸಂಗತಿಯ ಸಲಹೆ ಪಡೆಯಬೇಕಾಗಿತ್ತು ಕಳೆದ (೧೯೬೦) ಶ್ರಾವಣ, ಭಾದ್ರಪದ, ಆಶ್ವಿನ, ಕಾರ್ತಿಕ ಮಾಸಗಳಲ್ಲಿ ೧೦೧ ದಿವಸ ದಿನಾಲು ೧೦೦೧ ರಂತೆ ಷಡಕ್ಷರ ಮಂತ್ರ (ಪೂಜಾ ನಂತರ)

ಬರೆಯುತ್ತ ಒಂದು ಲಕ್ಷ ಒಂದು ಸಾವಿರ ಒಂದು ನೂರಾ ಒಂದು (೧೦೧೧೦೧) ಲಿಖಿತ ಜಪದ ಹೊತ್ತಿಗೆ ಸಿದ್ಧವಾಗಿತ್ತು. ಅದನ್ನು ಅರುಹಿ ಏನು ಮಾಡಬೇಕೆಂಬು ದನ್ನು ಕೇಳಿಕೊಳ್ಳಬೇಕಾಗಿತ್ತು.

ಅಪ್ಪನವರ ಲಿಂಗ ಪೂಜಾನುಷ್ಠಾನ ಪೂರೈಸಿದ ಬಳಿಕ ಅವರ ಆದೇಶದಂತೆ ಶಿವಾನುಭವ ಸೂತ್ರ ಸಾರದ ಗದ್ಯಾನುವಾದ ಬರೆಹದ ಉಳಿದ ಭಾಗವನ್ನು ಓದಿದೆ. ನಿನ್ನೆಯಂತೆ ತಮ್ಮ ಪೂರಕವಾದ ಮಾತುಗಳಿಂದ ಭಾವಪುಷ್ಟೀಕರಣ ಗೊಳಿಸುತ್ತಿದ್ದರು. ನನಗೆ ಅದೆಷ್ಟು ಉತ್ಸಾಹ!! ಬರೆದದ್ದಷ್ಟು ಓದಿಯಾಯಿತು. ಶ್ರೀಗಳು ಬಳಿಕ ತಮ್ಮ ಪುಸ್ತಕಗಳ ಒಟ್ಟಿಲೊಳಗಿಂದ ಶಿವಾದ್ವೈತ ಮಂಜರಿ ಹೆಬ್ಬೊತ್ತಿಗೆಯನ್ನು ತೆಗೆಯಿಸಿ ನನ್ನ ಕೈಗೆ ಕೊಟ್ಟು 'ಸ್ವಲ್ಪ ನೋಡುತ್ತಿರಿ' ಎಂದು ಹೇಳಿ ಹೊರಗೆ ಹೋದರು. ಶಿವಾದ್ವೈತ ಮಂಜರಿ ಒಂದು ಕೈಗೆ ಒಜ್ಜೆಯಾಗುವ ಗ್ರಂಥ ಉದ್ದಾಮ ಪಂಡಿತರಿಂದಲೇ ಬರೆಯಿಸಿದ್ದು. ಅದರ ಪೀಠಿಕೆ ಪರಿವಿಡಿ ಲೇಖಕರ ಪರಿಚಯ ಮುಂತಾದವನ್ನು ನೋಡಿದೆ. ಭಾಷೆ ಕನ್ನಡವೇ ಆಗಿದ್ದರೂ ತುಂಬ ಗಡುಚಾಗಿತ್ತು ಖಂಡನ-ಮಂಡನ ಶೈಲಿಯಿದ್ದುದರಿಂದ ಕ್ಲಿಷ್ಟವಾಗಿತ್ತು.

ಅರ್ಪಿತ ಕಾಲದಲ್ಲಿ ನನ್ನನ್ನೂ ತಮ್ಮ ಹತ್ತಿರವೇ ಕುಳ್ಳಿರಿಸಿ ಪ್ರಸಾದ ಭೋಜನ ಮಾಡಿಸಿದರು.

ಶಿವಾದ್ವೈತ ಮಂಜರಿ ಗ್ರಂಥವೊಡನೆ ನನ್ನನ್ನು ಕರಕೊಂಡು ಗುಡಿಯ ಮೊಗಸಾಲೆಗೆ ಬಂದರು. ಆರಾಮವಾಗಿ ಕುಳ್ಳಿರುವದಾಯಿತು. ಪ್ರಸ್ತುತ ಗ್ರಂಥದ ಪೂರ್ವೋತ್ತರಗಳನ್ನು ತಿಳಿಸಿ ಕೆಲವು ವಿಶಿಷ್ಟ ವಿಷಯಗಳನ್ನು ತೆಗೆಯಿಸಿ ಓದಿಸಿದರು. ಗ್ರಂಥವು ದ್ವೈತವನ್ನು ಖಂಡಿಸಿ, ಕೇವಲಾದ್ವೈತವನ್ನು ಮಂಡಿಸುವದು. ಬಳಿಕ ಅದನ್ನು ನಿರಾಕರಣಗೊಳಿಸಿ ಶಕ್ತಿ ವಿಶಿಷ್ಟಾದ್ವೈತ ಅಥವಾ ದ್ವೈತಾದ್ವೈತವನ್ನು ಸ್ಥಾಪಿಸುವದು ಅದರಲ್ಲಿ ಮೂಡಿ ಬರುವ ವೀರಶೈವ ತತ್ವಗಳನ್ನು ವಿಶದೀಕರಿಸುವ ಅತ್ಯಂತ ಪ್ರೌಢ ಗ್ರಂಥ! ಅದರ ಹಿರಿಮೆ ಗೊತ್ತಾದ ಬಳಿಕ 'ನಾಳೆ ಇದನ್ನು ನಿಮ್ಮ ಸಂಗಡ ತಕ್ಕೊಂಡು ಹೋಗಿರಿ ಸಾವಕಾಶವಾಗಿ ಓದಿರಿ' ಎಂದು ಅಪ್ಪಣೆ ಮಾಡಿದರು. ಸಂಜೆಯಲ್ಲಿ ಆನಂದಮಯ ಸಾಮಾನ್ಯ ಶಿವಗೋಷ್ಠಿ. ಅದೇ ಶಿವ ಸಮಯದಲ್ಲಿ ನನ್ನ ೧೦೧ ದಿನದ ಷಡಕ್ಷರ ಮಂತ್ರದ ಲಿಖಿತ ಜಪದ ಹೊತ್ತಿಗೆಯ ವಿವರ ಅರಿಕೆ ಮಾಡಿದೆ. ಅಪ್ಪನವರು ತುಂಬ ಹರ್ಷಾಂಕಿತ ವದನ ದಿಂದ ಆಲಿಸಿದರು. ಈಗ ಅದನ್ನು ಏನು ಮಾಡಬೇಕೆಂದು ಕೇಳಿದೆ. ಕೂಡಲೇ

ಉತ್ತರ ಕೊಟ್ಟರು. "ಒಂದು ತಗಡಿನ ಡಬ್ಬಿಯಲ್ಲಿ ಅದನ್ನು ಇಟ್ಟು ಬಾಯಿ ಬೆಸಸಿರಿ ನಿಮ್ಮ ದೇಹದ ಸಮಾಧಿಯಾಗುವಾಗ ತಲೆಯ ಮೇಲೆ ಆ ಶಿವಸಂಪುಟ ಇರಿಸಲು ವ್ಯವಸ್ಥೆ ಮಾಡಿರಿ" ಒಳ್ಳೇ ಮೆಚ್ಚುಗೆಯಿಂದ ಆ ಸೂಚನೆ ಸ್ವೀಕರಿಸಿ ವಂದಿಸಿದೆ. (ಬೇಗನೆ ಸಿದ್ಧವಾದ ಆ ಸಂಪುಟ ಮನೆಯಲ್ಲಿದೆ ಅದು ಈ ದೇಹದ ಶಿರವನೇರುವ ಸಮಯು ಬರಲೇ ಒಲ್ಲದು) ವಂದಿಸಿ ಏಳುವಾಗ "ನಾಳೆ ಬೇಡ ನಾಡದು ಹೋಗಿರಿ" ಎಂದರು ಒಪ್ಪಿಕೊಂಡೆ. ಮರುದಿನ ಸೋಮವಾರ. ದಿನವೆಲ್ಲ ಹತ್ತಿರದ ಗ್ರಾಮಗಳ ಭಾವುಕ ಭಕ್ತರು ದರ್ಶನಕ್ಕೆ ಬರ ಹೋಗುವದು ನಡೆದೇ ಇತ್ತು. ಅವರವರ ಕುಶಲ ವಾರ್ತೆಗಳನ್ನು ಅಪ್ಪನವರ ವಾತ್ಸಲ್ಯ ಆಲಿಸುತ್ತಲೇ ಇತ್ತು.

ಮಧ್ಯಾನ್ಹದ ನಂತರ ಶಿವಾದ್ವೈತ ಮಂಜರಿಯ ಓದು. ವಿವರಣೆ ಒಂದೆರಡು ತಾಸು ನಡೆಯಿತು. ಅದೊಂದು ಪಾರಮಾರ್ಥಿಕ ಆನಂದ ವಿಹಾರ, ಸಂಜೆ ಪಪಯಿ ಹಣ್ಣು ಕಬ್ಬಿನ ಹಾಲು ಬಂದವು ಅವೇ ಪ್ರಸಾದ ಸೇವನೆ!

೨೮–೨–೬೧ ಮಂಗಳವಾರ ಬೇಗ ಅಡಿಗೆ ಮಾಡಿಸಿದರು. ಸ್ನಾನ ಪೂಜೆ ಯಾಗಲು ಅಪ್ಪನವರು ಸ್ವತಃ ನಿಂತು ಭೋಜನ ಮಾಡಿಸಿ ಆಶೀರ್ವದಿಸಿ ಅಪ್ಪಣೆ ಕೊಟ್ಟರು.

ಮುಂದೆ ತಿಂಗಳೊಪ್ಪತ್ತಿನಲ್ಲಿ ಮನೆತನದ ಕೆಲಸದ ಮೇಲೆ ಕಾಖಂಡಕಿಗೆ ಹೋಗಿದ್ದೆ. ಮಧ್ಯಾನ್ಹದ ಊಟದ ನಂತರ ಅಪ್ಪನವರ ದರ್ಶನಕ್ಕೆ ನಡೆಯುತ್ತ (೫ ಕಿ. ಮಿ.) ಹರಳೇಶ್ವರಕ್ಕೆ ಬಂದೆನು.

ಹರಳೇಶ್ವರ ಕ್ಷೇತ್ರ ಮನಮೋಹಕ ನೋಟ

ಮರಡಿಯ ಮೇಲೆ ಆಶ್ರಮದ ಸಮೀಪಕ್ಕೆ ಬರುವಾಗಲೇ 'ಓಯಾಸೀಸ' ದಂತೆ ಒಂದು ವೃಕ್ಷ ಗುಚ್ಛವಾಗಿ–ಸುಂದರವಾಗಿ ಮುಂದಿನ ತಗ್ಗು ನೆಲದಲ್ಲಿ ಆಶ್ರಮ ಕಾಣುವದು. ಆಶ್ರಮದಲ್ಲಿ ಕಾಲಿಕ್ಕಿದಾಗಲೇ ಮನಸ್ಸಿನಲ್ಲೊಂದು ಸೊಗಸಿನ ಗಾಳಿ ಸುಳಿಯುವದು. ಬೇವು, ಹುಣಸಿ, ಅರಳಿ, ಬಸರಿ ಈ ಕೆಲವು ಹಳೆಯ ಹೆಮ್ಮರ ಗಳೂ ಬಿಲ್ವ ಗೋಂಯಿ ಬಿಳಿಹುಣಶಿ ಬೆಂಗಾಳಿ ಇಂಥ ಗಿಡಗಳೂ ಅಲ್ಲದೆ ದಾಸವಾಳ, ಕಣಗಿಲ, ಹುಲಗಿಲಿ ತೆಗ್ಗಿನ ಕಡೆಗೆ ಇದ್ದವು. ಇತ್ತೀಚೆಗೆ ನೀರು

ಹೊಯ್ದು ಬೆಳಸುತ್ತಿರುವ ಹೂ ಬಳ್ಳಿಗಳಿದ್ದವು. ದಂಡೆಗೆ ಸಣ್ಣ ಸರವಿನಲ್ಲಿ ಒಂದು ಪುಷ್ಕರಣಿ ಇತ್ತು. ಪುರಾತನ ಕಾಲದಿಂದ ಬಂಡೆಗಳ ಸಂದಿನಿಂದ ಬರುವ ಸೆಲೆಯಿಂದ ಕೊರತೆ ಇಲ್ಲದ ಜಲಸಂಪತ್ತಿನ ಸಣ್ಣ ಒರತೆ ಇರುತ್ತಿತ್ತಂತೆ. ಆದರಿಂದಲೇ ಈ ಸ್ಥಳಕ್ಕೆ ಹರಳಯ್ಯನ ಗುಡಿ, ಹರಳಯ್ಯನ ಗುಂಡ ಎಂದು ಹೆಸರು ಬಂದಿತ್ತು. ಮಧ್ಯಕಾಲದಲ್ಲಿ ಆ ಒರತೆಯೂ ಮುಚ್ಚಿದ್ದರೂ ಉಸುಬಿನಲ್ಲಿ ನೀರು ಜಿನಗುತ್ತಿತ್ತು. ೪೦ ವರ್ಷಗಳ ಹಿಂದೆ ಶಾಂತವೀರ ಅಪ್ಪನವರು ಇಲ್ಲಿ ಬಹುದಿವಸ ಅನುಷ್ಠಾನಗೈದರು. ಆಗ ತೇವಿನ ಸ್ಥಳವನ್ನು ಗೆಬರಿ ಹರಳು ಕಲ್ಲುಗಳನ್ನು ತೆಗೆದು ಅಮೃತಸಲಿಲವನ್ನು ಮತ್ತೆ ಹೊರಬರಿಸಿದ್ದರು. ಆಗ ಶೇಗುಣಶಿಯ ಶ್ರೀ ಭೀಮನಗೌಡರು ಅದನ್ನು ಅಗಲು ಮಾಡಿ ಪುಷ್ಕರಣಿಯಾಗಿ ಕಟ್ಟಿಸಿದ್ದರು. ಶ್ರೀಗಳು ಅದನ್ನು ಬಸವತೀರ್ಥವೆಂದು ಕರೆದಿದ್ದರು. ಈ ಕ್ಷೇತ್ರ ಭೂಮಿ ಶೇಗುಣಶಿ ಗೌಡರ ಒಡೆತನಕ್ಕೆ ಸೇರಿದ್ದು. ಈ ಎಲ್ಲ ಬಗೆಯು ಈಗಿನ ಈ ಜೀವಂತ ಸೊಬಗಿಗೆ, ಶ್ರೀ ಶಾಂತವೀರ ಮಹಾಸ್ವಾಮಿಗಳ ಲಿಂಗಭಾವ, ಅಂತಶ್ಚೇತನ ವಾಗಿದ್ದಿತು. ಸಂದೇಹವಿಲ್ಲ.

ನಾನು ಬಂದಾಗ ಶ್ರೀಗಳವರು ಬಹಿರ್ದೆಶೆಗೆ ಹೋಗಿ ಬಂದು ಮುಖ ಮಾರ್ಜನ–ಭಸ್ಮಧಾರಣ ಮಾಡಿಕೊಂಡು ಬಯಲಲ್ಲಿ ಅರಳೀಗಿಡದ ನೆರಳಲ್ಲಿ ಖುರ್ಚಿ ಹಾಕಿಸಿಕೊಂಡು ಕುಳಿತಿದ್ದರು. ಅವರ ಪಾದದಲ್ಲಿ ಹಣೆ ಇಟ್ಟೆ.

'ಯಾರು?'

'ನಾನು ಲಕ್ಕಪ್ಪರಿ ಅಪ್ಪಾ.'

'ಓ ಶಿರಹಟ್ಟಿ ಸಾಹೇಬರು ಎಲ್ಲಿಂದ ಬಂದಿರಿ'

'ಕಾಖಂಡಕಿಯಿಂದ ಬಂದೆನರಿ'

'ಹೇಗೆ? ನಡೆಯುತ್ತಾ?'

'ಹೌದರಿ ಅದೆಷ್ಟು ದೂರ? ಮೂರು ಮೈಲು.'

'ಊರೂರು ತಿರುಗಾಡಿದ ರೂಢಿ! ಬಲ ಇನ್ನೂ ಅದೆ!' ನಕ್ಕರು ಅದು ಸೂರ್ಯಾಸ್ತವರೆಗೆ ಯೋಗಕ್ಷೇಮ. ಶ್ರೀಗಳವರ ಸೂಚನೆಯಂತೆ ಕೈಕಾಲು ತೊಳೆದು ಭಸ್ಮ ಧರಿಸಿ ಪ್ರಸಾದ ಸೇವಿಸಿ ಅಪ್ಪನವರ ಹತ್ತಿರ ಬಂದು ಕುಳಿತೆ! ಅವರು ಹೇಳಿದರು "ಕಡೆಮನಿ ಅವ್ವಾ ಅವರು ಬಂದಿದ್ದರು. ನೀವು ಬರುವದಕ್ಕೆ ಸ್ವಲ್ಪ ಮೊದಲು ಬಬಲೇಶ್ವರ ಹೋದರು. ಅವರು ಗೌರಿಶಂಕರ ಯಾತ್ರಾ

ಟ್ರೇನಿನಲ್ಲಿ ಉತ್ತರ ಭಾರತದ ಯಾತ್ರೆಗೆ ಹೊರಟಿದ್ದಾರೆ. ಸಂಗಡ ಆಪ್ತ ಬಂಧುಗಳು ಇದ್ದಾರೆ. ಅವರಿಗಾಗಿ ಹಣದ ವ್ಯವಸ್ಥೆ ಇತರ ಯೋಜನೆಗಳೆಲ್ಲವನ್ನು ಕೇಳಿ ಹೇಳಿ ಜಾಗ್ರತೆಗಾಗಿ ಸೂಚನೆ ಕೊಟ್ಟು ಕಳಿಸಿದ್ದೇನೆ. ಯಾತ್ರಾ ಟ್ರೇನಿನವರು ತಮ್ಮ ಸಂಚಾರಕ್ರಮದಲ್ಲಿ ಈ ಕಾಲದ ಅದ್ಭುತ ಕಾರಖಾನೆಗಳನ್ನು. ಮಾನವ ನಿಸರ್ಗದ ಮೇಲೆ ಪ್ರಭುತ್ವ ಸ್ಥಾಪಿಸಿ ಬದಲಾವಣೆಗಳನ್ನು ತೋರಿಸುವದನ್ನು ಇಟ್ಟುಕೊಳ್ಳದೇ ದೇವಾಲಯ ತೀರ್ಥಗಳು ಇವನ್ನೇ ತೋರಿಸುತ್ತಿರುವರು" ಅದಕ್ಕೆ ನಾನು, "ನಾವು ನೂರೆಂಟು ಪದರಿನ ಉಪಾಧಿಕೌದಿಗಳನ್ನು ಸುತ್ತಿಕೊಂಡು ಹೋಗಿ ದೇವರ ಮುಂದೆ ನಿಂತರೆ ಆ ದೇವರು ಹೇಗೆ ನಮ್ಮತ್ತ ಒಲಿದಾನು? ಅವುಗಳನ್ನೆಲ್ಲ ಕಳಚಿಬಿಟ್ಟು ಹೋಗಿ ನಿಂತರೆ ದೇವರು ಕಂಡಾನು" ಎಂದೆ.

"ಉಪಾಧಿಗಳನ್ನು ಕಳಚಿದ ಮೇಲೆ ದೇವರು ಅಲ್ಲಿಯೇ ಇದ್ದಾನೆ ದೇವರು. ಹುಡುಕ ಹೋಗುವದು–ಮತ್ತೆ ಎಲ್ಲಿಗೆ ಹೋಗುವದು? ಹುಡುಕುವವರೇ ಯಾರು?" ಎಂದು ನಗೆಗೂಡಿ ನುಡಿದರು.

ನೀಲಮ್ಮ ತಾಯಿಯವರು ಶ್ರೀಗಳವರ ನಿಷ್ಠ ಭಕ್ತೆ, ಶರಣೆ, ಶ್ರೀಗಳವರ ಜೋಪಾಸನೆ ಮಾಡಿದವರು, ಮಾಡುತ್ತಿರುವವರು. ಈ ಮೊದಲು ತ್ಯಾಗ ಪೂರ್ವಕ ಶ್ರೀಗಳವರ ಸೇವೆಮಾಡಿ, ತಮ್ಮನ್ನೇ ಅವರ ಪಾದದಲ್ಲಿ ಅರ್ಪಿಸಿ ಕೊಂಡಿದ್ದ ಲಿಂ. ಕಡೆಮನಿ ಬಸವನ ಗೌಡರ ಪತ್ನಿಯವರು ಈ ನೀಲಮ್ಮ ತಾಯಿ! ಆ ಈ ಮಾತುಗಳು ನಡೆದಾಗ ಸಂದರ್ಭಕ್ಕೆ ಸಮೀಪಿಸಿ ನಾನು ಕೇಳಿದೆ "ಅಪ್ಪಾ ತಾವು ಈ ಆಶ್ರಮದಲ್ಲಿ ಬಂದು ನಿಂತದ್ದು ಸುತ್ತಲಿನ ಹಲವಾರು ಹಳ್ಳಿಗರ ಶ್ರದ್ಧಾವಂತ ಜನರಿಗೆ ಬೆಳಕು ಒಂದಂತಾಗಿದೆ ನಿಜ! ಆದರೆ ಬಬಲೇಶ್ವರ ಮಠ ಬಿಟ್ಟು ಬರಲು ಕಾರಣವೇನಾಯಿತು?"

"ಅದನ್ನು ಹೇಳಲ್ಯಾ" ಎಂದು ಆ ಘಟನೆಯನ್ನು ವಿವರಿಸಿದರು ನಡೆದದ್ದು ಹೀಗಿತ್ತು.

ಊರವರ ಉಪೇಕ್ಷೆ

ಅಂದಿಗೆ ಸುಮಾರು ಎರಡು ವರ್ಷಗಳ ಹಿಂದೆ ಒಂದು ದಿನ ಶ್ರೀ ಅಪ್ಪನವರು ಸ್ನಾನ ಮಾಡಿ ಬಚ್ಚಲದಿಂದ ಹೊರಗೆ ಬರುವಾಗ ಕಾಲು ಜಾರಿ ಬಿದ್ದರು. ಮೊಣಕಾಲಿಗೆ ಪೆಟ್ಟು ಹತ್ತಿತು. ಅವರಿಗೆ ೭೦ ವರ್ಷದ ವಯಸ್ಸು! ನಿಷ್ಠಾವಂತ

ವೈದ್ಯರು ಉಪಚಾರ ನಡೆಸಿದ್ದರೂ ನೋವು ಬೇಗ ವಾಸಿಯಾಗಿರಲಿಲ್ಲ. ನಾಲ್ಕಾರು ದಿವಸ ಆಗಿತ್ತು ಜ್ವರ ಇದ್ದವು. ವಿಚಾರಿಸಿಕೊಳ್ಳಲು ಬರುತ್ತಿದ್ದ ಹಿರಿಯರಲ್ಲಿ ಕೆಲವರು ಮಠಕ್ಕೆ ಉತ್ತರಾಧಿಕಾರಿಯನ್ನು ನೇಮಿಸಿಕೊಳ್ಳಲು ವಿನಯಪೂರ್ವಕ ಸಲಹೆ ಮಾಡಿದರು. ಆಗ ಶ್ರೀಗಳು "ಹಾಗಾದರೆ ಸಮಾಜದ ಪ್ರಮುಖರನ್ನು ಕೂಡಿಸಿರಿ. ವಿಚಾರಿಸಿ ನಿರ್ಧರಿಸೋಣ" ಎಂದು ಅಪ್ಪಣೆ ಮಾಡಿದರು. ಎರಡು ದಿವಸಗಳ ನಂತರ ಮಠದಲ್ಲಿ ಜನರು ಸಭೆ ಸೇರಿದರು.

ಈ ಶ್ರೀಗಳ ಪಟ್ಟಾಧಿಕಾರಕ್ಕೆ ಇವರ ಹಕ್ಕಿಗೆ ವಿರೋಧವಾಗಿ ತಾವು ಅಧಿಕಾರಸ್ಥರೆಂದು ಮತ್ತೊಬ್ಬ ಮರಿದೇವರು ನ್ಯಾಯಾಲಯಗಳ ಮೂಲಕ ಹೋರಾಡಿ ಸೋತಿದ್ದರು. ಅವರಿಗೆ ಉಂಬಳಿ ಗೊತ್ತಾಗಿತ್ತು. ಮಠದ ಒಂದು ಪ್ರತ್ಯೇಕ ಭಾಗದಲ್ಲಿ ವಾಸಿಸಲು ವ್ಯವಸ್ಥೆ ಮಾಡಲಾಗಿತ್ತು. ಇಂದಿನ ಸಭೆಯಲ್ಲಿ ಅವರೂ ಬಂದಿದ್ದರು. ಈ ಮೊದಲೇ ಅಪ್ಪನವರ ಕಣ್ಣು ಕಾಣದಂತಾಗಿದ್ದವು. ಹಿಂದೆ ಹೇಳಿದ ಹಿರಿಯರೊಬ್ಬರು ಸ್ವಾಮಿಗಳ ಹತ್ತಿರ ಬಂದು "ಅಪ್ಪಾ ಹಿರಿಯರು ಎಲ್ಲರೂ ಬಂದಿದ್ದಾರೆ" ಎಂದು ಅರಿಕೆ ಮಾಡಿಕೊಂಡರು. ಶ್ರೀಗಳು ಕೆಲಕೆಲವರ ಹೆಸರು ತಕ್ಕೊಂಡು ಇವರೆಲ್ಲರೂ ಬಂದಿದ್ದಾರೆಯೇ? ಎಂದು ಕೇಳಿದರು 'ಬಂದಿದ್ದಾರೆ ಅಪ್ಪಾ' ಎಂದು ತಿಳಿಸಲಾಯಿತು. ಅಸ್ವಸ್ಥ ಅಪ್ಪನವರು ಸಹಾಯಕರ ನೆರವಿನಿಂದ ಎದ್ದು ದಿಂಬಿಗೆ ಆತು ಕುಳಿತರು. ಬಳಿಕ "ಸಮಾಜದವರು ಆರಿಸಿ ಐದು ವಟುಗಳ ಹೆಸರು ಹೇಳಲಿ ಅವರಲ್ಲಿ ಒಬ್ಬನನ್ನು ನಾನು ಆರಿಸಿಕೊಳ್ಳುತ್ತೇನೆ. ಅಥವಾ ನಾನು ಐದು ಬಾಲಕರ ಹೆಸರು ಹೇಳುವೆ ಅವರಲ್ಲಿ ಒಬ್ಬನನ್ನು ಸಮಾಜದವರು ಗೊತ್ತು ಮಾಡಲಿ. ಹೀಗೆ ಉತ್ತರಾಧಿಕಾರಿಯನ್ನು ಗೊತ್ತು ಮಾಡೋಣ" ಎಂದರು.

ಆ ಕೂಡಲೇ ಹಿಂದಿನ ಉಂಬಳಿ ಮರಿದೇವರು ಎದ್ದು ನಿಂತು "ತಾವು ಈಗ ಬೇರೆ ಉತ್ತರಾಧಿಕಾರಿಯ ಆಯ್ಕೆ ಮಾಡಬಾರದು. ಉತ್ತರಾಧಿಕಾರಿಯಾಗಿ ನಾನಿದ್ದೇನೆ" ಎಂದು ಪ್ರತಿಭಟನೆ ವ್ಯಕ್ತಮಾಡಿದರು. ಕೇಳಿ ಶ್ರೀಗಳಿಗೆ ಸೋಜಿಗವಾಯಿತು. ಇದಕ್ಕೆ ದೈವದವರು ಏನು ಉತ್ತರ ಕೊಡುತ್ತಾರೆಂದು ನಿರೀಕ್ಷಣೆಯಲ್ಲಿ ಕುಳಿತಿದ್ದರು. ಸಭೆಯಲ್ಲಿ ಮೌನ. ೧೦–೧೫ ನಿಮಿಷ ಕಳೆಯಿತು. ಪ್ರತಿ ಮಾತೇ ಬರಲಿಲ್ಲ. ಸ್ವಾಮಿಗಳು ತಮಗೆ ಸಲಹೆ ಮಾಡಿದ ಹಿರಿಯರನ್ನು ಹತ್ತಿರ ಕರೆದು ಕೇಳಿದರು. "ಯಾರೂ ಏನೂ ಹೇಳಲೊಲ್ಲರಲ್ಲಾ!" "ಹೌದು ಬುದ್ಧೀ ಜನರೆಲ್ಲ

ಸುಮ್ಮನೆ ಎದ್ದು ಹೋದರು ನಾವು ನಾಲ್ಕು ಜನ ಮಾತ್ರ ಉಳಿದಿದ್ದೇವೆ."

ಅಪ್ಪನವರ ಮನಸ್ಸಿಗೆ ನೋವಾಯಿತು. ಹಾಗೆಯೇ ಹಾಸಿಗೆಯಲ್ಲಿ ಒರಗಿ ಮುಖ ಮುಚ್ಚಿಕೊಂಡರು. ಒಂದೆರಡು ದಿನ ಆಲೋಚನೆಯಲ್ಲಿ ಮಗ್ನರಾದರು. ಮಠ ಇದರ ನಿರ್ವಹಣೆ, ಇದೆಲ್ಲ ಸತಿ ಸುತರನ್ನಷ್ಟು ಬಿಟ್ಟು ಉಳಿದ ಭಾರೀ ದೊಡ್ಡ ಸಂಸಾರವೆಂದು ಭಾಸವಾಯಿತು. ಜುಗುಪ್ಸೆಯಾಯಿತು. ನಾಲ್ಕು ದಿವಸ ಗಳಲ್ಲಿ ಕಾಲನೋವು ಕಡಿಮೆಯಾಗಿತ್ತು. ಜ್ವರ ನಿಂತಿದ್ದವು. ಅಶಕ್ತಿ ಮಾತ್ರ ಉಂಟಾಗಿತ್ತು. ಶೇಗುಣಶಿಯ ಶ್ರೀ ರಾಮನ ಗೌಡರನ್ನು ಕರೆಯಿಸಿದರು. ತಾವು ಹರಳೇಶ್ವರದಲ್ಲಿ ಬಂದು ವಾಸಿಸುವದಾಗಿ ತಿಳಿಸಿದರು. ಗೌಡರು ಸಂತೋಷದಿಂದ ಆ ಕುರಿತು ವ್ಯವಸ್ಥೆ ಮಾಡುವದಾಗಿ ಹೇಳಿ ವಂದಿಸಿಹೋದರು. ಆ ಕ್ಷೇತ್ರದಲ್ಲಿ ಎರಡು ಕೋಣೆಗಳ ಕುಟೀರವನ್ನು ನಿರ್ಮಿಸಿದರು. ಶ್ರೀಗಳು ಊರ ಕೆಲವೇ ಪ್ರಮುಖರಿಗೆ ತಮ್ಮ ನಿರ್ಗಮನ ತಿಳಿಸಿ, ತಮ್ಮ ಪುಸ್ತಕ ಭಾಂಡಾರವನ್ನು ಅವಶ್ಯ ಪಾತ್ರೆ ಸಾಮಾನುಗಳನ್ನು ಹೇರಿಸಿಕೊಂಡು ಇಲ್ಲಿಗೆ ಬಂದು ನಿಂತಿದ್ದರು. ಸುತ್ತಲಿನ ಗ್ರಾಮದವರಿಗೆ ಹರ್ಷವೇ ಹರ್ಷ! ಬಬಲೇಶ್ವರದಂತಹ ದೊಡ್ಡ ಗ್ರಾಮದ ಹಿರಿಯರ ಬಗೆಗೆ, ಔದಾಸೀನ್ಯದ ಬಗೆಗೆ, ಮನೆಯ ಬೆಳಕನ್ನು ಹೊರಗಿರಿಸಿ ಕತ್ತಲೆ ಯಲ್ಲಿ ಕುಳಿತ ಮೌಢ್ಯರ ಬಗ್ಗೆ ಅಂದು ಇರುಳೆಲ್ಲ ಮರುಕವು ಉಂಟಾಗಿತ್ತು. ಬರುಹೋಗುವವರು ಹೆಚ್ಚಾದಂತೆ, ಅಪ್ಪನವರ ನೈಮಿತ್ತಿಕ ಕಾರ್ಯಗಳಿಗೆ ಎರಡು ಕೋಣೆಗಳು ಸಾಲದಾದವು. ಕಡೆಮನೆಯ ನೀಲಮ್ಮ ಅವ್ವನವರು ಅವುಗಳ ಹಿಂದೆ ಹೊಂದಿಸಿ ಸ್ನಾನ ಪೂಜಾನುಷ್ಠಾನ ವಿಶ್ರಾಂತಿಗಳಿಗಾಗಿ ಬೇರೆ ಮೂರು ಚಿಕ್ಕ ಕೋಣೆ ಗಳನ್ನು ನಿರ್ಮಿಸಿ ಹಿಮ್ಮಗ್ಗಲು ಒಂದು ಬಾಗಿಲು ಬಿಡಿಸಿದರು. ಈಗ ಸಾಕಷ್ಟಾಗಿತ್ತು.

ಮರುದಿನ ಬೆಳಗಿನಲ್ಲಿ ಅಪ್ಪಣೆ ಪಡೆದು ಊರಿಗೆ ಮರಳಿದೆನು ಮುಂದೆ ನನ್ನ ಜೀವನದ ಕಲಾಪಗಳಲ್ಲಿ ನನಗೆ ನಾಲ್ಕು ತಿಂಗಳು ವರೆಗೆ ಶ್ರೀಗಳ ದರ್ಶನಕ್ಕಾಗಿ ಹರಳೇಶ್ವರಕ್ಕೆ ಹೋಗುವದಾಗಲಿಲ್ಲ ಈ ಅವಧಿಯಲ್ಲಿ ಶಿವಾದ್ವೈತ ಮಂಜರಿಯನ್ನು ಪೂರ್ಣವಾಗಿ ಓದಿದೆ. ಗ್ರಂಥವನ್ನು ನನ್ನ ಕೈಗೆ ಕೊಟ್ಟಾಗಲೇ ಅದರ ವಿವೇಚನಾ ಕ್ರಮವನ್ನು ತಿಳಿಸಿ ಪರಿಚಯ ಮಾಡಿದ್ದರು. ವೈದಿಕ, ಕೇವಲಾದ್ವೈತ, ವಿಶಿಷ್ಟಾದ್ವೈತ ಪಂಥಗಳನ್ನು ಹಿಂದೂಡಿ ಶಕ್ತಿವಿಶಿಷ್ಟಾದ್ವೈತ ಸಮರ್ಥಿಸಿ ವೀರಶೈವ ಸಿದ್ಧಾಂತವನ್ನು ಸ್ಫುಟಗೊಳಿಸಲಾಗಿದ್ದಿತು. ಮೂಲ ಚೈತನ್ಯ, ಶಿವ

ಶಕ್ತಿ ವಿಕಾಸ, ಸೃಷ್ಟಿರಚನೆ, ೩೬ ತತ್ವಗಳ ವಿಂಗಡಣೆ, ಸಮನ್ವಯ ಸಮರಸ ವಿಚಾರಗಳು ಮನೋಹರವಾಗಿ ನಿರೂಪಿಸಲ್ಪಟ್ಟ ಭಾಗ ನನ್ನ ಮನವನ್ನು ಸೆರೆ ಹಿಡಿದಿತ್ತು ೩೬ ತತ್ವಗಳನ್ನು ಇನ್ನಿಷ್ಟು ತಿಳಿಗನ್ನಡದಲ್ಲಿ ಸಂಗ್ರಹಿಸಿದ್ದೆನು.

ಪ್ರೇರಣೆ

"ಈ ಕಾರ್ಯ ನಡೆದಾಗ ಒಂದು ದಿನ ರಾತ್ರಿ ಕಡೆಯ ಯಾಮದಲ್ಲಿ ಒಂದು ಸ್ವಪ್ನ ಕಂಡೆನು. ಉದ್ದವಾದ ವಿಶಾಲವಾದ ಒಂದು ಕೋಣೆ. ಶುಭ್ರ ಶಾಂತ ಪ್ರಕಾಶದಲ್ಲಿ ಅದರ ಗೋಡೆಗಳೂ ನೆಲವೂ ಥಳ ಥಳ ಹೊಳೆಯುತ್ತಿದ್ದವು. ಯಾವ ವಸ್ತು ಒಡವೆಗಳೂ ಅಲ್ಲಿರಲಿಲ್ಲ ವಾಯುವ್ಯದ ಮೂಲೆಯಲ್ಲಿ ನಾನು ಖುರ್ಚಿ ಮೇಜು ಹಾಕಿಕೊಂಡು ಕುಳಿತಿದ್ದೆ. ನನ್ನ ಎಡಗಡೆಗೆ ಪತ್ತಿದ ಗೋಡೆ, ಮುಂದೆ ಆ ಗೋಡೆಗೆ ಹಚ್ಚಿ ಇಟ್ಟ ಮೇಜು, ಹಿಂದೆ ಖುರ್ಚಿಯ ಬೆನ್ನಿಗೆ ಹತ್ತಿದ ಗೋಡೆ. ದೂರ ಆಗ್ನೇಯ ಮೂಲೆಯಲ್ಲಿ ಒಳಗೆ ಬರುವ ಒಂದು ಚಿಕ್ಕ ಬಾಗಿಲು. ಅಲ್ಲಿಂದ ಯಾರೋ ಒಳಗೆ ಬಂದರು. ಅವರು ಹತ್ತಿರ ಬಂದಂತೆ ಶ್ರೀ ಶಾಂತವೀರ ಅಪ್ಪನವರೇ ಆಗಿದ್ದರು. ಕಣ್ಣು ಚನ್ನಾಗಿ ಇದ್ದಾಗ ಅವರು ಬಬಲೇಶ್ವರದ ಹೊರಗಿನ ಮಠದಿಂದ ಊರೊಳಗಿನ ಮಠಕ್ಕೆ ತಿರುಗಾಡುವಾಗಿನ ವೇಷ. ಕಾವಿಯ ಉಡುಗೆ ದೊಡ್ಡ ಪಾವುಡ ಕೈಯಲ್ಲಿ ಬೆತ್ತ ಕಾಲಲ್ಲಿ ಕಟ್ಟಿಗೆಯ ಪಾದುಕೆ. ಬಂದವರೇ ನನ್ನ ಬಲಮಗ್ಗಲಿಗೆ ಹತ್ತಿಯೇ ನಿಂತರು ನನಗೆ ಎದ್ದು ನಿಲ್ಲಲು ಮಾತ್ರ ಸಾಧ್ಯ ವಾಯಿತು. ಬಾಗಿ ಪಾದಕ್ಕೆ ವಂದಿಸಲು ಅನುವಿಲ್ಲ ಈಚೆಗೆ ಬರಲಿಕ್ಕೆ ದಾರಿಯಿಲ್ಲ. ಅಷ್ಟರಲ್ಲಿ ಅವರು ಮೇಜಿನ ಮೇಲಿನ ಕಾಗದ ಹಿಡಿದು ನೋಡಿ ಇಟ್ಟು ನೀವು ಬರೆಯುವದನ್ನು ಮಾಡಬೇಕು ಅನ್ನುತ್ತೀರಲ್ಲ. ಒಳ್ಳೆಯ ವಿಚಾರ ಅವಶ್ಯವಾಗಿ ಮಾಡಿರಿ" ಎಂದು ಮರಳಿದರು. ನಾನು ಈಚೆಗೆ ಬಂದು ನಮಸ್ಕಾರ ಮಾಡಲು ಅವಕಾಶ ಕೊಡದೆ ಬರಬರನೆ ಅದೇ ಬಾಗಿಲಿನಿಂದ ಹೋಗಿ ಬಿಟ್ಟರು. ಎಚ್ಚರಾ ಯಿತು. ಅನಿರ್ವಚನೀಯ ಆನಂದ ಮನಸ್ಸಿಗಾಗಿತ್ತು. ಬಳಿಕ ಇಚ್ಛಿತ ಬರೆಹವನ್ನು ಒತ್ತರಿಸಿದೆ. ಶಿವಾನುಭವ ಸೂತ್ರ ಗದ್ಯಾನುವಾದ ಉಳಿದ ಭಾಗ ಬರೆದುದನ್ನು, ಶಿವಾದ್ವೈತ ಮಂಜರಿಯ ಟಿಪ್ಪಣೆಗಳನ್ನು ಒಯ್ದು ಅಪ್ಪನವರ ಮುಂದೆ ಓದಬೇಕು ಎಂಬ ಹಂಬಲ ಹೆಚ್ಚಾಯಿತು.

೨೩-೭-೬೧ ರಂದು ಹರಳೇಶ್ವರಕ್ಕೆ ಹೋದೆನು ದರ್ಶನ ಪಡೆದೆನು ಪ್ರೇಮ ದಿಂದ ಪರಾಮರ್ಶಿಸಿದೆನು. ಅಂದು ಅಪ್ಪನವರು ಬಬಲೇಶ್ವರಕ್ಕೆ ಹೋಗಿ ಬರುವ

ಕಾರ್ಯಕ್ರಮವಿತ್ತು ಚಕ್ಕಡಿ ಬಂದಿತ್ತು. 'ಆದಷ್ಟು ಬೇಗ ಬರುವೆ ಇರ್ರಿ' ಎಂದು ಹೇಳಿ ಹೋಗಿ ಸಂಜೆಗೆ ಮರಳಿ ಬಂದರು. ಎತ್ತಿನ ಗಾಡಿಯಲ್ಲಿ ೬+೬ ಮೈಲು ಹೋಗಿ ಬಂದ ಆಯಾಸವನ್ನು ಗಣಿಸದೆ, ಸಾಯಂಕಾಲದ ಅನುಷ್ಠಾನದ ಅನಂತರ ನಾನು ಬರೆದದ್ದರಲ್ಲಿ ಕೆಲಭಾಗ ಓದಿಸಿ ಕೇಳಿದರು. ನನಗಾದ ಸ್ವಪ್ನದ ವಿಷಯ ತಿಳಿಸಿದೆ. 'ನಿಮ್ಮ ಮನಸ್ಸಿನ ಮೇಲಾದ ಸಂಸ್ಕಾರದ ಪರಿಣಾಮ ಅದು!' ಎಂದರು.

೨೪–೭–೬೧ ಸೋಮವಾರ ಅಂದು ದರ್ಶನಕ್ಕೆ ಬರುವವರು ಹೆಚ್ಚಾಗಿದ್ದರು. ಗಿರಿಸಾಗರ ಪಟ್ಟದ ದೇವರು, ರೋಣಿಹಾಳದ ಶಿಕ್ಷಕರು ಬಂದಿದ್ದರು. ಇವೆಲ್ಲದರ ಮಧ್ಯದಲ್ಲಿಯೂ ೩೬ ತತ್ವಗಳ ಸರಳಾನುವಾದ ಓದಿಸಿ ಕೇಳಿದರು. ಅಪ್ಪನವರು ನನ್ನ ಎಲ್ಲ ಸಂದೇಹಗಳನ್ನು ಪರಿಹರಿಸಿದರು. ಸಂಜೆಯವರೆಗೆ ಇದು ನಡೆದೇ ಇತ್ತು. ಮರುದಿನ ಮರಳಲು ಅಪ್ಪಣೆ ಪಡೆದಾಗ ಮೇಲಿಂದ ಮೇಲೆ ಬರುತ್ತಿರ ಬೇಕು. ನಿಮ್ಮಂಥವರು ಯಾರಾದರೂ ಬಂದಾಗ ಮಾತ್ರ ನಮಗೆ ಪಾರಮಾರ್ಥಿಕ ಗೋಷ್ಠಿ ಸಂಭವಿಸುವದು. ಇಲ್ಲದಿದ್ದರೆ ಸದಾ ಸಂಸಾರಿಕರ ಸಮಸ್ಯೆಗಳನ್ನೇ ಕೇಳಿ ಸಂಸಾರದ ಏಳಿಗೆಗಾಗಿಯೇ ಆಶೀರ್ವದಿಸುತ್ತಿರಬೇಕು ಎಂದು ನಗುತ್ತ ಅಪ್ಪಣೆ ಕೊಟ್ಟಿದ್ದರು.

೨೮–೮–೬೧ ಸೋಮವಾರ ಅಂದು ಅಪ್ಪನವರು ಈ ಆಶ್ರಮಕ್ಕೆ ಬಂದ ದಿನದ ಎರಡನೇ ವಾರ್ಷಿಕೋತ್ಸವದಲ್ಲಿ ಭಾಗವಹಿಸಿ ದರ್ಶನ ಪಡೆದುಕೊಂಡು ಬಂದೆನು. ಶೇಗುಣಶಿ,ಕಾಖಂಡಕಿ ಹಲಗಣಿ ಸಾರವಾಡಗಳ ವಿಶೇಷ ಭಕ್ತರ ಸಂದಣಿ ಸಂಭ್ರಮ.

೧೯–೧೦–೬೧ ವಿಜಯದಶಮಿ ವಾಡಿಕೆಯಂತೆ ಹೆಸರು ಹೇಳುತ್ತ ಪಾದಕ್ಕೆ ವಂದಿಸಿದೆ. 'ಹಾಂ ಈಗ ಹೇಗೆ ಬಂದಿರಿ?' ಎಂದು ಬಾಗಿ ಎರಡೂ ಭುಜ ಹಿಡಿದು ಎತ್ತಿ ಕೇಳಿದರು ಅರ್ಧತಾಸು ಸದ್ಭಾವ ಸಂಭಾಷಣೆ ನಡೆಯಿತು. ಮನೆ ಕಟ್ಟುವ ಕೆಲಸದ ವಿವರಣೆ ನೀಡಿದೆ ಅಂದೇ ಮುಂಜಾನೆ ಮುಂದಿನ ಬಾಗಿಲ ಹಚ್ಚುವ ಮುಹೂರ್ತ ಮಾಡಿ ಬಂದಿದ್ದೆ. ಆ ಸಂಬಂಧದ ಅವಸರ ಅರಿಕೆ ಮಾಡಿ ಅಪ್ಪಣೆ ಪಡೆದು ಮರಳಿದೆ.

೩೦–೪–೬೨ ವಿಜಾಪುರ ಮನೆಯ ಕೆಲಸ ಮುಗಿದಿತ್ತು ೧೦೦ಕ್ಕೆ ೭೦ ಭಾಗ ಹೊಸದಾಗಿತ್ತು ಶ್ರೀ ಶಾಂತವೀರ ಮಹಾಸ್ವಾಮಿಗಳ ದರ್ಶನ ಪಡೆದು ಪಾದೋದಕ ತಂದು ಈ ಮನೆಯ ಶಾಂತಿ ಮಾಡುವದೆಂದು ಯೋಚಿಸಲಾಗಿತ್ತು ಆ ಪ್ರಕಾರ

ನಾವಿಬ್ಬರು ದಂಪತಿಗಳು ಕಾಖಂಡಕಿ ಮಾರ್ಗವಾಗಿ ಹರಳೇಶ್ವರಕ್ಕೆ ಬಂದು ಶ್ರೀಗಳ ದರ್ಶನ ಪಡೆದೆವು 'ಮನೆಕಟ್ಟಿ ನೋಡು' ವಾಕ್ಯದಂತೆ ವಹಿಸಿದ ಶ್ರಮದ ವಿವರಣೆ ನೀಡಿದೆ ಸಂತೋಷಿಸಿದರು. ಹೊಸಮನೆ ಆರಾಮ ಜೀವನಕ್ಕೆ ಅನುವಾಯಿತು. ಮನಸ್ಸು ಹಸನಾಗಿ ಹೊಸದಾಗಿ ಪರಿಣಮಿಸಲಿ ಎಂದು ಆಶೀರ್ವದಿಸಿದರು. ಸಾಯಂಕಾಲವರೆಗೆ ಸದ್ಭಾವಗೋಷ್ಠಿ ಆನಂದಾನುಭವ ಹೊಂದಿ ಪಾದೋದಕ ಪಡೆದು ಬಂದೆವು.

೨೩-೬-೬೨ ಎರಡು ದಿವಸ ಪೂರ್ಣವಾಗಿ ಗುರು ಸನ್ನಿಧಿಯಲ್ಲಿ ನಿಂತೆನು. ಅಷ್ಟರಲ್ಲಿ ಶಿವಾದ್ವೈತ ಮಂಜರಿಯನ್ನು ಪೂರ್ಣವಾಗಿ ಓದಿದ್ದೆನು. 'ವಿಶ್ವವು ೩೬ ತತ್ವರೂಪವಾಗಿದೆ' ಲೇಖನ ಬರೆದಾಗಿತ್ತು ಅದನ್ನು ಅಪ್ಪನವರ ಸನ್ನಿಧಿಯಲ್ಲಿ ಓದಿದೆ ಅಪ್ಪಗಳ ಹಿಗ್ಗಿನ ಉದ್ಗಾರಗಳು ನಡು ನಡುವೆ ಬರುತ್ತಿದ್ದವು. ಓದು ನಿಲ್ಲಿಸಿ ಆರಾಮವಾಗಿ ಕುಳಿತಾಗ ತಮ್ಮ ಅಲ್ಲಲ್ಲಿ ಬಂದಿರುವ ಅನುಭವಗಳ ರಸವತ್ ಸಂಗತಿಗಳನ್ನು ಅರುಹುತ್ತಿದ್ದರು.

ಊರಲ್ಲಿ ಶ್ರಾವಣ ಮಾಸದ ವಿಶೇಷ ಪೂಜಾ ಕ್ರಮಗಳನ್ನು ಹಾಕಿಕೊಂಡು ಆರಂಭಿಸಿದ್ದೆನು ಅದನ್ನು ಪತ್ರದ್ವಾರ ಶ್ರೀಗಳವರಲ್ಲಿ ಅರಿಕೆ ಮಾಡಿಕೊಂಡಿದ್ದೆನು ಅದಕ್ಕೆ ಉತ್ತರವಾಗಿ ಸನ್ನಿಧಿಯಿಂದ ೮-೮-೬೨ರ ಪತ್ರ ಬಂದಿತ್ತು ಆ ಆಶೀರ್ವಾದ ಪತ್ರದ ಸಾರಾಂಶ ಹೀಗಿದೆ.

...ಚಿತ್ತ ಶುದ್ಧಿಗಾಗಿ ವ್ರತಬದ್ಧರಾದದ್ದು ತಿಳಿದು ವಿಶೇಷ ಆನಂದವಾಯಿತು ಶರಣ ಸಾಹಿತ್ಯದ ಪರಿಪಕ್ವ ವಿಚಾರದಲ್ಲಿ ನೀವು ಯಾವಾಗಲೂ ಹೆಚ್ಚಾಗಿ ಆಸ್ಥೆ ವಹಿಸಿಕೊಂಡಿದ್ದೀರಿ. ಶರಣ ಸಾಹಿತ್ಯದ ಪರಿಪೂರ್ಣ ಪ್ರಕ್ರಿಯ ಒಳಗೊಂಡ ಚಿಕ್ಕಗ್ರಂಥ ತೆಲಸಂಗ ಶ್ರೀಗಳಲ್ಲಿದೆ ಅದನ್ನು ನಾನು ಓದಿಸಿ ನೋಡಿದ್ದೇನೆ. ನೀವು ನನಗೆ ತುಂಬಾ ಬೇಕಾದವರೆಂಬುದು ಅವರಿಗೆ ಗೊತ್ತಿದೆ. ಆ ಪುಸ್ತಕ ಕೆಲ ಅವಧಿಗಾಗಿ ತುವು ನೋಡಬಹುದು.... ಹೀಗೆ ಬರಿಸಿದ ಪತ್ರದ ಕೆಳಗೆ ಅವರ ಸ್ವಹಸ್ತಾಂಕಿತವಿತ್ತು.

೬-೧೦-೬೨ ರಿಂದ ೮-೧೦-೬೨ ಹರಳೇಶ್ವರಕ್ಕೆ ಬಂದು ಶ್ರೀ ಸನ್ನಿಧಿಯಲ್ಲಿ ೨ ದಿವಸ ಆರಾಮವಾಗಿ ಕಳೆದೆನು. ಶಿವಾನುಭವ ಸೂತ್ರಸಾರ ಗದ್ಯಾನುವಾದ ನಡೆಸಿದ್ದರಲ್ಲಿ ಅರ್ಥ ಆದದ್ದನ್ನು ತಂದು ಓದಿದೆನು ಚರ್ಚೆಯೂ ನಡೆಯುತ್ತಿತ್ತು. ದರ್ಶನಕ್ಕೆ ಬಂದ ಒಬ್ಬ ಹಿರಿಯರು ಸ್ವಲ್ಪ ಕುಳಿತು ಕೇಳಿ 'ಶಿರಹಟ್ಟಿ ಸಾಹೇಬರು

ಏನಾದರೂ ಬರೆದುಕೊಂಡೇ ಬಂದಿರುತ್ತಾರೆ.' ಎಂದು ಉದ್ಗಾರ ತೆಗೆದರು. ಆಗ ಶ್ರೀಗಳು 'ಹೌದು ಅದರಿಂದ ನಮಗೂ ವಿಚಾರ ವಿನಿಮಯಕ್ಕೆ ಉಪಯೋಗವಾಗುತ್ತದೆ. ಇಲ್ಲದಿದ್ದರೆ ಸಂಸಾರಿಕರ ಸಂಸಾರ ಸಂಗತಿಗಳನ್ನೇ ಕೇಳುತ್ತ ಹೊತ್ತುಗಳೆಯುವದು ಮಾತ್ರ ಇರುತ್ತದೆ' ಎಂದರು. ಆ ಯಜಮಾನರು ಸುಮ್ಮನಾದರು. ಸಂಜೆಯ ಆರಾಮ ಗೋಷ್ಠಿಯಲ್ಲಿ ಹಿಂದೆ ಕಣ್ಣಿನ ಆಪರೇಷನ್ ಮಾಡಿಸಿಕೊಂಡು ಏಳದಂತೆ ಮಲಗಿಕೊಂಡಿರುವಾಗ ಒಬ್ಬ ಶಿವಾಚಾರ್ಯರು ಭೆಟ್ಟಿಗೆ ಬಂದಿದ್ದರಂತೆ ಅವರು 'ಬುದ್ಧಿ ನಿತ್ಯನಿಯಮದಂತೆ ನಿಮ್ಮ ಅಷ್ಟವಿಧಲಿಂಗಾರ್ಚನೆ ಈಗ ನಡೆಯದಂತಾಯಿತಲ್ಲ' ಎಂದು ಆಕ್ಷೇಪಿಸಿದ್ದರಂತೆ. ಅದಕ್ಕೆ ಅಪ್ಪನವರು ಹೀಗೆ ಉತ್ತರಕೊಟ್ಟರಂತೆ "ಆಪತ್ಕಾಲದಲ್ಲಿ ಹೀಗಾಗುವದಕ್ಕೆ ದಯಾಮೂಲವಾದ ಧಾರ್ಮಿಕಾಚಾರದಲ್ಲಿ ಈ ಸೌಲಭ್ಯ ಇದೆ. ಲಿಂಗಾಯತ ಧರ್ಮಾಚಾರದಲ್ಲಿ ಅದಿಲ್ಲದಿದ್ದರೆ ಆ ಧರ್ಮವೇ ನನಗೆ ಬೇಡ" ಸ್ವಲ್ಪ ವೇಳೆ ಸುಮ್ಮನೆ ಕುಳಿತು ಆ ಶಿವಾಚಾರ್ಯರು ಬೀಳ್ಕೊಂಡು ಹೋಗಿದ್ದರಂತೆ.

ಮರುದಿನದ ಇದೇ ವೇಳೆಯಲ್ಲಿ ಕಲ್ಯಾಣದಲ್ಲಿ ಜರುಗಿದ ವೀರಶೈವ ಮಹಾಸಭೆಯ ಪ್ರಸ್ತಾಪವಾಯಿತು. ಅಧ್ಯಕ್ಷರಾಗಿದ್ದ ಶ್ರೀ ಬಂಥನಾಳ ಶಿವಯೋಗಿಗಳು ಮೊದಲು ತಮ್ಮ ಹತ್ತಿರ ಬಂದಿದ್ದರು. ಆಗ ನಾವು ಅವರಿಗೆ "ಇದುವರೆಗೆ ಭಕ್ತವರ್ಗದವರೇ ಅಧ್ಯಕ್ಷರಾಗಿದ್ದರು. ಈ ಸಲ ಸ್ವಾಮಿಗಳಿಗೆ ಬಂದಿದೆ ನೀವು ಈ ಒಂದು ನಿರ್ಣಯ ಮಂಡಿಸಬೇಕು. ಸ್ವಾಮಿಗಳಾಗಲು ಜಂಗಮರ ಹೊರ್ತು ಪಂಚಮಶಾಲಿ ಸಮಾಜದವರಿಗೆ ಮಾತ್ರ ಹಕ್ಕಿದೆ ಅಷ್ಟಾವರಣಾಂಕಿತರಾದ ಎಲ್ಲರಿಗೂ ಈ ಹಕ್ಕು ಇರಬೇಕು" ಎಂದು ಹೇಳಿದ್ದರು ಶಿವಯೋಗಿಗಳು ನೋಡೋಣವೆಂದರಂತೆ. ಆದರೆ ಅಲ್ಲಿ ಆ ನಿರ್ಣಯ ಮಂಡಿಸಲ್ಪಟ್ಟಿರಲಿಲ್ಲ.

ಮರುದಿನ ಮುಂಜಾನೆ ಸ್ನಾನ ಪೂಜೆ ಮಾಡಿಕೊಂಡು ಶಮೀಪತ್ರ ಪೂಜಿಸಿ ತಂದು ಅಪ್ಪನವರಿಗೆ ಅರ್ಪಿಸಿ ವಂದಿಸಿ ಮರಳಿ ಬಂದಿದ್ದೆನು.

ಆಶ್ರಮ ವಾಸದ ಬಯಕೆ

೨೯–೧೦–೬೨ ಕಾರ್ತಿಕ ಶು. ಪ್ರತಿಪದೆ (ಪಾಡ್ಯ ಹಬ್ಬ) ಮನೆಗೆ ಸಂಬಂಧಿಸಿದ ಕೆಲಸವೇನೂ ಇರಲಿಲ್ಲ. ಹರಳೇಶ್ವರಕ್ಕೆ ಹೋಗಿ ಆಶ್ರಮದಲ್ಲಿ

ಶ್ರೀ ಶಾಂತವೀರ ಅಪ್ಪನವರ ಸನ್ನಿಧಿಯಲ್ಲಿ ನಾಲ್ಕು ದಿವಸ ಇದ್ದು ಬರುವ ಬಯಕೆಯಾಯಿತು. ಇದಲ್ಲದೆ ಬಿ. ಪುಟ್ಟುಸ್ವಾಮಯ್ಯನವರ ಬಿಜ್ಜಳ ಬಸವೇಶ್ವರ ಕುರಿತ ಆರು ಕಾದಂಬರಿಗಳಲ್ಲಿ ಮೊದಲನೆಯದಾದ ಉದಯರವಿಯನ್ನು ನನ್ನ ಚಿ॥ನು ತಂದು ಕೊಟ್ಟಿದ್ದನು. ಅದರ ಓದು ನನ್ನ ಕುತೂಹಲ ಕೆರಳಿಸಿತ್ತು ಅದನ್ನು ಶ್ರೀಗಳ ಹತ್ತಿರ ಓದುವದಕ್ಕೆ ಮನಸ್ಸು ಆತುರಿಸಿತ್ತು. ಅಂದು ಸಂಜೆ ಕಾಖಂಡಕಿಗೆ ಪ್ರಯಾಣಿಸಿ ಮರುದಿನ (ದಿ. ೩೦) ಹರಳೇಶ್ವರಕ್ಕೆ ಹೋದೆನು ನಿನ್ನೆಯೇ ಅಪ್ಪನವರು ಹುಬ್ಬಳ್ಳಿ ಕಡೆಯಿಂದ ಬಂದು ಜತ್ತಿಗೆ ಹೋಗಿದ್ದರು. ಒಂದೇ ದಿನದಲ್ಲಿ ಸುಮಾರು ೧೮೦ ಮೈಲು ಪ್ರಯಾಣ ಮಾಡಿದ್ದರು. ಭಕ್ತ ಪ್ರೇಮಿಯಾದ ಶ್ರೀಗಳು ಅವರ ಇಷ್ಟಾರ್ಥ ಪೂರೈಸುವಲ್ಲಿ ತಮ್ಮ ಆಯಾಸವನ್ನೇ ಗಮನಿಸುತ್ತಿರಲಿಲ್ಲ ಇಂದು ಬರಬಹುದೆಂದು ಆಶ್ರಮದಲ್ಲಿ ಹೇಳಿದ್ದರು. ಆದರೆ ಅವರು ದಿ. ೩೧ರಂದು ರಾತ್ರಿ ಜತ್ತಿಯಿಂದ ಬಂದರು. ಈ ಎರಡು ದಿನ ಆಶ್ರಮ ದಲ್ಲಿಯ ಸಾಹಿತ್ಯ ನೋಡುತ್ತ ಕಾಲ ಕಳೆದೆನು. ಜತ್ತಿಯ ಭಕ್ತ ಸಾವುಕಾರ ಅರಬಳ್ಳಿಯವರು ಕಾರಿನಲ್ಲಿ ತಮ್ಮ ಕುಟುಂಬ ಸಹಿತ ಶ್ರೀಗಳನ್ನು ಕಳಿಸಿಕೊಡಲು ಇಲ್ಲಿಯವರೆಗೆ ಬಂದಿದ್ದರು. ಶ್ರೀಗಳವರ ಆಶೀರ್ವಾದದಿಂದಲೇ ಹುಟ್ಟಿದ ಅವರ ಹತ್ತು ವರ್ಷದ ಮಗನೂ ಬಂದಿದ್ದನು. ಶ್ರೀಗಳು ನಾನು ವಂದಿಸಿದಾಗ ಬಂದುದನ್ನು ತಿಳಿದು ಸಂತೋಷಿಸಿದರು. ನನ್ನ ಪರಾಮರಿಕೆ ಸರಿಯಾಗಿ ನಡೆದಿತ್ತೆಂಬುದನ್ನು ವಿಚಾರಿಸಿದರು 'ಮುಂಬಯಿಂದ ಶಿವಶಂಕರನ ಪತ್ರ ಬಂದಿದೆ' ಎಂದು ತಮ್ಮ ದಿಂಬಿನ ಕೆಳಗಿಟ್ಟಿದ್ದ ಅದನ್ನು ತೆಗೆದುಕೊಟ್ಟರು ಓದಿದೆ. ಆಗ ತಿಳಿದದ್ದು. ಚಿ॥ ಶಿವಶಂಕರನು ಸ್ವಾಮಿಗಳಿಗೆ ವಂದನಾರ್ಪಣ ಪತ್ರ ಬರೆದಿದ್ದನು. ಅದಕ್ಕೆ ಅವನಿಗೆ ಆಶೀರ್ವಚನ ಬರೆಯಿಸಿದ್ದರು ಅದನ್ನು ಸ್ವೀಕರಿಸಿ ಧನ್ಯತೆಯ ಪತ್ರ ಇದಾಗಿತ್ತು. ನನ್ನ ಚಿರಂಜೀವನು ಈ ಮೂಲಕ ಶ್ರೀಗಳ ಕೃಪಾವಲಯದಲ್ಲಿ ಬರುತ್ತಿರುವದು ಅದೆಷ್ಟು ಆನಂದ ನನಗೆ!

ಮರುದಿನ 'ಉದಯರವಿ' ಪುಸ್ತಕವನ್ನು ಅಪ್ಪನವರ ಹತ್ತಿರ ಕುಳಿತು ಓದಿದೆ. ಬಸವಣ್ಣನವರನ್ನು ಕುರಿತು ಹೊಸ ಸಂಗತಿಗಳ ಬಗೆಗೆ ಅಪ್ಪನವರಿಗೂ ಕುತೂಹಲವುಂಟಾಗಿತ್ತು. ಮರುದಿನವೂ ಎಡಬಿಡದೆ ಓದಿ ಸಾಯಂಕಾಲದ ಹೊತ್ತಿಗೆ ಮುಕ್ತಾಯವಾಯಿತು. ಮನೋಹರ ಶೈಲಿ, ಹೊಸ ಸಂಗತಿ, ಮುಂದೇನಿದೆ ಎಂಬುದಕ್ಕೆ ಆತುರ ಹೀಗೆ ಅಪ್ಪನವರ ಚಿತ್ತವನ್ನು ಆಕರ್ಷಿಸಿದ್ದವು. ಮುಂದಿನ

ಸಂಪುಟಗಳನ್ನೂ ನೋಡಬೇಕೆಂದರು. ದೊರಕಿಸಿ ತರುವೆನೆಂದು ಹೇಳಿದೆ. ಅಂದು ಬೇರೆ ಯಾವ ವಿಷಯಗಳನ್ನೂ ಚರ್ಚಿಸಲಿಲ್ಲ ಶ್ರೀಗಳವರ ಪ್ರವಾಸಕಥನ ನನ್ನ ಕೌಟುಂಬಿಕ ಕಾರ್ಯಗಳ ಪರಾಮರ್ಶೆ ನಡೆದದ್ದಷ್ಟೇ.

ಮುಂದಿನ ಮೂರು ತಿಂಗಳಲ್ಲಿ ಹರಳೇಶ್ವರಕ್ಕೆ ಹೋಗುವದಾಗಲಿಲ್ಲ. ಈ ಅವಧಿಯಲ್ಲಿ ಪೂಜ್ಯ ಜ.ಚ.ನಿ. ಅವರ 'ಮಣಿಮುಕುರ'ವನ್ನು ಅವಧಾನಿಸಿ ಓದಿದ್ದೆ ಅದರಿಂದ ೧೦೦ ಸ್ಥಲಗಳಿಗೆ ಒಂದೊಂದು ವಾರ್ಧಿಕ ಷಟ್ಪದಿ ಪದ್ಯ ಗಳನ್ನು ರಚಿಸಲು ಆರಂಭಿಸಿದ್ದೆ.

ಅದೇ ಸಮಯಕ್ಕೆ ಅಪ್ಪನವರಿಂದ ಆಶೀರ್ವಾದದೊಡನೆ ಒಂದು ಚಿಕ್ಕ ಪುಸ್ತಕ ಬಂದಿತು. ಮೈಸೂರ ವಿ.ವಿ.ದ ಶಕ್ತಿ ವಿಶಿಷ್ಟಾದ್ವೈತ ದರ್ಶನ ೨ ಪ್ರತಿಗಳು ಅಪ್ಪನವರಿಗೆ ಕಾಣಿಕೆಯಾಗಿ ಬಂದಿದ್ದವು. ಒಂದು ಪ್ರತಿಯನ್ನು ನನಗೆ ಕಳಿಸಿದ್ದರು. ಅದರ ಮೇಲೆ ಶ್ರೀಗಳು ಬರೆಯಿಸಿ ಕೆಳಗೆ ಸ್ವಹಸ್ತಾಂಕಿತ ಹಾಕಿದ ಆಶೀರ್ವಚನ ಹೀಗಿತ್ತು. "ಸದ್ಗುರು ತಾಯಿಯ ಕರುಣದ ಕಂದನಾದ ಲ. ಶಿರಹಟ್ಟಿ ಸಾಹೇಬರಿಗೆ ಆಶೀರ್ವಾದಗಳು" ಅದನ್ನು ಪುಲುಕಿತನಾದನು ನನ್ನನ್ನು ತಮ್ಮ ಶಿಷ್ಯನಾಗಿ ಪರಿಗ್ರಹಿಸಿದ್ದನ್ನು ಅಭಿವ್ಯಕ್ತಗೊಳಿಸಿದಂತಾಗಿತ್ತು. ಆಗ ಅಪ್ಪನವರ ದರ್ಶನದ ಹಂಬಲ ಹೆಚ್ಚಾದದ್ದು ಸಹಜವಾಗಿತ್ತು.

೧೮-೨-೬೩ ರಂದು ಹರಳೇಶ್ವರಕ್ಕೆ ಹೋಗಿ ದರ್ಶನ ಪಡೆದೆ. 'ಉದಯರವಿ'ಯ ಸಂತರದ ರಾಜಪಾಲ, ಕಲ್ಯಾಣೇಶ್ವರ ಒಯ್ದಿದ್ದೆ ಅವೆರಡನ್ನೂ ಅಪ್ಪನವರ ಸನ್ನಿಧಿಯಲ್ಲಿ ಓದಿದೆ. ಆಕರ್ಷಕ ಶೈಲಿ, ಗಂಭೀರ ಸನ್ನಿವೇಶಗಳ ಚಿತ್ರಣ ಇವುಗಳಿಂದಾಗಿ ಶ್ರೀಗಳು ಸಂಪೂರ್ಣವಾಗಿ ಗಮನಿಸಿ ಕೇಳಿದರು. ನಡು ನಡುವೆ ವಿಶ್ರಾಂತಿ. ಬೇರೆ ವಿಷಯಗಳ ಸಂಭಾಷಣೆ ನಡೆಯುತ್ತಿತ್ತು. ಆಗ ತಮಗೆ ಸಂಬಂಧಿಸಿ ಸಂಭವಿಸಿದ ಕೆಲವು ಪ್ರಸಂಗಗಳನ್ನು ದೃಷ್ಟಾಂತಗಳನ್ನು ವಿವರಿಸು ತ್ತಿದ್ದರು. ಪರಮಾರ್ಥ ಸಾಧನೆಯ ಸೂಕ್ತಿಗಳನ್ನು ಮನೋಹರವಾಗಿ ಆನಂದ ದೊಡನೆ ವ್ಯಾಖ್ಯಾನಿಸುತ್ತಿದ್ದರು. ಅವರು ನಿರೂಪಿಸುವ ದೃಷ್ಟಾಂತ ಕಥನಗಳು ಮಾರ್ಮಿಕವಾಗಿರುತ್ತಿದ್ದವು.

ಯಾವದು ಪವಾಡ

ಶ್ರೀ ಶಾಂತವೀರ ಅಪ್ಪನವರು ಪವಾಡ ಒಪ್ಪುವದಿಲ್ಲ ಅವು ಆಕಸ್ಮಿಕಗಳೆಂದು

ಅವರ ಮತ! ಇನ್ನು ಮಹಾತ್ಮರಾದವರ ಹೃದಯಸ್ಪರ್ಶಿ ಮಾತುಗಳಿಂದ ಸಾಮಾನ್ಯರ ಮನೋಭಾವನೆಯಲ್ಲಿ ಕ್ರಾಂತಿ ಉಂಟಾದರೆ ಅದು ಪವಾಡ! ಇದರಲ್ಲಿ ಸಹಜತೆ ಇರುವದು. ಅದರಲ್ಲಿ ಅದ್ಭುತ ಅಸಂಗತೆಗಳಿರುವದಿಲ್ಲ. ತಮಗೆ ಒಮ್ಮೆ ಒಂದು ಪವಾಡವನ್ನು ಹೊಂದಿಸಿದ ಘಟನೆ ವಿವರಿಸಿದರು ಅದು ಹೀಗಿತ್ತು:– ಮಠದ ಶ್ರೀ ಗುರುಪಾದೇಶ್ವರ ಗದ್ದುಗೆಯ ಹಿಂದೆ ಒಂದು ಸೇದುವ ಬಾವಿಯಿದೆ. ಒಮ್ಮೆ ಒಂದು ಮಧ್ಯಾಹ್ನ ಚಿಕ್ಕ ಚಿಕ್ಕ ಬಾಲಕರು ಬಾವಿಯ ಹತ್ತಿರದ ಕಟ್ಟೆಯ ಮೇಲೆ ಆಡುತ್ತಿದ್ದರು. ಆಟದ ಭರದಲ್ಲಿ ಮೈ ಮರೆತಿದ್ದರು. ಅದರೊಳಗಿನ ಒಬ್ಬ ಏನೋ ನೆನಪಾಗಿ ಉಳಿದವರನ್ನು ಬಿಟ್ಟು ಎಲ್ಲಿಯೋ ಹೋಗುವನು. ಮುಖ್ಯ ಬಾಲಕನು 'ಬಸವ ಎಲ್ಲಿ? ಎಲ್ಲಿ ಹೋದ?' ಎಂದು ನುಡಿದನು. ಎಲ್ಲರೂ ಎಚ್ಚತ್ತು ನೋಡಿದರು ಇಲ್ಲ ಅತ್ತಿತ್ತ ನೋಡಿದರು ಇಲ್ಲ. ಬಾವಿಯಲ್ಲಿ ಬಿದ್ದಿರಬೇಕೆಂದು ಗಾಬರಿಯಾಗಿ ಎಲ್ಲ ಬಾಲಕರು ತಮ್ಮ ತಮ್ಮ ಮನೆಗಳಿಗೆ ಓಡಿ ಹೋಗಿ 'ಬಸವ ಬಾವಿಯಲ್ಲಿ ಬಿದ್ದಿದ್ದಾನೆ' ಎಂದು ಹೇಳಿದರು. ಜನ ಓಡಿ ಬಂದರು. ಬಾವಿಯಲ್ಲಿ ನೋಡಿದರು ಕಾಣಿಸಲಿಲ್ಲ ಮುಳಗಿರಬೇಕು. ಮನೆಯವರು ಗೋಳಿಟ್ಟರು. ಅಪ್ಪ ಅವರು ಗದ್ದಲ ಕೇಳಿ ಅಲ್ಲಿಗೆ ಬಂದರು. ಯಾರ ಮಗು! ಎಂದು ಕೇಳಿದರು ತಾವೂ ಅತ್ತಿತ್ತ ಮುಂದಕ್ಕೆ ಅಲೆದಾಡಿ ನೋಡಿದರು. ಒಂದು ಸಂದಿ ಹಿಡಿದು ಗೆಳೆಯರತ್ತಲೇ ಬರುತ್ತಿದ್ದ ಆ ಮಗುವನ್ನು ಕಂಡರು ಕೈ ಹಿಡಿದು ಕರೆತಂದು ನೆರೆದ ಜನರ ಮುಂದೆ ನಿಲ್ಲಿಸಿದರು. ಜನರ ಆನಂದಾತಿರೇಕಗೊಂಡು "ಸ್ವಾಮಿಗಳ ಮಹಿಮೆ ಬಾವಿಯಲ್ಲಿ ಬಿದ್ದ ಮಗ ಮೇಲೆ ಬಂದ" ಎಂದು ಕೂಗಿ ಕೂಗಿ ಜಯಘೋಷ ಮಾಡಿದರು. ನೂಕು ನುಗ್ಗಲು ಮಾಡಿ ಶ್ರೀಗಳ ಪಾದಕ್ಕೆ ವಂದಿಸಿದರು. ಶ್ರೀಗಳು 'ಮಗು ಅಲ್ಲಿ ಇದ್ದನೆಂದು ನಿಜ ಹೇಳಿ ದರೂ ಕೆಲವರು ತಮ್ಮ ನಿಷ್ಠೆಯ ನಂಬುಗೆಯನ್ನು ತೊರೆಯಲೆ ಇಲ್ಲ, ಇದೊಂದು ನನ್ನ ಪಾಲಿಗೆ ಬಂದ ಪವಾಡ ಎಂದು' ನಗುತ್ತ ಹೇಳಿದರು.

ನಗುತ್ತಲೇ ನಾನೂ "ಮಗು ಅಲ್ಲಿದ್ದುದು ಯಾರ ಕಣ್ಣಿಗೂ ಬಿದ್ದಿರ ಲಿಲ್ಲವಲ್ಲ" ಎಂದೆನು 'ನೀವೂ ಕೊಂಚ ಅವರೇ' ಎಂದರು ನಗೆಯಲ್ಲಿ ಮಾತು ಮುಕ್ತಾಯವಾಯಿತು.

"ಓದಿಗೆ ವಿರಾಮವಾಗಿ, ಆರಾಮವಾಗಿ ಸಂಭಾಷಿಸುತ್ತ ಕುಳಿತಿರುವಾಗ ಆನುಷಂಗಿಕವಾಗಿ ಸಮಾಜದಲ್ಲಿಯ ಕುಂದುಕೊರತೆಗಳು ಅವುಗಳ ಬಗೆಗೆ

ಶರಣರ ನಿಲವು ಮಾತಿನಲ್ಲಿ ಬರುತ್ತಿದ್ದವು ಆ ಕುಂದುಕೊರತೆಗಳು ರೂಢಿಮೂಲ ವಾಗಿಯೂ ಸಾಂಪ್ರದಾಯಕವಾಗಿಯೂ ಉಳಿದವುಗಳು. ಅವನ್ನು ಸುಧಾರಿಸಲು ಸುಧಾರಕರು ಮಾತಾಡುತ್ತಾರೆ ತಾವು ನಡೆಯುವ ಪ್ರಸಂಗ ಬಂದಾಗ ಸಂಪ್ರದಾಯ ಮುರಿಯಲು ಹಿಂಜರಿಯುತ್ತಾರೆ. ಕಾಲಮಹಿಮೆಯಿಂದಲೇ ಬದಲಾವಣೆ ಸಂಭವಿಸುವದು ಆದರೆ ಅದು ಹಿತಕರವಾಗಿಯೇ ಇದ್ದೀತೆಂದು ಹೇಳಲಾಗುವದಿಲ್ಲ" ಎಂದಿದ್ದರು.

ಇಂತಹ ವಿರಾಮ ಸಮಯಗಳಲ್ಲಿ ರಸನೆಗೂ ಸೊಗಸಿನ ರುಚಿಯಿರುತ್ತಿತ್ತು. ಸುತ್ತಲಿನ ಹಳ್ಳಿಗಳ ತೋಟಪಟ್ಟಿಗಳಿಂದ ಕಬ್ಬು, ಕಬ್ಬಿನರಸ ಕಡಲೆಗಿಡ ನೆಲಗಡಲೆ ಸವತೇಹಣ್ಣು ಬಂದಿರುತ್ತಿದ್ದವು ಶ್ರೀಗಳ ದರ್ಶನಕ್ಕೆ ಬಂದು ವಸತಿ ಇರುವ ಜತೆಗಾರರೊಡನೆ ಅವುಗಳನ್ನು ಸವಿಯುವದು ನಡೆಯುತ್ತಿತ್ತು. ಅಪ್ಪನವರು ತಮ್ಮ ಕೈಗೆ ಹತ್ತಿದವುಗಳನ್ನು ನಮ್ಮ ಕಡೆಗೆ ಸರಿಸುತ್ತಿದ್ದರು.

ಈ ಸಲದ ಹರಳೇಶ್ವರ ವಾಸ್ತವ್ಯದಲ್ಲಿ ಜರುಗಿದ ಒಂದು ಮಹತ್ವದ ಸಂಗತಿಯು ಇದು. ಹಿಂದೆ ಹೇಳಿದಂತೆ 'ಏಕೋತ್ತರ ಶತಸ್ಥಲ'ದ ಸ್ಥಲ ಒಂದಕ್ಕೆ ಒಂದರಂತೆ ವಾರ್ಧಿಕ ಷಟ್ಪದಿ ಪದ್ಯಗಳನ್ನು ರಚಿಸುತ್ತ ಬಂದದ್ದರಲ್ಲಿ ೧೦೦ಕ್ಕೆ ಸಮೀಪವಾಗಿ ಪದ್ಯಗಳ ರಚನೆಯಾಗಿತ್ತು. ಅದನ್ನು ಈಗ ತಂದಿದ್ದೆನು. ಅಪ್ಪನವರ ಅರ್ಪಿತದ ನಂತರ ವಿಶ್ರಾಂತಿಕೋಣೆಯಲ್ಲಿ ಅವರ ಮುಂದೆ ಅವುಗಳನ್ನು ಪಠಿಸಿದೆನು. ಕೇಳಕೇಳುತ್ತ ಹರ್ಷಗೊಂಡು 'ಅರ್ಥವತ್ತಾಗಿದೆ' ತತ್ವ ಪದ್ಯಗಳು, ಹೇಗೆ ಬಂದವು ಇವು ನಿಮಗೆ? ಎಂದು ಎದೆದುಂಬಿ ಉದ್ಗರಿಸಿದರು. 'ಈ ಪಾದದ ಆಶೀರ್ವಾದದೊಡನೆಯೇ ಬಂದಾವರಿ ಅಪ್ಪಾ!' ಎಂದು ಪಾದಕ್ಕೆರಗಿದೆ. "ಚೆನ್ನಾಗಿವೆ ಪೂರ್ಣಗೊಳಿಸಿರಿ" ಎಂದರು 'ಆಗಲಿ' ಎಂದೆ. ಅಪ್ಪಾ ಇದಕ್ಕೆ ಹೆಸರು ಏನು ಇಡುವದು? 'ಏಕೋತ್ತರ ಶತಸ್ಥಲ'ದ ಬದಲು 'ನೂರೊಂದು ನೆಲೆ' ಎಂದು ನನಗೆನಿಸುತ್ತದೆ ಎನಲು "ಅದು ಸರಿ ಷಟ್‌ಸ್ಥಲ ಸಿದ್ಧಾಂತ ರಹಸ್ಯ ಅಥವಾ ನೂರೊಂದು ನೆಲೆಯ ನಿಲವು" ಎನ್ನಿರಿ ಎಂದರು 'ಒಳ್ಳೆಯದಾಯಿತು' ಎಂದು ಒಪ್ಪಿದೆ. ಮರುದಿನ ಆಶೀರ್ವಾದ ಪಡೆದು ಹೊರಡುವಾಗ ನೂರೊಂದು ನೆಲೆಯ ನಿಲವು ಪೂರ್ಣಮಾಡಿಕೊಂಡು ಮತ್ತೆ ಬೇಗ ಬನ್ನಿರಿ ಎಂದಿದ್ದರು. ಮನೆಗೆ ಬಂದ ಮೇಲೆ ಪದ್ಯಗಳ ಸಂಖ್ಯೆ ಪೂರ್ಣಗೊಳಿಸಿದೆ ಆದಿಯಲ್ಲಿ ಅಂತ್ಯದಲ್ಲಿ (ಪೀಠಿಕೆ ಮಂಗಲ) ಪದ್ಯಗಳನ್ನು ರಚಿಸಿ ಹೊಂದಿಸಿದೆ. ಇಡಿಯಾಗಿ ಸುವಾಚ್ಯ

ವಾಗುವ ರೀತಿಯಲ್ಲಿ ಅಚ್ಚುಕಟ್ಟಾಗಿ ಬರೆದು ಹಸ್ತಪ್ರತಿ ಸಿದ್ಧಗೊಳಿಸಿದೆ. ಇದು ಗುರುಗಳ ದರ್ಶನಕ್ಕೆ ಆತುರಗೊಳಿಸುತ್ತಿತ್ತು. ಬಿಜ್ಜಳ ಬಸವ ಕಾದಂಬರಿಗಳ ಮುಂದಿನ ಸಂಪುಟಗಳು ಬಂದಿದ್ದವು.

೨೯–೩–೬೩ ರಂದು ಹರಳೇಶ್ವರಕ್ಕೆ ಹೋದೆನು. ಅಪ್ಪನವರು ತಂಪಾದ ಗಿಡದ ನೆರಳಲ್ಲಿ ಖುರ್ಚಿ ಇಡಿಸಿ ಒಬ್ಬರೇ ಕುಳಿತಿದ್ದರು. ಪಾದದ ಮೇಲೆ ತಲೆ ಇಟ್ಟೆ. "ಯಾರು?" ನಾನು ಲಕ್ಕಪ್ಪರೀ ಅಪ್ಪಾ. 'ಶಿರಹಟ್ಟಿ ಸಾಹೇಬರು ಯಾವ ಕಡೆಯಿಂದ ಬಂದಿರಿ' ಎಂದು ಬೆನ್ನಮೇಲೆ ಕೈಯಾಡಿಸಿದರು. ಉಪಚಾರಕ್ಕೆ ಆದೇಶವಾಯಿತು.

ಒಳಗೆ ಹೋಗಿ ಕೈಕಾಲು ಮೋರೆ ತೊಳೆದು ಸ್ವಲ್ಪ ಪ್ರಸಾದ ಸೇವಿಸಿ ಶೀತೋಪಚಾರ ಹೊಂದಿ ಅಪ್ಪನವರ ಹತ್ತಿರ ಬಂದೆ. ಯೋಗಕ್ಷೇಮ ವಿಚಾರಿಸಿದರು. ಪುಸ್ತಕಗಳ ಪ್ರಸ್ತಾಪವಾಯಿತು. 'ನೂರೊಂದು ನೆಲೆಯ ನಿಲವು' ಪೂರ್ಣಗೊಳಿಸಿದಿರಾ? ಆಗಿದೆ ಅಪ್ಪಾ ಅದನ್ನು ತಂದಿದ್ದೇನೆ ಈಗ ಅದನ್ನೇ ಮೊದಲು ಪಠಿಸಲೇನು? ಅಥವಾ ನಾಳೆ ಅರ್ಪಿತ ನಂತರ ಪಠಿಸಬೇಕೆಂದಿದ್ದೇನೆ. "ಹೌದು ಆವಾಗಲೇ ಕೇಳೋಣ ಅರ್ಚನೆ, ಅರ್ಪಣೆ, ಅನುಭವ! ಈ ಸೂಕ್ತಿ ಇದೆಯಲ್ಲವೆ? ಈಗ ಈ ಪುಸ್ತಕಗಳನ್ನು ಓದಿರಿ."

ಆರಾಮವಾಗಿ ಓದುವದಕ್ಕೂ ಕೇಳುವದಕ್ಕೂ ತಕ್ಕ ಆಸನ ಸಜ್ಜು ಮಾಡಿಸಿದರು ಮೂರು ದಿನ ಮೂರು ಪುಸ್ತಕಗಳನ್ನು ನೆರಳಲ್ಲಿ ಓದಿ ಮುಗಿಸಿದೆ. ಅವುಗಳಲ್ಲಿಯ ಶೃಂಗಾರದ ಸನ್ನಿವೇಶಗಳನ್ನಷ್ಟು ಬದಿಗಿರಿಸಿದರೆ ಉಳಿದ ಭಾಗಗಳು ಬಸವಣ್ಣನವರ ಜೀವನದ, ಬಿಜ್ಜಳನೊಡನೆ ಅವರಿಗಿದ್ದ ಸಂಬಂಧದ ಮೇಲೆ ಹೊಸಬೆಳಕು ಚೆಲ್ಲುತ್ತದೆ ಎಂದರು. ಅವುಗಳಿಗೆ ಶ್ರೀಗಳು ತಮ್ಮ ತರ್ಕಬದ್ಧ ಊಹೆಗಳನ್ನು ಹೊಂದಿಸಿಯೂ ಗ್ರಹಿಸುತ್ತಿದ್ದರು. ಮನೋಹರ ಶೈಲಿ ತುಂಬ ಲವಲವಿಕೆಯಿಂದ ಆಲಿಸುತ್ತಿದ್ದರು. ಗ್ರಾಮಾಂತರಗಳಿಂದ ಸದಾ ಶ್ರೀಗಳ ದರ್ಶನಕ್ಕೆ ಬರುತ್ತಿದ್ದವರು ಈ ಓದುಗೇಳುವದರಲ್ಲಿ ತಮಗೆ ಅವಕಾಶವಿದ್ದಷ್ಟು ಕುಳಿತು ಕೇಳುತ್ತಿದ್ದರು.

ನಡುನಡುವಿನ ವಿರಾಮದಲ್ಲಿ ಶರಣರ ಕಾಲದ ಸಾಮಾಜಿಕ ಪರಿಸ್ಥಿತಿಯ ಚರ್ಚೆ ಮಾಡುತ್ತಿದ್ದೆವು. ಶರಣರ ಮೊದಲು ವೀರಶೈವ ಧರ್ಮ ವ್ಯಕ್ತಿಗತವಾಗಿರುತ್ತಿತ್ತು. ಅದು ಸಾಮಾಜಿಕವಾಗಿರಲಿಲ್ಲ. ಕೌಟುಂಬಿಕ ಧರ್ಮವೂ ಆಗಿರಲಿಲ್ಲ.

ಒಂದೇ ಮನೆಯಲ್ಲಿ ಭಿನ್ನ ಭಿನ್ನ ಅನುಯಾಯಿಗಳಿರುತ್ತಿದ್ದರು. ಹೀಗೆ ಅಪ್ಪನವರ ಅಭಿಮತವಿತ್ತು. ಇದಕ್ಕೆ ಶರಣಜೀವನದಲ್ಲಿಯು ಹಲವು ಉದಾಹರಣೆ ಕೊಡುತ್ತಿದ್ದರು (ಆದಯ್ಯನ ಚರಿತ್ರೆ ಇತ್ಯಾದಿ).

೨ನೆಯ ದಿನ 'ನೂರೊಂದು ನೆಲೆಯ ನಿಲವು' ಪುಸ್ತಕದ ಎಲ್ಲ ಪದ್ಯಗಳನ್ನು ಅಪ್ಪನವರ ಮುಂದೆ ಪಠಿಸಿದೆ. ಮುಗಿಸಿ ಪಾದಕ್ಕೆ ಅರ್ಪಿಸಿ ವಂದಿಸಿದೆ. ಅವರ ಮುಖದಲ್ಲಿ ಆನಂದದ ತೇಜ ತುಳುಕುತ್ತಿತ್ತು 'ಈ ಚಿಕ್ಕ ಗ್ರಂಥ ವೀರಶೈವ ದರ್ಶನದ ಸಾರವಾಗಿರುವದು' ಎಂದು ಉದ್ಗಾರ ತೆಗೆದರು 'ಅಪ್ಪಾ ದರ್ಶನ ಅಂದರೆ ತತ್ವ ಸಿದ್ಧಾಂತ' ಎಂದು ತಿಳಿದಿದ್ದೇನೆ. ಮತ್ತೇನು ಆದರ ನಿರ್ವಚನ? ಎಂದೆ "ಅದು ಸರಿ ಮತ್ತೇನು, ದರ್ಶನ ಅಂದರೆ ಅರಿಯುವದು, ಅನುಭವಿಸುವದು" ಎಂದು ಅರ್ಥ. ಕ್ಷಣ ಹೊತ್ತು ಮೌನ ತಾಳಿ ನುಡಿದರು "ನೀವು ಪೀಠಿಕೆಯಲ್ಲಿ ಬರೆದ ನನ್ನ ಸ್ತುತಿ ಪರವಾದ ಪದ್ಯಕ್ಕೆ ನಾನು ಅರ್ಹನಾಗಿರುವುದಿಲ್ಲ" ಎಂದರು. "ತಾವು ಹಾಗೆ ಅನ್ನಬಹುದು ಆದರೆ ಈ ಮಾತನ್ನು ಜನರು ಒಪ್ಪುವದಿಲ್ಲ" ಎಂದೆ. ಆ ಪದ್ಯ ಇವು

ಪೀಠಿಕಾ ಪದ್ಯಗಳು

ಭಾವದಲ್ಲಿ ಬೆಳಕಾಗಿ ಮನಕೆ ಹಂಬಲವಾಗಿ
ಆವಗಂ ದರ್ಶನೋತ್ಸವಮಾಗಿ ರಾಜಿಸುವ
ಪಾವನ ವಿರಾಗಿ ಸದ್ಭಕ್ತಜನರಾಗಿ ವರಲಿಂಗಾನುರಾಗಿ ನಿರುತ
ನೀವೆ ಪರಮಾರ್ಥಮಾದೊಡೆ ಸಾಕು; ಬುಧರು ಸಂ
ಭಾವಿಸುವ ಆಸೆಯೆನಗಿಲ್ಲ, ಕೃಪೆಯಾಗಿ ಬಿಡ
ದೋದಿ ನುಡಿಗಲಿಸಿ ನಡೆನುಡಿಸಿ ನೋಡುವಿರಾಗಿಯಿನ್ನಾನದೇಂ ಸುಕೃತನೋ?
ಆವ ಪುಣ್ಯದ ಫಲವೊ ನಿಮ್ಮ ಕಾಣುವ ಬಯಕೆ
ಆವ ನೊಂಪಿಯೊ ನಿಮ್ಮ ಜ್ಞಾನದಾನಕೆ ಮನವ
ನೀವ ಹಂಬಲವೆನಗೆ ಸಮನಿಸಿವೆ, ನಿಮ್ಮ ಮೃದುವಚನಾಮೃತಧಾರೆಯು
ಜೀವಗಿಹ ತೊಡರನೆಡೆಗೆಡಿಸಿ, ಹೃದಯದಲಿ ಸ
ದ್ಭಾವಮಂ ತೋರುತಿದೆ, ಶ್ರೀ ಶಾಂತವೀರ ಗುರು
ದೇವ ನಿಮ್ಮಡಿಗೊಪ್ಪಿಸುವೆ ಬಾಲಪಾಠಗಳ ತಿದ್ದಿಕೊಳ್ಳಲು ತಪ್ಪನು.

೨-೪-೬೩ ಮುಂಜಾನೆ ಊರಿಗೆ ಹೋಗಲು ಅಪ್ಪಣೆ ಪಡೆದೆನು. ಪ್ರಸಾದಾನಂತರ ಸಿದ್ಧನಾಗಿ ಅವರ ಪಾದದ ಮೇಲೆ ತಲೆ ಇಟ್ಟದ್ದೆ "ಮತ್ತೆ ಯಾವಾಗ ಬರುವದು?"

ತಾವು ಕರೆದಾಗ ಅಂದರೆ ಪ್ರೇರಣೆಯಾದಾಗ ಬರುವದು. ಪ್ರಪಂಚದಲ್ಲಿಯ ಯಾವದೇ ಸನ್ನಿವೇಶದಿಂದ ಪರಳೇಶ್ವರಕ್ಕೆ ಹೋಗಿ ಬರಬೇಕೆಂಬುದಕ್ಕೆ ಪ್ರಚೋದನೆ ಯಾಗುವದು. ಆಗಿನಿಂದ ನಾನು ಇಲ್ಲಿಗೆ ಬರುವವರೆಗೆ ತಾವು ನನ್ನ ಮನದಲ್ಲಿಯೇ ಬಂದು ನಿಲ್ಲುವಿರಿ. ಆಗ ನಿಜದರ್ಶನ ಸುಖಸಂತೋಷಕ್ಕಾಗಿ ಒಮ್ಮೆ ಇಲ್ಲಿಗೆ ಬಂದು ಬಿಟ್ಟು ಹೋದೆನೆಂದರೆ ತಾವು ಇಲ್ಲಿಯೇ ಉಳಿಯುವಿರಿ....ನಗುತ್ತ ನುಡಿದೆನು.

"ನೆನೆದಾಗ ಮನದಾಗಲ್ಲೇನು?" ಬೆನ್ನು ಮೇಲೆ ಕೈಯಾಡಿಸಿ 'ಹೋಗಿ ಬನ್ನಿರಿ' ಎಂದರು. ಸಮ್ಮತಿಸಿ ಮುಂದೆ ಸಾಗಿದೆ.

೧೮-೫-೬೩ ಶ್ರೀ ಹಿರೇಮಠ ಡಾಕ್ಟರಲ್ಲಿ ಅವರ ಮನೆಯ ಶಿವಕಾರ್ಯಕ್ಕಾಗಿ ಬಬಲೇಶ್ವರದ ಶಾಂತವೀರ ಸ್ವಾಮಿಗಳು ಪರಳೇಶ್ವರದಿಂದ ಬಂದಿದ್ದಾರೆಂದು ಗೊತ್ತಾಯಿತು. ಮನೆಯವರೆಲ್ಲ ಡಾ||ರ ಮನೆಗೆ ಹೋಗಿ ಗುರುಗಳ ದರ್ಶನ ಪಡೆದವು. ಆಗ ನನಗೆ ಹೇಳಿದರು 'ನಾಡದು ಶ್ರೀಶೈಲದ ಜಗದ್ಗುರುಗಳು ಇಂಚಗೇರಿಗೆ ಬರುತ್ತಾರೆ ಮರುದಿನ ಅಲ್ಲಿ ೧೧ ಮಂಟಪದ ಪೂಜಾ ಸಮಾರಂಭ ಇದೆ. ನಮಗೆ ಆಗ್ರಹದ ಆಮಂತ್ರಣ ಬಂದಿದೆ. ದಿ. ೨೦ರಂದು ಮುಂಜಾನೆ ಅಲ್ಲಿಗೆ ಹೋಗುತ್ತೇವೆ. ನಿಮ್ಮನ್ನು ಕರಕೊಂಡು ಹೋಗುವೆ. ನಸುಕಿನಲ್ಲಿ ಸಿದ್ಧರಾಗಿ ಮನೆಯಲ್ಲಿ ಇರ್ರಿ' ಹೂಂ ಎಂದು ಒಪ್ಪಿದೆನು.

ಇಂಚಗೇರಿ ಮಹೋತ್ಸವ

ದಿ. ೨೦ ಸೋಮವಾರ ಬೆಳಗಿಗೆ (೫-೩೦ ಗಂ) ಅಪ್ಪನವರಿದ್ದ ಕಾರು ನಮ್ಮ ಮನೆಯ ಪತ್ತಿರ ಬಂದಿತು. ಅವರಲ್ಲಿ ತೆಲಸಂಗ ಸ್ವಾಮಿಗಳೂ ಇದ್ದರು. ಮನೆಯವರೆಲ್ಲರೂ ಹೊರಗೆ ಬಂದು ಶ್ರೀಗಳಿಗೆ ವಂದಿಸಿದ ಬಳಿಕ ನಾನು ಕಾರಿನಲ್ಲಿ ಹೋದೆನು.

ಇಂಚಗೇರಿ ಪಟ್ಟದ ಸ್ವಾಮಿಗಳ ನೇತೃತ್ವದಲ್ಲಿ ಗ್ರಾಮದ ಭಕ್ತ ಜನರು ಸಮಾರಂಭದ ಭಾರೀ ಸಿದ್ಧತೆ ಮಾಡಿದ್ದರು. ೧೦ ಗುಟೆಗೆ ಊರ ಹೊರಗೆ

ಹೋಗಿ ಆಗ ಆಗಮಿಸಿದ ಶ್ರೀಶೈಲ ಜಗದ್ಗುರು ಶ್ರೀ ವಾಗೀಶ ಶಿವಾಚಾರ್ಯ ಮಹಾಸ್ವಾಮಿಗಳನ್ನು ವೈಭವದಿಂದ ಬರಮಾಡಿಕೊಂಡರು. ಅಡ್ಡ ಪಲ್ಲಕ್ಕಿಯಲ್ಲಿ ಅವರನ್ನು ಮೂರ್ತಮಾಡಿಸಿ ಸಂಭ್ರಮದಿಂದ ಊರಲ್ಲಿ ಬಿಜಯಂಗೈಸಿಕೊಂಡರು ಅದು ಸಣ್ಣ ಹಳ್ಳಿ ಸುತ್ತಲಿನ ಅಗಣಿತ ಜನರು ಈ ಜಾತ್ರೆಗೆ ಬಂದು ನೆರೆದಿದ್ದರು. ಕಾರ್ಯಕ್ರಮಗಳು ಸುಸಜ್ಜಿತವಾಗಿ ಸಾಗಿದವು. ನಾಳೆಯ ೧೧ ಮಂಟಪದಲ್ಲಿ ಪೂಜಾಮೂರ್ತಿಗಳಾಗಿ ಮಂಡಿಸುವದಕ್ಕೆ ೧೧ ಸ್ವಾಮಿಗಳಿಗೆ ಆಮಂತ್ರಣ ಕೊಡಲು ಬಂದಾಗ ನಮ್ಮ ಅಪ್ಪನವರು 'ನಾನೆಲ್ಲಿಯೂ ಪೂಜಾ ಮೂರ್ತಿಯಾಗಿಲ್ಲ, ನಾನೊಲ್ಲೆ' ಎಂದು ಆಮಂತ್ರಣ ಸ್ವೀಕರಿಸಲಿಲ್ಲ ಆಗ ವ್ಯವಸ್ಥಾಪಕರು ಸುಮ್ಮನಾಗಿ ಹೋಗಿದ್ದರು ಮರುದಿನ ದೊಡ್ಡ ನಸುಕಿನಲ್ಲಿ ಕಾರ್ಯಕರ್ತರು ಧ್ವನಿವರ್ಧಕದಿಂದ ಕಾರ್ಯಕ್ರಮಗಳನ್ನು ಬಿತ್ತರಿಸುವಾಗ ೧೧ ಮಂಟಪದಲ್ಲಿ ಮಂಡಿಸುವ ೧೧ ಸ್ವಾಮಿಗಳ ಹೆಸರು ಹೇಳಿದರು. ಅದರಲ್ಲಿ ಶಾಂತವೀರ ಸ್ವಾಮಿಗಳ ಹೆಸರು ಸೇರಿತ್ತು. ಹತ್ತಿರದಲ್ಲಿಯೇ ಸ್ವಾಮಿಗಳ ಬಿಡಾರದ ಮನೆಯಲ್ಲಿ ಪವಡಿಸಿದ್ದ ಶ್ರೀ ಶಾಂತವೀರ ಅಪ್ಪನವರು ಕೇಳಿ ಸ್ವಲ್ಪ ನಿಷ್ಠುರರೇ ಆದರೆನ್ನಿ. ನನ್ನನ್ನು ಕರೆದರು. ನೀವು ಕೂಡಲೇ ಇಲ್ಲಿಯ ಪಟ್ಟದ ದೇವರಿಗೆ ಭೆಟ್ಟಿಯಾಗಿ 'ನಾನು ಕ್ರಿಯಾ ಮೂರ್ತಿಯಾಗಿ ಮಂಟಪದಲ್ಲಿ ಕೂಡ್ರುವದಿಲ್ಲವೆಂದು ಸ್ಪಷ್ಟವಾಗಿ ತಿಳಿಸಿ ಬರ್ರಿ' ಎಂದರು. ನಾನು ಪಟ್ಟದ ದೇವರು ಎಲ್ಲಿ ಇದ್ದಾರೆಂದು ಕೇಳುತ್ತ ಹೋದೆನು. ಸಮಾರಂಭದ ಸಿದ್ಧತೆಗಾಗಿ ನಿದ್ರೆಯಿಲ್ಲದೆ ದುಡಿದು ದಣಿದಿದ್ದ ಆ ಶ್ರೀಗಳು ವೇದಿಕೆಯ ಒಂದು ಮೂಲೆಯಲ್ಲಿ ಕಂಬಳಿಸುತ್ತಿ ಮಗ್ಗಲಾಗಿದ್ದರು. ಎಬ್ಬಿಸಬೇಕೊ ಬೇಡವೋ ನನಗೆ ದಿಗಿಲು. ನಮ್ಮ ಶ್ರೀಗಳ ಬದಲು ಬೇರೆ ವ್ಯವಸ್ಥೆ ಮಾಡಿಕೊಳ್ಳಲು ಇವರಿಗೆ ಅವಕಾಶ ಬೇಕಲ್ಲ ಎಂದು ಬಗೆದು ಮೆಲ್ಲನೆ ಆ ದೇವರ ತಲೆಯ ಹತ್ತಿರ ಸರಿದು 'ಅಪ್ಪಾ' ಎಂದೆ ಅವರು ಚಟ್ಟನೆ ಮುಸುಕು ತೆಗೆದು ಎದ್ದುಕುಳಿತು 'ಏನು' ಎಂದರು. ಅವರ ಕಣ್ಣು ಕೆಂಪಾಗಿ ಉಬ್ಬಿದ್ದವು. ನಾನು ಹೇಳಬೇಕಾದದ್ದನ್ನು ಹೇಳಲೇಬೇಕಲ್ಲ! ಬಬಲೇಶ್ವರ ಸ್ವಾಮಿಗಳು ಮಂಟಪ ಪೂಜೆಗೆ ತಾವು ಕೂಡ್ರುವದಿಲ್ಲೆಂದು ತಮಗೆ ತಿಳಿಸಿ ಬರಲು ಹೇಳಿದ್ದಾರೆ-ಎಂದೆ. ಕ್ಷಣ ಹೊತ್ತು ನನ್ನ ನೋಡಿ ಅವರು ಒಳ್ಳೆಯದು ಬೇರೆಯವರಿಗೆ ತಿಳಿಸುತ್ತೇವೆ ಎಂದು ಮೇಲೆದ್ದರು. ನಾನು ಬಂದು ನಮ್ಮ ಅಪ್ಪನವರಿಗೆ ತಿಳಿಸಿದೆ.

ಪೂಜಾ ಸಮಾರಂಭ, ಸಭೆ, ಭಾಷಣ, ಜಗದ್ಗುರುಗಳ ದರ್ಶನ, ಸಂಭಾಷಣೆ ಮಹಾಪ್ರಸಾದ ಸಂತರ್ಪಣೆ, ಅತಿಥಿ ಮಹಾಸ್ವಾಮಿಗಳೆಲ್ಲರಿಗೆ ಉಡುಗೊರೆ ಕಾಣಿಕೆ ಸಲ್ಲಿಕೆ ಮುಂತಾದ ಮಹಾಕಾರ್ಯಗಳೆಲ್ಲ ಕ್ರಮವಾಗಿ ಜರುಗಿದವು. ಸಂಪೂರ್ಣ ದೃಷ್ಟಿ ಕುಂದಿದ್ದ ನಮ್ಮ ಅಪ್ಪನವರು ಮತ್ತೊಬ್ಬರ ಕೈಹಿಡಿದು ಸುಗಮವಾಗಿ ಅಡ್ಡಾಡುತ್ತಿದ್ದರು ಪ್ರಸ್ತುತ ಸಮಾರಂಭದಲ್ಲಿ ಅಡ್ಡಾಡಬೇಕಾದಲ್ಲೆಲ್ಲ ನಾನೇ ಅವರಿಗೆ ಕೈಯಾಸರವಾಗಿದ್ದೆನು. ಅವರು ಹೀಗೆ ಅಡ್ಡಾಡುವದನ್ನು ನೋಡುವದು ಇದೇ ಕೊನೆಯದಾಗುವದೆಂಬದನ್ನು ನಾನು ಆಗ ತಿಳಿದಿರಲಿಲ್ಲ ಶಿವನಾಟ!

ಇಳಿಹೊತ್ತಿಗೆ ನಮ್ಮ ಮರುಪ್ರಮಾಣ. ಬರುವಾಗ ಬೊಮ್ಮನಹಳ್ಳಿ ಶ್ರೀ ಶಾಂತಲಿಂಗ ಶಿವಾಚಾರ್ಯರು ಅಪ್ಪನವರನ್ನು ತಮ್ಮ ಗವಿಮಠಕ್ಕೆ ಬರಮಾಡಿ ಕೊಂಡರು ಅಲ್ಲಿಯ ಗವಿಮಠ ಮತ್ತು ಪೂರ್ವದಲ್ಲಿ ಮಹಾನುಭಾವರು ತಪಸ್ಸು ಮಾಡಿದ ಗವಿಗಳ ಸ್ಮಾರಕ ಅವಶೇಷಗಳನ್ನು ನೋಡಿ ಕುತೂಹಲ ಪಡುವದಾಯಿತು. ಸೂರ್ಯಾಸ್ತ ಹೊತ್ತಿಗೆ ವಿಜಾಪುರಕ್ಕೆ ಬಂದೆವು ಅಪ್ಪನವರು ಹಾಗೆಯೇ ಹರಳೇಶ್ವರಕ್ಕೆ ದಯಮಾಡಿಸಿದರು.

ಆ ಮೇಲೆ ನಾನು ಶ್ರೀ ಶಾಂತವೀರ ಅಪ್ಪನವರನ್ನು ಕಂಡದ್ದು ಯಾವಾಗ? ಯಾವ ಸ್ಥಿತಿಯಲ್ಲಿ? ಅವರು ಅಪಘಾತಕ್ಕೊಳಗಾಗಿ ಅಸ್ಥಿ ಭಂಗವಾಗಿ ನೋವನ್ನು ಅನುಭವಿಸುತ್ತಿರುವಾಗ!! ಅಯ್ಯೋ ವಿಧಿಯೇ.

ಅಪಘಾತ ಘಟನೆ

ನಡೆದ ಘಟನೆ ಹೀಗಿತ್ತು ದಿ ೬–೬–೬೩ ರಂದು ಗುರುವಾರ (ಹೊನ್ನುಗ್ಗಿ) ಸಾಯಂಕಾಲ ಬಬಲೇಶ್ವರದಲ್ಲಿ ಪ್ರೊ.ಎಸ್.ಎಸ್. ಕಬ್ಬಿನ ಅವರ ತಂಗಿಯ ಮದುವೆ ನೆರವೇರಿತ್ತು ಆ ಮದುವೆಗೆ ಹರಳೇಶ್ವರದಿಂದ ಬಂದ ಶ್ರೀಗಳವರು ರಾತ್ರಿ ಮಠದಲ್ಲಿ ಉಳಿದು ಚೌಸಪ್ಪೆಯಲ್ಲಿ ಮಲಗಿದ್ದರು. ಹರಳೇಶ್ವರದಲ್ಲಿ ರಾತ್ರಿ ಲಘುವಿಗಾಗಿ ಎಚ್ಚೆತ್ತು ಕಾಟಿನಿಂದ ಇಳಿದು ತಾವೇ ಕಾಲಾಡಿಸುತ್ತ ಮುಂದಕ್ಕೆ ಹೋಗಿ ಬಾಗಿಲು ತೆಗೆದು ವಿಸರ್ಜಿಸಿ ಮರಳಿ ಬಾಗಿಲ ಹಾಕಿ ಮಲಗುವ ರೂಢಿ. ಅಂದು ಜಲಭಾದೆಗೆ ಎದ್ದಾಗ ಹರಳೇಶ್ವರದಲ್ಲಿಯೇ ಮಲಗಿದ ಭಾಸದಿಂದ ಬಾಗಿಲ ತಲುಪಲು ಕೈಯಾಡಿಸುತ್ತ ಮುಂದೆ ಸಾಗಿದರು. ಕಟ್ಟೆಯ ಅಂಚಿನಿಂದ ಕೆಳಗೆ ಫರಸಿಯ ಮೇಲೆ ಬಿದ್ದುಬಿಟ್ಟರು. ಸಪ್ಪಳಕ್ಕೆ ಸಮೀಪದವರು ಗಡಬಡಿಸಿ

ಕಂದೀಲ ಬೆಳಕು ಹೆಚ್ಚು ಮಾಡಿ ನೋಡಿ ಮೇಲೆ ಜೋಕೆಯಿಂದ ಎತ್ತಿಕೊಂಡು ಬಂದಿದ್ದರು. ಬಲತೊಡೆಯ ಮೇಲ್ಭಾಗದಲ್ಲಿ ನೋವು ಬಾವು! ಬಲದ ಮೊಣಕೈಗೂ ಪೆಟ್ಟು! ಬೆಳಗಿನಲ್ಲಿ ಭಕ್ತರು ನೆರೆದರು. ಸ್ಥಳೀಯ ಡಾಕ್ಟರರ ಅಭಿಪ್ರಾಯದಂತೆ ವಿಜಾಪುರಕ್ಕೆ ಕರಕೊಂಡು ಬಂದರು, ಹಿರೇಮಠ ಡಾಕ್ಟರರ ಮನೆಯಲ್ಲಿದ್ದರು. ಬೇರೆ ಬೇರೆ ಡಾಕ್ಟರರೂ ಬಂದು ನೋಡಿ ವಿಚಾರಿಸುತ್ತಿದ್ದರು.

ಅಂದು ಕಾರಹುಣ್ಣಿವೆಗೆ ನಾನು ತೊರವಿಯಲ್ಲಿದ್ದು ಮರುದಿನ ಇಳಿಹೊತ್ತಿಗೆ ವಿಜಾಪುರಕ್ಕೆ ಬಂದು, ಮಾಳಿಗೆಯ ಮೇಲೆ ಮೊಳೆತ ಕಸ ಆರಿಸುತ್ತ ಕುಳಿತಿದ್ದೆನು.

ಎದುರಿಗಿನ ದೊಡ್ಡ ರಸ್ತೆಯ ಮೇಲೆ ಹೋಗುತ್ತಿದ್ದ ತೆಲಸಂಗ ವಿರಭದ್ರಪ್ಪ ನವರು ನನ್ನನ್ನು ನೋಡಿ ಮುಂದಕ್ಕೆ ಬಂದು 'ಬಬಲೇಶ್ವರದ ಶಾಂತವೀರ ಸ್ವಾಮಿಗಳು ಮಠದಲ್ಲಿ ಬಿದ್ದು ಅಪಘಾತವಾಗಿದೆ, ಭಾರಿ ಪೆಟ್ಟು ಆಗಿದೆ ನಿನ್ನೆ ಇಲ್ಲಿಗೆ ಕರಕೊಂಡು ಬಂದಿದ್ದಾರೆ. ಹೀರೆಮಠ ಡಾಕ್ಟರ ಮನೆಯಲ್ಲಿದ್ದಾರೆ ನಿಮಗೆ ಗೊತ್ತಿಲ್ಲ ಕಾಣತದೆ' ಎಂದರು. ಕೇಳಿ ಆಘಾತವಾಯಿತು. 'ಇದೀಗ ತೊರವಿ ಯಿಂದ ಬಂದೆ ನಾನು' ಎನ್ನುತ್ತ ಕೆಳಗಿಳಿದು ಬಂದೆ ಮತ್ತಷ್ಟು ವಿವರ ನೀಡಿದರು. ಗಾಬರಿಯಾಗಿ ಅವಸರವಸರವಾಗಿ ಅರಿವೆ ಹಾಕಿಕೊಂಡು ಡಾಕ್ಟರರ ಮನೆಗೆ ಓಡಿದೆನು.

ಮನೆತುಂಬ ಮಂದಿ ಕುಳಿತಿದ್ದರು. ಬಬಲೇಶ್ವರದವರು ಬಹಳ ಮಂದಿ ಬಂದಿದ್ದರು ಶೇಗುಣಸಿ ಪಲಗಣಿ ಕಾಖಂಡಕಿ ಪ್ರಮುಖರು ಬಂದಿದ್ದರು. ಎಲ್ಲರ ಮುಖದಲ್ಲಿಯೂ ಚಿಂತೆಯ ಕಳೆ. ಅಪ್ಪನವರನ್ನು ಮಲಗಿಸಿದ ಕೋಣೆಯಲ್ಲಿ ಹೋದೆ. ಅವರ ಕಾಟಿನ ಸಮೀಪದಲ್ಲಿ ಬೊಮ್ಮನಳ್ಳಿ ಸ್ವಾಮಿಗಳು ಬೇರೆ ಮಹ ನೀಯರೂ ಇದ್ದರು. ನಾನು ಹತ್ತಿರ ಹೋಗಿ 'ಅಪ್ಪಾ' ಎಂದೆ ದನಿ ಗುರ್ತಿಸಿದ್ದರು ಆಯಾಸದಿಂದ ಹುಬ್ಬೇರಿಸಿ ಮುಖ ಹೊರಳಿಸಿ 'ತಂಗಿಯವರ ಹೊಟ್ಟೆನೋವು ಹೇಗಿದೆ? ಆರಾಮವಾಗಿದೆಯೇ? ಸಣ್ಣ ದನಿಯಿಂದ ಕೇಳಿದರು. 'ಆರಾಮ ವಾಗಿದೆ ತಮಗಿದೇನು ಅಪ್ಪಾ' ಎಂದು ದುಃಖದಿಂದ ಕೇಳಿದೆನು. "ಶಿವನಿಚ್ಛೆ" ಎಂದು ಸುಮ್ಮನಾದರು.

ಹತ್ತಿರದ ಖರ್ಚಿಯ ಮೇಲೆ ಕುಳಿತಿದ್ದ ಶ್ರೀಗಳೊಬ್ಬರು "ತಾವು ಗುಡ್ಡ ದಷ್ಟು ನೋವಿನಲ್ಲಿದ್ದಾರೆ. ಇನ್ನೊಬ್ಬರ ಆರಾಮವನ್ನು ವಿಚಾರಿಸುತ್ತಿದ್ದಾರೆ." ಎಂದರು. ಅಪ್ಪನವರು ಸಣ್ಣದನಿಯಿಂದ ಮತ್ತೆ ನುಡಿದರು "ಇನ್ನೊಬ್ಬರ ಆರಾಮ

ವನ್ನು ಅರಿತರೆ ನನ್ನನ್ನೂ ನನ್ನ ನೋವಿನಲ್ಲಿಯೂ ಸ್ವಲ್ಪ ಸಮಾಧಾನವಾಗುವದು" 'ಎಂತಹ ಘನವಾದ ಹೃದಯ!' ಎನ್ನುವಂತಿದ್ದವು ಸುತ್ತ ಕುಳಿತವರ ಮುಖಭಾವ ಗಳು! ನನಗೆ ಮಾತೇ ಬಾರದಾಗಿದ್ದವು. ಹಿರೇಮಠ ಡಾಕ್ಟರರು ಪಾಟೀಲ ಡಾಕ್ಟರರ ನೆರವಿನೊಂದಿಗೆ ತಾತ್ಕಾಲಿಕ ಉಪಚಾರಕ್ಕೆ ತೊಡಗಿದರು ಸ್ವಾಮಿಗಳಿಗೆ ನಿದ್ರೆ ಬರುವಂತೆ ಮಾಡಿದ ಬಳಿಕ ಜನರ ಗದ್ದಲ ಬಯಲಾಯಿತು. ರಾತ್ರಿ ೮ ಗಂಟೆಗೆ ನಾನು ಮನೆಗೆ ಬಂದೆನು. ಪರಸ್ಥಳದ ದೊಡ್ಡ ಚಿಕಿತ್ಸಾಲಯಕ್ಕೆ ಕರೆದೊಯ್ದು ಚಿಕಿತ್ಸೆ ಮಾಡಿಸಬೇಕಾಗಿತ್ತು. ಭಕ್ತ ಮಹನೀಯರು ಈ ಆಲೋಚನೆಯಲ್ಲಿ ತೊಡಗಿದ್ದರು. ಬಲದೊಡೆಯ ಮೇಲ್ಭಾಗದಲ್ಲಿ ಅಸ್ಥಿ ಭಂಗವಾಗಿತ್ತು ಬಲ ಮೊಣಕೈ ಗಂಟೆಲವು ಒಡೆದಿತ್ತು.

೯-೬-೬೩ (ರವಿವಾರ) ಶ್ರೀಗಳವರನ್ನು ಅಂಬ್ಯುಲನ್ಸ ಕಾರಿನಲ್ಲಿ ಸೊಲ್ಲಾಪುರಕ್ಕೆ ಕರಕೊಂಡು ಹೋದರು. ಹೀರೆಮಠ ಡಾಕ್ಟರರೂ, ನೀಲಮ್ಮನವರು ಇಬ್ಬರು ಸೇವಕರು ಸಂಗಡ ಹೋದರು. ಅಲ್ಲಿ ಚಿಟಗುಪ್ಪಿ ಡಾ. ನರಸಿಂಗ ಹೋಮ ದಲ್ಲಿ ಚಿಕಿತ್ಸೆಗೊಳಪಡಿಸಿದರು ೧೨-೬-೬೩ ಕ್ಕೆ ನಾನು ನೋಡಲಿಕ್ಕೆ ಸೊಲ್ಲಾಪುರಕ್ಕೆ ಹೋದೆನು. ಮೊನ್ನೆ ಆಪರೇಶನ್ ಆಗಿತ್ತು ತೊಡೆಯ ಎಲವು ಮುರಿದಲ್ಲಿ ಉಕ್ಕಿನ ಕಂಬಿ ಇಟ್ಟು ಸ್ಕ್ರೂ ತಿರುವಿದ್ದರು ಮೇಲೆ ಚರ್ಮಕೂಡಿಸಿ ಹೊಲಿಗೆ ಹಾಕಿದರು. ಮೊಣಕೈ ಒಡೆದ ಎಲುವಿನ ಪುಡಿ ತೆಗೆದು ಹೊಲಿಗೆ ಹಾಕಿದ್ದರು. ಒಟ್ಟಿನಲ್ಲಿ ಆಪ ರೇಶನ್ ಯಶಸ್ವಿಯಾಗಿತ್ತು. ಆದರೆ ಸದಾ ಬೆಂಕಿಯಲ್ಲಿಟ್ಟಂತಾಗಿದೆಯೆಂದು ಅಪ್ಪನ ವರು ನರಳುತ್ತಿದ್ದರು. ಶಿವನಲ್ಲಿ ಮೊರೆಯಿಟ್ಟೆವು. ಇನ್ನೇನು ನಮ್ಮಿಂದ? ಬೊಮ್ಮನ ಹಳ್ಳಿ ಶ್ರೀಗಳೂ ಅಲ್ಲಿ ಇದ್ದರು. ನಾನು ಅಂದು ಅಲ್ಲಿಯೇ ಇದ್ದು ಗುರುವಾರ ರಾತ್ರಿ ಮರಳಿದೆನು. ೧೮-೬-೬೩ ರಂದು ಅಪ್ಪನವರ ಬಗೆಗೆ ಕೇಳಲಾಗದ ಸುದ್ದಿ ಹರಡಿತ್ತು. ಆದರೆ ಅದು ಸುಳ್ಳಾಗಿತ್ತು.

ದಿ ೨೬ ರಂದು ಡಾ. ಹೀರೆಮಠ ಡಾ. ಪಾಟೀಲ ಇಬ್ಬರೂ ಸೊಲ್ಲಾಪುರಕ್ಕೆ ಹೋಗಿ ಸ್ವಾಮಿಗಳನ್ನು ಕರಕೊಂಡು ಬಂದರು. ಅಲ್ಲಿಯ ಡಾ. ಚಿಟಗುಪ್ಪಿಯವರು ಇನ್ನೂ ೪-೬ ದಿವಸ ಇರಲೆಂದು ಹೇಳಿದ್ದರು. ಈ ಮುಂದಿನ ಅವಧಿಯ ಬಿಲ್ಲಕೊಡ ಬೇಕಾಗಿಲ್ಲವೆಂದೂ ಹೇಳಿದ್ದರು. ಶ್ರೀಗಳನ್ನು ನೋಡವದಕ್ಕಾಗಿ ಆಗ ಸೊಲ್ಲಾಪುರ ದಲ್ಲಿಯೇ ಇದ್ದ ಶ್ರೀಶೈಲ ಜಗದ್ಗುರುಗಳು ಮೊದಲಾಗಿ ಹಲವಾರು ಸ್ವಾಮಿ ಗಳು ಬಂದು ಹೋಗಿದ್ದರು. ಇದನ್ನೆಲ್ಲ ನೋಡುತ್ತಿದ್ದ ಆ ಡಾಕ್ಟರರಿಗೆ ನಮ್ಮ

ಅಪ್ಪನವರ ಬಗೆಗೆ ತುಂಬ ಆದರ ಗೌರವ ಭಾವನೆ ಉಂಟಾಗಿತ್ತು. ಆದರೂ ನಮ್ಮ ಇಬ್ಬರು ಡಾಕ್ಟರರೂ ಮುಂದಿನ ಚಿಕಿತ್ಸೆ ತಾವೇ ನಡಿಸುವದಾಗಿ ಹೇಳಿ ಕರಕೊಂಡು ಬಂದಿದ್ದರು. ತಾವು ಬರಹೋಗುವ ತೊಂದರೆಗಾಗಿಯೇ ಆವಸರ ಮಾಡಿರಬೇಕು ಹಿರೇಮಠ ಡಾಕ್ಟರ ಮನೆಯಲ್ಲಿಯೇ ಇರಿಸಿ ಇನ್ನೂ ಇಬ್ಬರು ಡಾಕ್ಟರು ಅವರ ಪರಿಚರ್ಯೆ ನಡಿಸುತ್ತಿದ್ದರು. ಅಪ್ಪನವರ ಸ್ಥಿತಿ ಇನ್ನೂ ಸೂಕ್ಷ್ಮವಾಗಿಯೇ ಇತ್ತು ನೋವು ಬಾಧೆ ತೊಲಗಿರಲಿಲ್ಲ.

ನಾನು ದಿನಾಲು ಸುಮಾರು ೧೧ ಘಂಟೆಗೆ ಅಪ್ಪನವರ ಕಡೆಗೆ ಹೋಗುತ್ತಿದ್ದೆನು. ಅಷ್ಟರಲ್ಲಿ ಅವರಿಗೆ ಚಿಕಿತ್ಸೆ ಆರೈಕೆ ಮುಗಿದಿರುತ್ತಿದ್ದವು. ನೀಲಮ್ಮತಾಯಿಯವರೂ ಡಾಕ್ಟರ ಪತ್ನಿ ಶ್ರೀಮತಿ ಸುಮಂಗಲಾ ತಾಯಿಯವರೂ ಶ್ರೀಗಳ ಆರೈಕೆಯಲ್ಲಿ ತುಂಬ ಕಾಳಜಿವಹಿಸುತ್ತಿದ್ದರು. ಅಪ್ಪನವರ ಗಮನವನ್ನು ನೋವಿನ ಕಡೆಯಿಂದ ಬೇರೆ ಸೆಳೆಯಲು ಚಿತ್ತಾಕರ್ಷಕವಾದ ಗ್ರಂಥಗಳನ್ನು ಅವರ ಹತ್ತಿರ ಕುಳಿತು ೫ ಗಂಟೆಯ ವರೆಗೆ ಓದುತ್ತಿದ್ದೆನು. ಜನ ಬರಹೋಗುವುದೂ ಇದ್ದೇ ಇರುತ್ತಿತ್ತು ಮೊದಲು ತಿಪ್ಪೇರುದ್ರಸ್ವಾಮಿಗಳ 'ಕದಳಿ ಕರ್ಪೂರ' ಓದಿದೆ. ಅವರದೇ ಇನ್ನೊಂದು ಪರಿಪೂರ್ಣದೆಡೆಗೆ ಓದಿದೆ. ಇದರಿಂದ ಆ ಹೊತ್ತಿಗೆ ಅಪ್ಪನವರು ನನ್ನ ಬರುವಿಗಾಗಿ ಕಾದಿರುತ್ತಿದ್ದರು. ಈ ಸೇವೆಯಿಂದ ನನಗೂ ಸಂತೋಷ. ಶೃಂಗಾರವಿಲ್ಲದ ಈ ಮಾದರಿಯ ಮನೋಹರ ಗ್ರಂಥಗಳನ್ನು ಒದಗಿಸಿಕೊಂಡು ಓದುತ್ತಿದ್ದನು. ನನ್ನ ಈ ಸೇವೆಯಿಂದ ನೀಲಮ್ಮನವರಿಗೆ ಬಹಳ ಸಮಾಧಾನವಾಗಿತ್ತು. 'ಅಣ್ಣಾ ನೀನು ಸ್ವಲ್ಪ ತಡಮಾಡಿದರೂ ಅಪ್ಪನವರು ಕೇಳುತ್ತಾರೆ. ತಡಮಾಡಬೇಡವಪ್ಪ' ಎಂದಿದ್ದರು ಡಾಕ್ಟರರ ಬಂಧು ಬಳಗದವರಾರೂ ಈ ವಿಷಯಕ್ಕೆ ಲಕ್ಷಿಸಿರಲಿಲ್ಲ. ಈ ಮಧ್ಯ ಅಪ್ಪನವರಿಗೆ ಸಂಬಂಧಿಸಿದ ಒಂದು ಸಂಗತಿಯನ್ನು ಇಲ್ಲಿ ಉಲ್ಲೇಖಿಸದೆ ಇರಲಿಕ್ಕಾಗುವದಿಲ್ಲ.

ಉತ್ತರಾಧಿಕಾರಿ

ಹಿರೇಮಠ ಡಾಕ್ಟರರು ತಮ್ಮ ಮಗನನ್ನು ಬಬಲೇಶ್ವರ ಮಠದ ಉತ್ತರಾಧಿಕಾರಿಯನ್ನಾಗಿ ಮಾಡಲು ಬಯಸಿದ್ದರು. ಅಪಘಾತ ಸಂಭವಿಸುವ ಮೊದಲು ಅವರು ಸ್ನೇಹಿತ ಹಿರಿಯರೊಡನೆ ಬಬಲೇಶ್ವರಕ್ಕೆ ಹೋಗಿ ಶಿಷ್ಟ ರೀತಿಯಿಂದ ಶಾಂತವೀರ ಅಪ್ಪನವರಲ್ಲಿ ತಮ್ಮ ಇಚ್ಛೆಯನ್ನು ನಿವೇದಿಸಿದ್ದರು. ಅಪ್ಪನವರು

'ಇದು ನನ್ನೊಬ್ಬನ ಕೆಲಸವಲ್ಲ ಊರ ಪ್ರಮುಖ ದೈವದವರು ಒಪ್ಪಬೇಕು' ಎಂದಿದ್ದರು. ಡಾಕ್ಟರರಿಗೆ ಬಬಲೇಶ್ವರ ಮಹಾಜನ ಒಪ್ಪಲಿಕ್ಕಿಲ್ಲವೆಂದು ಅನಿಸಿತ್ತೆನೋ ಸುಮ್ಮನಾಗಿದ್ದರು. ಅಪಘಾತದ ನಂತರ ತಮ್ಮಲ್ಲಿ ನಡೆದ ಶ್ರೀಗಳ ಚಿಕಿತ್ಸೆ ಆರೈಕೆ ಇವುಗಳಲ್ಲಿ ಡಾಕ್ಟರರು ಮಹತ್ವದ ಶ್ರಮವಹಿಸಿದ್ದುದು ಅಪ್ಪನವರಿಗೆ ಭಾರವೆನಿಸಿದ್ದತು. ಈ ಸಂದರ್ಭದಲ್ಲಿ ಉತ್ತರಾಧಿಕಾರಿಯ ವಿಷಯ ಡಾಕ್ಟರರ ಬಳಗದಲ್ಲಿ ತಲೆಯೆತ್ತಿತು. ಸ್ವಾಮಿಗಳು ನೋವಿನಿಂದ ಪಾರಾಗಿ ಮೇಲೆ ಎದ್ದಾರೆಂಬ ಖಾತ್ರಿಯು ಯಾರಿಗೂ ಇರಲಿಲ್ಲ.

ಡಾಕ್ಟರ ಬಿ. ಎಮ್. ಪಾಟೀಲರು ಅಪ್ಪನವರ ಹತ್ತಿರ ವಿನಯದಿಂದ "ಈಗ ಉತ್ತರಾಧಿಕಾರಿ ಮರಿಯನ್ನು ಮಾಡಿಕೊಳ್ಳಬಹುದಲ್ಲ. ಹಿರೇಮಠ ಡಾಕ್ಟರರು ತಮ್ಮ ಮಗನನ್ನು ಅರ್ಪಿಸಲು ಸಿದ್ಧರಿದ್ದಾರೆ!" ಎಂದು ಪ್ರಸ್ತಾಪ ಮಾಡಿದರು. ಅಪ್ಪನವರಿಗೆ ಅನಿವಾರ್ಯವೆನಿಸಿತು. ಬಬಲೇಶ್ವರದಿಂದ ಇಪ್ಪತ್ತು ಜನ ಪ್ರಮುಖರ ಹೆಸರು ಹೇಳಿ ಕರೆಯಿಸಿಕೊಂಡರು. ಕೇಳಿದರು. ಶ್ರೀಗಳ ಸ್ಥಿತಿ ನಾಜೂಕಾಗಿರುವಾಗ ಅವರನ್ನು ಇಕ್ಕಟ್ಟಿಗೆ ಹಾಕಲಾಗದುದಕ್ಕೆ ಆ ಪ್ರಮುಖರು ಒಪ್ಪಿಗೆ ಕೊಟ್ಟಾಗಿತ್ತು. ಇದೆಲ್ಲ ಒಳಗೊಳಗೆ ನಡೆದು ನನ್ನಂಥವನಿಗೆ ಯಾಕೆ ಗೊತ್ತಾಗಿರಬೇಕು? ನನಗೆ ತಿಳಿದಿರಲಿಲ್ಲ.

ಒಂದು ದಿನ ಎಂದಿನಂತೆ ೨ ಗಂಟೆಗೆ ಶ್ರೀಗಳ ಸನ್ನಿಧಿಯ ಓದಿಗಾಗಿ ಡಾಕ್ಟರ ಮನೆಗೆ ಹೋದೆನು. ಮನೆಯ ಬಾಗಿಲುಗಳಿಗೆ ಬಾಳೆಯಗಿಡ ತಳಿರು ತೋರಣಗಳು ಶೋಭೆಗೊಂಡಿದ್ದವು. ಒಳಗೆ ಹೊಸಜನ ಅಡ್ಡಾಡುತ್ತಿದ್ದರು ಹಿಂದಿನ ಬಾಗಿಲ ಹತ್ತಿರ ತೆಲಸಂಗ ಶ್ರೀಗಳು ಕಂಡರು. ಅಪ್ಪನವರ ಕೋಣೆಗೆ ಹೋದೆ. ಅಲ್ಲಿ ಬೊಮ್ಮನಳ್ಳಿ ಶ್ರೀಗಳು ಇದ್ದರು. ಇಬ್ಬರಿಗೂ ವಂದಿಸಿದೆ. ಈ ಆಕಸ್ಮಿಕ ವಾತಾವರಣವನ್ನು ಅಚ್ಚರಿಯಿಂದ ನೋಡುತ್ತಿರುವಾಗ ಬೊಮ್ಮನಳ್ಳಿ ಶ್ರೀಗಳು ನನ್ನನ್ನು ನೋಡಿ "ಸ್ವಾಮಿಗಳು ಇಂದು ತಮ್ಮ ಉತ್ತಾರಾಧಿಕಾರಿಯನ್ನು ವಿಧಾನ ಪೂರ್ವಕ ಸ್ವೀಕರಿಸಿದರು. ಕಾರ್ಯಕ್ರಮಕ್ಕೆ ನೀವು ಬಂದೇ ಇಲ್ಲವಲ್ಲ" ಎಂದರು "ನನಗೆ ಗೊತ್ತಿಲ್ಲರಿ" ಎಂದೆನು ಆಗ ಒಳಗಿನಿಂದ ನನ್ನನ್ನು ನೋಡಿದ ಕಡೆಮನಿ ನೀಲಮ್ಮನವರು ಅಲ್ಲಿಗೆ ಬಂದು "ಅಪ್ಪಾ ಅವರ ಕಾರ್ಯವನ್ನು ನಮ್ಮಣ್ಣನನ್ನು ಬಿಟ್ಟೇ ಮಾಡಿದೇವಲ್ಲ" ಎನ್ನುತ್ತ ಒಳಗೆ ಕರೆದೊಯ್ದರು. ಪ್ರಸಾದ ತಿನಿಸು ಕೊಟ್ಟರು. ಸ್ವೀಕರಿಸಿ ಸೇವಿಸಿ ಇತ್ತ ಬಂದು ಉಭಯಸ್ವಾಮಿಗಳೊಡನೆ ಸ್ವಲ್ಪ ಮಾತಾಡಿ

ಮನೆಗೆ ಬಂದೆನು. ಅಂದು ಓದುವದಾಗಲಿಲ್ಲ ಶ್ರೀಗಳೂ ಕೇಳುವದಕ್ಕೆ ದಿನದಂತೆ ಉತ್ಸುಕರಾಗಿರಲಿಲ್ಲ. ಹೊರಬಿದ್ದು ನಾನು ಹಾದಿಗೆ ಬಂದಾಗ ಅಲ್ಲಿ ಇನ್ನೂ ಇದ್ದ ಬಬಲೇಶ್ವರದ ಗೃಹಸ್ಥರಿಬ್ಬರು “ಇದಕ್ಕಾಗಿಯೇ ಸೊಲ್ಲಾಪುರದಿಂದ ಅವಸರವಸರವಾಗಿ ಕರಕೊಂಡ ಬಂದರೆಂದು ತರ್ಕಿಸುತ್ತಿದ್ದರು.

ಶ್ರೀ ಶಾಂತವೀರ ಅಪ್ಪನವರ ದೇಹಸ್ಥಿತಿಯಲ್ಲಿ ಏನೂ ಸುಧಾರಣೆಯಾಗಿರಲಿಲ್ಲ. ಡಾ. ಹಿರೇಮಠ ಅವರ ಪರವಾಗಿ ‘ತಾವೇ ವಟುವಿಗೆ ಪಟ್ಟಾಧಿಕಾರ ಸಮಾರಂಭ ನೆರವೇರಿಸಬೇಕೆಂದು ಶ್ರೀಗಳಿಗೆ ವಿಜ್ಞಾಪಿಸಿಕೊಳ್ಳಲಾಯಿತು.’ ‘ಹೂಂ ಆಗಲಿ’ ಎಂದರು ಶ್ರೀಗಳು! ಅವರ ಅನುಜ್ಞೆಯಂತೆ ಬಬಲೇಶ್ವರದವರು ಕನಿಷ್ಟ ಆಗತ್ಯವಿದಷ್ಟು ತೀವ್ರವಾಗಿ ಸಮಾರಂಭದ ಸಿದ್ಧತೆ ಮಾಡಿದ್ದರು. ವಿಜಾಪುರದಿಂದ ಅವಶ್ಯವಿದ್ದಷ್ಟು ಜನರೊಡನೆ ಸ್ವಾಮಿಗಳನ್ನು ಕರೆಕೊಂಡು ಹೋಗಿ ಪಟ್ಟಾಧಿಕಾರ, ಅಧಿಕಾರ ಹಸ್ತಾಂತರ ಪಲ್ಲಕ್ಕಿ ಉತ್ಸವ (ಕಾವಲಿನಲ್ಲಿ) ನೆರವೇರಿಸಿದರು. ಅಂದೇ ಸಂಜೆಗೆ ಅಪ್ಪನವರನ್ನು ವಿಜಾಪುರಕ್ಕೆ ಕರಕೊಂಡು ಬಂದರು. ನನಗೆ ಯಾರೂ ‘ಬಾ’ ಅಂದಿರಲಿಲ್ಲ. ನಾನಾಗಿಯೇ ಹೋಗಿರಲಿಲ್ಲ.

೨ ನೆಯ ದಿನ ಸ್ವಾಮಿಗಳಿಂದ ಚಿಕ್ಕಸ್ವಾಮಿಗೆ ಆಸ್ತಿಯ ಹಕ್ಕು ಬಿಡುವ ವಿವರ ಕಾಗದ ಮಾಡಿದರು. ಸಬ್ ರಜಿಸ್ಟ್ರಾರರನ್ನು ಮನೆಗೆ ಕರೆಯಿಸಿ ನೋಂದಾಯಿಸಿದರು.

೨೨–೭–೬೩ ಶ್ರಾವಣದ ಮೊದಲನೆಯ ಸೋಮವಾರ ತೆಲಸಂಗದ ಶ್ರೀ ಬಸವಲಿಂಗಸ್ವಾಮಿಗಳಿಂದ ಶಿವಾನುಭವ ಮಂಟಪದಲ್ಲಿ ಬಬಲೇಶ್ವರದ ಶ್ರೀ ಶಾಂತವೀರ ಸ್ವಾಮಿಗಳ ‘ಆಧ್ಯಾತ್ಮ ಜೀವನ’ ಎಂಬ ಪುರಾಣ ಪ್ರವಚನ ಆರಂಭವಾಗುವದೆಂದು ಗೊತ್ತಾಗಿತ್ತು. ಶ್ರೀ ಅಪ್ಪನವರ ಅನುಮೋದನೆ ಕೇಳಿದಾಗ ಅವರು ಒಪ್ಪಿರಲಿಲ್ಲ. ‘ನಾನಿರುವಾಗಲೇ ನನ್ನ ಪುರಾಣವೇ? ನನ್ನ ಪುರಾಣವೇ ನೆಲೆಗೆ ಹತ್ತಿಲ್ಲವಲ್ಲ!’ ಎಂದು ಅಸಮ್ಮತಿಸಿದ್ದರು. ಆದರೂ ಸಂಸ್ಥೆಯ ಪ್ರಮುಖರ, ತೆಲಸಂಗಸ್ವಾಮಿಗಳ ಒತ್ತಾಸೆಯಿಂದ ಆರಂಭವಾಗಿಬಿಟ್ಟಿತ್ತು.

೩೧–೭–೬೩ ಶ್ರೀಗಳವರ ಆಪರೇಶನ್ ಗಾಯ ಮಾಯ್ದಿಲ್ಲ. ಬಾವು ನೋವು ಹೋಗಿಲ್ಲ. ಗಾಯದಿಂದ ಸಣ್ಣಾಗಿ ತಿಳಿಗೀವು ಬರುತ್ತಿತ್ತು. ಇಂದು ಡಾಕ್ಟರರು ಮತ್ತೆ ಎಕ್ಸರೇ ತೆಗೆಯಿಸಿದರು. ಉಕ್ಕಿನ ಕಂಬಿಯ ಮೇಲೆ ಮಾಂಸ ಬೆಳೆದಿಲ್ಲ.

ಪುನಃ ಆಪರೇಶನ್ ಮಾಡುವ ವಿಚಾರ ನಡೆದಿದೆ. ಜನದಟ್ಟಣೆ ಇದ್ದೇ ಇದೆ. ಶ್ರೀಗಳ ಇಚ್ಛೆಯಂತೆ ಓದುವ ನನ್ನ ಸೇವೆಯೂ ನಡೆದಿದೆ.

೧೦-೮-೬೩ ಆಯುರ್ವೇದ ಆರೋಗ್ಯಧಾಮದಲ್ಲಿ ಡಾ|| ಫಣಸಲಕರ ಅವರಿಂದ ಶ್ರೀಗಳ ತೊಡೆಯ ಆಪರೇಶನ್ ಪುನಃ ಆಯಿತು. ಉಕ್ಕಿನ ಕಂಬಿ ಸ್ಕ್ರೂಗಳು ಮಾಂಸ ಬರದಿರುವದಕ್ಕೂ ನೋವಿಗೂ ಕಾರಣವಾಗಿದ್ದವು. ಅದನ್ನು ತೆಗೆದುಬಿಟ್ಟು ಕೊಳೆತೆಗೆದು ಹೊಲಿಗೆ ಹಾಕಿ ಉದ್ದಕ್ಕೆ ಆಧಾರ ಇಟ್ಟು ಕಟ್ಟು ಹಾಕಿದರು. ಆರೋಗ್ಯದಲ್ಲಿಯೇ ಇರಿಸಿ ಉಪಚಾರ ನಡೆಯಿತು. ಅಲ್ಲಿ ೧೨ ದಿನ ಇದ್ದರು. ಮುಂಜಾನೆ ಹಿರೇಮಠ ಡಾ|| ರ ಮನೆಯಿಂದ ಸ್ನಾನ ಮಾಡಿ ಸಾಮಗ್ರಿಯೊಡನೆ ಹೋಗಿ ನೀಲಮ್ಮತಾಯಿ ಅಪ್ಪನವರ ಆರೈಕೆ ಮಾಡುತ್ತಿದ್ದರು. ತೆಲಸಂಗ ಶ್ರೀಗಳೂ ನಾನೂ ಕೆಲಹೊತ್ತು ಅಲ್ಲಿ ಇರುತ್ತಿದ್ದವು. ದರ್ಶನಾರ್ಥಿಗಳೂ ಬರುತ್ತಿದ್ದರು.

೧೭-೮-೬೩ ಶ್ರಾವಣಮಾಸದ ನನ್ನ ವಿಶೇಷ ಪೂಜಾನುಷ್ಠಾನವು ಇಂದು ಮುಕ್ತಾಯಗೊಳಿಸುವದು. ಮನೆಯಲ್ಲಿ ಇಂದು ತೆಲಸಂಗ ಶ್ರೀಗಳವರ ಲಿಂಗಾರ್ಚನೆ ಆಗಬೇಕೆಂದು ಬಿನ್ನಹ ಮಾಡಿದ್ದೆ. ದಯಮಾಡಿಸಿದ್ದರು. ಅಪ್ಪನವರ ಸೇವೆಯಲ್ಲಿದ್ದ ಕಡೆಮನಿ ನೀಲಮ್ಮನವರಿಗೂ ಪ್ರಸಾದಕ್ಕೆ ಆಮಂತ್ರಿಸಲಾಗಿತ್ತು. ಬಂದಿದ್ದರು. ಅಪ್ಪನವರ ಆರೈಕೆಗೆ ಡಾಕ್ಟರರ ಮನೆಯಿಂದ ಸರಬರಾಜ ಆಗುವದರಲ್ಲಿ ಬಂದ ಕೆಲ ತೊಂದರೆ ಹೇಳಿದರು. ಆದರೂ ಅಪ್ಪನವರ ಆದೇಶದಂತೆ ಸುಮ್ಮನೆ ಸಹಿಸಿಕೊಂಡು ಶಾಂತವಾಗಿದ್ದರು. ಶ್ರೀ ಶಾಂತವೀರ ಶ್ರೀಗಳು ಆರೋಗ್ಯಧಾಮದಲ್ಲಿ ಇದ್ದಾರೆ ಆದರೆ ಆರೋಗ್ಯ ಸುಧಾರಿಸಿಲ್ಲ.

೨೨-೮-೬೩ ಶಿವಾನುಭವ ಮಂಟಪದಲ್ಲಿ 'ಶ್ರೀ ಶಾಂತವೀರ ಅಪ್ಪನವರ ಆಧ್ಯಾತ್ಮ ಜೀವನ' ಪುರಾಣದ ಮಂಗಲ ಸಮಾರಂಭ. ಇಂದು ಸಿ. ಸಂಸ್ಥೆಯವರು ತೆಲಸಂಗ ಶ್ರೀಗಳಿಗೆ ಅರ್ಪಿಸುವದಕ್ಕಾಗಿ ಅಭಿನಂದನಾ ಪತ್ರವನ್ನು ತಯಾರಿಸಲು ನನಗೆ ಸೂಚಿಸಿದ್ದರು. ಅದನ್ನು ಶ್ರೀ ಶಾಂತವೀರ ಅಪ್ಪನವರಿಗೆ ತೋರಿಸಿ ಒಪ್ಪಿಗೆ ಪಡೆದಿರಬೇಕೆಂದು ಹೇಳಿದ್ದರು ಅದರಂತೆ ಬರೆದು ಅಪ್ಪನವರ ಹತ್ತಿರ ಓದಿ ತೋರಿಸಿದ್ದೆನು. ಹರ್ಷದಿಂದ ಸಮ್ಮತಿಸಿದ್ದರು. ಸಿ. ಸಂಸ್ಥೆಯವರು ಮುದ್ರಿಸಿದ್ದರು. ಇಂದು ಮಂಗಲ ಸಮಾರಂಭವಲ್ಲಿ ಪ್ರವಚನ ಶ್ರೀಗಳಿಗೆ ಅರ್ಪಿಸಲಾಯಿತು.

ಇಂದು ಶ್ರೀಶಾಂತವೀರ ಅಪ್ಪನವರನ್ನು ಹಿರೇಮಠ ಡಾಕ್ಟರ ಮನೆಗೆ ಕರಕೊಂಡು ಬಂದಿದ್ದರು. ನೋವು ಕಡಿಮೆಯಾಗಿರಲಿಲ್ಲ. ಡಾಕ್ಟರ ಹಿರೇಮಠ ಅವರೇ ಪೂರ್ಣವಾಗಿ ಅವರ ಚಿಕಿತ್ಸೆ ವಹಿಸಿ ನಡೆಸಿದರು. ಬಹುದಿವಸಗಳ ರುಗ್ಣಶಯ್ಯೆ, ಅಸ್ವಾಸ್ಥದಲ್ಲಿಯೇ ಮಠದ ಪಟ್ಟಾಧಿಕಾರ, ಅಧಿಕಾರ ಹಸ್ತಾಂತರ ಮುಂತಾದ ಮಹತ್ವದ ಕಾರ್ಯಕಲಾಪ ೨ನೆಯ ಆಪರೇಷನ್ ಇವೆಲ್ಲವುಗಳಿಂದ ಅಪ್ಪನವರು ಶರೀರದಿಂದ ಹೈರಾಣ–ಹೈರಾಣ ಆಗಿ ಅದು ಅತಿ ಕೃಶ ವಾಗಿತ್ತು. ಆದರೂ ಮನಸ್ಸು ಶಾಂತವಾಗಿತ್ತು. ಮುಂದೆ ಸುಮಾರು ೫೦ ದಿವಸ ಅಲ್ಲಿಯೇ ಉಳಿದರು ಈ ಅವಧಿಯ ಬಹಳ ದಿವಸ ನಾನು ಶ್ರೀಗಳ ಹತ್ತಿರ ಓದುವ ಸೇವೆ ಸಲ್ಲಿಸಿದೆನು. ಅದು ಅವರಿಗೆ ಬೇಕೆನಿಸಿತ್ತು ಅಗತ್ಯವೂ ಆಗಿತ್ತು.

ಹರಳೇಶ್ವರಕ್ಕೆ

೧೧–೧೦–೬೩ ಶ್ರೀಗಳು ಹರಳೇಶ್ವರಕ್ಕೆ ಹೋಗುವ ವಿಚಾರ ಮಾಡಹತ್ತಿದ್ದರು. ೨ನೆಯ ಆಪರೇಶನ್‌ದಿಂದಲೂ ಅಸ್ಥಿಭಂಗದ ಬೆಸುಗೆ ಆಗಲಿಲ್ಲ. ಇನ್ನೊಂದು ಕಾಲಿಗೆ ಹೊಂದಿಸಿ ಹಿಡಿದು ಎತ್ತಿಕೊಂಡು ಹೋಗಿ ಸ್ನಾನಾದಿಗಳನ್ನು ಮಾಡಿಸುತ್ತಿದ್ದರು. ಗಾಯ ಮಾಯುತ್ತ ಬಂದರೂ ಇನ್ನೂ ಹಸಿಕಾಗಿತ್ತು. ಕೈ ಗಾಯ ಪೂರ್ಣ ಮಾಯ್ದಿತ್ತು. ಏಳುವಂತಿರಲಿಲ್ಲ. ಆದರೂ ಅವರ ಆತ್ಮದ ಹರಿವು ಹರಳೇಶ್ವರ ಆಶ್ರಮದತ್ತ ಹೆಚ್ಚಾಗಿತ್ತು. ತಮ್ಮ ನೆಚ್ಚಿನ ಹಿರಿಯ ಭಕ್ತರ ಅನುಮತಿಯನ್ನು ಪಡೆದರು. ಇಂದು ಪರಿಚಾರಕರೊಡನೆ ಹೊರಟರು. ಸ್ವತಃ ಹಿರೇಮಠ ಡಾಕ್ಟರರು ಸ್ವಜನರೊಡನೆ ಜೋಪಾನವಾಗಿ ಅಪ್ಪನವರನ್ನು ಹರಳೇಶ್ವರ ಆಶ್ರಮಕ್ಕೆ ತಲುಪಿಸಿದರು. ಅವರು ಸತತ ನಾಲ್ಕು ತಿಂಗಳು ಅಪ್ಪನವರ ಆರೈಕೆ ಮಾಡಿದ್ದು ಶ್ಲಾಘನೀಯವಾಗಿತ್ತು.

ಆ ಭಾಗದ ಗ್ರಾಮಾಂತರ ಜನರಿಗೆ ಮತ್ತೆ ಬೆಳಕ ಕಂಡಂತೆ ಆಗಿತ್ತು. ಕೆಲದಿನ ಆಶ್ರಮದಲ್ಲಿ ದರ್ಶನಕ್ಕೆ ಬರುವವರ ಜಾತ್ರೆಯೇ ನೆರೆಯುತ್ತಲಿತ್ತು

ಸೂಕ್ತಿ ಸಂಗ್ರಹ

ಶ್ರೀ ಶಾಂತವೀರ ಮಹಾಸ್ವಾಮಿಗಳೊಡನೆ ನಡೆದ ಸದ್ಭಾವ ಸಲ್ಲಾಪಗಳಲ್ಲಿ ಅವರು ನನ್ನ ಚಿತ್ರದಲ್ಲಿ ಮೂಡಿಸಿದ ಈ ವರೆಗಿನ ಸೂಕ್ತಿಗಳಲ್ಲಿ ಕೆಲವನ್ನು ಇಲ್ಲಿ ಸ್ಮರಿಸುತ್ತೇನೆ.

ಪರಶಿವನ ಸಾಕಾರತೆಯನ್ನು ಮಾನವರೂಪಕ್ಕಿಂತ ಲಿಂಗರೂಪವು ಹೆಚ್ಚು ವ್ಯಾಪಕವಾಗಿ ಅಭಿವ್ಯಕ್ತಗೊಳಿಸುತ್ತದೆ.

ಮುಕ್ತಿಗೆ (ಶಿವಸಾಮರಸ್ಯಕ್ಕೆ) ಕ್ರಿಯಾ, ಜ್ಞಾನ, ವೈರಾಗ್ಯಗಳು ಸಾಧಕನಿಗೆ ಸಾಧನೆಗಳಾದರೂ ಭಕ್ತಿಯು ಅವುಗಳ ಪ್ರಾಣ (ಚೇತನ)ವಾಗಿರುತ್ತದೆ. ಲಿಂಗಾಯತರು ಇದನ್ನು ಪಂಚಮ ಪುರುಷಾರ್ಥ ಮಾಡಿಕೊಂಡರು ಕಾರಣ ಇದೇ!

ಮಠಗಳು ಸ್ವಾಮಿಗಳು ಸಂಬಂಧಿಕರ ಪೋಷಣೆಯ ಸಾಧನಗಳಾಗಿರ ಬಾರದು.

ಕರ್ತವ್ಯನಿಷ್ಠೆ ಶ್ರೇಷ್ಠ ಸದ್ಗುಣ! ಇದರಲ್ಲಿ ಮಾನವನಿಗೆ ಗೌರವ ಶಾಂತಿ ಸಮಾಧಾನವೂ ಇದೆ.

ಅನ್ಯರ ಯೋಗಕ್ಷೇಮ ಚಿಂತಿಸುವದರಿಂದ ತನ್ನ ಪಾಪ ಸಹಿಸುವದಕ್ಕೆ ಶಕ್ತನಾಗುತ್ತಾನೆ.

ಸ್ತುತಿಗೆ ಬಾಯಿಬಿಡಬಾರದು. ನಿಂದೆ ನಮ್ಮನ್ನು ಉನ್ನತಿಗೇರಿಸುವದು. ಅಂತೆಯೇ 'ಹೊಗಳಿದವರೆನ್ನ ಹೊನ್ನಶೂಲದಲಿಕ್ಕಿದರು. ನಿಂದಿಸಿದವರನ್ನು ಎನ್ನ ಬಂಧುಗಳೆಂಬೆ!' ಎಂದರು ಬಸವಣ್ಣ.

ವಚನಗಳು ಶರಣರ ಅನುಭಾವದ ಅಭಿವ್ಯಕ್ತಿಗಳು.

ಆಂತರಿಕ ಅಸುರೀ ಶಕ್ತಿಗಳು ಯಾರನ್ನು ಆವರಿಸದೆ ಬಿಡವು. ಅವುಗಳನ್ನು ಎದುರಿಸುವ ಪ್ರಸಂಗದಿಂದ ಯಾರೂ ಹೊರತಾಗಿಲ್ಲ.

ಈಶನನ್ನು ಬಿಟ್ಟೇನಿಲ್ಲವೆಂದಾಗ ಇನ್ನೊಬ್ಬರನ್ನು ದ್ವೇಷಿಸುವವನು ತನ್ನ ಆತ್ಮವನ್ನೇ ವಂಚಿಸಿಕೊಂಡಂತೆ ಪಾಪಮಯ.

ಶಿವಶಕ್ತಿಗಳೆಂಬ ಎರಡು ಮೂಲ ತತ್ವಗಳೇ ಸೃಷ್ಟಿ ರಚನೆಗೂ, ವಿಶ್ವದ ಪ್ರಪಂಚಕ್ಕೂ ತಳಹದಿಯಾಗಿವೆ. ಇವೆರಡೂ ದೀಪ-ದೀಪ್ತಿಯಂತೆ ಸೂರ್ಯ ಪ್ರಕಾಶದಂತೆ, ಕುಸುಮ ಗಂಧದಂತೆ, ಶಬ್ದ-ಅರ್ಥಗಳಂತೆ ಅವಿನಾಭಾವ ಸಂಬಂಧ ದಿಂದ ಇವೆ.

ವೀರಶೈವವು ಶೈವವನ್ನು ಮಥಿಸಿಸಿ (ಪರಿಸ್ಕರಿಸಿ) ಬಂದ ನವನೀತದಂತಿದೆ. ಇದು ವೇದಾಂತದ (ಉಪನಿಷತ್ತುಗಳು) ತತ್ವಜ್ಞಾನವನ್ನು ಜೈನ-ಬೌದ್ಧರ ಅಹಿಂಸೆಯನ್ನು ದ್ರಾವಿಡರ ಭಕ್ತಿಯನ್ನೂ ಒಳಗೊಂಡು ಪೂರ್ಣತ್ವ ಪಡೆದ

ಮತವಾಗಿದೆ. ಸಾಕಷ್ಟು ಪ್ರಚಾರ ದೊರೆತ್ತಿದ್ದರೆ ವಿಶ್ವಧರ್ಮವೆನಿಸಿ ಮೆರೆಯ ಬಹುದಾಗಿದ್ದಿತು.

ಶೈವದಿಂದ ವೀರಶೈವದಲ್ಲಿ ಉಳಿದುಬಂದ ಕೆಲ ನ್ಯೂನತೆಗಳನ್ನು ಶರಣರು ತೊಳೆದು ಇದನ್ನು ಬೆಳಗಿದರು. ಆದರೆ ರಾಜಾಶ್ರಯದಲ್ಲಿ ಪೋಷಣೆ ಹೊಂದು ತ್ತಿದ್ದ ವೈದಿಕರ ಪ್ರಬಲ ವಿರೋಧ ಎದುರಾದ್ದರಿಂದ ಆ ಕೆಲಸ ಪೂರ್ಣವಾಗಲಿಲ್ಲ.

ಜಗತ್ತಿನ ಎಲ್ಲ ಪ್ರಮುಖ ಮತಗಳಲ್ಲಿಯ ಒಳ್ಳೆಯ ಅಂಶಗಳನ್ನೆಲ್ಲ ವೀರಶೈವವು ಒಳಗೊಂಡಿದೆ. ಅದರಿಂದಲೇ ವಿಶ್ವಧರ್ಮವೆನಿಸುವ ಅರ್ಹತೆ ಹೊಂದಿದೆ.

ಲಿಂಗಾಯತ ಮತದ ಹಿರಿಮೆಯನ್ನು ಲಿಂಗಾಯತ ವಿದ್ವಾಂಸರು ಭಾಷಣ ಗಳಲ್ಲಿ ಗ್ರಂಥಗಳಲ್ಲಿ ಬಲವಾಗಿ ಪ್ರತಿಪಾದಿಸುವರಾದರೂ ಸಾಧನ ಮಾರ್ಗವಾದ ಕ್ರಿಯಾಚಾರದಲ್ಲಿ ಅವರಿಂದಲೇ ಶಿಥಿಲತೆಯುಂಟಾಗುತ್ತಿದೆ.

ಲಿಂಗಾಯತರ ಅಭಿವೃದ್ಧಿಗೆ ಒಳಜಾತಿ-ಒಳಪಂಗಡಗಳ ಸಂಕುಚಿತತ್ವ ಆತಂಕಕಾರಿಯೆಂದು ಎಲ್ಲರೂ ಒಪ್ಪುತ್ತಾರೆ. ಆದರೆ ಒಳಪಂಗಡ ಬೇಲಿಯನ್ನು ಹಿರಿದು ಹೊರಬಂದು ಮದುವೆ ಮಾಡಲು ಹಿಂಜರಿಯುತ್ತಾರೆ. ತಾರತಮ್ಯದ ಮುಸುಕು ಹೊದ್ದಿರುತ್ತಾರೆ. ಅದರ ವಿಕೃತ ಭಾವವನ್ನು ಅನುಭವಿಸುತ್ತಾರೆ. (ಇದನ್ನು ಹೇಳುವಾಗ ಶ್ರೀಗಳು ತಮ್ಮ ಒಂದು ಸಂದರ್ಭವನ್ನು ಪ್ರಸ್ತಾಪಿಸಿದ್ದರು. ಅವರು ಬಬಲೇಶ್ವರ ಹೊರಗಿನ ಮಠದಲ್ಲಿ ಇರುವಾಗ ಒಮ್ಮೆ ಗಣ್ಯಭಕ್ತ ಅತಿಥಿಗಳು ಬಂದಿದ್ದರು. ಅವರು ಊಟಮಾಡಿದ ತಾಟುಗಳನ್ನು–ಇಬ್ಬರೂ ಸೇವಕರು ಜಾತಿ ಜಂಗಮರಾದುದರಿಂದ ಅವರು ತೆಗೆದಿರಲಿಲ್ಲ. ಬಹಳ ಹೊತ್ತಿಗೆ ಅಪ್ಪಗಳ ಕಣ್ಣಿಗೆ ಬಿದ್ದಾಗ ತಾವೇ ತೆಗೆಯಹತ್ತಿದರು. ಅದನ್ನು ಕಂಡ ಸೇವಕರು ಓಡಿಬಂದರು. (ಬೇಡ ನೀವು ಜಂಗಮರು! ಭಕ್ತರು ಕೀಳು! ಹೇಗೆ ಹಿಡಿದೀರಿ? ಎಂದು ಝುಂಕಿಸಿ ನುಡಿದು ಬುದ್ಧೀ ಹೇಳಿದರಂತೆ ಅಲ್ಲಿಯ ಮಟ್ಟಿಗೆ ಮುಂದೆ ಹೀಗೆ ನಡೆದಿರಲಿಲ್ಲ.)

ಗುರು-ಜಂಗಮ ಮೂರ್ತಿಗಳು ಏಕಕಾಲಕ್ಕೆ ಭಕ್ತನ ಮನೆಗೆ ದಯಮಾಡಿ ಸಿದ್ದರೆ, ಗುರು ಮನೆಯೊಡೆಯನಾಗಿಯೂ ಜಂಗಮ ಮಾನ್ಯ ಅತಿಥಿಯಾಗಿಯೂ ಪರಿಣಮಿಸುವದು. ಆಗ ಜಂಗಮದ ತೀರ್ಥಪ್ರಸಾದ ಪಡೆಯಬೇಕು. (ಅಪ್ಪನವರ ಈ ವಿಚಾರವನ್ನು ಗುರು–ವಿರಕ್ತ ಕಲಹಪ್ರಿಯರಾದವರು ಒಪ್ಪಲಿಕ್ಕಿಲ್ಲ.

ಶಾಂತವೀರ ಅಪ್ಪನವರಲ್ಲಿ ಗುರು ಜಂಗಮರಲ್ಲಿ ಕ್ರಿಯಾಭೇದವಲ್ಲದೆ, ಸ್ವರೂಪದಲ್ಲಿ ಒಂದೇ ಎಂದು ಭಾವಿಸುವ ಔದಾರ್ಯವಿತ್ತು. ಅವರು ಹರಳೇಶ್ವರದಲ್ಲಿ ಕಟ್ಟಿದ ಮೊದಲನೆಯ ಗುಂಡಕ್ಕೆ ಬಸವತೀರ್ಥವೆಂದೂ,ಕೆಲವರ್ಷಗಳ ನಂತರ ಮತ್ತೊಂದಕ್ಕೆ ಕುಮಾರ ತೀರ್ಥವೆಂದೂ, ನಾಮಕರಣ ಮಾಡಿದ್ದು ಇದಕ್ಕೆ ನಿದರ್ಶನ ವಾಗಿತ್ತು.)

ಹಿಂದೆ ಬ್ರಾಹ್ಮಣ–ವೀರಶೈವ–ಜೈನರಲ್ಲಿ ಅನ್ನೋದಕ ವ್ಯವಹಾರವಿತ್ತು. ಮುಂದೆ ಅದು ನಿಂತು ಹೋಗಿದೆ. ಶರಣರ ಆಂದೋಲನದ ಪೂರ್ವದಲ್ಲಿ ವೀರಶೈವ ಮತವು ವೈಯಕ್ತಿಕವಾಗಿತ್ತು. ಕೌಟುಂಬಿಕ ಹಾಗೂ ಸಾಮಾಜಿಕ ಧರ್ಮವಾಗಿರಲಿಲ್ಲ.

ಮತ ಮತಗಳಲ್ಲೆಲ್ಲ ದೇವರ ಅಸ್ತಿತ್ವದ ಬಗೆಗೆ ಏಕಾಭಿಪ್ರಾಯವಿದೆ.

ಆಸುರೀ ಶಕ್ತಿ ಉದ್ರೇಕಗೊಂಡಾಗ ದೈವೀ ಶಕ್ತಿಯ ಉದಯವೂ ಅಲ್ಲಿಯೇ ಇರುತ್ತದೆ.

ಉಪನಿಷತ್ತುಗಳಿಗೂ ವಚನಗಳಿಗೂ ಹೋಲಿಕೆ ಇರಬಹುದು. ಆದರೆ ವಚನಗಳಲ್ಲಿ ಹೆಚ್ಚಿನ ವಿಚಾರಗಳಿವೆ.

ಆಸ್ತಿ ಇದ್ದ ಮಠಗಳು ಮಾತ್ರ ಉಳಿದಿವೆ. ಅವುಗಳಿಗೆ ಸ್ವಾಮಿಗಳಾಗಲು ಮುಂದೆ ಬರುತ್ತಾರೆ. (ಇದನ್ನು ಹೇಳಿದಾಗ 'ಯಾಕರಿ ಅಪ್ಪಾ' ಎಂದು ಕೇಳಿದೆ. ಅವರು ನಕ್ಕರು ನಾನೂ ನಕ್ಕೆನು ಇಬ್ಬರ ನಗೆಗಳಲ್ಲಿಯೇ ಉತ್ತರವಿತ್ತು).

ಲಿಂಗವಂತರ ನಿಜಾಚಾರವು ಕುಂದುತ್ತ ಬಂದುದಕ್ಕೆ ಶ್ರೀಮಂತ ವರ್ಗವೇ ಬಹುಮಟ್ಟಿಗೆ ಪರೋಕ್ಷವಾಗಿ ಕಾರಣವಾಗಿದೆ. ಸಂಪತ್ತುಳ್ಳ ಅವರು ವಿಷಯಲಂಪಟ ರಾಗುತ್ತಾರೆ. ಅದರ ಅತಿರೇಕವಾದಾಗ ದುಶ್ಚಟ, ದುರ್ವ್ಯಸನಗಳಿಗೆ ಈಡಾಗು ತ್ತಾರೆ. ಅವರ ಡಾಂಭಿಕ ಭಕ್ತಿಯ ಬಿನ್ನಹಕ್ಕೆ ಸ್ವಾಮಿಗಳು ಅವರ ಮನೆಗೆ ದಯಮಾಡಿಸುತ್ತಾರೆ. ಅವರನ್ನು ಹೊಗಳುತ್ತಾರೆ. ಅವರ ಪ್ರತಿಷ್ಠೆ ಬೆಳೆಯಲು ನೆರವಾಗುತ್ತಾರೆ. ಅವರ ದುಡ್ಡಿನ ದೊಡ್ಡತನಕ್ಕೆ ಗೌರವ ಕೊಡುವ ಸಾಮಾನ್ಯರೂ ದುರ್ಬಲರೂ ಸದಾಚಾರ ಪಾಲಿಸುವದು ಸುಲಭವಲ್ಲ.

'ಎಲ್ಲ ಶ್ರೀಮಂತರೂ ಹೀಗಿರಲಿಕ್ಕಿಲ್ಲ ಅಪ್ಪಾ!' ಎಂದಿದ್ದೆ.

'ಇಲ್ಲ. ಬಹು ಜನರು ಹಾಗೆ! ಎಂದಿದ್ದರು.

ಆಗ ಶ್ರೀಗಳವರು ಬಹಳ ದಿವಸಗಳ ಹಿಂದೆ ತಾವು ಕೇಳಿದ್ದೆಂದು ವಿನೋದ

ಪರವೂ ಆಗಿರುವ ಒಂದು ಘಟನೆಯನ್ನು ನೆನಪು ಮಾಡಿಕೊಂಡು ಹೇಳಿದರು ಅದು ಹೀಗಿದೆ.

ದೊಡ್ಡ ಸಿರಿವಂತರ ಮನೆ. ಒಬ್ಬನೇ ಇದ್ದ ಗಂಡುಮಗ ತರುಣನು ಹುಲಿಯಂತೆ ಬೆಳೆದಿದ್ದನು. ದುಸ್ಸಂಗದ ಪ್ರೇರಣೆಯಿಂದ ವೇಶ್ಯಾಸಂಗಿಯಾಗಿದ್ದನು. ಆ ಪುಣ್ಯಾಂಗನೆ ಚೆಲುವೆ ಚದುರೆ ಸಮವಯಸ್ಕಳು! ಅವನ ಮನಸ್ಸನ್ನು ಪೂರ್ಣವಾಗಿ ಸೆರೆ ಹಿಡಿದಿದ್ದಳು. ಅತಿ ಮೋಹದ ಈ ಮೂರ್ಖ ತನ್ನ ಮದುವೆಯಾದರೂ, ಮದುವೆಯ ಹೆಂಡತಿಗೆ ಈ ಪ್ರೀತಿಯಲ್ಲಿ ಪಾಲ ನೀಡುವದಿಲ್ಲವೆಂದು ಆಣೆ ಮಾಡಿದ್ದನು. ಅವಳಿಗೆ ಭಾಷೆ ಕೊಟ್ಟಿದ್ದನು.

ಅವನ ಮದುವೆ ಅದ್ದೂರಿಯಿಂದ ಜರುಗಿತು ತಂದೆ ತಾಯಿಗಳಿಗೆ ಹಿಗ್ಗು! ಮನೆತುಂಬಿಸಿಕೊಂಡರು ಮುದ್ದಾದ ಸೊಸೆ ಬಂದು ಮನೆ ಬೆಳಗಿದಳು. ಆದರೆ ಗಂಡ ರಾತ್ರಿ ಉಂಡಕೂಡಲೇ ವೇಶ್ಯೆಯ ಮನೆ ಸೇರುತ್ತಿದ್ದನು. ಮನೆಯಲ್ಲಿದ್ದರೂ ಸತಿಯಸಂಗವಿಲ್ಲ. ಆರು ತಿಂಗಳಾದರೂ ಈ ಸ್ಥಿತಿ ಬದಲಾಗಲಿಲ್ಲ. ತರುಣಿಯು ಕೊರಗಿದಳು. ಅತ್ತೆ ಮಾವಂದಿರು ಮರುಗಿದರು. ಆಕೆ ತವರಿಗೆ ಹೋಗಿ ತಾಯಿ ತಂದೆಗಳಿಗೆ ಮೊರೆಯಿಟ್ಟಳು. ಅವರು ಶೋಕಿಸಿದರಾದರೂ ದೈವದ ಹೂಲಿ ಹೇಳಿ ಸುಮ್ಮನಾದರು. ಈ ದುರ್ದೈವಿ ತಾನೇ ಧೈರ್ಯತಾಳಿದಳು. ತನ್ನ ಮನೆಗೆ ಬಂದು ಇದನ್ನು ತಿದ್ದಿ ತೀರಿಸುವರಾರು? ಅಸೂಯಾಪರರಿಗಂತೂ ಮೋಜಿನ ವಿಷಯವಾಗಿತ್ತು. ಆಕೆ ದಿಟ್ಟತನದಿಂದ ಅತ್ತೆ ಮಾವಂದಿರ ಮುಂದೆ ಬಂದಳು. ನನ್ನ ಪತಿಯನ್ನು ನನ್ನ ವಶಕ್ಕೆ ಕೊಡಿಸುವದು ನಿಮ್ಮಿಂದ ಆಗದೇ? ಎಂದು ಕೇಳಿದಳು, 'ಏನು ಮಾಡೋಣ ಮಗುವೇ? ನಮ್ಮ ಕೈ ಮೀರಿದೆ' ಎಂದು ಹಣೆಗೆ ಕೈಯಿಕ್ಕಿದರು.

"ಹಾಗಾದರೆ ಇದರ ಪರಿಹಾರಕ್ಕೆ ನಾನು ಯಾವ ಉಪಾಯ ಕೈಕೊಂಡರೂ ನಿಮ್ಮ ಸಮ್ಮತಿ ಇದೆಯೇ?" ಎಂದು ಕೇಳಿದಳು.

'ಹೇಗಾದರೂ ಮಗ ಮನೆಗೆ ಹತ್ತಿದರೆ ಸಾಕು' ಎಂದಳು ತಾಯಿ!

ಅವರ ಮಗಳೊಬ್ಬಳು ನೆರೆಯೂರಲ್ಲಿ ಪತಿಯ ಮನೆಯಲ್ಲಿದ್ದಳು. ಅಣ್ಣನ ನಡತೆಗೆ ಅವಳೂ ವ್ಯಥೆಪಟ್ಟಿದ್ದಳು. ಸೊಸೆಯು ನಾಲ್ಕು ದಿನ ಆ ನಾದಿನಿಯ ಮನೆಯಲ್ಲಿ ಇದ್ದು ಬರುವೆನೆಂದು ತಿಳಿಸಿ ಅಲ್ಲಿಗೆ ಹೋದಳು. ಅತ್ತಿಗೆಯನ್ನು ಆಲಿಂಗಿಸಿ ದುಃಖಿಸಿದಳು ಆ ತಂಗಿ, ಅವರಿಬ್ಬರನ್ನು ಸಾಂತ್ವನಗೊಳಿಸಲು

ಯತ್ನಿಸಿದರು ಆ ಮನೆಯ ಜನ. ಅವರಿಬ್ಬರು ಎರಡು ದಿನ ಯೋಚಿಸಿ ಯೋಚಿಸಿ ಒಂದು ಆಟವನ್ನು ರೂಪಿಸಿದರು. 'ಆಸೆಯನು ಕಂಡು ಮನೆಯಾಕೆ ಯನು ಮರೆತರೆ ಹಾಕಿದಾ ವುಂಕಿ ಹರಿದಂತೆ ಮನೆಯೊಳಿರುವಾಕೆಯೋ ಕೆಡಳೆ?' ಎಂಬ ಸರ್ವಜ್ಞನ ಉಕ್ತಿಯನ್ನು ನಿದರ್ಶಿಸುವಂತಿತ್ತು ಅವರ ನಾಟಕ!

ಇತ್ತ ಆ ಸಿರಿವಂತ ತರುಣಮಣಿ ಒಂದು ಬೇಗಿನ ಹೊತ್ತಿನಲ್ಲಿ ಅಗಸಿಯ ಹತ್ತಿರ ಕಟ್ಟೆಯ ಮೇಲೆ ಹಿರಿಕಿರಿ ಜನರ ನಡುವೆ ವಿರಾಜಮಾನನಾಗಿ ಕುಳಿತಿದ್ದನು. ಆಗ ಊರಿಂದ ಬರುತ್ತಿದ್ದ ಅವನ ಹೆಂಡತಿ ಸ್ವಲ್ಪ ಅಂತರದ ಮೇಲೆ ಹಾಯ್ದು ಮನೆಗೆ ನಡೆದಿದ್ದಳು. ಆಕೆ ಒಬ್ಬ ಸುಂದರ ಪ್ರುರುಷನ ಕೈ ಹಿಡಿದುಕೊಂಡು ಬೆಡಗಿನಿಂದ ನಡೆದಿದ್ದಳು. ಗಂಡ ಕಂಡ! ಎಲಾ ಇವಳ!! ಎಂದು ಎದ್ದು ನಿಂತ! ಜನರೂ ಆ ಕಡೆ ನೋಡಿ ದಿಗಿಲುಗೊಂಡರು. ಕಾಣಬಾರದುದನ್ನು ಕಂಡರು. ಗಂಡ ರೋಷಗೊಂಡು ಕಟ್ಟೆಯಿಂದ ಹಾರಿದ! ಸತಿ ಪ್ರಿಯಕರನೊಡನೆ ಓಡಿ ಹೋಗಿ ಮನೆ ಹೊಕ್ಕಳು. ಅವರಿಬ್ಬರು ಒಂದು ಕೋಣೆಯನ್ನು ಸೇರಿ ಬಾಗಿಲು ಹಾಕಿಕೊಂಡರು.

ರಭಸದಿಂದ ಬಂದ ಗಂಡ ಕದ ನೂಕಿದ. ಒಳ ಚಿಲಕ ಹಾಕಿತ್ತು. ಕದ ಭದ್ರವಾಗಿದ್ದವು. ಕೊಡಲಿ ತಕ್ಕೊಂಡು ಕದಕೂಡಿಯತೊಡಗಿದನು. ಬೆನ್ನ ಹಿಂದೆ ಬಂದ ಮಂದಿ ಮನೆ ತುಂಬಿದ್ದರು. ಒಬ್ಬ ಬುದ್ಧಿವಂತ ಹಿರಿಯ ಮುಂದೆ ಬಂದು ಅವನನ್ನು ತಡೆದು 'ತಮ್ಮಾ ಸಿಟ್ಟಿನ ಕೈಯಲ್ಲಿ ಬುದ್ಧೀ ಕೊಟ್ಟರೆ ಅನೇಕ ಅನಾಹುತಗಳು ಉಂಟಾಗಬಹುದು. ನಾವೆಲ್ಲ ಈಗ ನೋಡಿದ್ದೇ ಅದೆ. ಅದರಲ್ಲಿ ಸೌಮ್ಯವಾದ ಹಾದಿಯಿಂದ ಮನೆಯ ಮಾನ ಕಾಯೋಣ' ಎಂದು ಅವನನ್ನು ಹಿಂದೆ ಸರಿಸಿ ಮುಂದೆ ಬಂದನು ಎಂದನು.

"ತಂಗೀ"

"ಯಾಕರೀ ಕಾಕಾ?"

"ಏನವ್ವಾ ಇದು?"

"ಏನಾಯಿತರಿ? ಗಂಡ ಮಾಡಿದ್ದು ತಪ್ಪಲ್ಲ; ಅದನ್ನೇ ಹೆಂಡತಿ ಮಾಡಿದರೆ ಕೋಲಾಹಲ ಅಲ್ಲವೇ?"

"ನಿನ್ನ ಮಾತಿನಲ್ಲಿ ತಪ್ಪಿಲ್ಲಮ್ಮಾ ನಿನ್ನ ಇಚ್ಛೆಯಂತೆ ಇರುವೆಯಂತೆ, ಬಾಗಿಲ ತೆಗೆಯಿರಿ."

"ಅವರ ಕೈಯೊಳಗಿನ ಕೊಡಲಿಯಿಂದ ಅನಾಹುತವಾದರೆ?"

"ಹಾಗೆ ಆಗಗೊಡುವುದಿಲ್ಲ"

"ಹಾಗಾದರೆ ಅವರನ್ನು ಕಂಭಕ್ಕೆ ಕಟ್ಟಿರಿ, ನನ್ನ ಪ್ರಿಯಕರನು ಸುರಕ್ಷಿತವಾಗಿ ಪಾರಾಗಿ ಹೋಗಲಿ. ವಿಶ್ವಾಸದಿಂದ ಹೇಳಿರಿ."

"ಹಾಗೆಯೇ ಆಗಲಿ ಇದು ನನ್ನ ವಚನ" ಎಂದು ಆ ಯಜಮಾನ ಸೂಚಿಸಿದಂತೆ ನಾಲ್ವರು ಗಂಡನ ಕೈಯಲ್ಲಿಯ ಕೊಡಲಿಯನ್ನು ತೆಗೆಯಿಸಿ ಅವನನ್ನು ಗಟ್ಟಿಯಾಗಿ ಹಿಡಿದುಕೊಂಡರು. ಬಾಗಿಲು ತೆಗೆಯಿತು.

ಮನೆಯ ಮಗಳು ಸೀರೆ ಉಟ್ಟುಕೊಂಡು, ಪುರುಷ ವೇಷದ ಬಟ್ಟೆಗಳನ್ನು ಕೈಯಲ್ಲಿ ಹಿಡಿದುಕೊಂಡು ಹೊರಬಂದಳು. ಆಕೆಯ ಹಿಂದೆ ಅತ್ತಿಗೆ! ಇಬ್ಬರೂ ಮುಂದೆ ಬಂದು ನಿಂತುದನ್ನು ಕಂಡು ಜನರು ಅವಕ್ಕಾದರು. 'ಹುಯ್ಯ' ಎಂದು ಕೇಕೆ ಹಾಕಿದರು.

ಅಷ್ಟರಲ್ಲಿ ಅಲ್ಲಿಗೆ ಬಂದಿದ್ದ ವೇಶ್ಯೆ ಅವರಿಬ್ಬರಿಗೆ ನಮಸ್ಕಾರ ಮಾಡಿ ನಾದಿನಿಯನ್ನು ಕುರಿತು 'ಅಮ್ಮಾ ಇಂದಿನಿಂದ ನಿಮ್ಮ ಅಣ್ಣನಿಗೆ ನಾನೂ ಒಬ್ಬ ತಂಗಿ ನನ್ನನ್ನು ಕ್ಷಮಿಸಿರಿ!' ಎಂದು ತರುಣನ ಕಡೆಗೆ ತಿರುಗಿ 'ಅಣ್ಣಾ ನಿನ್ನ ಹೆಂಡತಿಯೊಡನೆ ಸುಖವಾಗಿ ಬಾಳು. ದೇವರು ಒಳ್ಳೆಯದು ಮಾಡಲಿ' ಎಂದು ಮಂದಿಯೊಳಗಿಂದ ಸರಸರನೆ ನಡೆದು ಹೋದಳು.

ತರುಣನ ಕಣ್ಣಿನಿಂದ ನೀರು ಇಳಿಯುತ್ತಿದ್ದವು. ಮೆಲ್ಲನೆ ಹೆಂಡತಿಯ ಹತ್ತಿರ ಬಂದು ಕೈ ಹಿಡಿದನು. ಕಂಠ ಬಿಗಿದು ನಿಂತಿದ್ದ ತಂದೆ ತಾಯಿಗಳನ್ನು ಇಬ್ಬರೂ ವಂದಿಸಿದರು. ಜನರು ಮೌನವಾಗಿ ನೋಡುತ್ತಿದ್ದರು. ತಂಗಿ ಅಣ್ಣ ಅತ್ತಿಗೆಯರನ್ನು ಕೂಡ್ರಿಸಿ ಆರತಿ ಮಾಡಿದಳು. ಎಲ್ಲರಿಗೂ ಸಂತೋಷವೇ ಸಂತೋಷ! ಎರಡು ಹೃದಯಗಳು ಹೊಂದಿದ ಇಂದು ಮತ್ತೊಂದು ಮದುವೆ. ಸತಿ ಪತಿವ್ರತೆಯಾಗಿರಬೇಕು; ಪತಿ ಪತ್ನೀ ವ್ರತನಾಗಿರಬೇಡವೇ?

ಈ ಘಟನೆ ದಿಟವಿರಲಿ ಸಟೆಯಿರಲಿ! ಬಹುಜನ ಶ್ರೀಮಂತ ತರುಣರು ಇಂತಹ ವಿಷಯಾಂಧರಾಗಿರುವದು ನಿಜವೇ ಇದೆ ಎಂದಿದ್ದರು ಅಪ್ಪನವರು. ಸಮಾಜದಲ್ಲಿಯ ತಮ ರಜ ಸತ್ವ ಗುಣಗಳ ರೂಪಕವಾಗಿರುವ ಈ ಘಟನೆಯನ್ನು ಹೇಳಿ ಕೇಳಿದವರ ಮನಸ್ಸನ್ನು ತಿಳಿಗೊಳಿಸಿದ್ದರು.

* * * *

ಇಂದು (೨೪–೧೦–೬೩) ಹರಳೇಶ್ವರಕ್ಕೆ ಹೋಗಿ ಶ್ರೀ ಶಾಂತವೀರ ಅಪ್ಪನವರ ಆರೋಗ್ಯ ನೋಡಿಕೊಂಡು ೨ ದಿನ ಆಶ್ರಮದಲ್ಲಿದ್ದು (ದಿ. ೨೭) ವಿಜಯದಶಮಿ ನಮನಗಳನ್ನು ಗುರುಪಾದಕ್ಕೆ ಅರ್ಪಿಸಿ ಬರುವ ಯೋಜನೆ ಉಂಟಾಯಿತು. ಮೇಲೆ ಕೆಲವು ಪುಟಗಳಲ್ಲಿ ಬರೆದ ಅಪ್ಪನವರ ವಿಶಿಷ್ಟವಾಣಿಯ ಅಮೃತಬಿಂದುಗಳ ಸವಿ ಸ್ಮರಿಸುತ್ತ ಅಲ್ಲಿಗೆ ಪ್ರಯಾಣಿಸಿದೆ. ಅಪ್ಪನವರು ಸೊಗಸಿನ ವಾತಾವರಣದಲ್ಲಿ, ಬರುವ ಭಕ್ತರ ಹಿತಚಿಂತನದಲ್ಲಿ ಆತ್ಮಾನುಸಂಧಾನ ದಲ್ಲಿ ಮನವಿರಿಸಿ ಉಲ್ಲಸಿತರಾಗಿದ್ದಾರೆ. ಅವ್ವ ನೀಲವ್ವನವರ ನೇತೃತ್ವದಲ್ಲಿ ತರುಣ ಸೇವಕರಿಂದ ಉಪಚಾರ ಸರಿಯಾಗಿ ನಡೆದಿದೆ. ಶ್ರೀಗಳು ಈಗ ಹಾಸಿಗೆಯ ಮೇಲೆ ತಾವಾಗಿಯೇ ಎದ್ದುಕೂಡ್ರುತ್ತಾರೆ. ಗಾಯ ಮಾಯ್ದಿತ್ತು. ಆದರೆ ಭಂಗವಾದ ಅಸ್ಥಿಯು ಬೆಸುಗೆ ಆಗಿರಲೇ ಇಲ್ಲ. ಅಲ್ಲೊಂದು ಬಿರುಸು ಗಂಟಾದಂತೆ ಆಗಿತು ಅವರು ನಡೆದಾಡುವದು ಅಪಘಾತವಾದ ದಿನ ನಿಂತದ್ದು ನಿಂತೇ ಹೋಗಿತ್ತು ಅತ್ತಿತ್ತ ಹೋಗುವದಾದರೆ ಅವರನ್ನು ಎತ್ತಿಕೊಂಡೇ ಹೋಗುವದು.

ಈ ಸಲ ನಾನು ಯಾವದೇ ಗ್ರಂಥ ಹಿಡಿದು ಪೂರ್ಣ ಓದುವ ಕಾರ್ಯ ಮಾಡಲಿಲ್ಲ ವಿಜಾಪುರದಲ್ಲಿ ನಡೆದದ್ದೆಲ್ಲ ಅದೇ ಆಗಿತ್ತು. ಎರಡು ದಿವಸ ಶ್ರೀಗಳೊಡನೆ ಅವರ ಆರೋಗ್ಯವನ್ನು ಗಮನಿಸಿ, ಆರಾಮವಾಗಿ ನಿರ್ದಿಷ್ಟವಲ್ಲದ ಬೇಕಾದ ಸಾಹಿತ್ಯ ಧರ್ಮ ಸಾಮಾಜಿಕ ನೀತಿಗಳನ್ನು ಕುರಿತು ಸಂಭಾಷಿಸುವದೆಂದೇ ಮನದಲ್ಲಿರಿಸಿ ಬಂದಿದ್ದೆನು. ಅಪ್ಪನವರ ಈಗಿನ ಶರೀರ ಸ್ಥಿತಿಯಲ್ಲಿ ಅವರ ಆರೈಕೆಯ ಸೇವೆಗೆ ಆಶ್ರಮದಲ್ಲಿಯ ಅನುಕೂಲ ಅನಾನುಕೂಲಗಳನ್ನು ಕುರಿತು ನೀಲಮ್ಮ ಅವ್ವನವರೊಡನೆ ಮಾತುಕತೆ ನಡೆಸಿದೆನು. ಸೇವಕರೂ ಸಹಕರಿಸಿ ಅನುಸರಿಸಿದರು.

ನಾನು ಬಂದು ಕೆಲವು ತಾಸು ಆಗಿರಬಹುದು. ಡಾಕ್ಟರ ಹಿರೇಮಠ ಡಾ. ಬಿ. ಎಮ್. ಪಾಟೀಲ ಹಾಗೂ ಅಂಗಡಿ ವಕೀಲರು ಕಾರಿನಲ್ಲಿ ವಿಜಾಪುರ ದಿಂದ ಆಶ್ರಮಕ್ಕೆ ಬಂದರು. ಅಪ್ಪನವರ ದರ್ಶನ ಪಡೆದು ಅವರು ಆರಾಮ ವಾಗಿರುವದನ್ನು ಕೇಳಿ ಸಂತೋಷಪಟ್ಟರು ಶ್ರೀಗಳನ್ನು ಮುಂಬಯಿಗೆ ಕರೆದು ಕೊಂಡು ಹೋಗಿ ಹೆಚ್ಚಿನ ತಜ್ಞರಿಂದ ಚಿಕಿತ್ಸೆ ಮಾಡಿಸಿ ಕಾಲೂರಿ ತಿರುಗಾಡು ವಂತೆ ಮಾಡಲು ಅವರು ಯೋಚಿಸಿಕೊಂಡು ಬಂದಿದ್ದರು. ಅಪ್ಪನವರಿಗೆ ತಮ್ಮ ಇಚ್ಛೆ ತಿಳಿಸುತ್ತ ಏರ್ಪಾಡುಗಳನ್ನು ಅರಿಕೆಗೊಳಿಸಿದರು. ಆದರೆ ಅಪ್ಪನವರು

"ನಾವೆಲ್ಲರೂ ಈ ದೀರ್ಘಕಾಲ ಅನುಭವಿಸಿದ ಕಷ್ಟಗಳನ್ನು ಮತ್ತೆ ಅನುಭವಿಸುವದು ಬೇಡ ಆ ವಿಚಾರ ಬೇಡರಿ" ಎಂದರು.

ಪಾಟೀಲ ಡಾಕ್ಟರರು 'ಅಪ್ಪಾ ಅವರೇ ಐದು ನಿಮಿಷ ನಾವು ಶಿವಮಂತ್ರ ಜಪಿಸುತ್ತ ಮೌನವಾಗಿರುವೆವು ಅಷ್ಟರಲ್ಲಿ ತಾವು ಇನ್ನೊಮ್ಮೆ ವಿಚಾರಿಸಿ ಏನು ಅಪ್ಪಣೆ ಮಾಡುವಿರೋ ಅದು ನಿರ್ಣಾಯಕ' ಎಂದರು.

ಎಲ್ಲರೂ ಮೌನವಾಗಿ ೫ ನಿಮಿಷ ಕುಳಿತೆವು ಅನಂತರ ಶ್ರೀಗಳು "ಆ ವಿಚಾರ ಬಿಟ್ಟು ಬಿಡಿರಿ" ಎಂದು ಶೂನ್ಯವನ್ನು ನೋಡುತ್ತ ನುಡಿದರು. ಡಾಕ್ಟರರೊಡನೆ ಹರಹರ ಮಹಾದೇವ ಎಂದು ಉಗ್ಗಳಿಸಿದೆವು. ವಂದಿಸಿದೆವು. ಅಪ್ಪನವರು ಅವರನ್ನು ಉಪಚರಿಸಿ ಹರಸಿ ಆಶೀರ್ವದಿಸಿ ಬೀಳ್ಕೊಟ್ಟರು.

ತಿಂಗಳಾನುಗಟ್ಟಲೆ ಘೋರ ರುಗ್ಣಶಯ್ಯೆಯಲ್ಲಿ ಜಿಗುಪ್ಸೆಗೊಂಡಿದ್ದ ಅಪ್ಪನವರು ಮತ್ತೆ ಅಂತಹ ಕಷ್ಟಕ್ಕಿಳಿಯುವದಕ್ಕೆ ಒಪ್ಪುವದು ಹೇಗಾದೀತು? ನೋವು ಗುಣವಾಗುತ್ತ ಬಂದು, ನೂತನ ಚೇತನ ಪಡೆದಂತಾಗಿತ್ತು.

ಅಪ್ಪನವರನ್ನು ಎತ್ತಿಕೊಂಡು ಹೋಗಿ ಸ್ನಾನ ಮಾಡಿಸಿ ಮಡಿ ಬಟ್ಟೆ ಉಡಿಸಿ ಪೂಜಾ ಕೋಣೆಯಲ್ಲಿ ಖುರ್ಚಿಯ ಮೇಲೆ ಕೂಡ್ರಿಸುತ್ತಿದ್ದರು. ಮುಂದಿನ ಮೇಜಿನ ಮೇಲೆ ಪೂಜೋಪಕರಣ ಇರಿಸುತ್ತಿದ್ದರು. ಅವರು ಲಿಂಗಾನುಷ್ಠಾನಗೈದು ಪ್ರಸಾದ ಸ್ವೀಕರಿಸುತ್ತಿದ್ದರು. ಮೇಜಿನ ಹತ್ತಿರವೇ ಕೆಳಗೆ ನನಗೆ ತಾಟು ಇಟ್ಟು ಎಡೆ ಮಾಡುತ್ತಿದ್ದರು. ನೀಲಮ್ಮ ತಾಯಿಯವರು ಎಡೆಮಾಡುತ್ತಿರುವಾಗ ಅಪ್ಪನವರ ಮಿಕ್ಕ ಮೃದು ಪ್ರಸಾದವು ನನಗೂ ದಯಮಾಡಿಸುತ್ತಿತ್ತು. ನನಗೆ ಪ್ರಸಾದದ ವಿವಿಧತೆ ವಿಪುಲತೆ. ಅಪ್ಪನವರು ಅರ್ಪಿತ ನಡೆಸುತ್ತಲೇ ಕೇಳಿದರು.

"ನೀವು 'ಜ.ಚ.ನಿ.' ಸ್ವಾಮಿಗಳ ಮಣಿಮುಕರದಿಂದ ಪ್ರಭಾವಿತರಾಗಿ 'ನೂರೊಂದು ನೆಲೆಯ ನಿಲವು' ರಚಿಸಿದ್ದೀರಿ ಅದು ಅಚ್ಚಾಗುವ ಪ್ರಸಂಗ ಒದಗಲೂಬಹುದು. ಅದಕ್ಕೆ ಮುನ್ನುಡಿಯನ್ನು ಅವರಿಂದಲೇ ಬರೆಯಿಸುವದು ಯಾಕಾಗಬಾರದು? ಅದೇ ಯೋಗ್ಯವಾದೀತು!"

"ಆ ಜಗದ್ಗುರು ಮಹಾಸ್ವಾಮಿಗಳನ್ನು ಕೇಳುವದು ಹ್ಯಾಂಗರೀ ಅಪ್ಪಾ?"

"ನೀವು ಬಿನ್ನವಿಸಿ ಪತ್ರ ಬರೆಯಿರಿ ನನ್ನ ಪರವಾಗಿಯೂ ಒಂದು ವಿನಂತಿ

ಪತ್ರ ಬರೆಯಿರಿ. ಅಂಕಿತ ಹಾಕುವೆ ಎರಡನ್ನೂ ಕಳಿಸಿಕೊಡಿರಿ. ಅವರು ಸಂತೋಷದಿಂದ ಒಪ್ಪಬಹುದು."

"ಆಗಬಹುದು ಎಂದೆ"

ಅಪ್ಪನವರ ಸೂಚನೆಯಂತೆ ಅವರ ವಿಶ್ರಾಂತಿ ಸಮಯದಲ್ಲಿ ಎರಡೂ ಪತ್ರಗಳನ್ನು ಬರೆದೆನು. ಬಳಿಕ ಓದಿಸಿ ಕೇಳಿ ತಮ್ಮ ಹೆಸರಿನಲ್ಲಿದ್ದುದಕ್ಕೆ ಅಂಕಿತ ಹಾಕಿದರು. (ಪೆನ್ನು ಹಿಡಿಸಿ ಬೊಟ್ಟು ಇಟ್ಟು ಸ್ಥಳ ತೋರಿಸಿದಲ್ಲಿ ಅಂಕಿತ ಹಾಕುವದು ಅವರ ಕ್ರಮವಾಗಿತ್ತು.) ಅವುಗಳನ್ನು ಜೇಬಿನಲ್ಲಿ ಇಟ್ಟುಕೊಂಡೆನು.

ವಿಜಯದಶಮಿಯ ಮುನ್ನಾದಿನ ಸಾಯಂಕಾಲ ವೇಳೆಗೆ ಸಾರವಾಡ ಹಲಗಣಿ ಸಂಗಾಪುರಗಳ ಹಲವಾರು ಭಕ್ತರು ಶ್ರೀಗಳವರ ಸನ್ನಿಧಿಗೆ ಗೋಷ್ಠಿಗಾಗಿ ಬಂದಿದ್ದರು. ಸ್ವಲ್ಪೇ ದಿವಸಗಳ ಹಿಂದೆ ಸಾರವಾಡದಲ್ಲಿ ಅಪ್ಪಯ್ಯಪ್ಪ ಎಂಬ ಶರಣರಾಗಿ ಹೋಗಿದ್ದರು. ಅದರಿಂದ ಆ ಊರಲ್ಲಿ ಆಧ್ಯಾತ್ಮದಲ್ಲಿ ಆಸಕ್ತಿಯುಳ್ಳ ವರಾಗಿದ್ದ ಜನರು ಆ ತೃಷೆಯ ತೃಪ್ತಿಗಾಗಿ ಶ್ರೀಶಾಂತವೀರ ಅಪ್ಪನವರ ಸನ್ನಿಧಿಗೆ ಬರುವದು ಅವರ ರೂಢಿಯೂ ಆಗಿತ್ತು. ಅಂದು ಮೂರು ನಾಲ್ಕು ತಾಸು ರಾತ್ರಿಯ ವರೆಗೆ ಶ್ರೀಗಳ ಸನ್ನಿಧಿಯಲ್ಲಿ ಅನುಭಾವದ ಮಾತು ನಡೆದವು.

ಗುಡಿಗಳಲ್ಲಿ ವೈಭವಯುತವಾದ ಲಿಂಗಾರಾಧನೆಗೆ ಆಸ್ಪದವಿರುವಾಗ ಮೈಮೇಲೆ ಲಿಂಗ ಧರಿಸುವದರ ಅಗತ್ಯವೇನೆಂದು ಶೈವ ಆಧ್ಯಾತ್ಮಿಗಳೊಬ್ಬರು ಪ್ರಶ್ನೆ ಹಾಕಿದರು. ಶ್ರೀ ಶಾಂತವೀರ ಅಪ್ಪನವರು ಅದಕ್ಕೆ ಉತ್ತರವನ್ನು ವಿವರ ವಾಗಿ ನೀಡಿದರು.

ಸ್ಥಾವರಲಿಂಗ ಇಷ್ಟಲಿಂಗ ಸೌಕರ್ಯ

"ಬಹುಕಾಲದ ಹಿಂದೆ ಲಿಂಗಾರಾಧನೆಯು ಸ್ಥಾವರಲಿಂಗ ಪೂಜೆಯಾಗಿಯೇ ಆರಂಭವಾದದ್ದು ಮುಂದೆ ಉನ್ನತಮಟ್ಟಕ್ಕೇರಿದ ಲಿಂಗರತಿಯೇ (ಭಕ್ತಿ–ಪ್ರೇಮವೇ) ಲಿಂಗವನ್ನು ಮೈಮೇಲೆ ಧರಿಸುವದಕ್ಕೆ ಕಾರಣವಾಗಿರಬೇಕು. ಮೈ ಮೇಲೆ ಧರಿಸಿ ಆರಾಧಿಸುವ ಹಲವಾರು ಹೆಚ್ಚಿನ ಸಾರ್ಥಕತೆಗಳು ಇರುವವು.

೧. ಇಷ್ಟಲಿಂಗ ಪೂಜೆ ಧನಿಕನಿಗೂ ಸಾಧ್ಯ! ಬಡವನಿಗೂ ಸಾಧ್ಯ!
೨. ಎಲ್ಲ ಶಾರೀರಿಕ ಸ್ಥಿತಿಯವನೂ ಪೂಜಿಸಲು ಸಾಧ್ಯ!
೩. ಇಷ್ಟಲಿಂಗವು ಸ್ವಂತ ಲಿಂಗ ಸ್ವತಂತ್ರ ಅರ್ಚನೆಗೆ ಸಾಧ್ಯ.

೪. ಪ್ರತಿದಿನ ಅನುಕೂಲವಾದಾಗ ಪೂಜಿಸಬಹುದು.

೫. ಗುಡಿಗಳ ಸಾಮೂಹಿಕ ಲಿಂಗ ಪೂಜೆ ಸ್ವಂತಕ್ಕೆ ಲಭಿಸುವದಿಲ್ಲ. ಹಣ ಕೊಟ್ಟು ಊಟ ಮಾಡಿಸಿದರೆ ಪೂಜಾರಿಗೆ ತೃಪ್ತಿ.

೬. ಲಿಂಗಾಧಾರಿ ಸದಾ ಶುಚಿ: ಇದು ಆಗಮವಾಕ್ಯ! ಲಿಂಗವಿದ್ದ ಸ್ಥಳ, ಗುಡಿ (ಜಡವಾದರೂ) ಪವಿತ್ರವಾಗಿರುವಾಗ, ಲಿಂಗವಿರುವಾಗ ಸಚೇತನ ಮಾನವ ದೇಹವು ಪವಿತ್ರವಲ್ಲವೇ?

೭. ಇಷ್ಟಲಿಂಗಧಾರಣದಿಂದ ದರ್ಶನ, ಸ್ಪರ್ಶನ, ಪೂಜನ ಅಪೇಕ್ಷಿಸಿದಾಗಲೆಲ್ಲ ಸಾಧ್ಯ! ಸ್ಥಾವರಲಿಂಗದಲ್ಲಿ ಇವೆಲ್ಲಕ್ಕೆ ಅನುಕೂಲಗಳಿರುವದಿಲ್ಲ.

೮. ಲಿಂಗಧಾರಣದಲ್ಲಿ ದುಂದುಗಾರಿಕೆಯಿಲ್ಲ. ಕ್ಷೇತ್ರಗಳಲ್ಲಿ ಧನವ್ಯಯ, ಅನ್ಯಾಯ ತಪ್ಪಿದ್ದಲ್ಲ. ಅಲ್ಲಿ ಶಾಂತಿ ಸಮಾಧಾನ ಸಿಗುವ ಬದಲು ಮನೋವಿಕಾರವೇ ಉಂಟಾಗುತ್ತಿರುವದು ಅನುಭವದ ಮಾತಾಗಿದೆ.

ಈ ಅನುಭಾವ ಕೂಟದ ಕಡೆಯಲ್ಲಿ ಈ ವಿವರಣೆ ಕೇಳಿ ಎಲ್ಲರೂ ಹರ್ಷದಿಂದ ಮೌನಮುಗ್ಧರಾದರು. ಬಳಿಕ ಸಮುದಾಯದಿಂದ ಗುರುಸ್ತೋತ್ರ ಮಂಗಲಾರತಿ ಆದವು ಮಂಗಲಾರತಿಯಾಯಿತು.

ಮುಂದೆ ೧೫ ದಿನಗಳ ಪ್ರವಾಸದಲ್ಲಿ ಬೆಂಗಳೂರಿನಲ್ಲಿರುವ ಶ್ರೀಶ್ರೀ ಜ.ಚ.ನಿ. ಮಹಾಸನ್ನಿಧಿಯ ದರ್ಶನ ಪ್ರಸಾದ ಹೊಂದಿ ನನ್ನ ಮತ್ತು ಅಪ್ಪನವರ ವಿಜ್ಞಾಪನಾ ಪತ್ರಗಳನ್ನು ಸಲ್ಲಿಸಿ 'ನೂರೊಂದು ನೆಲೆಯ ನಿಲವು' ಹಸ್ತ ಪ್ರತಿಯನ್ನು ಸಲ್ಲಿಸಿದ್ದೆನು.

ಪ್ರವಾಸದಿಂದ ಮರಳಿದ ಬಳಿಕ ಅಪ್ಪನವರ ಸನ್ನಿಧಿಯಲ್ಲಿ ವಿವರವಾಗಿ ಪ್ರವಾಸ ಕಥನ ಮಾಡಿದೆ. ಬೆಂಗಳೂರ ಪೂಜ್ಯ ಜ.ಚ.ನಿ. ಸನ್ನಿಧಿಗೆ ನಮ್ಮೆರಡು ಪತ್ರಗಳನ್ನು ನೂರೊಂದು ನೆಲೆಯ ನಿಲವು ಹಸ್ತ ಪ್ರತಿಯನ್ನು ಅರ್ಪಿಸಿದುದನ್ನು ಅರುಹಿದೆ. ಅವರು ಮುನ್ನುಡಿ ಬರೆಯಲು ಸಂತೋಷದಿಂದ ಒಪ್ಪಿದುದನ್ನು ತಿಳಿಸಿದೆ. ಎಲ್ಲದಕ್ಕೂ ಅವರ ಹರ್ಷದರ್ಶನ ಇದ್ದೇ ಇರುತ್ತಿತ್ತು ಮರುದಿನವೂ ಪೂರ್ಣವಾಗಿ ಆಶ್ರಮದಲ್ಲಿ ಅಪ್ಪನವರ ಅಡಿಯಲ್ಲಿ ಆನಂದಾಲಾಪಗಳಲ್ಲಿ ಕಳೆದೆನು.

ಕಳೆದ ಒಂದೆರಡು ತಿಂಗಳಲ್ಲಿ ನನ್ನ ತಲೆಯಲ್ಲಿ ಮೊಳಕೆಯೊಡೆದ ಒಂದು ವಿಚಾರ ಈಗ ಪ್ರಬಲವಾಗಿತ್ತು. ಬಿ. ಪುಟ್ಟಸ್ವಾಮಯ್ಯನವರ ಆರು ಕಾದಂಬರಿಗಳನ್ನು ಪ್ರತ್ಯೇಕವಾಗಿಯೂ ಅಪ್ಪನವರ ಹತ್ತಿರದಲ್ಲಿಯೂ ಗಮನವಿಟ್ಟು

ಓದಿದ್ದೆನು. ಅವುಗಳ ಗರ್ಭದಲ್ಲಿ ಅಡಕವಾಗಿರುವ ಚಾರಿತ್ರಿಕ (ಐತಿಹಾಸಿಕ) ಸಂಗತಿಗಳನ್ನು ಆಧರಿಸಿ ಬಸವಣ್ಣನವರ ನಿಜ ಸಹಜ ಜೀವನವನ್ನು ರೂಪಿಸ ಬೇಕೆಂಬುದು ಆ ವಿಚಾರ! ಇದನ್ನು ಅಪ್ಪನವರಲ್ಲಿ ಅರಿಕೆ ಮಾಡದೆ ಇರುವದು ಹೇಗೆ? ಅವರ ಆಶೀರ್ವಾದವೂ ಅಗತ್ಯವಷ್ಟೇ! ಈ ಮನದಲ್ಲಿರುವ ಪ್ರೇರಣೆಯೂ ಅವರದಲ್ಲದೆ ಇನ್ನೇನು? ತಿಳಿಸಿದೆ.

"ಓಹೋ ಇದನ್ನು ಅಗತ್ಯವಾಗಿ ಮಾಡಲೇಬೇಕು. ನೀವು ಈ ಸಂಬಂಧದ ಬೇರೆ ಸಾಹಿತ್ಯವನ್ನೂ ನೀವು ಸಾಕಷ್ಟು ಓದಿದ್ದೀರಿ. ಪುರಾಣಗಳಲ್ಲಿ ಬಸವೇಶ್ವರ ಚರಿತ್ರೆ ಪವಾಡಗಳಿಂದ ಮುಚ್ಚಿದೆ. ಸಂಭಾವ್ಯ ಸಹಜ ಘಟನೆಗಳಿಲ್ಲ. ಈ ಕಾದಂಬರಿಗಳಲ್ಲಿ ಕೆಲ ಚಾರಿತ್ರಿಕ ಸನ್ನಿವೇಶಗಳು ಮೌಲ್ಯವುಳ್ಳವುಗಳಾಗಿವೆ. ಇವನ್ನೂ ತತ್ಕಾಲೀನ ವಚನ ಸಾಹಿತ್ಯವನ್ನು ಬಳಸಿ ಸರಳ ಸುಂದರ ಚರಿತ್ರೆ ಬರೆಯಿರಿ. ಅದು ನಿಮಗೆ ಸಾಧ್ಯವಿದೆ. ಯಶಸ್ವಿಯಾಗುವಿರಿ. ಈಗ ನಿಮ್ಮ ಕೈಯಲ್ಲಿ ಇದೇ ಅಗತ್ಯವಾದ ಸಾಹಿತ್ಯದ ಕೆಲಸವಾಗಿ ಮುಂದುವರಿಯಲಿ" ಎಂದು ಹರ್ಷಾವೇಶದಿಂದ ಆದೇಶಿಸಿದರು.

ತಮ್ಮ ಕೃಪಾಶೀರ್ವಾದದಿಂದ ಆಗಬಹುದು. ಅದು ಆಚ್ಚಾದರೆ ಪ್ರಯೋಜನ. ಬಸವಣ್ಣನವರ ಬಹುಮುಖ ಜೀವನ ಕ್ರಾಂತಿ, ಸಾಹಿತ್ಯ ಎಲ್ಲವನ್ನೂ ಒಳಗೊಳ್ಳುವದಾದರೆ ಗ್ರಂಥ ಸಾಕಷ್ಟು ದೊಡ್ಡದಾಗುವದು. ಅದಕ್ಕೆ ಒಂದು ದಾರಿ ನನಗೆ ಕಾಣುತ್ತದೆ. ಬಾಗೇವಾಡಿಯಲ್ಲಿ ಶ್ರೀ ಶಿವಯೋಗೀಶ್ವರ ಸ್ಮಾರಕ 'ಬಸವೇಶ್ವರ ಲಿಂಗಾಯತ ಜಾಗ್ರತ ಸಂಸ್ಥೆ' ಇದೆ ಅವರು ಸಹಾಯ ಮಾಡ ಬಹುದು ಅದರ ಅಧ್ಯಕ್ಷರು ಶ್ರೀ ಬಂಥನಾಳ ಶಿವಯೋಗಿಗಳು.

"ಹಾಗಿದ್ದರೆ ಅವರು ಸಹಾಯ ಮಾಡೇ ಮಾಡುತ್ತಾರೆ. ಸಂಶಯವಿಲ್ಲ."

"ಮೊದಲು ಗ್ರಂಥ ಅವರಿಗೆ ಒಪ್ಪಿಗೆಯಾಗಬೇಕು. ಮೊದಲು ಕೆಲವು ಭಾಗ ಬರೆದು ಅವರಿಗೆ ಅರಿಕೆಗೊಳಿಸಿ, ಅವರ ಪ್ರೋತ್ಸಾಹ ಸಿಕ್ಕರೆ ಮುಂದುವರಿ ಯುವದು ಯೋಗ್ಯವಾಗುವದು ಅಲ್ಲವೇ ಅಪ್ಪಾ?"

"ಹೌದು ನಿಮ್ಮ ಎಲ್ಲ ಪ್ರಯತ್ನಗಳಿಗೂ ನನ್ನ ಆಶೀರ್ವಾದ ಇದೆ. ನಿಮ್ಮ ಬೆಂಬಲಕ್ಕೂ ಇರುವೆ. ನೀವಿದನ್ನು ಕೈಕೊಳ್ಳಿರಿ.

"ಆಗಲಿ ಮಾಡುವೆ" ಎಂದು ಅವರ ಪಾದದ ಮೇಲೆ ತಲೆ ಇಟ್ಟು ಪಾದರೇಣು ಧರಿಸಿ ವಂದಿಸಿದೆ. ಮರುದಿನ ನಾವು ಊರಿಗೆ ಹೊರಡುವಾಗ,

ಪುನಃ ಈ ಕಾರ್ಯದ ಆದೇಶದೊಡನೆ ಆಶೀರ್ವಾದ ಫಲ ಉಡಿಯಲ್ಲಿ ಹಾಕಿ ಬೆನ್ನ ಮೇಲೆ ಕೈಯಾಡಿಸಿ ಅಪ್ಪಣೆಯಿತ್ತರು.

ಬಂಥನಾಳ ಮಠದ ದರ್ಶನ
ಬಸವೇಶ್ವರ ಚರಿತ್ರೆಯ ಬರೆಹ
ಬಂಥನಾಳ ಶಿವಯೋಗಿಗಳ ಆಶೀರ್ವಾದ.

ಶ್ರೀ ಶಾಂತವೀರ ಮಹಾಸ್ವಾಮಿಗಳವರ ಆಶೀರ್ವಾದದಿಂದ ಸ್ಫೂರ್ತಿ ಇಮ್ಮಡಿಸಿತ್ತು. ಬಸವೇಶ್ವರ ಚರಿತ್ರೆಯ ಬರೆಹವು ಸುಲಕ್ಷಣವಾಗಿಯೇ ಆರಂಭ ವಾಗಿತ್ತು. ಬಾಗೇವಾಡಿಯ ಶ್ರೀ ಶಿ. ಸ್ವಾ. ಬಸವೇಶ್ವರ ಲಿಂಗಾಯತ ಜಾಗ್ರತ ಸಂಸ್ಥೆಯ ಅಧ್ಯಕ್ಷರೂ ಆಗಿರುವ ಶ್ರೀ ನಿ.ಪ್ರ.ಸ್ವ. ಬಂಥನಾಳ ಶಿವಯೋಗಿಗಳಿಂದ ಈ ಯೋಜನೆಗೆ–ನನ್ನ ಕಾರ್ಯಕ್ರಮ ರೀತಿಗೆ ಆಶೀರ್ವಾದವೂ ಅನುಮೋದನೆಯೂ ಅಗತ್ಯವೆಂದು ಹರಳೇಶ್ವರದಲ್ಲಿಯೇ ನಿರ್ಧರಿಸಲಾಗಿತ್ತು. ಬಸವಯುಗದ ಪೂರ್ವ ಪರಿಸ್ಥಿತಿಯಿಂದ ಆರಂಭವಾಗಿ, ಬಸವಣ್ಣ ಉಪನಯನ ತಿರಸ್ಕರಿಸಿ ಸಂಗಮದಲ್ಲಿ ಅಧ್ಯಯನ ಆರಂಭಿಸುತ್ತಿರುವವರೆಗೆ ಚೆನ್ನಬಸವಣ್ಣನ ಜನ್ಮದವರೆಗೆ ಇಷ್ಟು ಭಾಗ ತ್ವರಿತವಾಗಿ ಬರೆದು ಆಗಿತ್ತು. ಅಷ್ಟನ್ನು ತಕ್ಕೊಂಡು ಬಂಥನಾಳಕ್ಕೆ ಹೋಗಿ ಸನ್ನಿಧಿಗೆ ವಂದಿಸಿದೆ. ಅವರು ನನ್ನನ್ನು ಪ್ರೇಮದಿಂದ ಕಂಡರು. ಶಿವಯೋಗಿಗಳ ಅಡಿಯಲ್ಲಿ ಬರೆದ ಭಾಗವನ್ನು ಓದಿದೆ. 'ಈ ಕಾರ್ಯ ಆಗಬೇಕಾ ದದ್ದೇ, ನೀವು ಅವಶ್ಯ ಮಾಡಿರಿ. ಶೈಲಿ ಚೆನ್ನಾಗಿದೆ' ಎಂದರು. ಆದರೆ 'ಚಂದಿಮರಸು ಚಂದ್ರಾಂಬೆಯ ಮಗನಾದ ಕಾಶ್ಯಪಗೋತ್ರದ, ಕಸಪಯ್ಯನೇ ಬಸವಣ್ಣ ತಂದೆ ತಾಯಿಗಳನ್ನು ಕಳೆದುಕೊಂಡ ಅವನನ್ನು ಮಾದರಸು ಮಾದಲಾಂಬಿಕೆಯರು ಸಾಕಿ ಸಲಹಿದರು ಎಂಬುದು ಬೇಡ' ಎಂದರು. ಇದನ್ನು ಮೊದಲು ಮೈಸೂರಿನ ಚೆನ್ನಮಲ್ಲಿಕಾರ್ಜುನ ಮೇಸ್ತ್ರು ಮಣಿಂಗವಳ್ಳಿಯ ಶಾಸನ ಹಿಡಿದು ತಮ್ಮ 'ಬಸವಣ್ಣನ ಕಾಲ' ಗ್ರಂಥದಲ್ಲಿ ಪ್ರತಿಪಾದಿಸಿದರು. ಪ್ರೊ. ಶಿ. ಶಿ. ಬಸವನಾಳರು ಖಚಿತವಾಗಿ ಅಲ್ಲದಿದ್ದರೂ ಒಪ್ಪಿದ್ದರು. ಬಿ. ಪುಟ್ಟುಸ್ವಾಮಯ್ಯನವರು ಅದನ್ನೇ ಅನುಸರಿಸಿದ್ದರು. ಅದನ್ನೇ ನಾನೂ ಅನುಸರಿಸಿದ್ದೆನು. ಈಗ ಶಿವಯೋಗಿಗಳು "ಇದು ಅಸಂಬದ್ಧ. ಡಾ. ಪಿ.ಬಿ.ಹಳಕಟ್ಟಿ ಅವರು ಇದಕ್ಕೂ ಮೊದಲೇ ಮಣಿಂಗವಳ್ಳಿಯ ಶಾಸನದ ಬಸವಯ್ಯ ಬೇರೆಯವ ನೆಂದು ಅದನ್ನು ಕಡೆಗಾಣಿಸಿದ್ದರು. ಇದುವರೆಗೆ ಬಸವಣ್ಣನವರನ್ನು ಕುರಿತು

ಅಪಾರವಾದ ಸಾಹಿತ್ಯದಲ್ಲಿ ಹೇಳುತ್ತ ಬಾದಿದ್ದ ಅವರ ತಂದೆ ತಾಯಿಗಳ ಸಂಗತಿಯೇ ಸರಿಯಾದುದು" ಎಂದು ಹೇಳಿದ್ದರಿಂದ ನಾನು ಕೂಡಲೇ ಒಪ್ಪಿಕೊಂಡೆನು. ಶಿವಯೋಗಿಗಳು ಮತ್ತೊಂದು ದಿನ ಇರಿಸಿಕೊಂಡು ಹಲವಾರು ವಿಷಯ ತಿಳಿಸಿಹೇಳಿ ಹರಸಿ ಆಶೀರ್ವದಿಸಿ ಕಳಿಸಿದರು.

ಪೂಜ್ಯ ಜ.ಚ.ನಿ. ಮಹಾಸ್ವಾಮಿಗಳಿಂದ 'ನೂರೊಂದು ನೆಲೆಯ ನಿಲವು ಪುಸ್ತಕಕ್ಕೆ ಮುನ್ನುಡಿಯೂ ಬರೆದು ಬಂದಿತ್ತು. ಮುಂದೆ ನಾಲ್ಕಾರು ದಿನಗಳ ನಂತರ ಹರಳೇಶ್ವರಕ್ಕೆ ಹೋದೆನು ಅಪ್ಪನವರ ವೃದುಹೃದಯದ ಸವಿಮಾತಿನ ಸುಖವಾಸದಲ್ಲಿ ಎರಡು ದಿವಸ ಪೂರ್ಣವಾಗಿ ಇದ್ದೆನು. ಅಪ್ಪನವರು ಆರಾಮವಾಗಿ ಇದ್ದಾರೆ ಸಾಲಿ ಭೀಮಪ್ಪ ನವತರುಣ ಸಲೀಸವಾಗಿ ಅಪ್ಪನವರನ್ನು ಮುಂಗೈ ಮೇಲೆ ಎತ್ತಿಕೊಂಡು ಬೈಲಿಗೂ ಬಚ್ಚಲಕ್ಕೂ ಪೂಜಾಸ್ಥಲಕ್ಕೂ ಕರೆದೊಯ್ಯುತ್ತಾನೆ. ಅಲ್ಲಲ್ಲಿ ತಕ್ಕ ಆಸನವ್ಯವಸ್ಥೆಯಾಗಿದೆ ತಾಯಿ ನೀಲಮ್ಮನವರು ಹೆಚ್ಚಾಗಿ ಇಲ್ಲಿಯೇ ಇರುತ್ತಾರೆ. ಅತಿಥಿ ಸತ್ಕಾರದ ದಾಸೋಹಕ್ಕೆ ಬೇರೆ ಸೇವಕರೂ ಇದ್ದಾರೆ. ನೂರೊಂದು ನೆಲೆಯ ನಿಲವಿಗೆ ಮುನ್ನುಡಿ ಬಂದಿದೆ ಎನ್ನಲು ಅದನ್ನು ಓದಿಸಿ ಕೇಳಿದರು. ಜ.ಚ.ನಿ. ಮಹಾಸ್ವಾಮಿಯವರು ಪುರಸ್ಕರಿಸಿ ಬರೆದುದನ್ನು ಮೆಚ್ಚಿಕೊಂಡರು. ಬಂಥನಾಳ ಶಿವಯೋಗಿಗಳ ಹತ್ತಿರ ಓದಿದ. ಬಸವೇಶ್ವರ ಚರಿತ್ರೆ ಭಾಗವನ್ನು ಓದಿದೆ. ಕಸಪಯ್ಯನೇ ಬಸವಣ್ಣನೆಂಬ ವಿಚಾರವನ್ನು ಬಿಡುವದೇ ಯೋಗ್ಯವೆಂದು ನುಡಿದರು. ಮುಖ್ಯವಾಗಿ ಈ ಕಾರ್ಯವನ್ನು ನೀವು ನೆರವೇರಿಸುವದು ಶ್ರೇಯಸ್ಕರವಾಗಿದೆ–ಎಂದರು. ಅವಕ್ಕೆ ನಾನೆಂದೆ 'ನೀವು ಕೈ ನಾನು ಪೆನ್ನು' ಆಗಲೂ ಅವರ ಕೈ ನನ್ನ ಬೆನ್ನ ಮೇಲೆಯೇ ಇತ್ತು.

ಓದುವದಿದ್ದರೆ ಅವನ್ನಷ್ಟು ಬಿಟ್ಟು, ವಿರಾಮದ ಅಪ್ಪನವರೊಡನೆಯ ಸಂಭಾಷಣೆಗಳಲ್ಲಿ ಬಹುಶಃ ನಿರ್ದಿಷ್ಟ ವಿಷಯಗಳು ಇರುತ್ತಿರಲಿಲ್ಲ. ತಾತ್ಕಾಲಿಕವಾಗಿ ಚಿಮ್ಮಿಬಂದು ಪ್ರಸ್ತಾಪಗೊಳ್ಳುವ ಸಂಗತಿಗಳು ವಿಷಯಗಳಾಗುತ್ತಿದ್ದವು. ಅವುಗಳ ವಿವೇಚನೆಯು ದಾರಿಯಲ್ಲಿ ಸಿಕ್ಕುವ ಸಂಗತಿಗಳೂ ಮಾತಿನ ವಿಷಯಗಳಾಗುವವು. ಇವಲ್ಲದೆ ದರ್ಶನಕ್ಕೆ ಬಂದಿರುವ ಬೇರೆ ಭಕ್ತರ ಅಭಿಲಾಷೆ, ಆಸಕ್ತಿಗಳೂ ಚರ್ಚೆಗೆ ಕಾರಣವಾಗುತ್ತಿದ್ದವು. ಸಾರವಾಡ, ಸಂಗಾಪುರ, ಹಲಗಣಿ, ರೋಣಿಹಾಳ ಮುಂತಾದ ಗ್ರಾಮಗಳ ನಿಷ್ಠಭಕ್ತರು ಆಧ್ಯಾತ್ಮವಾದಿಗಳೂ ಯಾರಾ

ದರೂ ನಾನು ಹೋದಾಗ ಬಹಳ ಸಾರೆ ಇದ್ದೇ ಇರುತ್ತಿದ್ದರು. ಎಲ್ಲರ ಅಭಿರುಚಿ ಗಳಿಗೆ ಆಗರವಾಗಿದ್ದರು ಶ್ರೀ ಶಾಂತವೀರ ಅಪ್ಪನವರು.

ವೀರಶೈವದ ಉನ್ನತಿ ಅವನತಿ

ಈ ಸಲ ಮುಖ್ಯವಾಗಿ ಮಾತನಾಡಿದ್ದು ವೀರಶೈವದ ಉದ್ಧರಣ ಮತ್ತು ಆದರ ಉನ್ನತಿ ಅವನತಿಯ ಘಟ್ಟಗಳು.

ಶಿವಾಗಮಗಳನ್ನು ಆಧರಿಸಿ ಜಗದ್ಗುರುಗಳೈವರಿಂದ ಪ್ರತಿಪಾದಿಸಿದ ಹಾಗೂ ಶೈವ ಸುಧಾರಣೆಯಲ್ಲಿ ಮೂಡಿಬಂದ ವೀರಶೈವವು ಸಾರ್ವತ್ರಿಕವಾಗಿರಲಿಲ್ಲ. ಅದರಲ್ಲಿ ಹೋಮ ಹವನಗಳು, ಸೂತಕಾಚರಣೆಗಳು, ವರ್ಣಭೇದದ ಛಾಯೆಗಳು ಉಳಿದೇ ಇದ್ದವು. ಅವುಗಳನ್ನು ತೊಡೆದು ಹಾಕಿದ ಶರಣರ ಕ್ರಾಂತಿಯಿಂದ ವೀರಶೈವವು ಪುಟಕ್ಕಿಕ್ಕಿದ ಚಿನ್ನದಂತಾಯಿತು. ಶೈವಗುರುಗಳೂ ಮಠಗಳೂ ವೀರಶೈವ ಸ್ವಾಮಿಗಳೂ ಮಠಗಳೂ ಆದರು. ಶಕ್ತಿ ವಿಶಿಷ್ಟ ಷಟ್‌ಸ್ಥಲ ಸಿದ್ಧಾಂತವು ಅಲ್ಪಕಾಲದಲ್ಲಿಯೇ ಚೆಲ್ಲುವರಿದು ಹಬ್ಬಿತು. ಇದು ಮೊದಲನೆಯ ಘಟ್ಟ. ಬಳಿಕ ಉತ್ತರದ ಧಾಳಿಗಳಿಂದ ಬಂದ ಅವನತಿ.

೧೫ನೆಯ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಪ್ರೌಢರಾಯನ ಆಶ್ರಯವು ವೀರಶೈವಕ್ಕೆ ದೊರೆಯಿತು. ವಚನಗಳ ಕ್ರೋಢೀಕರಣವಾಯಿತು. ಉದ್ದಾಮ ಆತ್ಮ ಸಾಹಿತ್ಯದ ರಚನೆಯಾಯಿತು. ೧೦೧ ವಿರಕ್ತರು ಧರ್ಮಜಾಗ್ರತಿಗೆ ಮೀಸಲಾದರು. ಇದು ವೀರಶೈವರ ಉನ್ನತಿಯ ಎರಡನೆಯ ಘಟ್ಟವು. ಮತ್ತೆ ಅದಕ್ಕೆ ಅವನತಿಯ ಕಾಲ ಒದಗಿತು. ಮುಂದೆ ೧೬ನೆಯ ಶತಮಾನದ ಕಡೆಯ ೧೭ರ ಮೊದಲ ಭಾಗದಲ್ಲಿ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಮಹಿಮಾತ್ಮಕ ವಾದ ಘನ ಪ್ರಯತ್ನದ ಫಲವಾಗಿ ವೀರಶೈವವು ಮತ್ತೆ ವಿಶೇಷವಾಗಿ ಚೇತರಿಸಿ ಕೊಂಡಿತು. ಅವರು ೭೦೦ ಜನ ಶಿಷ್ಯರೊಡಗೂಡಿ ದೇಶಸಂಚಾರಗೈದು ಧರ್ಮ ಜಾಗ್ರತಿ ಮಾಡಿದರು. ಶಿವಯೋಗಕ್ಕೆ ನಿಶ್ಚಿತ ಸ್ವರೂಪ ಕೊಟ್ಟು ಪ್ರಚುರಪಡಿಸಿ ದರು. ಸಂಸ್ಕೃತ ಕನ್ನಡ ಭಾಷೆಗಳಲ್ಲಿ ಕಾವ್ಯ ಪುರಾಣಗಳು ಸಾಕಷ್ಟು ರಚಿಸಲ್ಪಟ್ಟು ಧರ್ಮವೃಕ್ಷಕ್ಕೆ ನೀರೆರದವು ಇದು ಮೂರನೆಯ ಘಟ್ಟ!

ದೇಶಕ್ಕೆ ಮತ್ತೆ ಪ್ರತಿಕೂಲ ಪರಿಸ್ಥಿತಿ ಬಂದಿತ್ತು. ಪ್ರಭುತ್ವವು ಛಿದ್ರ ವಿಚ್ಛಿದ್ರವಾಗಿ ಜನಜೀವನವು ಕಷ್ಟದಲ್ಲಿ ಮುಳುಗಿತು. ಧರ್ಮಶಾಸ್ತ್ರಗಳ ಮಾತು

ಗಳು ಪರದೇಶಿಯಾದವು. ಬ್ರಿಟಿಶರ ಆಳಿಕೆ ಅರ್ಥಶೋಷಣೆ ಮಾಡಿದರೂ ಶಾಂತಿಯನ್ನು ನೆಲೆಗೊಳಿಸಿತು. ಅದರಿಂದ ವಿದ್ಯಾಭಿವೃದ್ಧಿಗೆ ಆಸ್ಪದವಾಗಿ ವಿದ್ವಾಂಸರು ಉದಯುವಾಗಿ ಬಹುಮುಖದಲ್ಲಿ ಆತ್ಮಶೋಧನೆಗೆ ತೊಡಗಿದರು. ಈ ಪರಿಣಾಮವಾಗಿ ಶಿವಯೋಗಮಂದಿರ ಸ್ಥಾಪನೆಯಾಯಿತು. ವೀರಶೈವ ಮಹಾಸಭೆಗಳು ಆರಂಭವಾದವು. ನಶಿಸುತ್ತಿರುವ ವಚನಗಳು ಉಳಿಸಲ್ಪಟ್ಟು ಅವುಗಳ ಅಭ್ಯಾಸ ಅಡಿಯಿಟ್ಟಿತು. ಮಠಾಧಿಪತಿಗಳೂ ಮುಗ್ಧತನದಿಂದ ಹೊರ ಬಂದರು. ಶಿಕ್ಷಣ ಸಂಸ್ಥೆಗಳು ಮುಂತಾದ ಸಾಮಾಜಿಕ ಸುಧಾರಣೆಯ ಸಂಘಟನೆ ಯಲ್ಲಿ ತೊಡಗಿದರು. ವೀರಶೈವ ಸಾಹಿತ್ಯ ರಚನೆಯೂ ಸಾಕಷ್ಟಾಯಿತು. ಈಗ ನಾಲ್ಕನೆಯ ಘಟ್ಟದಲ್ಲಿ ನಾವಿದ್ದೇವೆ. ಈ ನಾಲ್ಕನೆಯ ಉನ್ನತಿ ಆಂತರಂಗಿಕ ವಾಗಿದೆಯೇ ಎಂಬುದು ಪ್ರಶ್ನೆಯಾಗಿದೆ.

ದಯೆ ಧರ್ಮ ನೀತಿಗಳ ನಡೆಯಲ್ಲಿರುವವನೂ ಅಹಂಕಾರಿಯಾಗಿರುವನು. ಅದರ ದವಡಿಯಲ್ಲಿಯೂ ಸಿಗದವನು ಮಾತ್ರ ಶರಣ.

ಕನಸಿನಲ್ಲಿ ಹೆಂಡತಿ, ಮಗ, ಬಳಗ, ಮನೆ, ವನ, ಹೊಳೆ, ಬೆಟ್ಟ ಎಲ್ಲ ತಾನೇ ಆಗಿರುವಂತೆ ಶಿವನೇ ಈ ಜಗದಾದಿ ವಿಶ್ವವಾಗಿರುವನು.

ಅಣಿಮಾದಿ ಅಷ್ಟಸಿದ್ಧಿಗಳು ಮುಕ್ತಿಗಂತೂ ಕಾರಣವಲ್ಲ. ಸಾಧಕನು ಅವುಗಳನ್ನು ಉಪಯೋಗಿಸಿದರೆ ಆಸಕ್ತಿ ತಾಳಿದರೆ ಪತಿತನಾಗುವದೇ ನಿಶ್ಚಯ! ಯಾಕಂದರೆ ಆಗ ಕ್ರೋಧ ಅಸೂಯೆ ಅಹಂಕಾರಗಳು ತಲೆಯೆತ್ತುತ್ತಿರುವವು.

ಯೋಗಸಿದ್ಧಿಯ ಫಲವು ಕ್ಷೀಣಿಸುವದು. ಅವನಿಗೆ ಅಹಂಕಾರ ಅಸೂಯೆ ಗಳು ಇರುವವು. ಜ್ಞಾನವೇ ಯೋಗಿಗಳ ಮುಕ್ತಿಸ್ಥಿತಿಗೆ ಕಾರಣ! ಜ್ಞಾನವಿಲ್ಲದ ಯೋಗಿ ಭ್ರಷ್ಟನಾಗುತ್ತಾನೆ.

ಅಲ್ಲಮಪ್ರಭುಗಳು ಪ್ರಸಂಗವಶಾತ ಯೋಗಸಿದ್ಧಿಯನ್ನು ಪ್ರಸಂಗವಶಾತ ಜ್ಞಾನಸಿದ್ಧಿಯನ್ನು ಉಪಯೋಗಿಸುತ್ತಿದ್ದರು.

ಅಂಗೈಯ ಲಿಂಗದಲ್ಲಿ ದೃಷ್ಟಿ ಮನಗಳನ್ನಿರಿಸಿ ಧ್ಯಾನಿಸುತ್ತಿರಲು ಮನಸ್ಸು ಹೇಳದೇ ಎಲ್ಲಿಯೋ ಹೋಗಿ ಬಿಟ್ಟಿರುವದು...."ಹೇಳಿ ಹೊರಟರೆ ಮತ್ತೆ ನೀವು ಹಿಡಿದು ಕಟ್ಟುತ್ತೀರಿ ಅದಕ್ಕೆ ತಿಳಿಯದೇನು?" ಎಂದು ನಕ್ಕರು ಅಪ್ಪನವರು! ಉಳಿದವರಿಗೂ ನಗೆ.

ಅಪ್ಪನವರು ಪವಡಿಸುವ ಕೋಣೆಯ ಮುಂದೆ ನಾಲ್ಕೈದು ಜನರು ಮಲಗ

ಬಹುದಾದ ಪಡಸಾಲೆ ಎನಿಸುವ ಕೋಣೆಯಲ್ಲಿ ನಾನು ಮಲಗುತ್ತಿದ್ದೆ. ಬೇರೆ ಒಬ್ಬಿಬ್ಬರು ಅತಿಥಿಗಳು ಬಹುಶಃ ಅಲ್ಲಿಯೇ ಮಲಗುತ್ತಿದ್ದರು. ಹೆಚ್ಚು ಜನ ಬಂದಾಗ ಅದರಲ್ಲಿಯೇ ಹತ್ತೆಯಾಗಿ ಮಲಗುತ್ತಿದ್ದೆವು. ಆಗ ಅಪ್ಪನವರು ತಮ್ಮ ತಲ್ಪದ ಹತ್ತಿರ, ಒಬ್ಬರಿಗೆ ಅನುವಿರುವಷ್ಟು ಜಾಗದಲ್ಲಿ ಮಲಗಲು ನನಗೆ ಹೇಳುತ್ತಿದ್ದರು. ಆದರೆ ಅವರ ಆ ಚಿಕ್ಕ ಕೋಣೆಯ ಹವೆ ಇನ್ನೊಬ್ಬರಿಂದ ಕೆಡಬಾರದೆಂದು ನಾನು ಒಪ್ಪುತ್ತಿರಲಿಲ್ಲ. ಮುಂದೆ ಯೋಗಮಂದಿರ ಸಿದ್ಧವಾದ ಬಳಿಕ ಮತ್ತೆ ಹತ್ತೆಂಟು ಜನರು ಮಲಗಲು ಬೆಚ್ಚಗಿನ ಸ್ಥಳವಾಯಿತು.

ಯೋಗಮಂದಿರ

ಮಾತಿನಲ್ಲಿ ಸಂದರ್ಭ ಬಂದದ್ದರಿಂದ ಯೋಗಮಂದಿರದ ಬಗೆಗೆ ಈಗ ಸ್ವಲ್ಪ ಹೇಳಲೇಬೇಕಾಯಿತು. ಶ್ರೀಗಳಲ್ಲಿ ನಿಷ್ಠ ಭಕ್ತರಾಗಿದ್ದ ಅಕಾಲಟ್ಟಿಯ ಸಿದ್ಧನಗೌಡರು ಕಳೆದ ವರ್ಷ ಆಶ್ರಮದಲ್ಲಿ ಅಪ್ಪನವರಿಗಾಗಿ ಯೋಗ ಮಂದಿರ (ಅಂತಿಮ ಸಮಾಧಿಗೆ ಗವಿ ಸಹಿತ) ನಿರ್ಮಿಸುವ ಸಂಕಲ್ಪಮಾಡಿ ಅಪ್ಪನವರ ಅನುಜ್ಞೆ ಪಡೆದಿದ್ದರು. ಅದರ ಪೂರ್ವಭಾವಿ ಕೆಲಸ ಆರಂಭವಾದ ಕೂಡಲೆ ಅದು ಬಬಲೇಶ್ವರ ಜನರಿಗೆ ಗೊತ್ತಾಗಿ ಅವರ ಸಿದ್ಧನಗೌಡರನ್ನು ಕಂಡು "ಬಬಲೇಶ್ವರದಲ್ಲಿ ಅಂಥ ಮಂದಿರ ಸಿದ್ಧವಿದೆ. ನೀವು ಮಾಡಬೇಡಿರಿ" ಎಂದು ಕೇಳಿಕೊಂಡರು. ಆದರೆ ಸಿದ್ಧನಗೌಡರು "ಅಪ್ಪನವರಿಂದ ಅಪ್ಪಣೆ ಪಡೆದಿದ್ದೇನೆ, ಮಾಡುತ್ತೇನೆ. ಅವರು ಬೇಡವೆಂದರೆ ಬಿಡುತ್ತೇನೆ" ಎಂದುಬಿಟ್ಟರು.

ಆಗ ಬಬಲೇಶ್ವರದ ಆ ಹಿರಿಯರು ಆಶ್ರಮಕ್ಕೆ ಬಂದು ಅಪ್ಪನವರಿಗೆ "ತಾವೇ ಮಾಡಿಸಿದ ಅಂತಿಮ ಸಮಾಧಿ ವ್ಯವಸ್ಥೆ ಬಬಲೇಶ್ವರದಲ್ಲಿರುವಾಗ ಇಲ್ಲಿ ಇದನ್ನು ಮಾಡಿಸಬಾರದು. ತಮ್ಮ ಗದ್ದುಗೆ ಅಲ್ಲಿಯೇ ಆಗಬೇಕು" ಎಂದು ಬಿನ್ನವಿಸಿದರು. ಆದರೆ ಅಪ್ಪನವರು ತಾವು ಬಬಲೇಶ್ವರ ಮಠ ಬಿಟ್ಟು ಇಲ್ಲಿ ಬರುವದಕ್ಕೆ ಕಾರಣವಾದ ಪ್ರಸಂಗವನ್ನು ಆ ಹಿರಿಯರ ನೆನಪಿಗೆ ತಂದುಕೊಟ್ಟು ಸ್ವಲ್ಪ ಕಟುವಾಗಿಯೇ ಅವರ ಕೋರಿಕೆಯನ್ನು ನಿರಾಕರಿಸಿದ್ದರು.

ಕ್ರಮವಾಗಿ ಕಟ್ಟಡ ಕೆಲಸ ನಡೆಯಿತು. ಅಪ್ಪನವರು ಅಪಘಾತಕ್ಕೊಳಗಾಗಿ ವಿಜಾಪುರದಲ್ಲಿ ಇರುವಾಗ ಕಟ್ಟಡದ ಕೆಲಸ ತೀವ್ರಗೊಂಡಿತ್ತು. ಆ ಹಂತದಲ್ಲಿ

ಸಿದ್ಧನಗೌಡರು ಆರ್ಥಿಕ ತೊಂದರೆಯಲ್ಲಿದ್ದಾರೆಂಬ ವಾರ್ತೆ ಅಪ್ಪನವರ ಕೇಳಿಕೆಗೆ ಬಂದಿತ್ತು. ಆಗ ಅವರು ಗೌಡರನ್ನು ಕರೆಸಿ "ತೊಂದರೆ ಮಾಡಿಕೊಳ್ಳಬೇಡಿರಿ, ಈಗ ಆ ಕೆಲಸ ನಿಲ್ಲಿಸಿ ಬಿಡಿರಿ" ಎಂದು ಹೇಳಿದ್ದರು. ಗೌಡರು 'ಆ ವಿಚಾರ ನನಗೆ ಸೇರಿದ್ದು. ತಮ್ಮ ಆಶೀರ್ವಾದ ಇದೆ. ನಿಲ್ಲಿಸುವದು ಹೇಗಾದೀತು?' ಎಂದಿದ್ದರು. ಈಗ ಕಟ್ಟಡ ಕೆಲಸ ಮುಗಿದಿದೆ. ಅಷ್ಟಿಷ್ಟು ಪೂರಕ ಕೆಲಸಗಳು ನಡೆಯುತ್ತಲಿವೆ.

ಅಪ್ಪನವರಿಗೆ ಅಸ್ವಾಸ್ಥ್ಯ

೧೫-೪-೬೪ರಂದು ಹರಳೇಶ್ವರಕ್ಕೆ ಹೋದೆನು. ಬಸವ ಚರಿತ್ರೆ ಬರೆಹ ಮುಂದುವರಿದ ಭಾಗವನ್ನು ಸಂಗಡ ತಕ್ಕೊಂಡಿದ್ದೆನು. ಅಪ್ಪನವರಿಗೆ ಶ್ವಾಸನಳಿಕೆ ಯಲ್ಲಿ ಗುಸುಗುಸು. ತೇಕು ಬರುತ್ತಿತ್ತು. ನಡೆದ ಔಷಧದಿಂದ ಅದರ ಆಯಾಸ ಕಡಿಮೆಯಾಗಿದ್ದರೂ ಹೊತ್ತು ಬಿಟ್ಟು ಹೊತ್ತಿನಲ್ಲಿ ಬಂದು ತೊಂದರೆ ಕೊಡುತ್ತಿತ್ತು. ಕಡೆಮನಿ ನೀಲಮ್ಮ ತಾಯಿಯವರು ಅವರ ಶುಶ್ರೂಷೆಗೆ ಅಲ್ಲಿಯೇ ಇದ್ದರು. ದಿನದಲ್ಲಿ ನಾಲ್ಕಾರು ಸಾರೆ ಈ ಬಾಧೆ ತಲೆದೋರಿ ೧೫-೨೦ ನಿಮಿಷ ಆಯಾಸ ಮಾಡುತ್ತಿದೆ. ದಿ. ೧೯ರಂದು ಅದರ ವೇಗ ಹೆಚ್ಚಾದಂತೆ ಕಂಡದ್ದರಿಂದ ಸಾಯಂಕಾಲ ೪ ಗಂಟೆ ಸುಮಾರಿಗೆ ನಾನು ಬಬಲೇಶ್ವರಕ್ಕೆ ಹೋಗಿ ಬೀಳೂರ ಡಾ|| ರಿಗೆ ತಿಳಿಸಿ ಹೆಚ್ಚಿನ ಔಷಧಿ ತಕ್ಕೊಂಡು ರಾತ್ರಿ ೮ ಗಂಟೆಗೆ ಆಶ್ರಮಕ್ಕೆ ಬಂದು ಕೊಡುವದಾಯಿತು. ನಾಳೆ ಡಾಕ್ಟರರೇ ಬಂದು ತಪಾಸಿಸಿ 'ಇಂಜೆಕ್ಸನ ಕೊಡುವ ದಾಗಿ ಹೇಳಿದ್ದನ್ನು ತಿಳಿಸಿದೆ. ಅವರು ಮರುದಿನ ಆ ಪ್ರಕಾರ ಬಂದರು ಉಪಚಾರ ಮಾಡಿದರು. ಅಸ್ತಮಾದ ಸೂಚನೆಯಿದೆಯೆಂದು ಹೋಗುವಾಗ ನನಗೆ ತಿಳಿಸಿದರು. ಅಪ್ಪನವರ ಆರೋಗ್ಯ ಗಮನಿಸುತ್ತ ಇನ್ನೂ ನಾಲ್ಕು ದಿವಸ ಆಶ್ರಮದಲ್ಲಿಯೇ ಉಳಿದೆನು. ದರ್ಶನಕ್ಕೆ ಬರುವ ಮುದುಕರಲ್ಲಿ ಕೆಲಕೆಲವರು ಈ 'ದಮ್ಮು' ರೋಗಕ್ಕೆ ತಮ್ಮ ಅನುಭವದ ಕೆಲವು ಶಮನೋಪಾಯಗಳನ್ನು ಸೂಚಿಸುತ್ತಿದ್ದರು. ಸಾಧ್ಯವಾದ ಆ ಮೇಲುಪಚಾರಗಳನ್ನು ಮಾಡಲಾಗುತ್ತಿತ್ತು.

ಅಪ್ಪನವರು ಆರಾಮವಿದ್ದಾಗ ಉತ್ಸಾಹಿತರಿದ್ದಾಗ ತಾವೇ ಹೇಳಿದಾಗ ಮತ್ತೆ ಬರೆದಷ್ಟು ಬಸವ ಚರಿತ್ರೆಯನ್ನು ಅಷ್ಟಿಷ್ಟು ಓದುತ್ತ ೨-೩ ದಿನಗಳಲ್ಲಿ ಮುಗಿಸಿದ್ದೆನು. ಹೀಗೆಯೇ ಒಮ್ಮೆ ವಿರಾಮವಾಗಿ ಸಂಭಾಷಿಸುತ್ತಿರುವಾಗ ನೀಲಮ್ಮ ತಾಯಿಯವರು "ಲಕ್ಕಪ್ಪಣ್ಣನ ಪ್ರಪಂಚ ಬಹಳ ಚಂದ ಅದ ನೋಡ್ರಿ

ಅಪ್ಪಾ ಅವರ. ಮನೆಯವರೆಲ್ಲರು ಒಬ್ಬರಿಗೊಬ್ಬರು ಬಹಳ ಪ್ರೀತಿಯಿಂದ ನಡಕೊಳ್ಳುತ್ತಿದ್ದಾರೆ. ಒಬ್ಬಳೇ ಇದ್ದ ಮಗಳು ಹಾಯಸ್ಕೂಲಿಗೆ ಹೋಗುತ್ತಾಳೆ. ಗುಣವಂತಿ! ಮುತ್ತಿನಂತಹ ಮೊಮ್ಮಗ ಇದ್ದಾನೆ" ಎಂದರು.

"ಹೌದು ಮಕ್ಕಳಿಬ್ಬರು ಅಣ್ಣ ತಮ್ಮಂದಿರಾಗಿ ಅಪರೂಪದ ಕ್ರಮದಿಂದ ಪ್ರೇಮದಿಂದ ಸಹಕಾರದಿಂದ ನಡೆಯುತ್ತಿದ್ದಾರೆ. ತಂದೆ ಮಕ್ಕಳ ನಡುವೆ ಬಿಗುಮಾನವಿಲ್ಲ. ಅತ್ತೆ ಸೊಸೆಯಂದಿರಲ್ಲಿ ಯಾವ ಸಮಸ್ಯೆಗಳಿಲ್ಲ. ಸೊಸೆಯಂದಿರು ಅಂತಹ ಸಜ್ಜನೆಯರು. ಅವ್ವಾ ಒಮ್ಮೆ ಈ ಇವರಿಬ್ಬರೂ ಗಂಡ ಹೆಂಡರಿಗೆ 'ಒಮ್ಮೆ ನೀವಿಬ್ಬರೂ ಜಗಳವಾಡಿರಿ ನೋಡಬೇಕೆನ್ನುತ್ತೇನೆ' ಎಂದಿದ್ದರಂತೆ ಇವರ ಬಳಗದ ಒಬ್ಬ ಹಿರಿಯರು. ಸಂಸಾರದಲ್ಲಿದ್ದರೂ ಸುದೈವಿಗಳು ಶಿರಹಟ್ಟಿ ಸಾಹೇಬರು ಎಂದರು ಅಪ್ಪನವರು.

ಈ ಪಾದಗಳ ಆಶೀರ್ವಾದದಿಂದಲೇ ಆ ಸುದೈವ ಮೂಡಿ ಬಂದದ್ದು ಎಂದು ವಂದಿಸಿದೆ. ಏನೇ ಇರಲಿ ಬಹಳ ಸಂತೋಷದ ಮಾತು ಎಂದರು.

ಮತ್ತೊಮ್ಮೆ ನೀಲಮ್ಮನವರು 'ಅಪ್ಪಾ ಅವರಿಗೆ ಒಂದು ಕೈಗಾಡಿ ಮಾಡಿಸ ಬೇಕಪ್ಪ ಅಣ್ಣಾ!' ಎಂದರು. "ಹೌದರಿ ಅವ್ವಾ ನನ್ನ ತಲೆಯಲ್ಲಿಯೂ ಈ ವಿಚಾರ ಬಂದದೆ. ಇವರನ್ನು ಎತ್ತಿಕೊಂಡು ಹೋಗುವದು ಈ ಕೋಣೆಗಳ ಮಟ್ಟಿಗಾಗುವದು. ಕೈಗಾಡಿಯಾದರೆ ಅದರಲ್ಲಿ ಕೂಡ್ರಿಸಿಕೊಂಡು ಬಯಲಲ್ಲಿ ತಿರುಗಾಡಿಸಿಕೊಂಡು ಬಂದರೆ ಬಯಲಿನ ಗಾಳಿಯ ಸೊಗಸು."

"ಹೌದಪ್ಪ ವಿಜಾಪುರದಲ್ಲೇ ಇರತೀರಿ ವಿಚಾರ ಮಾಡಿ ಮಾಡಿಸು"

"ಇದರ ಬಗ್ಗೆ ಅತಿ ಅಗತ್ಯವಾಗಿ ಯೋಚಿಸುತ್ತೇನೆ"

ಅಪ್ಪನವರ ಪ್ರಕೃತಿಯಲ್ಲಿ ತೊಂದರೆ ಸ್ವಲ್ಪ ಕಡಿಮೆಯಾಗಿದೆ ಎನಿಸಿತ್ತು. ೨೪–೪–೬೪ ರಂದು ವಿಜಾಪುರಕ್ಕೆ ಬಂದೆನು. ಗಾಡಿಯ ಯೋಚನೆಯಲ್ಲಿ!

ಕೈಗಾಡಿ

ಕೂಡಲೆ ಕೈಗಾಡಿ ನಿರ್ಮಿಸುವ ವಿಷಯದಲ್ಲಿ ಮನಸ್ಸು ತೊಡಗಿಸಿದೆ. ಕಾಲಿಲ್ಲದವರೊಬ್ಬರು ಒಂದು ವಿಶೇಷ ತರದ ಕೈಗಾಡಿಯಲ್ಲಿ ಕುಳಿತು ಮೇಲಿನ ಚಕ್ರವನ್ನು ಕೈಯ ಬಲದಿಂದ ತಿರುಗಿಸುತ್ತ ಚಲನೆಮಾಡಿ ಹೋಗುತ್ತಿರುವದನ್ನು ನೋಡಿದ್ದೆ. ಅಂತಹದು ಅಪ್ಪನವರಿಗೆ ಸಾಧ್ಯವಾಗದು. ಅವರನ್ನು ಆರಾಮವಾಗಿ

ಕೂಡ್ರಿಸಿ ಮತ್ತೊಬ್ಬರು ಸುಲಭವಾಗಿ ನೂಕುತ್ತ ಹೋಗುವಂತಹ ರಚನೆಯೇ ಬೇಕು ಎಂದು ನಿರ್ಧರಿಸಿದೆನು. ಸ್ಕೇಲಿನಂತೆ ಒಂದು ರಟ್ಟಿನ ಮಾದರಿ (ವಿನ್ಯಾಸ) ತಯಾರಿಸಿದೆನು. ಭಾಗೋಪಭಾಗಗಳ ಅಳತೆ ನಿರ್ಣಯಿಸಿದೆ. ನಾನು ಆಶ್ರಮ ದಿಂದ ಬಂದ ಒಂದು ವಾರದಲ್ಲಿ ಶ್ರೀ ಬಿ.ಕೆ. ದಂಧರಗಿ ಅವರು ಶ್ರೀಗಳ ದರ್ಶನಕ್ಕೆ ಅಲ್ಲಿಗೆ ಹೋಗಿದ್ದರು. ಅವರ ಸಂಗಡ ಕೈಗಾಡಿಯ ಖರ್ಚಿಗೆಂದು ೨೦೦ (ಎರಡು ನೂರು) ರೂಪಾಯಿಗಳನ್ನು ನೀಲಮ್ಮ ತಾಯಿಯವರು ಕಳಿಸಿದ್ದರು. 'ನನ್ನ ವಿಚಾರ ಬೇರೆ ಇತ್ತಲ್ಲ' ಎಂದು ಮನಸ್ಸಿನಲ್ಲಿ ಅಂದುಕೊಂಡೆ.

ಕಬ್ಬಿಣದ ಪಟ್ಟಿಗಳನ್ನು ಸಳಾಯಿಗಳನ್ನು ಅಳತೆಯಂತೆ ತುಂಡು ಮಾಡಿಸಿ ತಕ್ಕೊಂಡೆವು ಸಳಾಯಿಗಳ ತುದಿಗಳ ಪೇಚು ಹಾಕಿಸಿ ನಟ್ಟು ಸಹಿತ ತಂದೆವು. ಕೈಯ ಆನಿಕೆಗೆ ಕಾಲು ಮಣೆಗೆ ಹಲಗೆಗಳನ್ನು ತಕ್ಕೊಂಡೆವು. ಮಗ್ಗಲು ತಗಡು ಗಳನ್ನು ತಂದು ತೊರವಿಯಲ್ಲಿಯ ಕಮ್ಮಾರರಿಂದ ರಟ್ಟಿನ ಮಾದರಿಯಂತೆ ಮೂರು ದಿವಸ ಕಣ್ಣು ಮುಂದೆ ಮಾಡಿಸುವದಾಯಿತು. ಇನ್ನು ಗಾಲಿಗಳ ಕೆಲಸ ಇಷ್ಟರಲ್ಲಿ ೧೧-೫-೬೪ನೆಯ ದಿನ ಯೋಗ ಮಂದಿರದ ಶಾಂತಿ ಕಾರ್ಯಕ್ರಮ ಬರಬೇಕೆಂದು ಆಶ್ರಮದಿಂದ ಆಮಂತ್ರಣ ಬಂದಿತು. ಮುಂಚಿತವಾಗಿ ಹೋಗಲು ಅವಕಾಶವಿರಲಿಲ್ಲ ಆ ದಿವಸವೇ ಹರಳೇಶ್ವರಕ್ಕೆ ಹೋದೆನು. ನೂರಾರು ಭಕ್ತ ಜನರು ಕೂಡಿದ್ದರು. ಇಡೀ ರಾತ್ರಿ ಮಡಿಯಿಂದ ನಿಂತ ಐದು ಜನರಿಂದ ಅಖಂಡ ಮಂತ್ರ ಜಪದ ಏರ್ಪಾಡಾಗಿತ್ತು. ಅವರಲ್ಲಿ ಯಾರಾದರೂ ಜಲಬಾಧೆಗೆ ಹೋದರೂ ಅವರು ಮತ್ತೆ ಸ್ನಾನಮಾಡಿ ಬರುವವರೆಗೆ ಅವರ ಸ್ಥಾನವನ್ನು ಮತ್ತೊಬ್ಬರು ಸಂದಿಲ್ಲದೆ ತುಂಬುತ್ತಿದ್ದರು.

ಮರುದಿನ ಸೂರ್ಯೋದಯಕ್ಕೆ ಜಪದ ಮುಕ್ತಾಯವಾಯಿತು. ಉತ್ತರ ಪೂಜೆ ಮಂಗಳಾರತಿ ಆದ ಬಳಿಕ ಪ್ರಸಾದ ಸ್ವೀಕರಿಸಿ ಕೂಡಲೆ ನಾನು ಅಪ್ಪಣೆ ಪಡೆದು ವಿಜಾಪುರಕ್ಕೆ ಬಂದೆನು ಗಾಡಿಯ ಕೆಲಸ ಅಲ್ಲಿಗೇ ನಿಂತಿತ್ತು.

ಸೈಕಲಿನ ಮುಂದಿನ ಎರಡು ಗಾಲಿಗಳನ್ನು ಹೊಸವು ತಕ್ಕೊಂಡು ಅಚ್ಚು, ಗೋಳಿ ತುಂಬಿಸಿ ತಂದು ಗಾಡಿಗೆ ಜೋಡಿಸಿದೆವು ಕಾಲುಮಣೆಯ ಕೆಳಗೆ, ಮಕ್ಕಳ ಮೂರು ಗಾಲಿಯ ಸೈಕಲಿಗಿರುವಂತಹ ಎರಡು ಚಿಕ್ಕಗಾಲಿಗಳನ್ನು ಜೋಡಿಸಿದೆವು. ನೂಕುವದಕ್ಕೆ ಹಿಡಿಯುವ ಹಿಡಿಕೆಗಳು ಹಿಂದೆ ಮನುಷ್ಯನಾಳಕ್ಕೆ ಸರಿಯಾಗಿದ್ದವು. ಅಗತ್ಯವಿದ್ದಷ್ಟು ಬಣ್ಣ ಮಾಡಿತು. ಆರಾಮು ಖುರ್ಚಿಗಿರುವಂತಹ ಜಮಖಾನ

ಪಟ್ಟಿಯನ್ನು ಎರಡು ಪದರು ಮಾಡಿ ನಡುವೆ ಹೊಂದಿಸಲಾಯಿತು. ಅದರ ಮೇಲೆ ಎಡ ಬಲದ ಫಲಕಗಳ ಮೇಲೆ ಕೈಯಿಟ್ಟು ಕಾಲು ಮಣೆಯ ಮೇಲೆ ಪಾದವಿಟ್ಟು ಆರಾಮವಾಗಿ ಕೂಡ್ರುವಂತೆ ಸಜ್ಜಾಗಿತ್ತು.

ಗಾಡಿಯನ್ನು ದಿ. ೨೪–೫–೬೪ ಶೇಗುಣಶಿ ಮುಖಾಂತರ ಆಶ್ರಮಕ್ಕೆ ಒಯ್ಯುವ ಯೋಜನೆ ಮಾಡಿ ಆಶ್ರಮಕ್ಕೆ ತಿಳಿಸಲಾಗಿತ್ತು. ಮನೆಯಲ್ಲಿ ಗಾಡಿಯನ್ನು ಪೂಜಿಸಿದೆವು. ಬಳಿಕ ಬಿಚ್ಚಿ ಬಿಡಿಭಾಗಗಳನ್ನು ಗೂಡಿಸಿ ಕಟ್ಟಿ ಬಸ್ಸಿನ ಮೇಲೆ ಹಾಕಿಕೊಂಡು ಹೋದೆವು ಸಂಜೆ ೮ ಗಂಟೆಯ ಹೊತ್ತಿಗೆ ಶೇಗುಣಶಿಗೆ ಇಳಿದೆವು. ಗೌಡರ ಮನೆಯಲ್ಲಿ ಸೀಮಂತ ಕಾರಣವಿತ್ತು. ಅಲ್ಲಿಯೇ ಊಟ ಮಾಡಲಾಯಿತು. ಕಡೆಮನಿ ನೀಲಮ್ಮ ಅವ್ವನವರೂ ಅಲ್ಲಿಯೇ ಇದ್ದರು. ಆಗಿಹುಣ್ಣಿಮೆಯ ಬೆಳ್ಳಗಿನ ಬೆಳದಿಂಗಳಲ್ಲಿ ಚಕ್ಕಡಿಯಲ್ಲಿ ಕೈಗಾಡಿಯ ಕಟ್ಟು ಇಟ್ಟುಕೊಂಡು ಆಶ್ರಮಕ್ಕೆ ಹೋದೆವು.

ಬೆಳಿಗ್ಗೆ ಸೋಮವಾರ ಹಲಗಣೆಯಿಂದ ಬಂದ ಶ್ರೀ ಧವಳಗಿ ಶ್ರೀ ಅಂಗಡಿ ಗುರುಗಳ ಸಹಾಯದಿಂದ ಗಾಡಿಯನ್ನು ಜೋಡಿಸಿದೆವು. ಹರಳೇಶ್ವರ ಲಿಂಗ ದೆದುರಿಗಿನ ಮಂಟಪದಲ್ಲಿ ಅದನ್ನು ಪೂಜಿಸಿ ಅಪ್ಪನವರನ್ನು ಆರೋಹಣ ಮಾಡಿಸಿ ಮಠದ ಮುಂದೆ ತಿರುಗಾಡಿಸಿದೆವು. ನೀಲಮ್ಮ ತಾಯಿಗೆ ಬಹಳ ಸಂತೋಷ! ಮಾವಿನ ಹಣ್ಣುಗಳ ಬುಟ್ಟಿಯನ್ನೇ ನಮ್ಮಗಳ ನಡುವೆ ಇಟ್ಟು ಅಪ್ಪಣೆ ಮಾಡಿದರು. ರಸ ಋಷಿಗಳ ಸನ್ನಿಧಿಯಲ್ಲಿ ರಸರುಚಿ ಅನುಭವಿಸಿದೆವು. ನಗುತ್ತ ಕೆಲೆಯುತ್ತ! ಕೈಗಾಡಿಗೆ ಒಟ್ಟು ೮೦ ರೂ ಖರ್ಚಾಗಿದ್ದವು. ೧೫೦ ರೂ ಮಾತ್ರ ನೀಲಮ್ಮ ತಾಯಿಯ ಕೈಗೆ ಮರಳಿಸಿದೆನು. ಮಾಡಲಾರದುದನ್ನು ಮನಸ್ಸಿನಲ್ಲಿ ಇತ್ತೆಂದರೆ ಪ್ರಯೋಜನವಿಲ್ಲವಷ್ಟೇ?

ಕೈಗಾಡಿ ಗಾಲಿಗಳಿಗೆ ಹವೆ ತುಂಬುವ ಟ್ಯೂಬ ಬದಲು ಟಾಯರದಲ್ಲಿ ಗಡುತರ ಹಗ್ಗ ಹಾಕಿ ಗಟ್ಟಿ ಮಾಡಿದ್ದು ನನ್ನ ಯೋಜನೆಯಾಗಿತ್ತು. ಅದು ಆಶ್ರಮದ ಸೇವಕರಿಗೆ ಸರಿಯೆನಿಸದೆ ಅಪ್ಪನವರ ಅಪ್ಪಣೆ ಪಡೆದು ಹೊಸ ಟ್ಯೂಬ ಟಾಯಿರ ಹಾಕಿ ಹವೆ ತುಂಬುವ ಪಂಪ ಸಹ ತಂದಿದ್ದರು. ಕೋಣೆಯ ಬಾಗಿಲಲ್ಲಿ ಹಾಯುವ ಸಲುವಾಗಿ ಕೈಗಾಡಿಯ ಅಗಲನ್ನು ಎರಡು ಫೂಟು ಮಾತ್ರ ಇಡಲಾಗಿತ್ತು ಇದು ಕಡಿಮೆಯಾಯಿತು. ಒಂದು ಗಾಲಿಗೆ ಏರು ಒಂದು ಗಾಲಿಗೆ ತಗ್ಗು ಹತ್ತಿದಾಗ ಮಗ್ಗಲು ಹೊರಳುವ ಸಂಭವ ಕಾಣಹತ್ತಿತ್ತು. ಮುಂದೆ

ವಿಜಾಪುರಕ್ಕೆ ತಂದು ಅಡ್ಡಲಾಗಿರುವ ಸಳಿಗಳನ್ನು ತೆಗೆದು ಬದಲಾಗಿ ಎರಡೂವರೆ ಘೂಟಿನ ಸಳಿಗಳನ್ನು ಪೇಚು ಹಾಕಿಸಿ ನಟ್ಟು ಬಿಗಿದು ಕಳಿಸಲಾಯಿತು. ಆ ಮೇಲೆ ಬೇರೆ ದುರಸ್ತಿ ಕಾರಣ ಬೀಳಲಿಲ್ಲ.

ಮುತ್ತೈದೆಯ ಒಡವೆಗಳು

ನಮ್ಮ ಕುಟುಂಬದವರೆಲ್ಲ ಏಕಕಾಲಕ್ಕೆ ಆಶ್ರಮದಲ್ಲಿ ಅಪ್ಪನವರ ಸಾಮುದಾಯಿಕ ದರ್ಶನ ಪಡೆಯುವ ಸಂಕಲ್ಪ ಮನಸ್ಸಿನಲ್ಲಿ ಮೂಡಿತು. ಮನೆಯಲ್ಲಿ ಎಂಟು ಮಂದಿ ಎಲ್ಲರಿಗೂ ಹೇಳಿದೆ ಎಲ್ಲರೂ ಸಿದ್ಧ! ಕೂಡಲೆ ನಿರ್ಣಯ ೧೧–೧೦–೬೪ ರವಿವಾರ ಸಂಜೆಗೆ ಕಾಖಂಡಿಕೆಗೆ ಹೋಗಿ ಸೋಮವಾರ ಲಕ್ಷ್ಮಪ್ಪಣ್ಣ ಹೂಡಿಸಿಕೊಡುವ ಚಕ್ಕಡಿಯಿಂದ ಹೋಗುವದೆಂದು ನೇಮಿಸಲಾಯಿತು. ಅದರಂತೆಯೇ ಆಶ್ರಮಕ್ಕೆ ಹೋದೆವು. ಬಳಿಕ ಎಲ್ಲರೂ ಅಪ್ಪನವರ ಹತ್ತಿರ ಸಾಲಾಗಿ ಕುಳಿತು ಸ್ತೋತ್ರ ಹಾಡಿ ಮಂಗಳಾರತಿ ಮಾಡಿ ವಂದಿಸಿದೆವು. ಅಪ್ಪನವರು ವಿನೋದ ಮಿಶ್ರಿತವಾಣಿಯಿಂದ ಹಿತವಚನ ಬೋಧಿಸಿದರು. ಶಶಿಧರ (೫ ವರ್ಷದವ)ನನ್ನು ಹತ್ತಿರ ಕರೆದು ಲಾಲಿಸಿ ಮಾತಾಡಿಸಿ ನಗೆಯಾಡಿ ಆಶೀರ್ವದಿಸಿದರು.

ಪ್ರಭಾ (ಮಗಳು) ನಾನು ಮತ್ತು ಮಿತ್ರ ಚೆನ್ನಪ್ಪ ಮೂವರನ್ನುಳಿದು ಮನೆಯವರೆಲ್ಲ ಮುಂಜಾನೆ ಶ್ರೀಗಳ ಮರುದರ್ಶನ ಪಡೆದು ವಿಜಾಪುರಕ್ಕೆ ಹೋಗುವ ಸಲುವಾಗಿ ಶೇಗುಣಶಿಗೆ ಹೊರಟರು. ರಾತ್ರಿ ಸ್ವಲ್ಪ ಮಳೆಯಾಗಿತ್ತು ಹಾದಿಯಲ್ಲಿ ಒಂದು ಬದುವಿನಲ್ಲಿ ನೀರು ಬಂದು ಕೆಸರಾಗಿತ್ತು. ಅದರಲ್ಲಿ ಹಾಯುವಾಗ ಕಾಲಿಗೆ ಮೆತ್ತಿದ ಕೆಸರು ಜಾಡಿಸುವಾಗ ನನ್ನ ಶ್ರೀಮತಿಯ ಒಂದು ಕಾಲಿನ ಕಾಲುಂಗರ ಎರಡು ಕಳಚಿ ಕೆಸರಲ್ಲಿ ಹೋಗಿಬಿಟ್ಟಿದ್ದವು. ಅಷ್ಟರಲ್ಲಿ ಹರಳೇಶ್ವರ ಪೂಜೆಗೆ ಹೊರಟ ಶೇಗುಣಶಿಯ ಪೂಜಾರಿ, ಇವರಿಗೆ ಭೆಟ್ಟಿಯಾಗಲು ಅವನಿಂದ ಈ ಸಂಗತಿಯನ್ನು ಆಶ್ರಮಕ್ಕೆ ಹೇಳಿಕಳಿಸಿದ್ದರು.

ಇದನ್ನು ಕೇಳಿ ಕಡೆಮನಿ ಅವ್ವನವರು ಬಹಳ ಹಳಹಳಿ ಮಾಡಿಕೊಂಡರು. ಮುತ್ತೈದಿ ಲಕ್ಷಣ ಕಾಲುಂಗುರ! ಹೀಗೇಕಾಯಿತಪ್ಪ! ಎಂದರು. ನಾನೆಂದೆ "ಅವ್ವಾ ಮುತ್ತೈದಿಗೂ ಮನೆತನಕ್ಕೂ ಏನೇನೂ ಆಗುವದಿಲ್ಲ ಇದರಿಂದ! ಚಿಂತಿಸಬೇಡಿರಿ. ಇಲ್ಲಿದೆ ಭಾರೀ ತೇಜೋ ಮೂರ್ತಿ, ಇವರಡಿಯಲ್ಲಿ ಕತ್ತಲೆಯೇ?

ಅಶುಭವೇ? ಸಾಧ್ಯವಿಲ್ಲ. ಆಕಸ್ಮಿಕಗಳು ಏನಾದರೂ ನಡೆದರೆ ನಮ್ಮ ಭವಿಷ್ಯಕ್ಕೆ ಕಾರಣವೇಕಾಗಬೇಕು? ಹಿಂದೆ ಹೀಗೆಯೇ ಆದ ಪ್ರಸಂಗವೊಂದು ಅದನ್ನು ಕೇಳಿರಿ" ಏನಪ್ಪ ಅದು? ಎಂದರು ನಾನು ಹೇಳಿದೆ.

"ಕೇಳಿರಿ ಸುಮಾರು ೨೫ ವರ್ಷಗಳ ಹಿಂದಿನಮಾತು ವಿಜಾಪುರದಲ್ಲಿ ಶಿಕ್ಷಕನಾಗಿದ್ದೆ ಒಂದು ದಿನ ಶಾಲೆಗೆ ಬಿಡುವಿತ್ತು. ಅಂದು ಭಾರತ ಹುಣ್ಣಿಮೆಯೂ ಆಗಿತ್ತು ಬಡವರಿಗೆ ಭಾರತ ಹುಣ್ಣಿವೆ ಅನ್ನುತ್ತಾರೆ ಬಡವರ ಭಾಗ್ಯದ ಹುಣ್ಣಿವೆಯೂ ಹೌದು. ಅಂದು ಮುಂಜಾನೆಯೇ ಸಾಯಕಲ್ ಮೇಲೆ ಹೊಲಕ್ಕೆ ಹೋಗಿದ್ದೆ ೭ ಮೈಲು ಬಿಸಿಲೇರಿ ಹಸಿದು ಬಂದೆನು. ಇವಳು ಹೋಳಿಗೆ ಮಾಡಿ ಇಟ್ಟು ಮಣೆ ಅಡ್ಡಣಗಿ ಹಾಕಿಟ್ಟು ನನ್ನ ದಾರೀ ನೋಡುತ್ತಿದ್ದಳು ಚಿಕ್ಕ ಮಕ್ಕಳಿಬ್ಬರೂ ಉಂಡು ಆಟಕ್ಕೆ ಹತ್ತಿದರು. ಈಕೆ ಬಯಸಿ ತರಿಸಿದ ಅಂಜೂರಿ ಬಣ್ಣದ ಹೊಸಸೀರಿ ಉಟ್ಟುಕೊಂಡು ಕುಳಿತಿದ್ದಳು. ನಾನು ಕೈಕಾಲು ತೊಳೆದುಕೊಂಡು ಭಸ್ಮಧರಿಸಿ ಮಣೆಯ ಮೇಲೆ ಕುಳಿತೆ ಅಷ್ಟರಲ್ಲಿ ಹೋಳಿಗೆ ಬುಟ್ಟಿ ಮುಂದಕ್ಕಿಟ್ಟು ತುಪ್ಪದ ಮಿಳ್ಳಿ ಬಿಸಿ ಮಾಡಲು ಒಲೆಯಲ್ಲಿ ದಂಟಿನ ತುಣಕಿಟ್ಟು ಊದುತ್ತಿದ್ದಳು. ಮಿದುವಾಗಿದ್ದ ಸೀರೆಯ ಸೆರಗು ಎಡಗಡೆಯಿಂದ ಮುಂದೆ ಚಾಚಿತ್ತು. ದಂಟಿಗೆ ಬಗ್ಗನೆ ಎದ್ದ ಉರಿ ಆ ಸೆರಗಿಗೂ ಹತ್ತಿಕೊಂಡಿತು 'ಹಾಹಾ' ಎನ್ನುತ್ತ ಎದ್ದು ಹೋದೆ ತಿಕ್ಕಿ ಆರಿಸಿದೆವು ಅಷ್ಟರಲ್ಲಿ ಒಂದು ಗೇಣೆನಷ್ಟು ಸೆರಗಿನ ಮೂಲಿ ಸುಟ್ಟಿತ್ತು. ಎಚ್ಚರಿಲ್ಲ....ಮುಂತಾಗಿ ಸ್ವಲ್ಪ ಸಿಟ್ಟಿನಿಂದ ನುಡಿದೆ. ಅಡಗಿ ಮನೆಯ ದೊಡ್ಡ ಕಿಡಕಿ ರಸ್ತೆಗೆ ಹೊಂದಿ ಇತ್ತು. ಆ ಕಿಡಕಿಯ ಕೆಳಗೆ ಕಟ್ಟೆಯ ಮೇಲೆ ಕುಳಿತ ಕೆಲವು ಸೋದರಿಯರು ನಮ್ಮ ಗಲಿಬಿಲಿಯಿಂದ ಒಳಗೆ ಬಂದು ಪಡಸಾಲೆಯಲ್ಲಿ ನಿಂತು ಕೇಳಿದರು 'ಅಯ್ಯ ಹುಣಿವೆ ದಿನ ಹೀಂಗಾಯತಲ್ಲವ್ವ! ಹೋಳಿಗೆ ಮಾಡಿ ಗಂಡಗ ನೀಡುವಾಗ ಹೊಸಸೀರಿ ಸೆರಗಿಗೆ ಬೆಂಕಿ ಹತ್ತಿತಲ್ಲವ್ವ! ಎಂದು ಗಲಗಲ ಅನ್ನಹತ್ತಿದರು. ನಾನು ಒಳಗಿನಿಂದಲೇ ಗಟ್ಟಿಯಾಗಿ ಹೇಳಿದೆ. ಅದಕ್ಕೆ ಏನೂ ಆಗುವದಿಲ್ಲ ಬಿಡ್ರಿ! ಒಳಗೇ ಬರ್ರಿ ಊಟಾ ಮಾಡೋಣ ಬರ್ರಿ ಎಂದೆ. ಮಾಡಿರಿ ಊಟಾ ಮಾಡಿರಿ ಎನ್ನುತ್ತ ಹೋದರು. ಹೊರಗೆ ಸ್ವಲ್ಪ ಹೊತ್ತು ಓಣಿಯಲ್ಲಿ ಗುಬುಗುಬು ನಡೆದು ತಣ್ಣಗಾಗಿತ್ತು. ಈಕೆಗೆ ಸ್ವಲ್ಪ ಸಂಕೋಚವೇನೋ! ಸೀರಿ ಬದಲಿಸಿ ಮತ್ತೊಂದುಟ್ಟು ಬಂದು ಎಡೆ ಮಾಡಿದಳು. ಮುಖ ಮ್ಲಾನವಾಗಿತ್ತು

"ಆದರೆ ಮುಂದೆ ಏನಾಗಿದೆ ಅವ್ವಾ? ಇನ್ನೂ ನಾನಿದ್ದೇನೆ ಆಕೆ ಮುತ್ತೈದಿಯಾಗಿಯೇ ಇದ್ದಾಳೆ ನನಗೆ ಹೆಚ್ಚಿನ ಸ್ಥಾನದ ನೌಕರಿಗಾಗಿ ಧಾರವಾಡಕ್ಕೆ ನೇಮಕವೂ ಆಯಿತು ಅಂದಿನಿಂದ ಈ ವರೆಗೆ ಬೆಳೆದು ಬಂದ ಈಗಿನ ಸ್ಥಿತಿ ಸ್ವಾಮಿಯ ಕರುಣೆ ಎಲ್ಲವೂ ನಿಮ್ಮ ಕಣ್ಣ ಮುಂದೆ ಇದೆ. ಭಾವುಕರ ದೃಷ್ಟಿಯಲ್ಲಿ ಅಂದು ಕಾಣಿಸಿದಷ್ಟು ಅಶುಭವೇನೂ ಇಂದಿನದಲ್ಲ. ಚೂರು ಬೆಳ್ಳಿ ಹೋಯಿತಷ್ಟೇ ಯಾಕ ಚಿಂತಿ? ಬಿಡಿರಿ ಅವ್ವಾ" ಎಂದು ನಕ್ಕೆನು. ಅಪ್ಪನವರಿಗೂ ವಿನೋದವೆನಿಸಿ ನಗುತ್ತಲೇ ಇದ್ದರು. ಅವ್ವಾ ಎಂಥವರಿಗೆ ಶುಭಾ ಶುಭ ಹೇಳತೀರಿ ಅವ್ವಾ? ಎಂದು ನನ್ನ ಮಾತಿಗೆ ಕಳೆ ಕೊಟ್ಟರು. ಎಲ್ಲಾದಕ್ಕೂ ಗಟ್ಟಿ ಅದಾನ ಬಿಡ್ರೆಪ್ಪ ನಮ್ಮಣ್ಣ ಎಂದಿದ್ದರು ನೀಲಮ್ಮನವರು.

ಅಹಂಕಾರ ಮತ್ತು ಭೃತ್ಯಾಚಾರ

ಅಂದು ಬೇಗಿನ ಹೊತ್ತಿನಲ್ಲಿ ಅಪ್ಪನವರು ಹೇಳಿದ ಸ್ಥಳದಲ್ಲಿ ಅವರು ಕುಳಿತಿದ್ದ ಗಾಡಿಯನ್ನು ನಿಲ್ಲಿಸಿ ಹತ್ತಿರ ನಾವೆಲ್ಲ ಕುಳಿತೆವು. ಬಿಡುವಿನ ವಿರಾಮದ ವೇಳೆ ಭೀಮ ಬಸಯ್ಯ ಸೇವಕರೂ ಇದ್ದರು. ಸಂಸಾರ ಬೇಡವೆಂದು ಮದುವೆಯಾಗದೆ ಮನೆ ಬಿಟ್ಟ ಗಣಿ–ಸಿದ್ಧನಾಥ ಕಡೆಯ ತರುಣ ಸಿದ್ಧನಾಥ ಎಂಬವನು ಅಲೆದಾಡುತ್ತ ಈ ಆಶ್ರಮಕ್ಕೆ ಬಂದಿದ್ದನು. ಆ ಜಿಜ್ಞಾಸುವೂ ಅಲ್ಲಿ ಬಂದು ಕುಳಿತಿದ್ದನು. ಬೇರೆ ಅತಿಥಿಗಳೂ ಇದ್ದರು.

ಒಂದು ಪ್ರಶ್ನೆ 'ಅಪ್ಪಾ ತತ್ವಮಸಿ, ಅಹಂ ಬ್ರಹ್ಮಾಸ್ಮಿ, ಬ್ರಹ್ಮೋ ಹಂ, ಅಯಮಾತ್ಮಾ ಬ್ರಹ್ಮ, ವಿಜ್ಞಾನ ಮಾನಂದಂ ಬ್ರಹ್ಮ, ಶಿವೋಹಂ ಇತ್ಯಾದಿ ಮಹಾವಾಕ್ಯಗಳೆಂದು ಗಣಿಸಲ್ಪಟ್ಟಿವೆ. ವೀರಶೈವರು ಇವುಗಳೆಲ್ಲಕ್ಕಿಂತ 'ದಾಸೋಹಂ'ಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಿರುವದೇಕೆ?

"ದಾಸೋಹಂ ಇದು ಭೃತ್ಯಾಚಾರದ ಸೂತ್ರ"

"ಹಾಗಾದರೆ ಪಂಚಾಚಾರಗಳಲ್ಲಿ ಭೃತ್ಯಾಚಾರಕ್ಕೆ ಹೆಚ್ಚಿನ ಮಹತ್ವವಿದೆಯೆಂದಂತಾಯಿತು."

"ಓಹೋ ಸಂಶಯವೇನು? ಸಾಧನೆಯಲ್ಲಿ ಅದು ಪ್ರಬಲ ಶಕ್ತಿಯಾಗಿರುತ್ತದೆ ಜೀವಾತ್ಮನ ಸರ್ವನಾಶಕ್ಕೆ ಕಾರಣವಾಗುವ ಅಹಂಕಾರವನ್ನು ತಲೆ ಮೆಟ್ಟಿ ತುಳಿಯುವದಕ್ಕೆ ಭೃತ್ಯಾಚಾರವೇ ಬೇಕು. ಮೋಕ್ಷಕ್ಕೂ ಶಾಂತಿ ಸೌಖ್ಯಗಳ ಪ್ರಾಪ್ತಿಗೂ

ಅಹಂಕಾರವು ಪ್ರಬಲವಾದ ವಿರೋಧಿ! ಮಹಾಮಹಾ ಸಾಧಕರು ತಪಸ್ವಿಗಳೂ ಅಹಂಕಾರ ಮೂಡಿದೊಡನೆ ಪತಿತರಾಗುತ್ತಾರೆ. ಅಹಂಕಾರವು ಸುಳಿಯದಂತೆ ಮಾಡುವದಕ್ಕೆ ಮೇಲು ಕೀಳು ಎನ್ನದೆ, ವಿನಯಪೂರ್ವಕವಾಗಿ ಪರರ ಸೇವೆ ಯನ್ನು ಆಡಂಬರವಿಲ್ಲದೆ ಮಾಡುವದೇ ಪರಮೋಪಾಯ! ಭೃತ್ಯಾಚಾರವು ಪಂಚಾಚಾರಗಳಿಗೆ ಕಿರೀಟ ಪ್ರಾಯವಾಗಿದೆ. ಇದು ಅಳವಡದಿದ್ದರೆ ಉಳಿದ ನಾಲ್ಕು ಅಳವಡಲಾರವು. ಭೃತ್ಯಾಚಾರಕ್ಕಾಗಿ ನಮ್ಮ ದೇಹದ ಮೇಲೆ ನಮ್ಮ ಪ್ರಭುತ್ವವಿರಬೇಕು. ಅದಕ್ಕಾಗಿ ಇಂದ್ರಿಯ ನಿಗ್ರಹಬೇಕು ಮಾನಾಪಮಾನದ ಭಾವನೆಯಿದ್ದವನಿಗೆ ಸೇವೆ ಸಂಘಟಿಸದು. ಇದೆಲ್ಲ ಸುಲಭವಲ್ಲರೀ ಇದಕ್ಕೆ ಪ್ರಬಲ ವಾದ ಸಾಧನೆಬೇಕು.

"ಹೌದು ಈ ಸಾಧನೆ ಬೇರೆ, ಮೋಕ್ಷ ಸಾಧನೆ ಬೇರೆ ಎಂದೇನಲ್ಲ. ಅಹಂಕಾರ ಅಳಿದರೆ ಅಲ್ಲಿಯೇ ಇದೆ ಆತ್ಮ ಸಾಕ್ಷಾತ್ಕಾರ!"

"ಸಾಮರಸ್ಯದ ಹೆಬ್ಬಾಗಿಲು" ಎಂದರು ಚನ್ನಣ್ಣ.

"ಹೌದು, ಹೂಂ".

"ಇಂದ್ರಿಯಗಳೂ ಅವುಗಳ ಚಾಲಕ ಮನಸ್ಸು ಇವುಗಳನ್ನು ಗೆದ್ದವರು ಯಾರಾದರೂ ಇರುವರೋ ಇಲ್ಲವೋ?"

"ಸಾವಿರಕ್ಕೊಬ್ಬನಾದರೂ ಇದ್ದಾರೆ. ಇಂದ್ರಿಯ ನಿಗ್ರಹಕ್ಕಾಗಿ ಜ್ಞಾನ ವೃದ್ಧರ ಸೇವೆ ಮಾಡಬೇಕು ಅವರಡಿಯಲ್ಲಿದೆ ಇಂದ್ರಿಯ ನಿಗ್ರಹದ ಗುಟ್ಟು!"

"ಅದಕ್ಕೆಂದೇ ಶರಣರ ಸಂಗವನ್ನು ಬಸವಣ್ಣ ಒತ್ತಿ ಹೇಳುತ್ತಾರೆ"

"ಹರಗುರು ಶರಣರ ಸಂಗದಲ್ಲಿ ನಿಷ್ಠೆ ಬೇಕು. ನಿಷ್ಠೆಯುಳ್ಳ ಭೃತ್ಯಾಚಾರ ವಿರಬೇಕು. ನಿಷ್ಠೆಯಿಲ್ಲದ ಭಕ್ತ ನೇಹವಿಲ್ಲದ ಹೆಂಡತಿ ಇದ್ದರೇನೋ ಹಾಳಾಗಿ ಹೋದರೇನೋ ಎಂದರು ಅಣ್ಣನವರು" ಎಂದು ನಕ್ಕರು ಕೋರಿ ಚೆನ್ನಣ್ಣ.

ಸರಿ! ಸರಿ! ಎಂದರು ಅಪ್ಪನವರು.

"ಅಂತೂ ದಾಸೋಽಹಂ (ಅಹಂ ದಾಸಃ) ಇದು ಭೃತ್ಯಾಚಾರದ ಸೂತ್ರ! ಭೃತ್ಯಾಚಾರದಿಂದಲೇ ಅಹಂಕಾರ ಅಡಗುವದು. ಅಹಂಕಾರ ಅಳಿದರೆ ಮೋಕ್ಷ! ಈ ಚರ್ಚೆಯ ಸಾರಾಂಶ! ಮುಂದೆ ಸಾಮಾನ್ಯ ಮಾತುಗಳಿಗೆ ಹೊರಳಿತು ಸಮುದಾಯ."

ಕೆಸರಲ್ಲಿ ಕಳಚಿದ ಕಾಲುಂಗುರವು ಮುಂದೆ ಎರಡು ದಿನಕ್ಕೆ ಒಣಗಿದ ಹೆಂಟೆಯು ಒಳಗಿನಿಂದ ಸ್ವಲ್ಪ ವ್ಯೆದೆರೆದು ಮಿಂಚಿತ್ತು. ದಿನಾಲು ಲಕ್ಷವಿಟ್ಟು ನೋಡುತ್ತಿದ್ದ ಪೂಜಾರಿಯ ಕಣ್ಣಿಗೆ ಕಂಡಿತ್ತು ಆಶ್ರಮಕ್ಕೆ ತಂದು ಕೊಟ್ಟಿದ್ದನು. ಮತ್ತೆರಡು ದಿನಕ್ಕೆ ಆ ಸ್ಥಳವನ್ನು ಹರಗುವಾಗ ಹೊರಬಂದ ಮತ್ತೊಂದು ಕಾಲುಂಗುರ ಸಹ ಆಶ್ರಮಕ್ಕೆ ಬಂದಿತ್ತು. ಎರಡೂ ನಮ್ಮ ಮನೆಗೆ ಕಳಿಸಲ್ಪಟ್ಟಿದ್ದವು. ನೀಲಮ್ಮ ತಾಯಿಗೆ ತುಂಬ ಸಮಾಧಾನವಾಗಿರಬೇಕು.

೬-೧೧-೬೪ ಸಂಜೆಗೆ ಕಾಖಂಡಕಿಗೆ ಬಂದು ಮರುದಿನ ಹರಳೇಶ್ವರಕ್ಕೆ ಹೋದೆನು ಅಪ್ಪನವರು ಆರಾಮವಾಗಿದ್ದರು. ನೀಲಮ್ಮ ತಾಯಿಯವರು ಬಬಲೇಶ್ವರಕ್ಕೆ ಹೋಗಿದ್ದರು. ಬಸವರಾಜ ಚರಿತ್ರೆ ಬಗೆಗಿನ ಬಂಥನಾಳ ಶಿವಯೋಗಿಗಳ ಅನುಮೋದನೆ, ಸಲಹೆ, ಪ್ರೋತ್ಸಾಹ ಮುಂತಾಗಿ ನಡೆದುದೆಲ್ಲ ವನ್ನು ವಿವರಿಸಿದೆನು. ಕೇಳಿ ಹರ್ಷಿಸಿದರು. ನಿಮ್ಮ ಕೃತಿಗೆ ಆಧಾರ ದೊರೆತಂತಾ ಯಿತು ಪೂರ್ಣಗೊಳಿಸಿರಿ. ಪ್ರಕಾಶನಗೊಳ್ಳುವದರಲ್ಲಿ ಸಂದೇಹವಿಲ್ಲ ಎಂದರು.

"ಅಪ್ಪಾ ಸದ್ಯಕ್ಕೆ 'ನೂರೊಂದು ನೆಲೆಯ ನಿಲವು' ಪ್ರಕಟನೆಯ ವಿಚಾರ ಅದನ್ನು ನಾನೇ ಅಚ್ಚು ಹಾಕಿಸಬೇಕೆಂದಿದ್ದೇನೆ ಜ. ಚ. ನಿ. ಮಹಾಸ್ವಾಮಿಗಳ ಮುನ್ನುಡಿ ಬಂದು ಒಂದು ವರುಷವಾಗಿರಬಹುದು ಅದನ್ನು ಕಡೆಗಣಿಸಬಾರದು."

"ಅದು ನಿಜ, ಆದರೆ ಇದು ನಿಮಗೆ ಭಾರವಾದೀತು! ಏನಾದರೂ ಅನುಕೂಲ ಒದಗೀತೆಂದು ಕಾಯಲಾಯಿತು."

ಇದ್ದುದರಲ್ಲಿ ಭಾರ ಕಡಿಮೆ ಮಾಡಿ ಕೊಳ್ಳೋಣರೀ ಅಪ್ಪಾ! ತತ್ವ ವಿಷಯ, ಕಾವ್ಯ ಬೇರೆ. ಸಾಮಾನ್ಯ ಓದುಗರಿಗೆ ಹಿಡಿಸುವದಿಲ್ಲ. ಷಟ್‌ಸ್ಥಲ ಮಾರ್ಗದ ಅಭಿರುಚಿಯುಳ್ಳವರಿಗೆ ಸಾಧಾರಣ ಸ್ವಾಮಿಗಳಿಗೆ ಕೈಪಿಡಿಯಾಗಿ ಕೆಲವು ಪ್ರತಿಗಳು ಹೋದಾವು. ಆದ್ದರಿಂದ ಸಾವಿರದ ಬದಲು ಐನೂರು ಅಚ್ಚು ಮಾಡಿಸೋಣ. ಕಾಗದ ಖರ್ಚು ಅರ್ಧ ಆಗುವದು. ತಮ್ಮ ಆಶೀರ್ವಾದದಿಂದ ಅಷ್ಟು ಭಾರ ವಹಿಸುವೆ. ಆಶ್ರಮದ ಪರವಾಗಿ ಪ್ರಕಟಿಸಬೇಕೆಂದು ಅಪೇಕ್ಷೆ ಇದೆ. ತಮ್ಮ ಅಪ್ಪಣೆ ಏನು?

"ಆಗಬಹುದು"

"ನೂರೊಂದು ನೆಲೆಗಳ ವರ್ಗೀಕರಣ ಪಟ್ಟಿ ಎಲ್ಲಾ ಬರೆದು ಸಿದ್ಧವಾಗಿವೆ ವೈ. ನಾಗೇಶ ಶಾಸ್ತ್ರಿಗಳವರ, ಪ್ರೊ. ಕಬ್ಬಿನವರ ಅಭಿಪ್ರಾಯಗಳು. ತಮ್ಮ

ದೊಂದು ಪ್ರಕಾಶನ ಲೇಖನ, ನನ್ನ ನುಡಿ ಇವಿಷ್ಟು, ಇವನ್ನೆಲ್ಲ ಕೂಡಿಸಬೇಕಾಗಿದೆ. ತಮ್ಮ ಪ್ರಕಾಶನ ಲೇಖನವನ್ನು ತಾವು ಅಪ್ಪಣೆ ಮಾಡಿದರೆ ಶ್ರೀ ಕಬ್ಬಿನ ಅವರೇ ಬರೆಯಲಿ. ಮುದ್ರಣ ಮಾಡುವ ಕರ್ನಾಟಕ ವೈಭವ ಅಚ್ಚುಕೂಟದವರೊಡನೆ ಮಾತನಾಡಿದ್ದೇನೆ. ಈ ಎಲ್ಲದಕ್ಕೂ ತಾವು ಕೃಪೆ ಗೈದು ಅನುಮತಿಸಿದರೆ ಕಾರ್ಯಗತವಾಗುವದು.

"ಅವಶ್ಯವಾಗಿ ಮಾಡಿರಿ. ಶ್ರಮವೂ ಆಯಿತು. ವೆಚ್ಚದ ಭಾರವೂ ಆಯಿತು ಎಲ್ಲವೂ ನಿಮ್ಮ ಮೇಲೆಯೇ ಆಯಿತು."

"ಆಗಲಿ ಈ ಪಾದಕೃಪೆ ಇದ್ದರೆ ಇನ್ನೂ ಹೆಚ್ಚಿನದನ್ನೂ ಮಾಡಬಹುದು." ಪ್ರಕಾಶನ ಲೇಖನದಲ್ಲಿ ಸ್ಪಷ್ಟಗೊಳಿಸುವ ಕೆಲ ಮಾತುಗಳನ್ನು ಟಿಪ್ಪಣಿ ಮಾಡಿಸಿ ಶ್ರೀ ಕಬ್ಬಿನವರಿಗೆ ತಲುಪಿಸಲು ತಿಳಿಸಿದರು.

ಈ ಬಗೆಯಾಗಿ ಎರಡು ದಿವಸ ಅಲ್ಲಿ ಉಳಿದರೂ ಆಶ್ರಮದ ಪರಿಸರದಿಂದ ನನಗೆ ಸೊಗಸು ಉಂಟಾಗಿರಲಿಲ್ಲ. ಏನೋ ಹೇಳಲು ಬಾರದ ಕೊರತೆ ಒಳಗೊಳಗೆ ಬಾಧಿಸುತ್ತಿತ್ತು. ಏನೋ ಅತೃಪ್ತಿ ಅಂತರಂಗವನ್ನು ತಾಕುತ್ತಿತ್ತು. ಇದರಲ್ಲಿಯೇ ಒಂದು ದಿನ, ಹೊರಗಿನ ಅತಿಥಿಗಳು ಯಾರೂ ಇರಲಿಲ್ಲ. ಅಪ್ಪನವರು ಸೇವಕರೂ ನಾನು ಇಷ್ಟೇ ಇದ್ದೆವು.

ಅಮೃತ ನಿಮಿಷ

ಅಮೃತ ನಿಮಿಷ ಸನ್ನಿಹಿತವಾಗಿತೇನೋ! ಮಲಗುವ ಮುಂದೆ ಅಪ್ಪನವರ ಹತ್ತಿರ ಬಹಳ ಹೊತ್ತು ಸುಮ್ಮನೆ ಕುಳಿತಿದ್ದ. ಯೋಗಮಂದಿರದಲ್ಲಿ ಹೋಗಿ ಮಲಗಿದೆ. ಮನಸ್ಸಿಗೆ ಚಡಪಡಿಕೆ! ಎಲ್ಲಿಂದ ಬರಬೇಕು ನಿದ್ರೆ! ಎರಡು ಸಾರೆ ಹೊರಗೆ ಹೋಗಿ ಬಂದೆ ಮಲಗಿದೆ. ಆದರೆ ತಿಳಿಯದ ಆತುರ ಎಬ್ಬಿಸಿತು. ಮೆಲ್ಲಗೆ ಹೊರಟೆ, ಮಂದಿರದ ಬಾಗಿಲು ಇನ್ನೂ ತೆರೆದಿತ್ತು. ಸೇವಕರು ಅಲ್ಲಿ ಗುಡಿಯ ಮುಂದೆ ಹರಟೆ ಹೊಡೆಯುತ್ತ ಕುಳಿತಿದ್ದರು. ಒಳಗೆ ಹೋದೆ ಅಪ್ಪನವರು ಪವಡಿಸಿದ ಕೋಣೆಗೆ ಹೋದೆ. ಅವರು ಬೇಗ ಯೋಗನಿದ್ರೆಗೊಳಗಾಗುತ್ತಿರಲಿಲ್ಲ. ಅವರ ಕಾಟಿನ ಕೆಳಗೆ ಮಂಡೆಗಾಲೂರಿ, ಕಾಟಿನ ಅಂಚಿಗೆ ಎದೆಯಾನಿಸಿ ಕುಳಿತು 'ಅಪ್ಪಾ' ಎಂದೆ ಮೆಲ್ಲಗೆ! 'ಏನು' ಎಂದು ಎದ್ದೇ ಕುಳಿತರು. "ನನಗೆ ಏಕೋ ಅತೃಪ್ತಿ! ಹೇಳಲಾಗದ ಕೊರತೆ ಬಾಧಿಸುತ್ತಿದೆ. ಸಮಾಧಾನವಿಲ್ಲ" ಎಂದೆ. ಅಷ್ಟರಲ್ಲಿ ಅವರು ನನ್ನ ತಲೆಯ ಮೇಲೆ ಕೈಯಾಡಿಸಿ "ಯಾಕೆ ಅತೃಪ್ತಿ? ಏನು

ಕೊರತೆ?" ಎನ್ನುತ್ತ ಬಲಗೈ ಹಸ್ತವನ್ನು ನೆತ್ತಿಯ ಮೇಲೆ ಮೆಲ್ಲಗೆ ಒತ್ತಿ ಇಟ್ಟರು. "ಇಲ್ಲಿ ಏನೂ ಇಲ್ಲ. ಅತೃಪ್ತಿ ಕೊರತೆ ಈಗಿಲ್ಲ ಹೋಯಿತು ಸಮಾಧಾನವಿದೆ" ಎಂದು ಯೋಚಿಸದೆ ಬಂದ ಶಬ್ದಗಳೊಡನೆ ಅವರ ಪಾದಗಳನ್ನು ಹಿಡಿದು ವಂದಿಸಿದೆ. ಏನು ವಿಚಿತ್ರವೋ ವಿದ್ಯುತ್ ಸಂಚಾರವಾದಂತೆ ಅರೆಕ್ಷಣದಲ್ಲಿ ಮಾರ್ಪಾಡು! ತನುಮನ ಭಾವಗಳು ಮಾರ್ದವಗೊಂಡು ಹಗುರಾಗಿದ್ದವು.

"ಸರಿ ಮತ್ತೇನು?"

"ಮತ್ತೇನಿಲ್ಲ ಗುರುದೇವಾ. ಈಗ ಧರಿಸಿರುವ ಲಿಂಗವು ಯಾವಾಗ ಬಂದುದೋ ಯಾರಿಂದ ಬಂದುದೋ ಗೊತ್ತಿಲ್ಲ ತಿಳುವಳಿಕೆ ಬಂದಾಗಿನಿಂದ ಪೂಜಿಸುತ್ತಿದ್ದೇನೆ. ಲಿಂಗದ ನೆಲೆ ಕಲೆ ತಿಳಿದರಾಯಿತು."

"ಅಷ್ಟು ಮಾಡುತ್ತೇನೆ. ನಿಮಗೆ 'ಕಟ್ಟಾ' ಆಚಾರ ಹೇಳುವದಿಲ್ಲ ಸಂಕ್ಷಿಪ್ತ ಸಂಸ್ಕಾರ ನೀಡಿ ಲಿಂಗಧಾರಣ ಮಾಡುವೆ. ನಿಮ್ಮ ಕೂಡ ತಂಗಿಗೂ ಆಗಬೇಕು. ಪಂಚಸೂತ್ರದ ಎರಡು ಲಿಂಗ ಪಿಂಡಿಕೆ ತರಿಸಿಕೊಂಡು ಕಂತಿ ಮಾಡಿಸಿರಿ. ಜುಮನಾಳದಿಂದ ಕಂತಿ ಅಯ್ಯನವರೊಬ್ಬರು ಬರುತ್ತಿರುತ್ತಾರೆ. ನಿಮಗೆ ಅಲ್ಲಿಯೇ ಸಿಗಬಹುದು."

"ಇದ್ದಾರ್ರಿ, ಪಾಚ್ಛಾಪುರದಲ್ಲಿ ಇದ್ದಾರಂತೆ ಮಾಡಿಸುತ್ತೇನೆ."

"ನೂರೊಂದು ನೆಲೆಯ ನಿಲವು, ಮುದ್ರಣವಾಗಿ, ಅದರ ಪ್ರಕಟನೆಯೂ, ನಿಮ್ಮ ಈ ಸಂಸ್ಕಾರ ಕಾರ್ಯವೂ ಒಡನೊಡನೆ ಆಗಲಿ."

"ಅತ್ಯಾನಂದ" ಎನ್ನುತ್ತ ಮತ್ತ ವಂದಿಸಿದೆ.

"ಹೋಗಿರಿ ಮಲಗ ಹೋಗಿರಿ" ಎಂದರು. ಮೆಲ್ಲಗೆ ಎದ್ದೆ! ಹೊರಗೆಲ್ಲ ಕತ್ತಲೆಯಾಗಿದ್ದರೂ ಅಂತರಂಗದಲ್ಲಿ ತುಂಬ ಬೆಳಕು! ಅಪ್ಪನವರ ಆಗಿನ ಚಟುವಟಿಕೆ ದನಿಯ ಆವೇಗ ನೆನೆದರೆ, ತೊರೆದ ಮೊಲೆಯ ಹಾಲನ್ನು ಕಂದನಿಗೆ ಊಡಿಸಲು ಹಾತೊರೆಯುವ ತಾಯಿಯಂತಿತ್ತು ಆ ಭರ!"

ಮುಂಜಾನೆ ಎದ್ದಾಗ ಆಶ್ರಮದ ನೋಟವು ಸುಂದರವಾಗಿತ್ತು. ಬೆಳಗಾಗ ಅಮೃತ ಸುರಿಸಿದ ತಾರೆಗಳು ಅವೇ ಮರೆಯಾಗತೊಡಗಿದ್ದವು. ಸೃಷ್ಟಿ ಸೊಗಸಾಗಿ ಕಂಡಿತು. ಅಂತರಂಗದ ಸೌಂದರ್ಯ ಹೊರಗೆ ಪಸರಿಸಿತ್ತು. ಗುರುಪಾದ ವಂದನೆಗೈದೆ. 'ಇದೊಂದು ದಿನ ಇರ್ರಿ ನಾಳೆ ಹೋಗಿರಿ' ಎಂದು ಅಪ್ಪಣೆ ಮಾಡಿದರು. ಹೂಂ ಎಂದೆನು.

೨೯-೧೧-೯೪ ‘ಗುರುಗಳ ಅಡಿಯಲ್ಲಿ ಲಕ್ಕಪ್ಪ’ ಈ ಸಂಯುಕ್ತ ಭಾವಚಿತ್ರ ತಕ್ಕೊಂಡು ಬರಲು ನಾನು, ಶಿವಶಂಕರನು ಹರಳೇಶ್ವರಕ್ಕೆ ಹೋಗಿ ಬಂದೆವು ‘ನೂರೊಂದು ನೆಲೆಯ ನಿಲವು’ ಪುಸ್ತಕದಲ್ಲಿ ಈ ಭಾವಚಿತ್ರ ಸೇರಿಸಲು ಬ್ಲಾಕ ಮಾಡಿಸಲು ಅದು ಬೇಕಾಗಿತ್ತು. ಈ ಫೋಟೋ ಬಿನಗಲ್ಲಿ ತೆಗೆದುಕೊಂಡು ದಲ್ಲದೆ ಶ್ರೀ ಧವಳಗಿಯವರು ಶ್ರೀ ಭೀಮನಗೌಡರು ಸೇರಿ ಸಮುದಾಯದ ಫೋಟೋ ಒಂದನ್ನು ಬೇರೆ ತೆಗೆಯಲಾಯಿತು.

ನೂ. ನೆ. ನಿ ಮುದ್ರಣ ಸಾಂಗವಾಯಿತು

ವಿಜಾಪುರಕ್ಕೆ ಬಂದಕೂಡಲೆ ಕ. ವೈ. ಅಚ್ಚುಕೂಟದವರೊಡನೆ ಪುಸ್ತಕ ಮುದ್ರಣದ ಕರಾರು ಮಾಡಿಕೊಳ್ಳಲಾಯಿತು. ೯-೧೨-೬೪ರಂದು ಮುದ್ರಣ ಆರಂಭವಾಯಿತು. ಪದ್ಯಗಳು ಕೆಳಗೆ ಸಾರಾಂಶ ಹೀಗೆ ಪುಟಕ್ಕೆ ೨ ಪದ್ಯಗಳಂತೆ ಅಚ್ಚುಕಟ್ಟಾಗಿ ಕೂಡ್ರಿಸುತ್ತ ಕೆಲಸ ನಡೆಯಿತು. ೨-೩ ಸಾರೆ ಅಚ್ಚಿನ ಕರಡು ನೋಡಿ ತಿದ್ದುವ ಕೆಲಸದೊಡನೆ, ಅತ್ತ ಆಕರಗಳನ್ನು ನೋಡುತ್ತ ಬಸವರಾಜ ದೇವರು ಬರೆಹವನ್ನು ಮುಂದುವರಿಸಿದ್ದೆನು. ಅಭಿಪ್ರಾಯ ಬರೆಯುವ ಬಗೆಗೆ ಬಳ್ಳಾರಿಯ ವೈ. ನಾಗೇಶ ಶಾಸ್ತ್ರಿಗಳಿಂದ ಒಪ್ಪಿಗೆಯ ಪತ್ರ ಬಂದಿತು. ೨೮-೧೨-೬೪ ರಂದು ೫೬ ಪುಟ ಪೂರ್ಣ ಅಚ್ಚಾಯಿತು. ಎಲ್ಲ ಪುಟಗಳ ಸೆಟ್ಟನ್ನು ಶಾಸ್ತ್ರಿಗಳ ಕಡೆಗೆ ಕಳಿಸಿ ಇನ್ನೊಂದನ್ನು ಪ್ರೊ. ಕಬ್ಬಿನ ಅವರಿಗೆ, ತಮ್ಮ ಅಭಿಪ್ರಾಯ ಮತ್ತು ಸ್ವಾಮಿಗಳ ಪ್ರಕಾಶನ ಲೇಖನ ತಯಾರಿಸಲು ಕೊಟ್ಟೆನು. ಇಷ್ಟರಲ್ಲಿ ಪಂಚ ಸೂತ್ರದ ಎರಡು ಲಿಂಗಪಿಂಡಿಕೆಗಳನ್ನು ತರಿಸಿ ನನ್ನ ಹಾಗೂ ಸೌ. ಯ ಕರಡಿಗೆಗಳ ಗಾತ್ರಕ್ಕೆ ತಕ್ಕ ಪ್ರಮಾಣದಲ್ಲಿ ಜೋರಾಪುರದ ವಿಭೂತಿ ಗುರುಪಾದಯ್ಯನಿಂದ ಉತ್ತಮ ತರದ ಕಂತೆ ಮಾಡಿಸಲಾಗಿತ್ತು.

ಸಕಾಲಕ್ಕೆ ಮೂರೂ ಲೇಖನಗಳು ಬಂದವು ಅವುಗಳನ್ನು ಮತ್ತು ನನ್ನ ಅರಿಕೆ ಲೇಖನವನ್ನು ಇತರ ಪೂರ್ವಾಪರ ಭಾಗ ಸಹ ಕವರನ್ನು ಮುದ್ರಣ ಮಾಡಿ ಮುಗಿಯಿತು.

೨೫-೧-೬೫ರಂದು ಬೈಂಡಿಂಗ ನಡೆದ ಬಗ್ಗೆ ತಿಳಿಸಿ ಹರಳೇಶ್ವರಕ್ಕೆ ಗುರುಗಳ ಸನ್ನಿಧಿಗೆ ಪತ್ರ ಬರೆದೆನು. ಇದರಲ್ಲಿ ೭-೨-೬೫ರಂದು ರವಿವಾರ ಇದ್ದು ಅಂದು ಆಶ್ರಮದಲ್ಲಿ ಪುಸ್ತಕ ಪ್ರಕಾಶನ ಸಮಾರಂಭ ನಡಿಸುವದಾದರೆ, ಹಲಗಣಿಯ ನನ್ನ ಗೆಳೆಯ ಗುರುಗಳಿಗೆ ಬರಲು ಅನುಕೂಲವಿರುವದರಿಂದ ಅವರಿಗೂ, ತಮ್ಮ ಚಿತ್ತಕ್ಕೆ

ಅರಿಕೆಯಾಗುವ ಬೇರೆ ಭಕ್ತರಿಗೂ ಆಹ್ವಾನ ದಯಪಾಲಿಸುವದಾಗಬೇಕು. ಸೋಮವಾರ ನಮಗೆ ಲಿಂಗ ಸಂಸ್ಕಾರ ಕರುಣಿಸುವದಾಗಬೇಕು ೬-೨-೬೫ರಂದು ನಾವಿಬ್ಬರು ಪುಸ್ತಕ ಪ್ರತಿಗಳನ್ನು ತೆಗೆದುಕೊಂಡು ಬರುವೆವು. ಇದಕ್ಕೆ ತಮ್ಮ ಅನುಮತಿಯ ಆದೇಶ ಪತ್ರ ಬರುವದೆಂದು ಆಶಿಸುತ್ತೇನೆ ಎಂದು ಬಿನ್ನವಿಸಿದ್ದೆನು. ಗುರುಗಳ ಸಮ್ಮತಿಯ ಆದೇಶ ಬಂದು ತಲುಪಿತು.

ಗುರುಕರುಣೆಯ ಸಾಕಾರತೆ

೬-೨-೬೫ ರಂದು ಮುದ್ರಿತ ಪುಸ್ತಕದ ಪ್ರತಿಗಳನ್ನು ಕಟ್ಟಿಕೊಂಡು ನಾವು ಇಬ್ಬರೂ ಸಂಜೆಯ ಬಸ್ಸಿಗೆ ಹೊರಟೆವು. ಶೇಗುಣಶಿಗಿಳಿದು ಶ್ರೀಗಳು ಕಳಿಸಿದ ಸಿದ್ಧನಾಥ, ಮಲ್ಲಪ್ಪ ಇವರ ಜತೆಗೂಡಿ ಆಶ್ರಮಕ್ಕೆ ಶ್ರೀ ಗುರುಸನ್ನಿಧಿ ಸೇರಿದೆವು ಪ್ರಣಾಮ ಗೈದೆವು.

ಗುರುಗಳು ನನ್ನ ಕಲ್ಪನೆಗಿಂತ ಹೆಚ್ಚಿನ ಏರ್ಪಾಡು ಮಾಡಿದ್ದರು ಹಲಗಣಿಯ ಭಕ್ತರಿಂದ ಸ್ವಲ್ಪ ಪ್ರಮಾಣದ ವಿಶೇಷ ಪ್ರಸಾದ ವ್ಯವಸ್ಥೆ ಮಾಡಿಸಿದ್ದರು.

ಗ್ರಂಥ ಪ್ರಕಟನೆ

ಗ್ರಂಥ ಪ್ರಕಟನ ಸಮಾರಂಭ ಮೂರು ಗಂಟೆಗೆ ಎಂದು ಶ್ರೀಗಳು ನಿರ್ಣಯಿಸಿದ್ದರು. ಮುಂದಿರದ ಬಲಗಡೆಯ ದೊಡ್ಡ ಅರಳಿಯ ಮರದ ನೆರಳಲ್ಲಿ, ಹಾಸಿ ಸಜ್ಜಾಗಿತ್ತು. ಅಲ್ಲಿ ತಂದು ನಿಲ್ಲಿಸಿದ ಕೈಗಾಡಿಯಲ್ಲಿಯೇ ಆರಾಮವಾಗಿ ಕುಳಿತ ಅಪ್ಪನವರ ಸನ್ನಿಧಿಯಲ್ಲಿ, ಓರಣವಾಗಿ ಕುಳಿತ ಭಕ್ತರ ಚಿಕ್ಕ ಸಭೆಯಲ್ಲಿ ಕಾರ್ಯಕ್ರಮ ಆರಂಭವಾಯಿತು.

ಅಚ್ಚಿನ ಕೆಲಸ ಮಾಡಿಸುತ್ತಿರುವಾಗಲೇ ರಚಿಸಿದ ಸ್ತೋತ್ರ ರೂಪವಾದ ಈ ಹಾಡನ್ನು ಆರಂಭದಲ್ಲಿ ನಾನು ಸಾದಾ ರೀತಿಯಲ್ಲಿ ಹಾಡಿದೆನು.

ನಮಿಪೆ ಗುರುವೆ ನಮಿಪೆ ಅರಿವೆ.
ನಮಿಪೆ ನಿರುಪಮಾ.
ನಮಿಪೆ ನುತಿಸಿ ಶಾಂತವೀರ ಶ್ರೀ ಗುರೂತ್ತಮಾ
ಶ್ರೀ ಗುರೂತ್ತಮಾ.
ಅಲ್ಲಿ ಇಲ್ಲಿ ಹುಡುಕಿ ಕಾಣ
ದಾಗಿ ಕಡೆಯೊಳು
ಮನವು ನಿಲ್ವ ನೆಲೆಯ ಪಡೆದೆ

ನಿಮ್ಮ ಪದದೊಳು ।
ತವ ಪದಾನ ತಂಗೆ ನಿಮ್ಮ
ಕರುಣೆ ಸಿದ್ಧವು.
ತನಗೆ ತಾನೆ ಮುಂದೆ ಬರ್ಪು
ದಭಯು ಹಸ್ತವು।
ಭಕ್ತ ಜನರ ಬಾಳು ಹಸನ
ಇರಲಿ ಎನ್ನುತ
ಸೂಕ್ತ ನಿಲವು ನಿಮ್ಮ ಪದಕೆ
ಚಿಂತೆ ಸಂತತ ।
ಕೋಪ ತಾಪವಿರಿದ ಮನಕೆ
ನಿಮ್ಮ ವಾಣಿಯೇ
ಶಾಂತಿ ಸುಧೆಯು ಶಾಂತವೀರ
ಶಾಂತ ಮೂರ್ತಿಯೇ ।
ಹಸಿದ ತಲೆಗೆ ಎದೆಯು ಸುಧೆಯು
ಎರೆವ ರೀತಿಯು
ಒಸೆದು ಒಲಿದು ನಲಿಯುವಂತೆ
ನಿಮ್ಮ ಸಮತೆಯು ।
ನಿಮ್ಮ ಮಾತೆ ಮಾತು ಬಗೆಯು
ಬುಗ್ಗೆ ಏಳಲು
ಸುಖದ ಗಾಳಿ ಸುಳಿದು ಮನದ
ಮೊಗ್ಗೆ ಅರಳಲು ।
ನಿಮ್ಮ ನುಡಿಯು ಹೃದಯ ವೀಣೆ
ಯನ್ನು ಮಿಡಿವುದು
ನಿಮ್ಮ ಹಾಸ್ಯ ಚುಟಿಕೆಯಿಂದ
ಮನವು ಕುಣಿವದು ।
ನಿಮ್ಮ ಪಾದಸ್ಪರ್ಶ ಪೆಂಪು
ಸೊಂಪನೀವುದು.

ನಿಮ್ಮ ಪ್ರೇಮ ಹಸ್ತ ಮೈಗೆ
ಪುಳಕನೀವುದು |
ಒಮ್ಮೆ ಹೃತ್ಕವಾಟ ತೆರೆದು
ಬೆಳಕ ನಿಟ್ಟಿರಿ
ಬ್ರಹ್ಮ ಶಕ್ತಿಯುಕ್ತವಾದ
ಮಾಟ ಮೆರಿದಿರಿ |
ವಿಶ್ವಭಾವದಿಂದ ನೀವೆ
ವಿಶ್ವವಾದಿರಿ
ವಿಶ್ವದಣುವು ನಾನು ನಿಮಗೆ
ಏನು ಈಯಲಿ |
ಚರಿತ ಚರಣವಿಲ್ಲವೆಂದು
ನಿಮಗೆ ಕೊರತೆಯೇ?
ನಿರುತ ಭಕ್ತ ಹೃದಯಗಳಲಿ
ಚರಿಸುತಿಲ್ಲವೇ? |
ಹೊರಗೆ ನೋಳ್ಪೊಡಿಲ್ಲವಾದ
ಡೇನು ವಿಶ್ವವ?
ಕಾಣಲೊಳಗೆ ತಾಳ್ದಿರುವಿರೀ
ದಿವ್ಯ ಚಕ್ಷುವ |
ಕ್ರೂರ ಕೀಟ ಕೊರೆದೊಡದಕೆ
ಮಧುವ ನೀಯುತ
ಕುಸುಮದಂಥ ಮೃದುಲ ಹೃದಯ
ಗುರುವೆ ನಿಮ್ಮಯ |
ಎನಿತು ಎನಿತು ಪೊಗಳ್ವೊಡಿರದು
ಮನಕ್ಕೆ ತೃಪ್ತಿಯು
ಅರಿತು ಪೊಗಳ್ವೊಡದಕೆ ಸಾಲ
ದೆನ್ನ ಬುದ್ಧಿಯು
ಅಡಿಗೆ ಅಡಿಗೆ ನಿಮ್ಮ ಅಡಿಯ

ನೆನಹು ಮೂಡಲು
ನಡೆಗೆ ಎನಗೆ ನಿಮ್ಮ ಕರುಣೆ
ದಾರಿ ತೋರಲು ।
ನಮಿಪೆ ಗುರುವೆ ನಮಿಪೆ ಅರಿವೆ
ನಮಿಪೆ ನಿರುಪಮಾ
ನಮಿಪೆ ನುತಿಸಿ ಶಾಂತವೀರ
ಶ್ರೀ ಗುರೂತ್ತಮಾ, ಶ್ರೀ ಗುರೂತ್ತಮಾ।

ಬಳಿಕ ಎಲ್ಲ ಬಂಧುಗಳನ್ನೂ ತಾಯಂದಿರನ್ನೂ ಸ್ವಾಗತಿಸಿ ಈಗ ಪೂಜ್ಯ ಶ್ರೀ ಶಾಂತವೀರ ಮಹಾಸ್ವಾಮಿಗಳವರ ಪ್ರಕಟವಾಗುವ ಪುಸ್ತಕ 'ಷಟ್‌ಸ್ಥಲ ಸಿದ್ಧಾಂತ ರಹಸ್ಯ ಅಥವಾ ನೂರೊಂದು ನೆಲೆಯ ನಿಲವು' ಎಂದಿದೆ. ಈ ಪುಸ್ತಕದ ವಿಷಯವನ್ನು ಕುರಿತು ಹೇಳುವ ಅಮೃತ ವಾಣಿಯನ್ನು ಕೇಳೋಣ ಎಂದು ಕೈ ಮುಗಿದು ಕುಳಿತೆನು.

ಅಪ್ಪನವರಿಗೆ ಕಂಠದ ಗುಸುಗುಸು ಕಾರಣದಿಂದ ಹೆಚ್ಚು ಮಾತನಾಡಿದರೆ ಆಯಾಸವಾಗುತ್ತಿತ್ತು. ಆದರೂ ಷಟ್‌ಸ್ಥಲ ಶಾಸ್ತ್ರದ ಮೂಲವನ್ನೇ ಎತ್ತಿಕೊಂಡು ಕೆಲವು ಮಾತು ಹೇಳಿದರು. ನಮ್ಮದು ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ ಈ ಸಿದ್ಧಾಂತದಲ್ಲಿ ಪರಶಿವನಿಗೆ 'ಸ್ಥಲ' ಎಂದು ಸಂಜ್ಞಿಸಲಾಗಿದೆ. ಪರಶಿವನು ಅನಂತ ಕಾಲ ತಾನೇ ತಾನೇ (ಒಬ್ಬನೇ ಇದ್ದನು. ಬಹುರೂಪಧಾರಣದ ಅಪೇಕ್ಷೆ(ಅಹಮೇದ ಬಹುಸ್ಯಾಂ) ಮತ್ತು ಹುಟ್ಟುವೆನು (ಪ್ರಜಾಯೇಯ) ಈ ಉದ್ದೇಶ ಸ್ಪಂದನದಿಂದ ಆ ಸ್ಥಲ ತತ್ವವು ಎರಡಾಯಿತು. ಒಂದು ಲಿಂಗ ಇನ್ನೊಂದು ಅಂಗ ಪೂಜ್ಯ ಪೂಜಕ ಭಾವಲೀಲೆಯೂ ಈ ಸ್ಪಂದನಕ್ಕೆ ಕಾರಣವೆಂದೂ ಹೇಳಬಹುದು. ಪರಶಿವನಲ್ಲಿರುವ ಸ್ವಸ್ವರೂಪ ವಿಮರ್ಶಾಶಕ್ತಿಯು ಈ ಎರಡೂ ಕಾರಣವಾಗಿ ಲಿಂಗದಲ್ಲಿ 'ಕಲೆ' ಎಂದೂ ಅಂಗದಲ್ಲಿ ಭಕ್ತಿಯೆಂದೂ ನೆಲೆಸಿತು ಈ ಮೂಲದಿಂದಲೇ ಆರಂಭಮಾಡಿ ಆರು ಲಿಂಗಗಳು ಆರು ಅಂಗಗಳು ಪ್ರವೃತ್ತಿ ನಿವೃತ್ತಿ ಕ್ರಮಗಳು ಶಕ್ತಿ-ಭಕ್ತಿಗಳು ಮುಂತಾಗಿ ಷಟ್‌ಸ್ಥಲ ವಿಷಯಗಳನ್ನು ಅರುಹಿ ಈ ಗ್ರಂಥದಲ್ಲಿ ಇವುಗಳ ಹಾಗೂ ಉಪಾಂಗಗಳಾದ ನೂರಾ ಒಂದು ಸ್ಥಲಗಳನ್ನು ಕಾವ್ಯವಾಗಿ ವಿವರಿಸಿದ್ದಾರೆ ಎನ್ನುತ ಕೃತಿಕರ್ತನ ಬಗೆಗೂ ಪ್ರೋತ್ಸಾಹಕ ಮಾತುಗಳನ್ನು ಹೇಳಿದರು. ಇದನ್ನು

ಕನ್ನಡಿಗರು ಪಡೆದು ಪಠಿಸಿ ಕೃತಾರ್ಥರಾಗಬೇಕು ಎಂದು ಆಶೀರ್ವಚನ ನೀಡಿದರು. ಪ್ರಮುಖರ ಹೆಸರುಗೊಂಡು ಒಂದೊಂದು ಪ್ರತಿಯನ್ನು ಆಶೀರ್ವದಿಸಿ ಕೊಟ್ಟರು ಪುಸ್ತಕ ಕೈಯಲ್ಲಿ ಹಿಡಿದು ಕೊನೆಯ ಮಂಗಲಾರ್ಪಣ ಪದ್ಯಗಳನ್ನು ಪಠಿಸಿ ಗುರು ಪಾದಕ್ಕೆ ವಂದಿಸಿದೆನು.

ಹಲಗಣಿಯ ಶಿಕ್ಷಕ ಗೆಳೆಯರಲ್ಲೊಬ್ಬರಾದ ಶ್ರೀ ಅಂಗಡಿಯವರು ಎದ್ದು ನಿಂತರು. ಅವರೂ ಶ್ರೀ ಧವಳಗಿಯವರೂ ಸೇರಿ ನನಗೆ ಗೊತ್ತಿಲ್ಲದೆ ನನ್ನನ್ನು ಕುರಿತು ಅಭಿನಂದನ ಪತ್ರವನ್ನು ತಯಾರಿಸಿದ್ದರು. ಅಂಗಡಿಯವರದನ್ನು ಓದಿದರು. ಕೇಳಿ ನನಗೆ ಗಾಬರಿಯಾಯಿತು. ಅದರಲ್ಲಿ ನನ್ನನ್ನು ಅತಿಯಾಗಿ ಹೊಗಳಿದ್ದರು. ಹಿಂದಿನ ಅನುಭಾವಿ ಶರಣರಿಗೆ ಹೋಲಿಸಿದ್ದರು. ನನ್ನ ಕುರಿತು ಬಳಸಿದ ಶಬ್ದಗಳು ತಲೆಭಾರವಾಗುವಂತಿದ್ದವು. ಅದು ನನಗಾಗಿ ಅಪ್ಪನವರ ಕೈಗೆ ಹೋಗುವ ಮೊದಲೇ ನಾನು ಅದನ್ನು ಖಂಡಿಸಿ ನಿರಾಕರಿಸಲೇಬೇಕಾಯಿತು. ಎದ್ದೆ ಹೇಳಿದೆ "ಅಂಗಡಿ ಗುರುಗಳೇ ತಡೆಯಿರಿ ನಿಮ್ಮ ಅಭಿನಂದನ ಪತ್ರಕ್ಕೆ ನಾನು ಎಳ್ಳಷ್ಟೂ ಯೋಗ್ಯನಲ್ಲ. ಆಡನ್ನು ಆನೆಯನ್ನಾಗಿ ವರ್ಣಿಸಿದ್ದಿರಿ. ಆ ಮಹಾನುಭಾವಿ ಶರಣರೆಲ್ಲಿ ನಾನೆಲ್ಲಿ? ನಾನೊಬ್ಬ ಕೆಳಮಟ್ಟದ ಶಬ್ದಶಿಲ್ಪಿ ಅದೂ ಈ ಪಾದದ ಕೃಪೆಯಿಂದ ಅಷ್ಟು ಬರೆಯುತ್ತಿದ್ದೇನೆ. ನನಗಾಗಿ ಹೇಳಿದ ಹೊಗಳಿಕೆಯ ಶಬ್ದಗಳು ನಿಜವಾಗಿ ಹೊನ್ನಶೂಲ! ಸಮಾಜದಲ್ಲಿ ಉಭಯರೂ ಅಪಹಾಸ್ಯಕ್ಕೀಡೆಯಾಗಬಹುದು. ಬರೆದ ಅದನ್ನು ಹಿಂದೆಗೆದುಕೊಳ್ಳಿರಿ. ಖಂಡಿತವಾಗಿ ನಾನು ಅದನ್ನು ಸ್ವೀಕರಿಸುವದಿಲ್ಲ. ವಿನಯಪೂರ್ವಕ ನಿರಾಕರಿಸುತ್ತೇನೆ. ನನ್ನ ಬಗೆಗಿನ ನಿಮ್ಮ ಪ್ರೇಮಕ್ಕಾಗಿ ವಂದನೆಗಳು ಕ್ಷಮಿಸಬೇಕು ದಯಮಾಡಿ ಅದನ್ನು ಜೇಬಿಗೆ ಹಾಕಿರಿ" ಎಂದು ವಿನೋದದಲ್ಲಿ ಎಳೆದು ಕೈ ಮುಗಿದೆನು. ಅವರೂ ಅವರ ಗೆಳೆಯ ಧವಳಗಿಯವರೂ ನಗುತ್ತ ಪ್ರತಿಯಾಗಿ ಕೈ ಮುಗಿದು ಕುಳಿತರು. ಗುರುಗಳು ನಗುಮೊಗದಲ್ಲಿ ಎಲ್ಲವನ್ನೂ ಆಲಿಸುತ್ತಿದ್ದರು. ಅವರ ಸಂಜ್ಞೆಯಂತೆ ಧವಳಗಿ ಅವರು ಸಭೆಗೆ ವಂದನಾರ್ಪಣಗೈದು ಕಾರ್ಯಕ್ರಮದ ಮುಕ್ತಾಯವನ್ನು ಸೂಚಿಸಿದರು.

ಅಪ್ಪನವರ ಹತ್ತಿರ ಬಂದಾಗ "ಅವರೆಷ್ಟು ಎತ್ತರಕ್ಕೆ ನಿಮ್ಮನ್ನು ಮೇಲೆ ಒಯ್ದರೋ ಅಷ್ಟೇ ವೇಗದಿಂದ ನೀವು ಕೆಳಗಿಳಿದಿರಿ" ಎಂದರು. "ಹೌದರೀ ಅಪ್ಪಾ ಅವರ, ಈ ಗೆಳೆಯರು ಹೂರಿಸುವ ಶಬ್ದಗಳು ಎಷ್ಟು ಭಾರವಾದವುಗಳು ನೋಡಿರಿ. ಹೊತ್ತರೆ ಹೆಡಕೇ ಮುರಿಯುವದು."

"ಪ್ರೇಮದ ತೂಕಕ್ಕೆ ಯಾವ ಶಬ್ದಗಳ ಭಾರವೂ ಸರಿಬಾರವು" ಎಂದು ನಗಹತ್ತಿದರು.

"ಇವರ ಪ್ರೇಮಕ್ಕೆ ನಾನು ಋಣಿ. ಆದರೆ ಮಾತು ಬಲ್ಲವರು ಒಪ್ಪುವಂತಿರ ಬೇಕಲ್ಲರೀ? ನಗೆಗೀಡಾಗಬಾರದು". ಗೆಳೆಯರೂ ಅಲ್ಲಿದ್ದರು. ಶ್ರೀಗಳವರ ಆಶೀರ್ವಾದ ಪಡೆದು ನೆರೆಗ್ರಾಮಗಳವರು ತೆರಳಿದರು.

ಸಂಸ್ಕಾರ

ಸೋಮವಾರ ಸಂಸ್ಕಾರ ಕಾರ್ಯಕ್ರಮ. ಶ್ರೀಗಳವರು ಕಾಖಂಡಕಿಯಿಂದ ಒಬ್ಬ ವೈದಿಕ ಜಂಗಮರನ್ನು ಕರೆಯಿಸಿದರು. ತಾವು ಸ್ನಾನ ಮಾಡಿ ಪೂಜಾ ಕೋಣೆಯನ್ನು ಪ್ರವೇಶಿಸಿ ಲಿಂಗಾರ್ಚನೆ ಪೂರೈಸಿಕೊಂಡರು ಅಷ್ಟರಲ್ಲಿ ನಾವಿಬ್ಬರು ಸ್ನಾನ ಮಾಡಿ ಮಡಿ ಬಟ್ಟೆ ಧರಿಸಿ ಅವರ ಎದುರಿನಲ್ಲಿ ಸಾಷ್ಟಾಂಗವಾಗಿ ಎರಗಿದೆವು. ಕರೆದು ತಮ್ಮ ಮುಂದೆ ಕೂಡ್ರಿಸಿಕೊಂಡರು. ಅರ್ಘ್ಯಪಾದ್ಯ ನಮಕ ಚಮಕ ಇತ್ಯಾದಿ ಸಕಲ ವಿಧ ಶಾಸ್ತ್ರೋಕ್ತ ಮಂತ್ರಪೂರ್ವಕ ಕ್ರಮಗಳಿಂದ ಕಂತೆ ಮಾಡಿಸಿದ ಹೊಸ ಲಿಂಗಗಳಿಗೆ ಅಭಿಷೇಕಗೈದು ಪೂಜೆ ಮಾಡಿಸಿದರು. ಆ ಲಿಂಗಗಳನ್ನು ತಮ್ಮ ಹಸ್ತದಲ್ಲಿ ತೆಗೆದುಕೊಂಡು ಪ್ರಣವ ಸಂಬಂಧಿಸಿ ಚೇತನ ವೇಧಿಸಿ ಕಳೆ ನೀಡಿ ಧಾರಣ ಮಾಡಿಸಿದರು. ಮಂತ್ರೋಪದೇಶಗೈದರು. ಕನಿಷ್ಠ ಐದು ನಿಮಿಷ ಹೆಚ್ಚು ಹೆಚ್ಚು ಅವಕಾಶವಿದ್ದರೆ ನಿಮ್ಮ ಮನಸ್ಸಿಗೆ ತೃಪ್ತಿಯೆನಿಸುವಷ್ಟು ಅರ್ಚಿಸಬೇಕೆಂದು ಆದೇಶ ವಿತ್ತರು.

ಕೋಣೆಯ ಬಾಗಿಲ ಮುಂದೆ ಇದ್ದ ಭಕ್ತರು ಮಂಗಲ ಹಾಡಿ ಕರ್ಪುರಾರತಿ ಮಾಡಿದರು. ಮೇಲದ್ದು ಅವರ ಪಾದಕ್ಕೆರಗಿ ಕೋಣೆಯಿಂದ ಹೊರಬಂದು ನೀಲಮ್ಮತಾಯಿ ಮೊದಲಾಗಿ ಸಕಲ ಭಕ್ತ ಮಹೇಶ ಸಮುದಾಯಕ್ಕೆ ವಂದನಾರ್ಪಣೆ ಮಾಡಿದೆವು. ಗುರುಕರುಣೆಯ ನಿಜ ಸಾಕಾರತೆಯನ್ನು ಶರೀರದ ಮೇಲೆ ಧರಿಸಿ ಧನ್ಯರೆಂದು ಭಾವಿಸಿದೆವು. ಎಲ್ಲರ ಪ್ರಸಾದ ಭೋಜನ!

ಗ್ರಂಥ ವಿಮರ್ಶೆಯ ಪ್ರಥಮ ಪತ್ರ

ಶ್ರೀ ಸಿಂಪಿ ಲಿಂಗಣ್ಣನವರು ಪ್ರತಿ ತಲುಪಿದುದಕ್ಕೆ ಶ್ರೀಗುರು ಶಾಂತವೀರ ಮಹಾಸ್ವಾಮಿಗಳಿಗೆ ಬರೆದ ಪತ್ರದ ಅಭಿಪ್ರಾಯ ಹೀಗಿತ್ತು.

ಚಡಚಣ ೧೯–೨–೬೫

ಪರಮ ಪೂಜ್ಯ ಶ್ರೀ ಶಾಂತವೀರ ಮಹಾಸ್ವಾಮಿಗಳವರ ಅಡಿದಾವರೆಗಳಿಗೆ

ಅನಂತ ನಮನಗಳು.

ತಾವು ಅತ್ಯಂತ ಪ್ರೇಮದಿಂದ ಕಳುಹಿಸಿದ 'ನೂರೊಂದು ನೆಲೆಯ ನಿಲವು' ಪುಸ್ತಕ ಕೈ ಸೇರಿತು. ಅಕ್ಷರ ಬಲ್ಲವರು ಕಂಠಪಾಠ ಮಾಡಿದರೆ ಪರಮಾತ್ಮ ಪ್ರಾಪ್ತಿಯು ಕೈಪಿಡಿಯನ್ನೇ ಪಡೆದಂತಾಗುವದರಲ್ಲಿ ಸಂದೇಹವಿಲ್ಲ. ಶುದ್ಧ ಹೇತುವಿನಿಂದ ಮಾಡಲಾಗುವ ಇಂತಹ ಕೆಲಸಗಳು ಎಷ್ಟಾದರೂ ಬೇಕು ಇಷ್ಟಾದರೂ ಸಾಕು.

ಸಾಹಿತ್ಯದಲ್ಲಿಯೂ ಶಿಕ್ಷಣ ವ್ಯವಸಾಯದಲ್ಲಿಯೂ ಹಿರಿಯ ಬಂಧುಗಳಾಗಿ ಮುಂದುವರಿದ ಶ್ರೀ ಶಿರಹಟ್ಟಿಯವರ ಪ್ರತಿಭಾ ಶಕ್ತಿಗೆ ಯೋಗ್ಯ ನೆಲೆಯನ್ನು ಒದಗಿಸಿಕೊಟ್ಟ ತಮ್ಮ ಕುಶಲಕರ್ಮವು ಅವರಿಗೆ ಸುಯೋಗವಾಗಿ ಒದಗಿತೆಂದು ಹೇಳಬಹುದಾಗಿದೆ.

ಹರಳೇಶ್ವರಾಶ್ರಮವು ತನ್ನ ಕೆಲಸದಲ್ಲಿ ಮುಂದುವರಿದು ಯಶಸ್ವಿಯಾಗ ಲೆಂದು ಆಶಿಸುತ್ತೇನೆ. ಇಂತು ಅನಂತ ನಮನಗಳು. ತಮ್ಮ ಸಿಂಪಿ ಲಿಂಗಣ್ಣ

ಸತ್ತೇನೆಂದರೂ ಸಾಯಲೊಲ್ಲದ ಜೀವ

೧೮–೩–೬೫ ರಂದು ಸಂಜೆಗೆ ಕೋರಿ ಕುಟುಂಬದವರೂ ನಾನು ಕಾಖಂಡಕಿಗೆ ಹೋದೆವು. ಮರುದಿನ ಅಲ್ಲಿಯ ಶಿವಲಿಂಗಯ್ಯನವರೂ (ಏಕಧಾರಿ) ಸಹಿತ ಎಲ್ಲರೂ ಹರಳೇಶ್ವರಕ್ಕೆ ಬಂದು ಗುರುಗಳ ದರ್ಶನ ಪಡೆದೆವು. ಪ್ರಸಾದ ಭೋಜನ ವಾಯಿತು. ಬಳಿಕ ಏಕಧಾರಿ ಹಾಡುಗಳ ರಸದೂಟ. ಅಪ್ಪನವರು ವಿಶ್ರಾಂತಿಗೆ ಪವಡಿಸಲೇ ಇಲ್ಲ. ಗರಗದ ಮಡಿವಾಳ ಶಿವಯೋಗಿಗಳ ಘನಮಠ ಶಿವಯೋಗಿಗಳ, ಶರೀಫ ಸಾಹೇಬರ ಮುಂತಾದ ಮಹಾನುಭಾವಿಗಳ ತತ್ವದ ಹಾಡುಗಳನ್ನು ಹಾಡಿಸಿ ಕೇಳಿದರು.

ಇನ್ನೂ ಬದುಕೇನಂತದ! ಈ ನಾಚಿಕಿಯಿಲ್ಲದ ಜೀವ ಇನ್ನೂ ಬದುಕೇ ನಂತದ... ಹಾಸ್ಯ ವಿಡಂಬನೆಯ ಹಾಡಿನಲ್ಲಿ ಎಲ್ಲರೂ ನಕ್ಕೆ ನಕ್ಕೆವು. ಶ್ರೀ ಶಿವಲಿಂಗಯ್ಯನವರು ಏಕಧಾರಿ ಕೆಳಗಿಟ್ಟು ಬೆವರು ಒರೆಸಿಕೊಂಡರು. ಅಪ್ಪನವರು ಇದಕ್ಕೆ ಸದೃಶವಾದ ಒಂದು ಉದಾಹರಣೆ ಹೇಳಿದರು. ಆಶ್ರಮದ ಗುಂಡದ ಸರುವಿನ ಆಚೆ ಪಶ್ಚಿಮದ ದಿನ್ನೆಯ ಮೇಲೆ ಚಿಕ್ಕಗುಡಿ! ಬಾಗಿಲಲ್ಲಿ ಕುಳಿತು ಮುಂದೆ ಸರಿಯುವಷ್ಟು ಚಿಕ್ಕ ಬಾಗಿಲು. ಅಲ್ಲಿ ನಡೆದ ಒಂದು ಘಟನೆಗೆ

ಸಂಬಂಧಿಸಿದ ಸಂಗತಿ ಅದು.

'ಚಿಕ್ಕ ಹಾಳು ಗುಡಿ ಒಳಗೊಂದು ಕಲ್ಲಿನ ಹೆಣ್ಣು ಮೂರ್ತಿ ಪೂಜೆ ಗೀಜೆ ಎಲ್ಲಿಯದು. ನಾಗಮ್ಮನ ಗುಡಿ' ಎಂದು ಹೆಸರು ಮಾತ್ರ!

ಜೀವಿಸಲು ಬೇಸತ್ತ ಗೃಹಸ್ಥನೊಬ್ಬನು ಆತ್ಮಹತ್ಯೆ ಮಾಡಿಕೊಳ್ಳಲು ಬಯಸಿ ಅಲೆಯುತ್ತ ಅಲ್ಲಿಗೆ ಬಂದನು. ಒಂದು ಬಟ್ಟಲ ನೀರಿನಲ್ಲಿ ವಿಷ ಕಲಿಸಿ, ಕುಡಿಯುವ ದನ್ನು ಯಾರೂ ನೋಡದಿರಲೆಂದು, ಶ್ರಮಬಿಟ್ಟು ಗುಡಿಯೊಳಕ್ಕೆ ಹೊಕ್ಕನು. ಬಟ್ಟಲ ಬಾಯಿಗೆತ್ತಲು ಯೋಚನೆ! ಅಷ್ಟರಲ್ಲಿ ಮೂಲೆಯಲ್ಲಿದ್ದ ದೊಡ್ಡ ನಾಗರ ಹಾವು ಭುಸ್ಸೆಂದು ಹೆಡೆ ಬಿಚ್ಚಿ ಎದ್ದಿತು. ಇವನ ಇಚ್ಛೆಯನ್ನು ಸುಲಭವಾಗಿ ಈಡೇರಿಸುವದು ಅದರ ಇಚ್ಛೆಯಾಗಿರಬಹುದು. ಆದರೆ ಇವನು 'ಅಯ್ಯೋ! ಹಾವು!' ಎಂದು ಹೊರಕ್ಕೆ ನುಗ್ಗಿ ಬಂದು ಹಾವ ಆದ ಬರ್‍ರಿಪೋ ಎಂದು ದೂರದ ದನಗಾಹಿಗಳನ್ನು ಕೈಯೆತ್ತಿ ಕೂಗಿ ಕರೆಯಹತ್ತಿದನು. ಗಾಬರಿಯಿಂದ ಚಿಕ್ಕ ಬಾಗಿಲಲ್ಲಿ ತೂರಿಕೊಂಡು ಬರುವಾಗ ಎರಡೂ ಭುಜಗಳು ಮಗ್ಗಲು ಕಲ್ಲಿಗೆ ತೆರಚಿ ರಕ್ತ ಚಿಮ್ಮಿದ್ದಿತು. ಸಾಯುವ ನಿರ್ಧಾರ ಮಾಡಿದ್ದರೂ ಒಮ್ಮೆಲೇ ಸಾಯಲು ಒಲ್ಲದು ಜೀವ! ಅಪ್ಪನವರು ನಗುತ್ತಲೇ ಹೇಳುತ್ತಿದ್ದರು. ನಮಗೂ ನಗೆ ಉಕ್ಕಿತ್ತು.

ಕೆಲವು ವರ್ಷಗಳ ಹಿಂದೆ ತಾವು ಇಲ್ಲಿ ಅನುಷ್ಠಾನ ಮಾಡಿದಾಗ ಈ ಘಟನೆಯ ಸುದ್ದಿ ಇನ್ನೂ ಹೊಸದಾಗಿತ್ತೆಂದು ಶ್ರೀಗಳು ಹೇಳಿದರು.

"ಅಪ್ಪಾ ಅವನು ಹೊರಗೇ ಕುಳಿತು ಕುಡಿಯಬಹುದಾಗಿತ್ತಲ್ಲ? ಅಡವಿ ದೂರದೂರ ಸ್ವಲ್ಪ ಜನ!"

"ಮಂದಿ ಕಂಡರೆ ಅಪಹಾಸ್ಯ ಅವಮಾನ ಆದೀತೆಂದು ಅಭಿಮಾನ! ಇದೇ ಮಿಥ್ಯಾಭಿಮಾನ! ಈ ಮಿಥ್ಯಾಭಿಮಾನವೇ ಮನುಷ್ಯನನ್ನು ನುಗ್ಗು ಮಾಡುವದು. ಅಭಿಮಾನದಿಂದ ಅಹಂಕಾರವು ಆವಿರ್ಭವಿಸುವದು. ಅಹಂಕಾರವಂತೂ ಸರ್ವನಾಶಕ್ಕೆ ಕಾರಣ! ಈ ಅಭಿಮಾನ ಅಹಂಕಾರಗಳೆರಡೂ ಪರಸ್ಪರ ಜನ್ಯ-ಜನಕ ಗಳಾಗಿವೆ."

ಈ ಪ್ರಸ್ತಾಪ ನಡೆದಾಗಲೂ ಗುಡಿ ಇದ್ದೇ ಇತ್ತು. ಅದರ ಹತ್ತಿರವೇ ಹಾಯ್ದು ನಾವು ಹೋಗಿ ಬರುತ್ತಿದ್ದೆವು.

ದಿ. ೬-೬-೬೫ ರಂದು ಶೇಗುಣಶಿ ಕಡೆಯಿಂದ ಹರಳೇಶ್ವರಕ್ಕೆ ಹೋದೆನು. ಗುರುಗಳಡಿಗೆ ವಂದಿಸಿದಾಗ "ಈಗ ಬಂದಿರಾ? ಮನೆಯ ದುರಸ್ತಿಕಾರ್ಯ ಮುಗಿ

ಯಿತೇ?" ಎಂದು ಕೇಳಿದರು.

'ಇಲ್ಲರೀ ಅಪ್ಪಾ ಅವರ, ಅದರಲ್ಲಿಯೇ ಅವಕಾಶ ಮಾಡಿಕೊಂಡು ಬಂದಿದ್ದೇನೆ' ಎಂದೆನು.

ಮಂತ್ರಗಾರ

ಸೂರ್ಯ ಬಹಳಷ್ಟು ಕೆಳಗಿಳಿದಿದ್ದನು. ಅತ್ತಿತ್ತ ಇದ್ದವರು ಬಯಲಲ್ಲಿ ಅಪ್ಪನವರ ಹತ್ತಿರ ಬಂದು ಕಲೆಯುತ್ತಿದ್ದರು. "ಅಪ್ಪಾ, ಮಂತ್ರಗಾರ ಎಂಬ ಕವನವಿದೆ, ಓದಬೇಕೆಂದಿದ್ದೇನೆ!"

"ಕವನ? ನೀವು ರಚಿಸಿದ್ದು? ಹೊಸದು?" "ಇಲ್ಲ ತಾವು ಬರಿಸಿದ್ದು; ಹೊಸದು ಮಾತ್ರ!"

"ಹೂಂ" ಓದಿರಿ; ನಿಮಗೆ ಸಾಧ್ಯವಾದಷ್ಟು ರಾಗಧ್ವನಿಯಲ್ಲಿಯೇ ಹಾಡಿರಿ.

ಜನ್ಮದಿಂದೆ ನನ್ನ ಹಿಂದೆ
ಅಂದಿನಿಂದೆ ಬಂದಿವೆ
ಕಣ್ಮನಂಗಳಲ್ಲಿ ತುಂಬಿ
ಹಿಂದೆ ಮುಂದೆ ನಿಂದಿವೆ. ||೧||

ಅಂಬೆಗಾಲನಿಕ್ಕಿದಂದೆ
ಎನ್ನ ಬೆನ್ನನೇರಿದೆ.
ಮಮತೆ ಮೋಹ ಮಾಡಿ ಊಡಿ
ಹಾಡಿ ಹತ್ತಿ ಕುಳಿತಿದೆ. ||೨||

ರಾಗವೆಂಬ ಮೂಗುದಾರ
ಹಾಕಿ ಕೈಲಿ ಹಿಡಿದಿದೆ.
ದ್ವೇಷವೆಂಬ ಚಾಟಿ ಏಟು
ಕೊಟ್ಟು ಓಡಿಸುತ್ತಿವೆ ||೩||

ಅರಿಯಲಿಲ್ಲ ಮರುಳನಾದೆ
ಅಯ್ಯೊ ಹೊತ್ತು ತಿರುಗಿದೆ.
ಅರಿತೊಡದನು ಸರಿಸುತಿದ್ದೆ
ಹತ್ತೆ ಸಾರಲೀಯದೇ ||೪||

ತಿರಿಸಿ ತಿರಿಸಿ ಅತ್ತಲತ್ತೆ
ತನ್ನ ನೆಲೆಯ ತೋರದು.
ಕರೆವ ಕರುಣೆ ಪರಮಶಿವನ
ಪದವ ಸೇರಲೀಯದು. ||೫||

ದಣಿದೆ ನಾನು, ತಣಿಯದಾಯ್ತು
ತಾನು ಬೆನ್ನನಿಳಿಯದು.
ಮಣಿದು ಹೋಯ್ತು ಬೆನ್ನು ಮುಂದೆ
ನಡೆಯದಿದ್ದರಾಗದು. ||೬||

ಬೆನ್ನ ಹುಣ್ಣು ಕೀಸಿ ಕುಣಿದು
ಕಣ್ಣ ನೀರ ಬರಿಸಿತು
ಹೆಣ್ಣು ಹಣ್ಣು ಬಣ್ಣ ತೋರಿ
ಮತ್ತೆ ಕಣ್ಣ ಒರಿಸಿತು ||೭||

ಭೋಗದಾಸೆಯೊಡ್ಡಿ ಬರಿದೆ
ಮುಂದೆ ಮುಂದೆ ನಡಿಸಿತು
ನೀಗದಳಲಿನಲಿ ನಿರಾಶೆ
ಯಿಂದ ಕೋಪಗೊಳಿಸಿತು ||೮||

ಕೋಪಗೊಂಡರೇನು? ಮತ್ತೆ
ಪಾಪಕೂಪಕೊಯ್ವುದು.
ಕೋಪದುರಿಯ ಹೊಗೆಯು ಮುಸುಕಿ
ಎನಗೆ ಬಯಲು ಕಾಣದು ||೯||

ಹುರುಳೆ ಇರದ ಸಾರ ತಾಯು
ಸಂ–ಸಾರವೆನಿಸಿದೆ.
ಜರಿದು ಬಿಡುವೆನೆನಲು ಬಿಡದ
ಬಲಿತ ಭೂತವಾಗಿದೆ. ||೧೦||

ಮರಗುತಿರಲು ಮಾತನೊಂದು
ಹರನ ಶರಣ ಪೇಳ್ದನು.

ಹರನೆ ಗುರುವು ಮಂತ್ರಗಾರ
ಅವನು ಸಾಧುಗೊಳಿಪನು. ||೧೧||

ಚರಣಕೆರಗಿ ಪೊರೆಯೆನಲ್ಕೆ
ಗುರುವ ತೋರಿ ಕರುಣವ.
ಕರವ ಶಿರದೊಳಿರಿಸಿ ಹರಸಿ
ಬರೆದ ಮನಕೆ ಮಂತ್ರವ. ||೧೨||

ಮಂತ್ರ ಮನನವಾಗಲಾಗ
ಭೂತ ದೌತ್ಯ ವಹಿಸಿತು.
ತನುವನಾತ್ಮನರಿವಿಗಾಗಿ
ನಿಲಿಸಿ ನೆರವ ನೀಡಿತು. ||೧೩||

ಮುಗಿಸಿ ಪಾದಗಳ ಮೇಲೆ ತಲೆಯಿಟ್ಟು ವಂದಿಸಿದೆ. ಬಾಗಿ ತೋಳು ಹಿಡಿದೆಬ್ಬಿಸಿ, ಇನ್ನೊಮ್ಮೆ ಹಾಡಿರಿ ಎಂದರು. ಈಗ ವೈಚಳಿ ಬಿಟ್ಟು ಮತ್ತೊಮ್ಮೆ ಹಾಡಿದೆ. ಅಪ್ಪನವರು ಮೃದು ನಗೆಯುಲ್ಲಿ ಆಲಿಸುತ್ತಿದ್ದರು.

"ಮಾಯಾಭೂತದ ಮಂಗನಾಟದ ಕವನ ಮಾರ್ಮಿಕವಾಗಿದೆ. ಪ್ರತಿಯೊಂದು ಪದವೂ ವ್ಯಾಪಕಾರ್ಥ ಹೊಂದಿದೆ. ಸುಂದರವಾಗಿದೆ ಹಾಡು" ಎಂದರು.

"ಭೂತ ಬಿಡಿಸುವ ಮಂತ್ರಗಾರನ ಮಹಿಮೆಯೂ ವ್ಯಕ್ತವಾಗಿವೆ ಅಪ್ಪಾ!" ಎಂದೆ.

"ಬಹುಶಃ ಮುತ್ರಗಾರರು ವಿಫಲರಾಗಿದ್ದಾರೆ. ಸಫಲತೆ ಕಾಣುವದು ಎಲ್ಲಿಯೋ ಕ್ವಚಿತ್ತಾಗಿ" ಎಂದು ಮರುಕ ತೋರಿದರು. "ಅದು ಸಾಧಕರನ್ನು ಅವಲಂಬಿಸಿದೆ" ಎಂದರು ಭೀಮಾಶಂಕರಸ್ವಾಮಿ.

ಧರ್ಮ

ಮರುದಿನ ಪೂರ್ಣದಿನ ಆಶ್ರಮದಲ್ಲಿಯೇ ಇದ್ದೆನು. ಎಂದಿನಂತೆ ಆನಂದ ಅನುಭವ. ಅಂದು ಬೇಗಿನ ಹೊತ್ತಿನ ಮಾತುಕತೆಯುಲ್ಲಿ ನನ್ನದೊಂದು ಆಕ್ಷೇಪಕ ಪ್ರಶ್ನೆ! "ಅಪ್ಪಾ! 'ಧರ್ಮ' ಎಂಬುದು ಭಾರೀ ಗದ್ದಲಕಾರಕ ಶಬ್ದವಾಗಿ ಕಾಣುತ್ತಿದೆ. ಅದು ಅವರ ಧರ್ಮ, ಇದು ಇವರ ಧರ್ಮ ಒಬ್ಬರ ಧರ್ಮ

ಇನ್ನೊಬ್ಬರ ಧರ್ಮಕ್ಕೆ ವಿರೋಧವಾಗಿದೆ. ಕಲಹಕ್ಕೆ ಕಾರಣವಾಗುತ್ತಿದೆ. ತಾನು ನೋಡಿದರೆ ಸಾಹಿತ್ಯದಲ್ಲಿ–ಆಧ್ಯಾತ್ಮ ಸಾಹಿತ್ಯದಲ್ಲಿ ಉನ್ನತಪೀಠದಲ್ಲಿ ವಿರಾಜಮಾನವಾಗಿದೆ. ಏನಿದು? ಇದರ ಮೂಲವಾದರೂ ಏನು?" ಅದಕ್ಕೆ ಉತ್ತರವಾಗಿ ಅಂದು ಅಪ್ಪನವರು ತಮ್ಮ ಗಂಟಲ ತೊಂದರೆ ಲೆಕ್ಕಿಸದೆ ಚಿಕ್ಕ ಉಪನ್ಯಾಸವನ್ನೇ ನೀಡಿದರು. ಅದರ ಸಾರ.

ಧೃ. ಧಾತು, ಧಾರಣ, ಪೋಷಣ. ಧರ್ಮವು ನಮ್ಮನ್ನು ಎತ್ತಿ ಹಿಡಿಯುತ್ತಿದೆ, ಪೋಷಿಸುತ್ತಿದೆ. ಬಿದ್ದವನನ್ನು, ಬೀಳುತ್ತಿರುವವನನ್ನು, ಬೀಳುವವನನ್ನು ಎತ್ತಿ ಹಿಡಿಯುತ್ತಿದೆ. ಇದು 'ಧರ್ಮ' ಪದದ ಪೂರ್ಣಾರ್ಥವಾಗಿದೆ.

ಪೂರ್ವದ ಋಷಿಗಳು ಬೇರೆ ಲಕ್ಷಣಗಳನ್ನು ಹೇಳಿದ್ದಾರೆ. ಕಣಾದ: ಇಹ ಪರ ಸುಖ ಕೊಡುವದು ಧರ್ಮ ಎಂದಿದ್ದಾರೆ, ಮೀಮಾಂಸಕಾರರು: ಯಾವದನ್ನು ಮಾಡಬೇಕು ಅದು ಧರ್ಮ ಮಾಡಬಾರದ್ದು ಅಧರ್ಮ ಎಂದಿದ್ದಾರೆ. ವಿಧಿ=ಧರ್ಮ ನಿಷೇಧ=ಅಧರ್ಮ ಸುಖಕ್ಕೆ ಅಭ್ಯುದಯಕ್ಕೆ ಸಾಧಕವಾದುದು ಧರ್ಮ.

ಧರ್ಮವೆಂದು ಹೇಳಿಸಿಕೊಂಡು ಒಂದನ್ನೊಂದು ವಿರೋಧಿಸುವ ಧರ್ಮಗಳು 'ಧರ್ಮ' ಅಲ್ಲ. ಅವುಗಳಿಗೆ ಮತ-ಪಂಥಗಳೆನ್ನಬಹುದು. ಅವುಗಳ ಧರ್ಮ ದುರಾಭಿಮಾನಕ್ಕೆ ಕಾರಣವಾಗುವದು. ಅದರಿಂದಲೇ ಕಲಹಕ್ಕೆ ಕಾರಣ. ಧರ್ಮದ ಮೂಲಾರ್ಥದಲ್ಲಿ ವರ್ತಿಸುತ್ತಿರುವ ಮತಧರ್ಮವು ಶ್ರೇಷ್ಠ. ಅದು ಕಲಹಕ್ಕೆ ಹೋಗುವದಿಲ್ಲ. 'ಧರ್ಮ' ಸ್ವಭಾವವೆಂಬರ್ಥದಲ್ಲಿಯೂ ಉಪಯೋಗಿಸಲ್ಪಡುತ್ತದೆ. ಈ ಅರ್ಥವು ಮಾನವೇತರ ಪ್ರಾಣಿಗಳಲ್ಲಿ ಅನ್ವಯವಾಗುತ್ತಿದೆ.

ಮಾನವನಲ್ಲಿ ಬುದ್ಧಿ ಇದೆ. ವಿವೇಕ ಇದೆ. ಲೌಕಿಕದಲ್ಲಿ ನಡೆಯುತ್ತಿರುವ ಹಿಂಸೆ ಶೋಷಣೆಗಳನ್ನು ಕಾಣುವದರಿಂದ ಅವನ ಹೃದಯಕ್ಕೆ ನೋವಾಗುತ್ತದೆ. ಪರೋಪಕಾರಾದಿ ಕೃತಿಗಳನ್ನು ಕಂಡಾಗ ಸಂತಸವಾಗುತ್ತದೆ ಈ ತಾಕಲಾಟಗಳೇ ಪಾಪ–ಪುಣ್ಯಗಳ ಕಲ್ಪನೆಗೆ ಮೂಲವಾದುದು. ಪುಣ್ಯಕರವಾದುದು ಧರ್ಮ. ಧರ್ಮದಲ್ಲಿ ಸಾಮಾನ್ಯಧರ್ಮ, ವಿಶೇಷಧರ್ಮ ಹೀಗೆ ಎರಡು ಬಗೆಯಿದೆ. ಸಾಮಾನ್ಯಧರ್ಮ: ಅಹಿಂಸೆ ಸತ್ಯ ಅಸ್ತೇಯ, ಬ್ರಹ್ಮಚರ್ಯ, ಆಸ್ತಿಕತ್ವ. ವಿಶೇಷಧರ್ಮ: ಸಾಮಾನ್ಯಧರ್ಮದೊಡನೆಯೇ ಮತಧರ್ಮ.

ಮಾನವನು ನಡೆವಳಿಯಲ್ಲಿ ಸಾಮಾನ್ಯ ಧರ್ಮವನ್ನು ಸ್ಥಿರಪಡಿಸಿಕೊಳ್ಳುವ

ದಕ್ಕಾಗಿಯೇ ಮತಧರ್ಮದ ಆಚರಣೆ ಇರಬೇಕು. ಸಾಮಾನ್ಯ ಧರ್ಮವನ್ನು ಅಲಕ್ಷಿಸಿ ಮತಧರ್ಮದ ದುರಾಭಿಮಾನಿಯಾದರೆ ಕಲಹ ಅಶಾಂತಿ! ನಾಸ್ತಿಕರಿಗೆ ಧರ್ಮವೂ ಇಲ್ಲ, ಅಧರ್ಮವೂ ಇಲ್ಲ. ಪಾಪ-ಪುಣ್ಯಗಳೂ ಇಲ್ಲ ಅವರ ಸ್ವಭಾವವೇ ಅವರ ಧರ್ಮ ಪರಿಶುದ್ಧವಾದ ಸಾಮಾನ್ಯಧರ್ಮದ ಬೆಳಕಿನಲ್ಲಿ ಆತ್ಮಾನಂದಕ್ಕೆ ಕಾರಣವಾಗುವ ಸಾಧಕ ಮತವು ಶ್ರೇಷ್ಠ ಮತವು. ವೀರಶೈವವು ಅಂತಹ ಮತಧರ್ಮವು ಷಡ್‌ದರ್ಶನಗಳ ಸಾರವನ್ನೆಲ್ಲ ಒಳಗೊಂಡಿರುವದರಿಂದ ಇದು ಪರಿಪೂರ್ಣ ಮತಧರ್ಮವೂ ಆಗಿದೆ.

ದಿ. ೯-೭-೬೫ ಹರಳೇಶ್ವರಕ್ಕೆ ಪ್ರಯಾಣ ಮಾಡಿ ಗುರುಗಳ ಸನ್ನಿಧಿ ಸೇರಿ ಪೊಡಮಟ್ಟೆನು. ಗದುಗಿನ ಶ್ರೀ ಬಳ್ಳಾರಿಯವರಿಂದ, ಬಂಥನಾಳ ಶಿವಯೋಗಿಗಳಿಗೆ ಬಂದ ಉತ್ತರವನ್ನು ಅದಕ್ಕೆ ಸಂಬಂಧಿಸಿ ನಾನು ಗದುಗಿಗೆ ಹೋಗಬೇಕೆಂದು ಶಿವಯೋಗಿಗಳಿಂದ ಬಂದ ಆದೇಶವನ್ನು ವಿವರಿಸಿದೆನು.

ಗುರುಗಳು ಆತುರವಾಗಿ ಹೇಳಿದರು. "ನೀವು ಗದುಗಿಗೆ ಹೋಗಿರಿ, 'ಬಸವರಾಜದೇವರು' ಪುಸ್ತಕ ಹೊರಬರುವುದಕ್ಕೆ ಇದು ಸುಚಿನ್ಹವಾಗಿದೆ. ಗದಗಿನಲ್ಲಿ ಇರುವದಕ್ಕೆ ನಾನು ವ್ಯವಸ್ಥೆ ಮಾಡಿಸುವೆನು."

"ಸ್ನಾನ ಪೂಜೆ ಮಲಗಲು ಸ್ಥಳ ಇಷ್ಟಕ್ಕೆ ಅನುಕೂಲವಾದರೆ ಸಾಕು."

"ಎಲ್ಲದಕ್ಕೂ ಆಯಿತು ಅದರ ಚಿಂತೆ ಬೇಡ. ಅಲ್ಲಿಯ ಡಾಕ್ಟರರು ಕಲ್ಲೋಳಗಿ ಎಂಬವರು. ನಮ್ಮ ಬೊಮ್ಮನಳ್ಳಿ ಪಟ್ಟದ ದೇವರ ಶಿಷ್ಯರು. ಸಜ್ಜನರು, ಸ್ಥಿತಿವಂತರು. ಬೊಮ್ಮನಹಳ್ಳಿ ಸ್ವಾಮಿಗಳಿಂದ ಅವರಿಗೊಂದು ಪತ್ರ ಬರೆಸಿದರಾಯಿತು. ಹಾಗೆ ಪತ್ರ ಬರೆದು ಅನುಕೂಲಮಾಡಿಸಿಕೊಡಬೇಕೆಂದು ನನ್ನ ಪತ್ರವನ್ನು ಈಗ ಬೊಮ್ಮನಹಳ್ಳಿ ಶ್ರೀಗಳಿಗೆ ಬರೆಯಿರಿ."

"ಪತ್ರ ತಯಾರಿಸುತ್ತೇನೆ" ಎಂದು ನನಗೆ ಅನುಕೂಲ ಒದಗಿದಂತೆಯೇ ಆಯಿತು. ಬೊಮ್ಮನಹಳ್ಳಿ ಶ್ರೀ ಶಾಂತಲಿಂಗ ಶಿವಾಚಾರ್ಯರಿಗೆ ಅಪ್ಪನವರ ಹೆಸರಿನಿಂದ ಬರೆದ ಪತ್ರದಲ್ಲಿಯ ಮುಖ್ಯ ಮಾತುಗಳು ಇಷ್ಟು! 'ಬಸವರಾಜ ದೇವರು' ಚರಿತ್ರ ಗ್ರಂಥ ಬರೆಯುತ್ತಿರುವ ಲಕ್ಕಪ್ಪ ಶಿರಹಟ್ಟಿ ಅವರು ಬಳ್ಳಾರಿ ಗುರುಸಿದ್ಧಪ್ಪನವರಿಂದ ಮಾಹಿತಿ ಸಂಗ್ರಹಿಸುವದಕ್ಕಾಗಿ ಗದಗಿಗೆ ಬರುವರು. ಅವರಿಗೆ ನಾಲ್ಕುದಿವಸ ನಿಮ್ಮಲ್ಲಿ ಸ್ನಾನ ಪೂಜೆ ವಸತಿಗೆ ಅನುಕೂಲ ಮಾಡಿಕೊಡಬೇಕು ಎಂದು ಡಾ|| ಕಲ್ಲೋಳಗಿಯವರಿಗೆ ಪತ್ರ ಬರೆಯಿರಿ. ಹಾಗೆ ಬರೆದುದನ್ನು

ಬಿಜಾಪುರಕ್ಕೆ ಲಕ್ಕಪ್ಪ ಶಿರಹಟ್ಟಿ ಅವರಿಗೆ ಪತ್ರ ಮುಖೇನ ತಿಳಿಸಿರಿ. ಅಪ್ಪನವರು ರೂಢಿಯಿಂದ ಅಂಕಿತಹಾಕಿದರು. ಸಂಜೆಯೊಳಗಾಗಿ ಶೇಗುಣಶಿ ಪೋಸ್ಟಿನ ಡಬ್ಬಿಗೆ ಹೋಯಿತು.

ಈ ಎರಡು ಮೂರು ವಾರಗಳಲ್ಲಿ ಚೆನ್ನಾಗಿ ಮಳೆಯಾಗಿತ್ತು. ಮರಡಿ ಭೂಮಿಯು ಬಿತ್ತಿಗೆಯಾಗಿತ್ತು ಆಶ್ರಮದಲ್ಲಿ ಭೀಮಾಶಂಕರಸ್ವಾಮಿ ಸಿದ್ಧನಾಥ ಶರಣರ ತೋಟಗಾರಿಕೆ ಕಾರ್ಯ ಭರದಿಂದ ನಡೆದಿತ್ತು. ಯೋಗಮಂದಿರ ಸುತ್ತಲು ಹೊಸ ಮಲ್ಲಿಗೆ ಗುಲಾಬಿ ಸೇವಂತಿಗೆ ಇತ್ಯಾದಿ ಹೂ ಗಿಡ ಬಳ್ಳಿಗಳನ್ನು ನೆಡಲಾಗಿತ್ತು. ಪಾತ್ರೆಗಳಿಗೆ ನೀರು ಹನಿಸುತ್ತಿದ್ದರು. ಈಗಿದ್ದ ಗುಂಡ (ಬಸವತೀರ್ಥ)ದ ಕೆಳಗೆ ನೀರ ಮಡುವು ಇತ್ತು. ಅದು ಸುತ್ತಲಿನ ದನಕರುಗಳಿಗೆ ನೀರಿನಾಶ್ರಯವಾಗಿತ್ತು. ಅದರ ಸುತ್ತಲೂ ಗೋಡೆ ಪಾವಟಿಗೆಗಳನ್ನು ಮಾಡಿ ಕಟ್ಟಿ ದಂಡೆಯಲ್ಲಿ ಕುಳಿತು ನೀರು ಎತ್ತಿ ಸ್ನಾನಮಾಡುವದಕ್ಕೆ ಅನುಕೂಲವಾಗಿಸುವದು ನಡೆದಿತ್ತು. ಕಾಖಂಡಕಿಯ ಕೊಕಟನೂರು ಸಿದಗೊಂಡಪ್ಪ ಎಂಬವರು ತಮ್ಮ ತಾಯಿಯವರ ಸ್ಮಾರಕವಾಗಿ ಅದನ್ನು ಕಟ್ಟಿಸುವ ವೆಚ್ಚ ವಹಿಸಿದ್ದರು. ಅದಕ್ಕೆ 'ಕುಮಾರ ತೀರ್ಥ'ವೆಂದು ಶ್ರೀಗಳವರು ಹೆಸರಿಟ್ಟರು. ಈ ಹೊಂಡದಿಂದ ಹೊರಬರುವ ನೀರು ಮತ್ತೆ ಕೆಳಗೆ ಮಡುವಾಗಿ ದನಗಳಿಗೆ ಆಸರವಾಯಿತು. ಈ ಮಡುವಿಗೆ ನೀರ ಸೆಲೆಯೆಂದು ಸೇರಿತ್ತು. ಈ ಮಡುವಿನಿಂದಲೇ ಮುಂದೆ ನೀರೆತ್ತುವ ಕೈಪಂಪಿನಿಂದ ಆಶ್ರಮದ ತೋಟಕ್ಕೆ ನೀರು ಪಡೆಯುವ ವ್ಯವಸ್ಥೆಯಾಯಿತು. ಅದನ್ನು ಶ್ರೀ ನಾನಾಸಾಹೇಬ (ಭೀಮನಗೌಡ) ಪಾಟೀಲ ಅವರು ಮಾಡಿಸಿದರು.

ಬೇಗಿನ ಹೊತ್ತಿನಲ್ಲಿ ದರ್ಶನಕ್ಕೆ ಬಂದ ಬೇರೆ ಭಕ್ತರೊಡನೆ ಶ್ರೀಗಳು ಮಾತನಾಡುತ್ತಿರುವಾಗ ನನಗೆ ಕೈತೋಟದ ಕಾಯಕದಲ್ಲಿ ತೊಡಗಿರುವವರ ಕಡೆಗೆ ಗಮನ ಹರಿಯಿತು. ನನಗೂ ಅದರಲ್ಲಿ ಭಾಗವಹಿಸಲು ಅಭಿಲಾಷೆಯಾಯಿತು. ಮಡಿಗಳಲ್ಲಿ ಕಳೆ ಕೀಳುವ, ಹರಳು ಕಲ್ಲು ಆರಿಸುವ, ಸಸಿನೆಡುವ, ನೀರು ಹಣಿಸುವದರಲ್ಲಿ ಕೆಲಹೊತ್ತು ಕ್ರಿಯಾಶೀಲನಾಗಿದ್ದೆನು. ಅದೊಂದು ತುಂಬ ಸೊಗಸಿನ ಅನುಭವ! ಮುಚ್ಚಂಜೆಯಲ್ಲಿ ಎಲ್ಲರೂ ಕೂಡಿ ಸಲ್ಲಾಪದಲ್ಲಿ ಮುಳುಗಿದ್ದೆವು. ಅಪ್ಪನವರ ವಾಣಿ ಸಂಸ್ಕೃತಿ ಸೌರಭವಾಗಿತ್ತು.

ಮರುದಿನ ವಾಡಿಕೆಯ ಕ್ರಿಯಾದಿಗಳ ಆನಂದವಲ್ಲದೆ ಬೇಗಿನ ವೇಳೆಯಲ್ಲಿ

ಪರಸ್ಥಳದವರಾರೂ ಇರಲಿಲ್ಲವಾದ್ದರಿಂದ ಗುರುಗಳ ಜೊತೆಗೆ ವಚನಸಾಹಿತ್ಯದ ಬಗೆಗೆ ಸ್ವಲ್ಪ ಹೊತ್ತು ಚರ್ಚೆ ನಡೆಯಿತು.

ವಚನ ಸಾಹಿತ್ಯ

ಭಾಷೆ, ಭಾವದ ವ್ಯಕ್ತರೂಪವಾಗಿ ಕಲಾತ್ಮಕವಾಗಿ ಬಂದು ಮತ್ತೊಬ್ಬರ ಹೃದಯವನ್ನು ಮುಟ್ಟಿದರೆ, ಅವರನ್ನು ಎಚ್ಚರಗೊಳಿಸಿದರೆ ಅದು ಸಾಹಿತ್ಯ, ಈ ಅರ್ಥದಲ್ಲಿ ವಚನ ಸಾಹಿತ್ಯಕ್ಕೆ ಹಿರಿಮೆಯು ಒಂದು ಹೆಗ್ಗಳಿಕೆಯುಂಟು ವಚನಗಳು ಸಾಹಿತ್ಯರೂಪ ಧರಿಸಿವೆ. ಭಕ್ತಿ–ಜ್ಞಾನ–ವೈರಾಗ್ಯ ರಸಗಳಿಂದ ತುಂಬಿವೆ. ಹೃದಯವನ್ನು ಆಕರ್ಷಿಸುತ್ತಿವೆ. ಶಾಸ್ತ್ರವು ತತ್ವರೂಪ, ಧರ್ಮರೂಪ ಎಂದೆರಡು ವಿಧ! ಇವೆರಡೂ ವಚನಕಾರರ ಜೀವನಸ್ವರೂಪವೇ ಆಗಿರುವದರಿಂದ ಅವು ವಚನಗಳಲ್ಲಿರುವದರಿಂದ ವಚನಗಳೂ ಶಾಸ್ತ್ರಗಳೂ ಆಗಿವೆ 'ಉಪನಿಷತ್ತುಗಳಲ್ಲಿರುವದೆಲ್ಲ ವಚನಗಳಲ್ಲಿದೆ. ವಚನಗಳಲ್ಲಿರುವದೆಲ್ಲ ಉಪನಿಷತ್ತಿನಲಿಲ್ಲ' ಎಂದು ಬಲ್ಲವರ ಅಭಿಮತ. ವಚನಗಳು ಶಾಸ್ತ್ರದ ಗಾಂಭೀರ್ಯ, ಸಾಹಿತ್ಯದ ಸೌಂದರ್ಯ ಗಾಯನದ ಮಾಧುರ್ಯ ಈ ತ್ರಿವೇಣಿ ಸಂಗಮವಾಗಿವೆ. ಅಕ್ಕಮಹಾದೇವಿಯ ವಚನಗಳಲ್ಲಿ ಇವುಗಳ ಸಮನ್ವಯ ರಸಾಯನದಿಂದಾಗಿ ಅವು ಮಿಗಿಲಾಗಿ ಮೌಲ್ಯವನ್ನು ಹೊಂದಿವೆ. ನನಗೆ ನೆನಪಾದ ಇಂತಹ ಕೆಲ ವಚನ ಅಥವಾ ವಚನಾಂಶಗಳನ್ನು ಹೇಳುತ್ತಿದ್ದಾಗ ಗುರುಗಳು ಅವುಗಳ ಆಳವಾದ ವಿಶಾಲವಾದ ತಾತ್ವಿಕ ಅರ್ಥಭಾವಗಳನ್ನು ವ್ಯಕ್ತಗೊಳಿಸಿ ಬೋಧಿಸುತ್ತಿದ್ದರು.

ಪರಿಷ್ಕರಿಸಿ ಬರೆದ ಮತ್ತೊಂದು ಗ್ರಂಥ

ಬಸವರಾಜ ದೇವರು ಪುಸ್ತಕದ ಕೆಲವು ತಿದ್ದುಪಡಿ ಮಾಡಿದ ಬರೆಹ ಶ್ರೀ ಬಳ್ಳಾರಿಯವರ ಕಡೆಗೆ ಕಳಿಸಿದ್ದೆನು. ಮನಸ್ಸು ಹಗುರಾಗಿತ್ತು. ಗುರುದರ್ಶನದ ಬಯಕೆ! ಹರಳೇಶ್ವರದ ಹಂಬಲವಾಯಿತು. ಮನೆಯಾಕೆ ತಾನೂ ಬರುವೆನೆಂದಳು. ಅಂದಿಗೆ ೪೦ ವರ್ಷಗಳ ಹಿಂದೆ ಕೆಳದಿಯ ಅರಸು ವೀರಭದ್ರ ನಾಯಕನ ಕುರಿತು ಒಂದು ನೀಳ್ಗತೆ ಬರೆದಿದ್ದೆನು. ಉತ್ತರ ಕರ್ನಾಟಕದಲ್ಲಿ ಬರಹಗಾರರು ಅತಿ ವಿರಳರಾಗಿದ್ದ ಕಾಲವದು. ಅದರ ಹಸ್ತಪ್ರತಿಗೇ ಕರ್ನಾಟಕ ವಿದ್ಯಾವರ್ಧಕ ಸಂಘದಿಂದ ಚಿಕ್ಕ ಬಹುಮಾನ ದೊರೆತಿದ್ದಿತು. ನೌಕರಿ ನಿರ್ವಹಣೆಯಲ್ಲಿ ಅದು ಉಳಿದು ಎಲ್ಲಿಯೋ ಬಿದ್ದದ್ದು ಈ ವರ್ಷದಲ್ಲಿ ಒಮ್ಮೆ ಕಣ್ಸೆಳೆದಿತ್ತು. ಅವಕಾಶ

ವಿದ್ದಾಗ ಅದನ್ನು ಪುನಃ ಕೈಯಾಡಿಸಿ ಐತಿಹಾಸಿಕ ಕಾದಂಬರಿ ಎನ್ನುವಂತೆ ಬರೆದಿದ್ದೆನು. ಅದನ್ನು ಗುರುಗಳ ಹತ್ತಿರ ಓದಬೇಕೆಂದು ಸಂಗಡ ತಕ್ಕೊಂಡೆನು.

ದಿ. ೧೫–೮–೬೫ ಮುಂಜಾನೆಯೇ ನಾವಿಬ್ಬರೂ ಚಿಕ್ಕಗಲಗಲಿಯ ಬಸ್ಸಿಗೆ ಹೊರಟು ಕಂಬಾಗಿ ಕತ್ತರಿಗೆ ಇಳಿದು, ಮರಡಿ ದಾರಿಯಲ್ಲಿ ಒಂದು ಮೈಲು ನಡೆದು ಆಶ್ರಮಕ್ಕೆ ಹೋಗಿ ಗುರುಪಾದಕ್ಕೆ ವಂದಿಸಿದೆನು. ಗುರುಗಳು ಯೋಗಕ್ಷೇಮ ವಿಚಾರಿಸಿದರು. 'ತಂಗೀ ನೀನೂ ನಡೆದು ಬಂದೆಯಾ ಯವ್ವಾ?' ಎನಲು 'ಈಗ ಆರಾಮವಾಗಿದ್ದೇನರಿ ಅಪ್ಪಾ ಇಷ್ಟೇನ ದಾರಿ ದೂರವಲ್ಲ' ಎಂದು ಹೇಳಿದಳು ನೀಲಮ್ಮ ತಾಯಿಯವರಿದ್ದರು. ಅವರತ್ತ ಹೋದಳು. ಇತ್ತ ಗದುಗಿಗೆ ಕಳಿಸಿವ ತಿದ್ದುಪಡಿ ವಿಷಯ ವಿವರಿಸಿದೆ. ಈಗ ಓದಲು ತಂದ ಪುಸ್ತಕದ ವಿಷಯ ತಿಳಿಸಿದೆ. 'ನೀವು ಇದುವರೆಗೆ ಇದರ ಸುದ್ದಿಯನ್ನೇ ಹೇಳಿಲ್ಲವಲ್ಲ! ಎಂದರು. ಹೇಳಬಹುದಾದ ಸ್ವರೂಪವನ್ನು ಅದು ಈಗ ತಾಳಿದೆ ಅಪ್ಪಾ!' ಎಂದೆನು. 'ಹೀಂಗ?' ಎಂದು ಸ್ವಲ್ಪ ನಕ್ಕರು ಊಟವಾದ ಬಳಿಕ ಓದುವದಾಗಲಿ ಎಂದರು. ಒಂದು ತಾಸಿನ ವಿಶ್ರಾಂತಿಯ ನಂತರ ಅಪ್ಪನವರು ಕುಳಿತು ಓದಲು ಕರೆದರು. ಹೊರಗೆ ಪಡುವಣಗಾಳಿ ಇನ್ನೂ ಜೋರಾಗಿತ್ತಾದ್ದರಿಂದ ಅಪ್ಪನವರ ಕೋಣೆಯಲ್ಲಿಯೇ ಕುಳಿತು ಓದಿದೆನು. ಹೊತ್ತು ಇಳಿದಿರುವ ಹೊತ್ತಿಗೆ ಅರ್ಧವಾಗಿತ್ತು. ಪೂರ್ಣ ಗಮನವಿತ್ತು ಆಲಿಸುತ್ತಿದ್ದ ಗುರುಗಳು ತಡೆಯಿರಿ ಗಂಟಲಕ್ಕೆ ಸ್ವಲ್ಪ ವಿಶ್ರಾಂತಿ ಕೊಡಿರಿ ಸ್ವಲ್ಪ ಚಹಾ ತಕ್ಕೊಳ್ಳಿರಿ. ಮಾಡಲಿ ಎನ್ನುತ್ತಿರುವಾಗ ಬೇಡರಿ ಅಪ್ಪಾ ಎನ್ನುತ್ತಿದ್ದಂತೆಯೇ ನೀಲಮ್ಮ ತಾಯಿಯವರು ಆಗಲೇ ಮಾಡಿಸಿಯೇ ಬಿಟ್ಟಿದ್ದರು. ಬೇರೆ ದರ್ಶನಾರ್ಥಿಗಳೊಡನೆ ಮಾತುಕತೆ ನಡೆದವು ನಾವು ಭೀಮಾಶಂಕರಸ್ವಾಮಿ ಸಿದ್ಧನಾಥ ಶರಣರ ಕಾರ್ಯ ನೋಡುತ್ತ ತೋಟದಲ್ಲಿ ನಸುಕಾಗುವವರೆಗೆ ಸ್ವಲ್ಪ ವೇಳೆ ಕಳೆದೆವು. ಆಮೇಲೆ ವಿರಾಮ ಸಲ್ಲಾಪ! ಮರುದಿನ:–ಮನೆಯಲ್ಲಿಯ ನಮ್ಮ ಶ್ರಾವಣದ ವಿಶೇಷ ಪೂಜೆ ಈಗ ಗುರುಸನ್ನಿಧಾನದ ಅನುಷ್ಠಾನದಲ್ಲಿ ಮಿಗಿಲಾಗಿ ಪೂರೈಸಿತೆಂದು ಅತ್ಯಂತ ತೃಪ್ತಿ ಭಾವ ಹೊಂದಿದ್ದೆವು. ಅಂದು ಕೆಳದಿ ಕಾದಂಬರಿ ಓದು ಪೂರ್ಣವಾಗಿ ಮುಗಿಸಿದೆ. ವಂದಿಸಿದೆ. ಗುರುಗಳು ಬೆನ್ನ ಮೇಲೆ ಕೈಯಾಡಿಸಿ "ನಿಮ್ಮ ಬರಹದ ಶೈಲಿ ಮನಸ್ಸನ್ನು ಹಿಡಿದುಕೊಂಡು ಹೋಗುತ್ತದೆ ಎಂದು ಪ್ರೋತ್ಸಾಹಿಸಿದರು." "ಇದರ ಮುಂದಿನ ವ್ಯವಸ್ಥೆ ಏನು?" ಕೇಳಿದರು.

"ಸದ್ಯಕ್ಕೆ ಮಾರ್ಗವೇನೂ ತೋರುವದಿಲ್ಲ. ಸಿಂಪಿ ಲಿಂಗಣ್ಣನವರ ಕಡೆಗೆ ನೋಡಲಿಕ್ಕೆಂದು ಕಳಿಸಬೇಕೆಂದಿದ್ದೇನೆ. ಅವರು ಏನನ್ನುವರು ನೋಡೋಣ."

"ಹೌದು ಅವರ ಅರವಿಂದ ಗ್ರಂಥಮಾಲೆ ನಡೆದಿದೆ ಯಾವಾಗಾದರೊಂದು ಬಂದ ಅವರ ಪುಸ್ತಕ ಯಾರೋ ಒಯ್ದು ಬಿಟ್ಟಿರತಾರ! ಇದರ ಹೆಸರೇನು ಅನ್ನುವಿರಿ?"

"ರಾಕ್ಷಸೀ ಮಹತ್ವಾಕಾಂಕ್ಷೆ" ಎಂದಿತ್ತು 'ಮೋಸ' ಇರಲಿ ಅನ್ನಿಸಿದೆ.

"ದುಷ್ಟ ದಮನ" ಇರಬಹುದು!

"ಈ ಎಲ್ಲ ಹೆಸರುಗಳನ್ನು ಶ್ರೀ ಸಿಂಪಿ ಅವರ ಮುಂದಿಡೋಣ ಅಪ್ಪಾ ಅವರ!" ಅವರ ಅಭಿಪ್ರಾಯ ತಿಳಿಯೋಣ.

"ಸರಿ" ಸಂತೋಷಿಸಿದ್ದರು ಅಪ್ಪನವರು.

ಮರುದಿನ ಬೆಳಗಿನಲ್ಲಿಯೇ ಎದ್ದು ಪ್ರಾತರ್ವಿಧಿ ತೀರಿಸಿ ಮುಖದೊಳೆದು ಭಸ್ಮಧರಿಸಿ ಗುರುಗಳ ಪಾದಕ್ಕೆ ವಂದಿಸಿ ಅಪ್ಪಣೆ ಪಡೆದೆವು.

ದಿ. (೪–೧೦–೬೫) ರಂದು ಬೆಳಗಿಗೆ ಹರಳೇಶ್ವರಕ್ಕೆ ಹೋದೆನು ಗುರುಗಳ ದರ್ಶನ ಪಡೆದೆನು. ಅವರ ಶ್ವಾಸನಳಿಕೆಯ ಬಾಧೆ ಹೆಚ್ಚಾಗಿತ್ತು. ಹೋಮಿಯೋಪಥಿ ವೈದ್ಯರೊಬ್ಬರು ಉಪಚರಿಸುತ್ತಿದ್ದರು. ಶ್ರೀಗಳು ಮಾನಸಿಕವಾಗಿ ಎಳ್ಳಷ್ಟೂ ಸಂತ್ರಸ್ತರಾಗಿರಲಿಲ್ಲ. ಅವರು ಬಂದವರನ್ನು ಪ್ರೇಮದಿಂದಲೇ ಕಾಣುತ್ತಿದ್ದರು. ಭಕ್ತ ವತ್ಸಲರಾಗಿ ಎಂದಿನಂತೆ ನಲಿಯುತ್ತಲೇ ಇದ್ದರು. ಬರವಣಿಗೆಗೆ ಸಂಬಂಧಿಸಿದ ನನ್ನ ಪ್ರಚಲಿತ ಕಾರ್ಯವನ್ನು ವಿಚಾರಿಸಿದರು. ಉತ್ತೇಜಿಸಿದರು ವಾಡಿಕೆಯಂತೆ ಬರುವ ಭಕ್ತ ಬಾಂಧವರು ಸಂಜೆಯೊಳಗಾಗಿ ಬಂದು ಕೂಡಿದರು. ಗುರುಗಳ ಸನ್ನಿಧಾನದಲ್ಲಿ ಅನುಭವದ ಮಾತುಕತೆ ನಡೆಸಿದರೂ ಅಪ್ಪನವರ ದಮ್ಮಿನ ಆಯಾಸದ ಕಾರಣದಿಂದ ನಮಗೆಲ್ಲರಿಗೆ ನಿಚ್ಚಳವಾದ ಆನಂದವಿರಲಿಲ್ಲ ಅವರ ಹತ್ತಿರ ಮಾತಿಗೆ ಕಾರಣರಾಗಿರುವದು ಹಿತಕರವಾಗಿರಲಿಲ್ಲ.

ಬೆಳಗಾದರೆ (ದಿ. ೫) ವಿಜಯದಶಮಿ, ಸ್ನಾನಮಾಡಿ ಬನ್ನಿಗಿಡ ಪೂಜಿಸಿ ಶಮೀಪತ್ರ ತಂದು ಅಪ್ಪನವರಿಗೆ ನಮನದೊಡನೆ ಅರ್ಪಿಸಿ ಅವರ ಆರೋಗ್ಯ ವಿಚಾರಿಸಿಕೊಂಡು ಅವರ ಅಪ್ಪಣೆ ಪಡೆದು ವಿಜಾಪುರಕ್ಕೆ ಬಂದೆನು.

ಶ್ರೀ ಸಿಂಪಿ ಲಿಂಗಣ್ಣನವರ ಕಡೆಗೆ ಕಳಿಸಿದ್ದ ಕೆಳದಿ ಅರಸು ಕುರಿತ ಕಾದಂಬರಿಯನ್ನು ಅವರು ಪೂರ್ಣವಾಗಿ ಓದಿ ಒಂದು ಪತ್ರದೊಡನೆ ತಿರುಗಿ ಕಳಿಸಿದ್ದರು.

ಪತ್ರದಲ್ಲಿ 'ನಿಮ್ಮ ಕಾದಂಬರಿಯನ್ನು ನಮ್ಮ ಅರವಿಂದ ಗ್ರಂಥಮಾಲೆಯಲ್ಲಿ ಪ್ರಕಟಿಸುವೆನು. ಬಡ ಗ್ರಂಥಮಾಲೆಯಾಗಿದ್ದರಿಂದ ನಿಮಗೆ ಸಂಭಾವನೆಯನ್ನೇನೂ ಕೊಡಲಾಗುವದಿಲ್ಲ ನಿಮ್ಮ ಒಪ್ಪಿಗೆ ಇದ್ದರೆ 'ಪ್ರೆಸ್ ಕಾಪಿ' (ಅಚ್ಚಿನ ಪ್ರತಿ) ಬರೆದು ಕಳಿಸಿರಿ ಮತ್ತು ಹೆಸರು ಅದಕ್ಕೆ 'ಬಯಲಾದ ಸಂಚು' ಎಂದರೆ ಸರಿಯಾ ದೀತೆನಿಸಿದೆ. ನಿಮ್ಮ ಸಮ್ಮತಿ ತಿಳಿಸಿರಿ' ಎಂದು ಬರೆದಿದ್ದರು. ಇದನ್ನೆಲ್ಲ ಒಪ್ಪಿಕೊಂಡು ಅಚ್ಚಿನ ಪ್ರತಿ ಬರೆಯುಹತ್ತಿದ್ದೆನು. ಈ ಪುಸ್ತಕದ ವಿಷಯ ಅರಿಕೆ ಗೊಳಿಸುವದಕ್ಕೆ ಗುರುಸನ್ನಿಧಾನ ದರ್ಶನಕ್ಕೆ ಧಾವಿಸಿದೆನು.

ದಿ. ೧೬-೧೧-೬೫ರಂದು ಆಶ್ರಮ ತಲುಪಿ ಗುರುಪಾದಗಳಿಗೆರಗಿದೆನು. ಅಪ್ಪನವರು ತಕ್ಕಮಟ್ಟಿಗೆ ಆರಾಮವಾಗಿದ್ದರು. ಕುಶಲ ವಿಚಾರದ ಬಳಿಕ ಪುಸ್ತಕದ ವಿಷಯಕ್ಕಾಗಿ ಸಿಂಪಿ ಲಿಂಗಣ್ಣನವರ ಅಭಿಪ್ರಾಯವನ್ನೂ ಅದನ್ನು ಒಪ್ಪಿದುದನ್ನೂ ತಿಳಿಸಿದೆ.

"ಸರಿಯಾಯ್ತು! ಮೊದಲು ಜನರ ಕೈಯಲ್ಲಿ ಹೋಗುವದು ಮುಖ್ಯ" ಎಂದರು.

ಆ ಮೇಲೆ ಅಂದು ಶ್ರೀ ಬಳ್ಳಾರಿಯವರೊಡನೆ ನಡೆಯುತ್ತಿರುವ ಪತ್ರ ವಿನಿಮಯ ಸಂದರ್ಭಕ್ಕೆ ಸಂಬಂಧಿಸಿ ಶರಣರ ಆಂದೋಲನ ಕುರಿತು ಮಾತ ನಾಡುತ್ತ ೧೨ನೇ ಶತಮಾನದ ವಿದ್ಯಮಾನಕ್ಕೆ ಬಂದೆವು. ಬೆಟ್ಟಕಡಿದು ಬೆಳೆಗೆ ಭೂಮಿ ಹದಗೊಳಿಸ ಹೊರಟಷ್ಟು ಕಠಿಣವಾಗಿತ್ತು ಬಸವಣ್ಣನವರ ಸಮಾಜ ಸುಧಾರಣೆಯ ಕಾರ್ಯ! ಪ್ರಭುತ್ವವು ವೈದಿಕ ಪುರೋಹಿತರ ಆಧೀನದಲ್ಲಿತ್ತು ವರ್ಣಾಶ್ರಮ ಧರ್ಮದ ಉಲ್ಲಂಘನೆಯಿಂದ ಉಂಟಾಗುವ ದೈವೀಕೋಪದಿಂದ ರಾಜನ, ರಾಜ್ಯದ ರಾಷ್ಟ್ರದ ವಿನಾಶವೆಂದು ಸಾವಿರಾರು ವರ್ಷಗಳಿಂದ ಹೇಳಿ ಆ ನಂಬಿಕೆಯನ್ನು ಅವರು ಕಾಪಾಡಿಕೊಂಡು ಬಂದಿದ್ದರು. ಹೊಸ ಧಾರ್ಮಿಕ ನಿಲವಿನಿಂದ ಒದಗಬಹುದಾದ ತಮ್ಮ ನಾಶದ ಭೀತಿಯು ಅರಸರಿಗಿತ್ತು. ಆದರಿಂದ ಅವರು ಶರಣರ ಆಂದೋಲನವನ್ನು ವಿರೋಧಿಸುವದಕ್ಕೆ ಮುಖ್ಯ ಕಾರಣವಾಯಿತೆಂದು ವಿಶ್ಲೇಷಿಸಿ ಮಾತನಾಡುತ್ತ ಅಣ್ಣನವರ ಸಾಮಾಜಿಕ ವಿಚಾರದ ಮೇಲೆ, ಬಳ್ಳಾರಿಯವರ ಸೂಚನೆಗಳು ಮತ್ತಷ್ಟು ಬೆಳಕು ಚಲ್ಲಿದ ವೆಂಬುದನ್ನು ಗುರುತಿಸಿದೆವು. ಅಂತೂ ಈ ಸಾಹಿತ್ತಿಕ ಕಾರ್ಯ ಮುಂದುವರಿ ಯುತ್ತಿರುವದಕ್ಕೆ ಶ್ರೀಗಳವರು ತುಂಬಾ ಸಂತೋಷವನ್ನು ವ್ಯಕ್ತಪಡಿಸಿದರು.

ಆಶ್ರಮವು ಅಂದಚೆಂದದ ಉಪವನವಾಗುತ್ತಿತ್ತಲ್ಲದೆ ಕಾಯಿಪಲ್ಲೆಗಳ ಬೆಳೆಯೂ ಬಂದಿತ್ತು ದಾಸೋಹಕ್ಕೆ ನೆರೆಯ ತೋಟಗಳಿಂದ ಹಂಗಾಮಿನ ಕಾಯಿ ಪಲ್ಲೆ ಭಕ್ತಿಯಾಗಿ ಬರುತ್ತಿರುವದಲ್ಲದೇ ಅದರಲ್ಲಿ ಆಶ್ರಮದ ಬೆಳೆಯೂ ಇದೆ ಎಂಬುದು ಆಶ್ರಮವಾಸಿಗಳ ಸದಭಿಮಾನವಾಗಿತ್ತು. ಗುರುಗಳ ಅಪ್ಪಣೆ ಯಂತೆ ಮತ್ತೊಂದು ದಿನ ಇದ್ದು ಬಂದೆನು.

ತೆಲಸಂಗ ಶ್ರೀಗಳು ಬರೆದ ಚರಿತ್ರೆ

ತೆಲಸಂಗದ ಪಟ್ಟಾಧ್ಯಕ್ಷರು ಶ್ರೀ ಷ.ಬ್ರ. ಬಸವಲಿಂಗಸ್ವಾಮಿಗಳವರು ಶ್ರೀ ಶಾಂತವೀರ ಅಪ್ಪನವರಿಗೆ ತುಂಬ ಆತ್ಮೀಯರು. ಅವರು ಅಪ್ಪನವರ ಜೀವನ ಚರಿತ್ರೆಯನ್ನು ಬರೆದಿದ್ದರು ಅವರ ಇಚ್ಛೆಯಂತೆ ನಾನೂ ಅದನ್ನು ಓದಿ ನೋಡಿ ದ್ದೆನು. ಅವರು ಶ್ರೀ ಹಿರೇಮಠ ಡಾಕ್ಟರರ ಕಡೆಗೆ ಬಂದು ಆ ಗ್ರಂಥದ ಮುದ್ರಣಕ್ಕೆ ಧನಸಹಾಯ ಸಂಪಾದಿಸಲು ತಾವಿಬ್ಬರು ಕಾಖಂಡಕಿ ಶೇಗುಣಶಿ ಭಕ್ತರ ಕಡೆಗೆ ಹೋಗುವದೆಂದು ನಿರ್ಧರಿಸಿದ್ದರು. ಡಾಕ್ಟರರ ಸಲಹೆಯಂತೆ ನಾನೂ ಬರಬೇಕೆಂದು ಆ ಉಭಯ ಮಹನೀಯರ ಸೂಚನೆ ಬಂದಿತ್ತು ಬರುವೆ ನೆಂದಿದ್ದೆ. ದಿ. ೫-೧೨-೬೫ರಂದು ಹೋಗುವದೆಂದು ಗೊತ್ತಾಗಿತ್ತು. ಅಷ್ಟರಲ್ಲಿ 'ಬಯಲಾದ ಸಂಚು' ಪುಸ್ತಕದ ಅಚ್ಚಿನ ಪ್ರತಿಯನ್ನು ಅಂಚೆಯ ಮೂಲಕ ಸಿಂಪಿ ಲಿಂಗಣ್ಣನವರ ಕಡೆಗೆ ರವಾನಿಸಿ ಸಿದ್ಧನಾಗಿದ್ದೆನು. ಆದರೆ ಅಂದು ಗೊತ್ತು ಮಾಡಿದ್ದ ಟ್ಯಾಕ್ಸಿ ಚಾಲಕನು ತಪ್ಪಿಸಿ ಮತ್ತೊಂದು ಕಡೆ ಹೋಗಿ ಕೈ ಕೊಟ್ಟದ್ದರಿಂದ ಅಂದು ಹೊರಡಲಾಗಲಿಲ್ಲ. ಮರುದಿನ ಹೊರಟೆವು. ಮೊದಲು ಕಾಖಂಡಕಿಗೆ ಬಂದೆವು. ಶ್ರೀ ಗದಿಗೆಪ್ಪಗೌಡರು ಮುಖ್ಯರಾದವರನ್ನು ಕೂಡಿಸಿ ದರು. ಕೆಲವು ವಾಗ್ದಾನಗಳಾದವು. ಬಳಿಕ ಹರಳೇಶ್ವರಾಶ್ರಮದ ದಾರಿಯಿಂದ ಶೇಗುಣಶಿಗೆ ಹೊರಟೆವು. ಶ್ರೀ ಶಾಂತವೀರ ಮಹಾಸ್ವಾಮಿಗಳ ದರ್ಶನ ಪಡೆದೆವು. ಯಾವ ಕಾರ್ಯಕ್ಕೇ ಆಗಲಿ ಭಕ್ತರಿಗೆ ಬೇಡದ ಶ್ರೀ ಸ್ವಾಮಿಗಳವರು ಈ ಧನ ಸಹಾಯ ಸಂಪಾದಿಸುವಲ್ಲಿ ಕೈ ಹಾಕುವದು ಶಕ್ಯವೇ ಇರಲಿಲ್ಲ. ಅಲ್ಲಿ ಈ ವಿಷಯದ ಮಾತೇ ಆಡಲಿಲ್ಲ. ಕೇವಲ ಕುಶಲ! ಆನಂದಾಲಾಪ! ಶೇಗುಣಶಿಯಲ್ಲಿ ರಾಮನಗೌಡರು ತಮ್ಮ ಕೊಡುಗೆ ಪ್ರಕಟಿಸಿದರು. ಅಲ್ಲಿ ಅಷ್ಟೇ! ಹಲಿಗಣಗೆ ಬಂದು ಕೆಲ ವಾಗ್ದಾನ ಪಡೆದು, ಬಬಲೇಶ್ವರ ಮಠದಲ್ಲಿ ವಿಶ್ರಾಂತಿ ಹೊಂದಿ ಸಂಜೆ ವಿಜಾಪುರಕ್ಕೆ ಬಂದೆವು.

ಮಗನಿಗಾಗಿ ಹಾತೊರೆದು ಬಂದ ತಂದೆ

ದಿ. ೭-೧-೬೬ ಶುಕ್ರವಾರ ನನಗೆ ಅಸ್ವಸ್ಥವಾಯಿತು; ಜ್ವರ ಬಂದು ಮಲಗಿಕೊಂಡೆನು. ಮಲಾವರೋಧ ಮತ್ತು ವಾಯು ಇವು ನನ್ನ ತಾರುಣ್ಯ ದಿಂದಲೂ ಸಹವಾಸಿ ರೋಗಗಳು ಮೂರನೆಯದು ಕಣ್ಣಿನ ಬೇನೆ. ಆದರೆ ಜ್ವರ ಬಂದು ಹಾಸಿಗೆ ಹಿಡಿದು ಮಲಗಿದುದು ಮೂವತ್ತು ವರ್ಷಗಳ ನಂತರ ಮೊದಲನೆ ಯದು. ಬೇಗ ಜ್ವರ ನಿಲ್ಲಲಿಲ್ಲ. ಎರಡು ದಿವಸ ನಿಂತು ಮತ್ತೆ ನಾಲ್ಕಾರು ದಿವಸ ಬರುತ್ತಿದ್ದವು. ಡಾಕ್ಟರರ ಆಗಮನ ಇಂಜೆಕ್ಶನ್ ಔಷಧಗಳು ನಡೆದೇ ಇದ್ದವು. ಕಾಖಂಡಕಿಯ ನಮ್ಮ ಬಂಧುಗಳು ಬಂದು ಹೋಗಿದ್ದರು. ಸಾಲಿ ಭೀಮಪ್ಪ ಕಾಲೇಜ ಲಾಯಬ್ರರಿಯಲ್ಲಿ ಬಂದಿದ್ದನಾದರೂ ಶನಿವಾರ ರವಿವಾರ ಹರಳೇಶ್ವರಕ್ಕೆ ಹೋಗಿ ಬರುತ್ತಿದ್ದನು. ಈ ಮಾರ್ಗಗಳಿಂದ ಗುರುಗಳಿಗೆ ನನ್ನ ಅನಾರೋಗ್ಯದ ಸ್ಥಿತಿ ಗೊತ್ತಾಗಿತ್ತು. ಆರೋಗ್ಯಕ್ಕಾಗಿ ಆಶೀರ್ವದಿಸಿ ಅವರಿಂದ ಒಂದು ಪತ್ರವು ಬಂದಿತ್ತು.

೬-೨-೬೬ನೇ ದಿನ ಜಗದ್ಗುರು ನಿಡುಮಾಮಿಡಿ ಮಹಾಸ್ವಾಮಿಗಳು ವಿಜಾಪುರಕ್ಕೆ ಬಂದು ಶ್ರೀ ಎಸ್. ಎಸ್. ಹೇರಲಗಿ ಅವರಲ್ಲಿ ಉಳಿದುಕೊಂಡಿ ದ್ದರು. ಹೇರಲಗಿಯವರು ಹೇಳಿಕಳಿಸಿದರು. ಆಗಷ್ಟೇ ಆರಾಮವಿತ್ತು ಮನೆ ಯವರೆಲ್ಲ ಹೋಗಿ ದರ್ಶನ ಪಡೆದು ಬಂದೆವು ಸಂಜೆಗೆ ಮತ್ತೆ ಮೈ ಬಿಸಿಯಾಯಿತು.

ಶ್ರೀ ಶಾಂತವೀರಸ್ವಾಮಿಗಳು ವಿಜಾಪುರಕ್ಕೆ ಬಂದು ಮನೆಗೆ ಬಂದು ಹೋಗು ವರೆಂದು ಅಸ್ಪಷ್ಟ ಸುದ್ದಿಯನ್ನು ಕಾಖಂಡಕಿಯವರು ಹೇಳಿ ಕಳಿಸಿದ್ದರು.

೭-೨-೬೬ ಸೋಮವಾರ ಹರಳೇಶ್ವರದಿಂದ ಬಂದ ಭೀಮಪ್ಪನು 'ಶ್ರೀಗಳ ವರು ೯-೨-೬೬ ಬುಧವಾರ ವಿಜಾಪುರಕ್ಕೆ ಬಂದು ಸಂಜೆಯ ೬ ಗಂಟೆಗೆ ಮನೆಗೆ ಬಂದು ಹೋಗುವರು ಇದನ್ನು ನಿಮಗೆ ತಿಳಿಸಲು ಹೇಳಿದ್ದಾರೆ' ಎಂದು ಹೇಳಿದನು. ಅಂದು ಗುರುಗಳನ್ನು ಯೋಗ್ಯ ರೀತಿಯಲ್ಲಿ ಬರಮಾಡಿಕೊಳ್ಳುವದಕ್ಕೆ ಯೋಚಿಸಿ ದೆನು. ಅಂದು ೫ ಗಂಟೆಗೆ ಬರಲು ಭೀಮಪ್ಪನಿಗೆ ಹೇಳಿದ್ದೆನು. ಈಶ್ವರನನ್ನು ಕರೆಯಿಸಿಕೊಂಡೆನು. ಮಹಡಿಯಲ್ಲಿ ಆಸನಗಳ ಸಿದ್ಧತೆ ಮಾಡಿದರು ೬ ಗಂಟೆಗೆ ಸ್ವಾಮಿಗಳ ದರ್ಶನಕ್ಕೆ ಬರಬೇಕೆಂದು ಸ್ಥಳೀಯ ಆಪ್ತರ ಮನೆಗೆ ತಿಳಿಸಿದ್ದರು. ೪ ಗಂಟೆಯಾಗಿತ್ತು ಇನ್ನು ಪೇಟೆಗೆ ಹೋಗಿ ಬರಬೇಕಾದದ್ದಷ್ಟಿತ್ತು. ಶ್ರೀಗಳ

ಕಾರು ಬಾಗಿಲಿಗೇ ಬಂದಿತು. ನನ್ನನ್ನೂ ಕರಕೊಂಡು ಮನೆಯುವರೆಲ್ಲ ಹೊರಗೆ ಬಂದರು. ಗುರುಪಾದಕ್ಕೆ ವಂದಿಸಿ ಒಳಗೆ ಬರಮಾಡಿಕೊಂಡೆವು. ಕಾರಿನಲ್ಲಿ ಇದ್ದವ ಎತ್ತಿಕೊಂಡು ಬಂದರು. ಭೀಮಪ್ಪನ ಹೊರತು ಅವರನ್ನು ಮೇಲೆ ಕರಕೊಂಡು ಹೋಗುವದು ಆಗುವಂತಿರಲಿಲ್ಲ. ಅಪ್ಪನವರೂ 'ಮೇಲೆ ಬೇಡ' ಎಂದರು. ನನ್ನ ಹಾಸಿಗೆಯ ಹತ್ತಿರವೇ ಸಾದಾ ಖುರ್ಚಿಯ ಮೇಲೆ ಕುಳಿತು ಮೈ ಮುಟ್ಟಿನೋಡಿ, ಉಪಚಾರವನ್ನು ವಿಚಾರಿಸಿದರು. ಪಾದೋದಕ ಕೊಟ್ಟರು. ಮನೆಯುವರು ಸ್ವೀಕರಿಸಿದರು! ನಿನ್ನೆಯೇ ತಂದಿದ್ದ ಕಲ್ಲುಸಕ್ಕರೆ ಪ್ರಸಾದಿಸಿ ದಯೆ ಪಾಲಿಸಿದರು. ನನ್ನ ಹೃದಯ ತುಂಬಿ ಬಂದಿತ್ತು. ಕಂಬನಿದುಂಬಿ ವಂದಿಸಿದೆ. ಅರ್ಧತಾಸು ಇದ್ದು ಪುನಃ ಆಶೀರ್ವದಿಸಿ ಹೋದರು. ಕರುಣೆ, ಪ್ರೀತಿ, ವಾತ್ಸಲ್ಯ ಗಳ ಒತ್ತಾಸೆಯಿಂದ ಹೇಗೆ ಬಂದಿದ್ದರೋ ಹಾಗೆಯೇ ಹೋದರು. ತೋರಿಕೆಗೆ ಹೆಚ್ಚಿನದೇನಿರಲಿಲ್ಲ. ೬ ಗಂಟೆಗೆ ಆಪ್ತೇಷ್ಟರು ಬಂದರು ಶ್ರೀಗಳ ದರ್ಶನಕ್ಕೆಂದು! ದರ್ಶನ ದೊರೆಯದೇ ಸ್ವಲ್ಪ ನಿರಾಶರಾದರು. ಗುರುಗಳ ಘನತೆಗೆ ಮೆಚ್ಚಿ ಸಂತೋಷಿಸಿ ಪ್ರಸಾದ ಸ್ವೀಕರಿಸಿ ತೆರಳಿದರು. ಅದು ಮೊದಲಗೊಂಡು ಜ್ವರ ಬರಲಿಲ್ಲ. ಕ್ರಮವಾಗಿ ಊಟ ಮಾಡಹತ್ತಿದೆ. ಚೆನ್ನಾಗಿಯೇ ಮಾಡಹತ್ತಿದೆ ಒಂದು ತಿಂಗಳಲ್ಲಿ ಮೊದಲಿನಂತೆ ಆದೆನು.

ನಿಜವಾದ ಶ್ರೇಷ್ಠ ಯಾರು?

ಐವತ್ತು ದಿವಸಗಳಾಗಿದ್ದವು. ಮತ್ತೆ ಗುರು ಸನ್ನಿಧಾನದ ಬಯಕೆ! ಶ್ರೀಮತಿಯೂ ಬರುವೆನೆಂದಳು. ಇಬ್ಬರೂ ದಿ. ೨೫–೪–೬೬ರಂದು ಹರಳೇಶ್ವರಕ್ಕೆ ಹೋಗಿ ಗುರುಗಳ ಪಾದಕ್ಕೆ ಪ್ರಣಾಮಗೈದೆವು. ನೀಲಮ್ಮ ತಾಯಿ ಇದ್ದರು. ಬಬಲೇಶ್ವರದಿಂದ ಮಾವಿನ ಹಣ್ಣು ತರಿಸಿ ಅಡಿಹಾಕಿಸಿದ್ದರು. ಬಾಯಿಗೆ ಮಾವಿನ ಹಣ್ಣಿನ ರುಚಿ! ಕಿವಿಗೆ ಅಪ್ಪನವರ ಅಮೃತವಾಣಿ! ಬೇಸಿಗೆಯ ದಿನವಾದ್ದರಿಂದ ೩ ಗಂಟೆಗೇ ಹೊರಗೆ ಗಿಡಗಳ ತಣ್ಣೆಳಲಲ್ಲಿ ಗುರುಗಳ ಕೈಗಾಡಿಯನ್ನು ನಿಲ್ಲಿಸಿ ಕುಳ್ಳಿರುತ್ತಿದ್ದೆವು.

ಒಂದು ಪ್ರಶ್ನೆ! ನಿಜವಾದ ಶ್ರೇಷ್ಠನು ಯಾರು? ಜೇಷ್ಠನೋ, ಧನ ವಂತನೋ, ಅಧಿಕಾರಿಯೋ, ಬಾಹುಬಲನೋ, ಪಂಡಿತನೋ.

'ಇವರೆಲ್ಲ ಶ್ರೇಷ್ಠರೇ!' ಎಂದು ಅಪ್ಪನವರು ನಡುವೇ ನಗಹತ್ತಿದರು. ಜೇಷ್ಠನು ಹುಚ್ಚರಲ್ಲಿ, ಧನವಂತನು ಲೋಭಿಗಳಲ್ಲಿ, ಅಧಿಕಾರಿಯು ಗರ್ವಿಷ್ಠರಲ್ಲಿ,

ಬಾಹುಬಲನು ಸೊಕ್ಕಿನವರಲ್ಲಿ, ಪಂಡಿತನು ಅಹಂಕಾರಿಗಳಲ್ಲಿ ಶ್ರೇಷ್ಠರು. ವಚನಕಾರರು ಇವರೆಲ್ಲರನ್ನು ವಿಡಂಬಿಸಿದ್ದಾರಲ್ಲ! ಮಾತುಗಳಿಗೆ ಮೆರಗು ಬಂದಿತು.

"ನಿಜವಾದ ಶ್ರೇಷ್ಠರು ಬೇರೆ ಇರಬೇಕಾಯಿತು"

"ಓಹೋ ಸಂದೇಹವೇನು? ಪರತತ್ವವನ್ನು ತಿಳಿದುಕೊಳ್ಳುವ ಪ್ರಜ್ಞೆಯುಳ್ಳವ ಶ್ರೇಷ್ಠ! ಅವನಲ್ಲಿ ಎಲ್ಲ ದೈವೀಗುಣಗಳೂ ಒಂದುಗೂಡಿರುತ್ತವೆ. ಈ ಗುಣಗಳ ಹಿಂದೆ ಪರಶಿವ ಚೈತನ್ಯವಿರುತ್ತದೆ. ದುರ್ಗಣಗಳಿಗೆ ಪ್ರಚೋದನೆ ಇರುವ ಸಂದರ್ಭದಲ್ಲಿಯೂ ಈ ದಯೆ ಮೊದಲಾದ ದೈವೀಗುಣಗಳು ಆ ದುರ್ಗಣಗಳನ್ನು ತಡೆದು ನಿಲ್ಲಿಸುತ್ತವೆ. ಅವುಗಳ ಸೆಳವಿಗೆ ಬೀಳದಂತೆ ಪ್ರಜ್ಞಾವಂತನನ್ನು ಕಾಪಾಡುತ್ತವೆ."

"ಅದು ಹೇಗೆ ಅಂಥ ಒಂದು ಸಂದರ್ಭವನ್ನು ಉದಾಹರಿಸಬೇಕು."

"ಹಾಗಾದರೇ ನಮ್ಮ ಸಮೀಪದ್ದೇ ಒಂದು ದೃಷ್ಟಾಂತವನ್ನು ಕೇಳಿರಿ" ಎಂದು ಅಪ್ಪನವರು ಲಿಂ. ಬಸವನಗೌಡರ (ನೀಲಮ್ಮ ತಾಯಿಯ ಲಿಂಗೈಕ್ಯ ಪತಿಗಳು) ಒಂದು ಸಂದರ್ಭವನ್ನು ಉದಾಹರಿಸಿ ವಿವರಿಸಿದರು. ಅದು ಹೀಗಿತ್ತು ಗೌಡರ ತೋಟದ ಆಲಿಮನಿಯಿಂದ ಬೆಲ್ಲದ ಪೆಂಟಿಗಳನ್ನು ಎರಡು ಗಾಡಿಗಳಲ್ಲಿ ಹೇರಿಕೊಂಡು ಇಬ್ಬರು ಆಳುಮಕ್ಕಳು ಮನೆಗೆ ತರುತ್ತಿದ್ದರು ಮುಚ್ಚಂಜೆಯ ಕತ್ತಲು; ಊರ ಹತ್ತಿರ ಹಾದಿಯ ಬದುವಿನ ಕಂಟಿಗಳಲ್ಲಿ ಎರಡು ಪೆಂಟಿಗಳನ್ನು ಇಳಿಸಿ ಇಟ್ಟು ಗಾಡಿಹೊಡೆದರು. ಸಮೀಪದಲ್ಲಿ ಬಹಿರ್ದೆಸೆಗೆ ಕುಳಿತವನೊಬ್ಬನು ಇವರನ್ನು ಗುರ್ತಿಸಿ ನೋಡಿ ತಾನು ಬಂದ ಸಂದಿಯ ಹಾದಿಯಿಂದ ಬೇಗ ಮರಳಿ ಹೋಗಿ ಇದನ್ನು ಗೌಡರಿಗೆ ತಿಳಿಸಿದನು. ಅದನ್ನು ಕೇಳಿ ಗೌಡರಿಗೆ ಕ್ರೋಧ ಉಂಟಾಗಲಿಲ್ಲ. ಕನಿಕರವುಂಟಾಯಿತು. ಆ ಕೂಡಲೆ ಅವರು ಬೇರೆ ಇಬ್ಬರನ್ನು ಕಳಿಸಿ ಆ ಬೆಲ್ಲದ ಪೆಂಟಿಗಳನ್ನು ಆಯಾ ಆಳುಗಳ ಮನೆಗೆ ತಲುಪಿಸಿ ಬಿಟ್ಟರು.

ಈ ಆಳುಮಕ್ಕಳು ಎತ್ತು ಕಟ್ಟಿ ಗಾಡಿ ಇಳಿಸಿ ಊಟಕ್ಕೆ ಮನೆಗೆ ಹೊರಟು, ಆ ಕದ್ದ ಬೆಲ್ಲದ ಪೆಂಟಿಗಳ ಕಡೆಗೆ ಹೋದರು. ಅಲ್ಲೆಲ್ಲಿರಬೇಕು ಅವು? ಹೋಗಿಬಿಟ್ಟಿದ್ದವು. 'ಹೊಡೆದರು ಕಳ್ಳರು' ಎಂದು ಕರಬುತ್ತ ಮನೆಗೆ ಬಂದರು. ಮನೆಯಲ್ಲಿ ಬೆಲ್ಲ; ಗೌಡರು ಕಳಿಸಿದ್ದಾರೆಂದು ಇಂಥವ ಇಟ್ಟುಹೋದರೆಂದು ಮನೆಯಲ್ಲಿ ಹೇಳಿದರು. ಇಬ್ಬರಲ್ಲಿಯೂ ಹೀಗೆಯೇ ಬಂದುದನ್ನು ಪರಸ್ಪರ ತಿಳಿದುಕೊಂಡು ನಾಚಿದರು. ಅದಕ್ಕಿಂತ ಹೆಚ್ಚಾಗಿ ಹೆದರಿಕೊಂಡರು. ಗಾಬರಿಯಲ್ಲಿ ಊಟಮಾಡಿ,

ಗೌಡರ ಮನೆಗೆ ಹೋಗಿ ಎತ್ತು ಬಿಡುವ ಬದಲು ಗೌಡರ ಕಾಲಿಗೆರಗಿ ತಪ್ಪಾಯಿತೆಂದು ಕೈಮುಗಿದು ಅಳಹತ್ತಿದರು. 'ತಮ್ಮಾ ಅಳಬೇಡಿರಿ ದೇವರು ಕೊಟ್ಟ ಫಲ, ನೀವೂ ಉಣಬೇಕು. ಈ ಪ್ರಸಂಗ ಬರುವ ಮೊದಲೇ ನಾನು ಅನನ್ನು ತಿಳಿದುಕೊಳ್ಳಬೇಕಾಗಿತ್ತು ನನ್ನದು ತಪ್ಪು! ಚಿಂತಿಸಬೇಡಿರಿ. ಸಂತೋಷದಿಂದ ನಡೆಯಿರಿ. ಗಾಡಿಕೊಳ್ಳ ಕಟ್ಟಿರಿ' ಎಂದು ಸಮಾಧಾನದಿಂದ ನುಡಿದಿದ್ದರು. ಈ ದಯಾಗುಣ, ದೈವೀಗುಣ. ದೈವೀಗುಣಗಳಲ್ಲಿ ಮುಖ್ಯವಾದದ್ದು. ಇದುವೇ ಶಾಂತಿ, ಸಮಾಧಾನ, ಸಮತೆ, ಆನಂದಗಳಿಗೆ ಆದಿಯಾದದ್ದು. ಇವು ಹೊರಗಿನಿಂದ ಬಂದವುಗಳಲ್ಲ! ಅಂತರ್ಭೂತವಾಗಿರವುವು. ಅವಿಚಲಿತ ಮುಖರಾಗಿ ಕುಳಿತಿದ್ದ ನೀಲಮ್ಮ ತಾಯಿಯವರ ಮುಖವನ್ನು ನಾವು ಎರಡು ಮೂರು ಸಲ ನೋಡಿದ್ದೆವು.

ಚತುರ್ವಿಧ ಸಾರಾಯ

೪೦ ವರ್ಷಗಳ ಹಿಂದೆ ನಾಗನೂರು ಕಾಶೀನಾಥ ಶಾಸ್ತ್ರೀಗಳೆಂಬವರು ವೀರಶೈವ ಪೀಠಾಧಿಪರಲ್ಲಿ ತರತಮಭಾವದ ಕೋಲಾಹಲವನ್ನು ಉಂಟು ಮಾಡಿದ್ದರ ಪ್ರಸ್ತಾಪ ಗುರುಗಳ ಮಾತಿನಲ್ಲಿ ಒಂದೆರಡು ಸಲ ಬಂದಿತು. ಮರುದಿನ ಅಪ್ಪನವರ ಹತ್ತಿರ ಮಾತನಾಡುವಾಗ ಗುರು–ಜಂಗಮರ ನಡುವೆ ವೈಷಮ್ಯ ಉಂಟು ಮಾಡಿದ ಅಂದಿನ ಪರಿಸ್ಥಿತಿಯು ಪ್ರಸ್ತಾಪವಾಯಿತು. ನಾನೊಂದು ಕೇಳಿದೆ. ಭಕ್ತನ ಮನೆಗೆ ಗುರು–ಜಂಗಮರು ಒಮ್ಮೆಲೆ ಬಂದರೆ ಗದ್ದುಗೆಯ ಮೇಲೆ ಯಾರನ್ನು ಕೂಡ್ರಿಸಬೇಕು? ಅಪ್ಪನವರು ತುಂಬಾ ನಿಸ್ಪೃಹರು. ಗುರು ಮನೆಯವ ಜಂಗಮ ಅತಿಥಿ! ಜಂಗಮನನ್ನು ಕೂಡ್ರಿಸಿ ತೀರ್ಥಪ್ರಸಾದ ಪಡೆಯಬೇಕೆಂದು ಹೇಳಿಬಿಟ್ಟರು. ಮತ್ತೆ ಮುಂದುವರಿದು ಗುರು–ಲಿಂಗ ಜಂಗಮ ಇವುಗಳಲ್ಲಿ ತರ ತಮ ಭಾವವಿರಲೇಬಾರದು ಇವು ಪರಶಿವ ತತ್ವದ ಕರ್ತವ್ಯ ಭೇದಗಳು.

ಗುರು ಆ ಪರಶಿವನ ದಿವ್ಯಾನುಭೂತಿಯಲ್ಲಿ ಮುಳುಗಿದವ. ಆ ಅನುಭಾವ ಜಲದಿಂದ ಶಿಷ್ಯನಲ್ಲಿ ಆತ್ಮಚೈತನ್ಯವನ್ನು ಜಾಗೃತಗೊಳಿಸುವನು.

ಲಿಂಗ ಗುರುವಿನಿಂದ ಕೊಡಲ್ಪಟ್ಟ ಸಾಧನೆಯ ಪ್ರತೀಕ.
ಜಂಗಮ ಲಿಂಗವನ್ನು ದೃಢಪಡಿಸುವವನು.
ಪ್ರಸಾದ ಈ ತ್ರಿವಿಧಗಳಿಂದ ಉಂಟಾದ ಅಖಂಡ ಶಾಂತಿ.

ಇವು ಚತುರ್ವಿಧ ಸಾರಾಯ ಎನಿಸಿದ್ದರೂ ಒಂದೇ ಬಸಿರಿನಿಂದ ಬಂದವುಗಳು. ಪರಶಿವ ಸಾಮರಸ್ಯದ ಬಾಹ್ಯಸ್ವರೂಪಗಳು.

ಬೋಧಪ್ರದ ಪತ್ರ

ಗುರುಗಳ (ದಿ. ೨೫–೫–೬೬) ಪತ್ರ ಬಂದು ತಲುಪಿತು ಅದು ಬೋಧ ಪ್ರದವಾಗಿತ್ತು ಮುಖ್ಯಾಂಶಗಳು ಹೀಗಿದ್ದವು. 'ನಮ್ಮ ಪ್ರಕೃತಿಯು ಹೊಯ್ದಾಡುತ್ತ ನಡೆದಿದ್ದರೂ, ಸಂತೃಪ್ತಿಯಿಂದ ಇರುವೆನು. ನಿಮ್ಮ ಪ್ರಕೃತಿಯ ಬಗ್ಗೆ ತಿಳಿಸು ತ್ತಿರಬೇಕು. ಪ್ರಕೃತಿಯು ಅದು ತನ್ನ ಕಾರ್ಯ ಮಾಡುತ್ತ ಸಂಕೋಚ–ವಿಕಾಸ ಗಳಿಂದ ಸಾಗಿರಲಿ. ಅದು ಅದರ ಸ್ವಭಾವ! ನೀವು ನಿಮ್ಮ ಕಾರ್ಯ ಮಾಡುವಲ್ಲಿ ಸಂಕೋಚಕ್ಕೆ ಎಡೆಗೊಡದೆ ವಿಕಾಸದತ್ತ ಮುಂದುವರೆಯಿರಿ. ಮನದ ಕೊನೆಯಲ್ಲಿ ಬೆಳಗುವ ವಿದ್ಯುತ್ತು ಥಳ ಥಳಿಸಲಿ. ನಿನ್ನೆ ರಾತ್ರಿ ನೀವು ಕೈಕೋಲು ಹಿಡಿದು ನನ್ನ ಎದುರಿಗೆ ಬಾಗಿ ನಿಂತಿದ್ದಿರಿ. ಸಂತೋಷಪಟ್ಟೆನು. ಪ್ರಿಂಟಾದ ಪುಸ್ತಕ ಬಂದಿದ್ದರೆ ಕಳಿಸಬೇಕು.........

ದಿ. ೨೮ ರಂದು ಉತ್ತರ ಬರೆದೆನು ದಿ. ೩೧ ರಂದು 'ಬಯಲಾದ ಸಂಚು' ಪುಸ್ತಕ ತರುವೆನೆಂದು ತಿಳಿಸಿದೆನು.

ಶರಣನ ಗುಡಿ

ಕಡೆಮನಿ ಗೌಡತಿ ನೀಲಮ್ಮ ತಾಯಿಯ ಪತಿ ಬಸವನಗೌಡರ ಅಂತಿಮ ಸಮಾಧಿ ಸಾಮಾನ್ಯ ರುದ್ರಭೂಮಿಯಲ್ಲಿ ಆಗಿತ್ತು. ಅಲ್ಲಿ ಅದು ಚಿಕ್ಕ ಸರುವಿನ ಬದಿಗಿದ್ದ ಕೊರೆಯಾಗ ಹತ್ತಿತ್ತು. ಆ ಕಳೇಬರದ ಅಸ್ಥಿಗಳನ್ನು ಅಲ್ಲಿಂದ ತೆಗೆದು ಅವರೇ ಮಠಕ್ಕೆ ನೀಡಿದ ಜಮೀನಿನಲ್ಲಿ–ಮಠದ ಹತ್ತಿರದಲ್ಲಿ ಪುನಃನಿಧಾನಗೊಳಿಸಿ ಮೇಲೆ ಗುಡಿಕಟ್ಟಿಸಲು ನೀಲಮ್ಮ ತಾಯಿಯ ಅಪೇಕ್ಷೆಯಾಗಿರಬೇಕು. ಅದನ್ನು ಸ್ವಾಮಿಗಳಿಗೆ ತಿಳಿಸಿದ್ದರು. ಶ್ರೀಗಳವರು ಅದನ್ನು ಅನುಮೋದಿಸಿ ಅಲ್ಲಿಯೇ ತಾಯಿಗೊಂದು ಸ್ಥಳವನ್ನು ಗವಿಯಾಗಿ ರಚಿಸಬೇಕೆಂದು ಹೇಳಿದ್ದರು. ಮುಂದೆ ತಾಯಿಯ ಇಚ್ಛೆಯಂತೆ ಬಬಲೇಶ್ವರದ ಹಿರಿಯರ ನೇತೃತ್ವದಲ್ಲಿ ಇವೆಲ್ಲ ಕಾರ್ಯ ಗತವಾಗಿದ್ದವು.

ಆ ಗುಡಿಯ ಶಾಂತಿ ಮತ್ತು ಅನ್ನಸಂತರ್ಪಣೆ ಕಾರ್ಯಕ್ರಮವನ್ನು ೨೬–೯–೬೬ ರಂದು (ಸೋಮವಾರ) ಮಾಡುವದಾಗಿ ನೇಮಿಸಿಕೊಂಡಿದ್ದರು. ಅವ್ವನವರಿಂದ ನಮಗಿಬ್ಬರಿಗೂ ಆಮಂತ್ರಣ ಬಂದಿತ್ತು. ನಾವಿಬ್ಬರೂ ಮೊದಲು

ಹರಳೇಶ್ವರಕ್ಕೇ ಹೋದೆವು. ಒಂದು ದಿನ ಗುರುಸನ್ನಿಧಾನದಲ್ಲಿ ವಾಸವಾಗಿದ್ದು ಗುರುಗಳೊಡನೆಯೇ ಬಬಲೇಶ್ವರಕ್ಕೆ ಬಂದೆವು. ಮನಗೂಳಿಯ ಷ. ಬ್ರ. ಪಟ್ಟಾಧ್ಯ ಶಿವಾಚಾರ್ಯರ ಪಾದಪೂಜೆಯೊಡನೆ ಶರಣನ ಗುಡಿಯ ಶಾಂತಿಕಾರ್ಯಕ್ರಮ ವಿಧ್ಯುಕ್ತವಾಗಿ ಜರುಗಿತು. ಸಾವಿರಾರು ಜನರಿಗೆ ಅನ್ನಸಂತರ್ಪಣೆಯಾಯಿತು. ಶ್ರೀ ಶಾಂತವೀರ ಸ್ವಾಮಿಗಳಲ್ಲಿ ಬಸವನಗೌಡರಿಗಿದ್ದ ಭಕ್ತಿಯನ್ನೂ ತ್ಯಾಗ–ಸೇವೆ ಗಳನ್ನೂ ಜನರು ಸ್ಮರಿಸಿ ಕೊಂಡಾಡಿದರು. ಆ ಸಂಭ್ರಮದಲ್ಲಿ ಉತ್ಸಾಹದಿಂದ ಭಾಗಿಗಳಾಗಿ ಗುರುಗಳ ಅಪ್ಪಣೆ ಆಶೀರ್ವಾದ ಪಡೆದು ಮರಳಿದೆವು.

* * * *

ದಿ. ೨೨–೧೦–೬೬ ರಂದು ಆಶ್ರಮಕ್ಕೆ ಬಂದಾಗ 'ಬಸವರಾಜ ದೇವರು' ಮುದ್ರಣ ವಿಷಯದಲ್ಲಿ ದೀರ್ಘವಿಚಾರನಂತರ ಮಾಡಿದ ಏರ್ಪಾಡನ್ನೆಲ್ಲ ವಿವರ ವಾಗಿ ಅರಿಕೆ ಮಾಡಿದೆ. ಅಚ್ಚಿನ ಪ್ರತಿ ಬರೆಯುವದನ್ನು ಆರಂಭಿಸಿದ್ದೇನೆ ಎರಡು ಹಂತಗಳಲ್ಲಿ ಕಳಿಸಿಕೊಡುವೆನು ಎಂದು ಹೇಳಿದೆ. ಮುನ್ನುಡಿ ಬರೆಯಲು ಬಂಥನಾಳ ಶಿವಯೋಗಿಗಳಿಗೇ ಪ್ರಾರ್ಥಿಸಿದ್ದನ್ನು ಅಪ್ಪನವರಿಗೆ ಬಹಳ ಸಮಾಧಾನ ಸಂತೋಷವೆನಿಸಿತ್ತು.

೨೯–೧೧–೬೬ ಅಚ್ಚಿನ ಪ್ರತಿ ಬರೆದಾದ ಉಳಿದ ೨ನೆಯ ಭಾಗವನ್ನು ಸೆಕ್ರೆಟರಿಯವರಿಗೆ ಕೊಟ್ಟು ಧಾರವಾಡಕ್ಕೆ ಕಳಿಸಲಾಗಿತ್ತು ಮುದ್ರಣ ನಡೆದಿದೆ ಎಂದು ಪತ್ರ ಬಂದಿತ್ತು. ಬಂಥನಾಳ ಶ್ರೀ ಶಿವಯೋಗಿಗಳವರಿಂದ 'ಮುನ್ನುಡಿ ಬರೆಯಲು ತಮಗೆ ಸಮಯವಿಲ್ಲ ಬಬಲೇಶ್ವರ ಸ್ವಾಮಿಗಳಿಂದ ಅಥವಾ ನಿಮಗೆ ಯೋಗ್ಯವೆನಿಸಿದ ಬೇರೆಯವರಿಂದ ಬರೆಯಿಸಿರಿ' ಎಂಬ ಆದೇಶದ ಪತ್ರ ಬಂದಿತು ಈ ಕೆಲಸಕ್ಕಾಗಿ ಗುರುಗಳನ್ನೇ ಪ್ರಾರ್ಥಿಸುವದು ಅಗತ್ಯವಾಯಿತು. ಇದೇ ಸಮಯ ದಲ್ಲಿ ಗುರುಗಳಿಗೆ ಉಸಿರಾಯಾಸದ ತ್ರಾಸ ಹೆಚ್ಚಾಗಿದೆ ಎಂಬ ಸುದ್ದಿಯೂ ಬಂದಿತು. ಈ ಡಿಸೆಂಬರದ ಅತಿ ತಂಪು ಹವೆಯು ದಮ್ಮಿನವರಿಗೆ ಹೆಚ್ಚು ಸಂಕಟಕ್ಕೆ ಕಾರಣವಾಗುವದೆಂದು ಅನಿಸಿತಾದರೂ ಮನಸ್ಸಿಗೆ ತುಂಬ ಕಳವಳವಾಯಿತು.

೬–೧೨–೬೬ ಸಂಜೆಗೆ ಹರಳೇಶ್ವರಕ್ಕೆ ಹೋದೆನು. ಅಪ್ಪನವರಿಗೆ ಮುಂಜಾನೆ ವೇಳೆಯಲ್ಲಂತೂ ಗಂಟಲ ಗುಸುಗುಸುವಿನ ತ್ರಾಸ ಹೆಚ್ಚಾಗಿರುತ್ತಿತ್ತು. ಮಧ್ಯಾಹ್ನ ಕಂಠದಲ್ಲಿಯ ವೇದನೆ ಕಡಿಮೆಯಿರುತ್ತಿತ್ತು. ಪರಿಹಾರ ಉಪಾಯಗಳು ನಡೆದೇ ಇದ್ದವು. ತೇಕು ಜೋರಾದಾಗ ಮಾತಾಡಲೂ ಆಗುತ್ತಿರಲಿಲ್ಲ. ಕೆಲಹೊತ್ತು

ಅದು ಹಿಂದೆ ಸರಿದಾಗ ಆರಾಮವಾಗಿರುತ್ತಿದ್ದರು. ದಿ. ೭ನೇ ದಿನ ಪೂರ್ಣ ನಾನು ಅವರ ಹತ್ತಿರವೇ ಇದ್ದೆನು. ಮುನ್ನುಡಿಯ ಬಗೆಗೆ ನನ್ನ ವಿಚಾರ ತಿಳಿದು ವಿಜ್ಞಾಪನೆಯನ್ನು ಒಪ್ಪಿಕೊಂಡರು 'ಪ್ರೊ. ಕಬ್ಬಿನ ಅವರು ಬರುವವರಿದ್ದಾರೆ. ಅವರಿಗೆ ಗ್ರಂಥದ ಬಗೆಗಿನ ನಮ್ಮ ಅಭಿಪ್ರಾಯದ ಮುಖ್ಯ ಮಾತುಗಳನ್ನು ಹೇಳಿ ಟಿಪ್ಪಣಿ ಮಾಡಿಸುವೆ. ಮುನ್ನುಡಿ ತಯಾರಿಸಲು ತಿಳಸುವೆ.' ಎಂಬ ಆತ್ಮಾನಂದಕರ ವಾದ ಮಾತು ಹೇಳಿದರು. 'ನೀವೂ ಕಬ್ಬಿನ ಅವರಿಗೆ ಭೆಟ್ಟಿಯಾಗಿ ಭಿನ್ನವಿಸಿ ಕೊಳ್ಳಿರೆಂದು ಅಪ್ಪಣೆ ಮಾಡಿದರು.' ಮರುದಿನ ಗುರುಗಳ ಅಪ್ಪಣೆ ಆಶೀರ್ವಾದ ಪಡೆದು ವಿಜಾಪುರಕ್ಕೆ ಬಂದೆನು.

ಬೇಗನೆ ಪ್ರೊ. ಶ್ರೀ ಶಾಂತಪ್ಪನವರು ಕಬ್ಬಿದ ಅವರಿಗೆ ಭೆಟ್ಟಿಯಾಗಿ ಅಪ್ಪನವರ ಆಶಯವನ್ನು ತಿಳಿಸಿ, ನನ್ನ ಕೋರಿಕೆಯನ್ನು ಸಲ್ಲಿಸಿದೆನು. ಅವರು ಒಪ್ಪಿಕೋಡರು. ಅಚ್ಚಿನ ಪುಟಗಳು ಅವಲೋಕನೆಗಾಗಿ ಆದೇ ಬರಲು ಆರಂಭವಾಗಿದ್ದವು. ಆದ್ದರಿಂದ ಕೈ ಬರಹದ ೨ನೆಯ ಪರಿಶೀಲಕ ಪ್ರತಿಯನ್ನೇ ತಾತ್ಕಾಲಿಕವಾಗಿ ಶ್ರೀ ಕಬ್ಬಿನ ಅವರಿಗೆ ಕೊಟ್ಟೆನು. (ತೊರವಿಯಲ್ಲಿ) ೧೦–೧–೬೭ ರಂದು ಎಳ್ಳ ಅಮವಾಸ್ಯೆ ಮನೆಯವಳು ಕೆಲಸದ ಗಡಿಬಿಡಿಯಲ್ಲಿ ಮನೆಯೊಳಗೇ ನಿಚ್ಚಣಿಕೆಯ ಮೇಲಿಂದ ಫರಸಿ ಮೇಲೆ ಮೊಣಕಾಲು ಕೆಳಗಾಗಿ ಬಿದ್ದಿದ್ದಳು. ವಿಜಾಪುರದಿಂದ ಡಾಕ್ಟರರನ್ನು ಕರಕೊಂಡು ಬಂದು ಅವರಿಂದ ಬ್ಯಾಂಡೇಜು, ಔಷಧ, ಇಂಜೆಕ್ಶನ್‌ಗಳು ನಡೆದವು ದಿ. ೧೩ರಂದು ಅಂಬ್ಯುಲೆನ್ಸ ಕಾರು ತಂದು ವಿಜಾಪುರ ಸಿವ್ಹಿಲ್ ಹಾಸ್ಪಿಟಲ್‌ಗೆ ಹಾಕಿ ಅಲ್ಲಿ ಸ್ಕ್ರೀನಿಂಗ ನೋಡಲು ಮೊಣಕಾಲು ಪರಟಿಯ ಅಸ್ಥಿ ಸೀಳಿತ್ತು ಉಪಚಾರ ನಡೆಯಿತು ಬಾವು ಇಳಿದ ಮೇಲೆ ಸಿಮೆಂಟ ಪ್ಲಾಸ್ಟರ ಹಾಕುವವರಿದ್ದರು.

ದಿ. ೧೪ ರಂದು ಮಕರ ಸಂಕ್ರಮಣ! ಆಸ್ಪತ್ರೆಗೆ ಹೋಗಿ ಕುಳಿತಿದ್ದೆ ಆಗ ಆಕೆ ಗುರುಧ್ಯಾನಕ್ಕೆ ಮೊರೆ ಹೊಕಿದ್ದಳೇನೋ ನನ್ನನ್ನು ಸಮೀಪ ಕರೆದು 'ಹರಳೇಶ್ವರಕ್ಕೆ ಹೋಗಿ ಆಶೀರ್ವಾದ ಪಡೆದುಕೊಂಡು ಬನ್ನಿರಿ' ಎಂದು ಕುಗ್ಗಿದ ದನಿಯಲ್ಲಿ ಹೇಳಿದಳು 'ಆಗಲಿ' ಎಂದೆನು.

ಶ್ರೀ ಬಂಥನಾಳ ಶಿವಯೋಗಿಗಳಿಂದ 'ಬಸವರಾಜ ದೇವರು' ಪುಸ್ತಕದಲ್ಲಿ ಹಾಕುವದಕ್ಕಾಗಿ ಬಂದ 'ಬಸವಣ್ಣನವರ ಹಿರಿಮೆ' ಲೇಖನ ಹೋದ ವಾರವೇ ಕೈ ಸೇರಿತ್ತು. ಉತ್ಕೃಷ್ಟ ಲೇಖನ! ಇದೀಗ, ಶ್ರೀಶಾಂತವೀರ ಅಪ್ಪನವರು

ಮುಖ್ಯಾಂಶ ಕೊಟ್ಟು ಹೇಳಿದಂತೆ ಪ್ರೊ. ಶ್ರೀ ಎಸ್.ಎಸ್. ಕಬ್ಬಿನ ಅವರು ತಯಾರಿಸಿದ ಮುನ್ನುಡಿ ಲೇಖನವೂ ಕೈ ಸೇರಿತು ಇದೂ ಉತ್ಕೃಷ್ಟ ಲೇಖನ! ಇವೆರಡನ್ನೂ ತೆಗೆದುಕೊಂಡು ದಿ. ೧೬ ರಂದು ಮಧ್ಯಾಹ್ನದ ನಂತರ ಹೋಗಿ ಆಶ್ರಮ ತಲುಪಿದೆನು, ಆಗ ಗುರುಗಳು ದಮ್ಮು ಎದ್ದು ಬಹಳ ತ್ರಾಸ ಮಾಡಿ ಕೊಳ್ಳುಹತ್ತಿದ್ದರು. ತೇಕು ನಿಂತು ಒಂದು ಗಳಿಗೆಯ ನಂತರ ಸ್ವಸ್ಥವಾದ ಮೇಲೆ ಎಲ್ಲವನ್ನೂ ಕೇಳಿಕೊಂಡರು 'ಇವೆಲ್ಲ ಶಿವನ ಒರೆಗಲ್ಲಾಗಿ ಬರುವವು ಅವನ ಪ್ರಸಾದವೆಂದೇ ಧೈರ್ಯದಿಂದ ಸ್ವೀಕರಿಸಬೇಕು' ಎಂದರು ಅಮೃತವಾಣಿ ತಂಪೆರೆಯಿತು. ಎರಡೂ ಲೇಖನಗಳನ್ನು ಓದಿದೆ. ಚೆನ್ನಾಗಿವೆ ಎಂದು ನುಡಿದು ಮುನ್ನುಡಿ ಲೇಖನಕ್ಕೆ ಅಂಕಿತ ಹಾಕಿ ಕೊಟ್ಟರು. ಅವರ ಆರೋಗ್ಯದ ತೊಂದರೆ ಗಳನ್ನು ಕೇಳಿದೆ. ಅವರು ಅಷ್ಟೇನು ಗಂಭೀರವಾಗಿ ಗಣಿಸಿರಲಿಲ್ಲ. ನನ್ನ ಶರೀರಕಷ್ಟು ವಿಶ್ರಾಂತಿ ಬೇಕಾಗಿತ್ತು. ಮನಸ್ಸಿಗೂ ತುಂಬ ಸಮಾಧಾನ! ಅಂದು ಆನಂದದಿಂದ ಕಳೆದು, ಮುಂಜಾನೆ ಪಾದೋದಕ ತಕ್ಕೊಂಡು ಬಾಟಲಿಯಲ್ಲಿ ತುಂಬಿಕೊಂಡು ವಂದಿಸಿ ಹೊರಟೆ 'ಆಪತ್ತುಗಳು ಬರುವವು, ಹೋಗುವವು, ಚಿಂತಿಸಬೇಡಮ್ಮ' ಎಂದು ತಂಗಿಗೆ ಹೇಳಿರಿ, ಆಶೀರ್ವಾದ ಹೇಳಿರಿ ಎಂದರು. ಮತ್ತೆ ವಂದಿಸಿ ನಾನು ಬಂದೆನು.

* * * *

ಶಿವಯೋಗಿಗಳ ಭಾಷಣಗಳು

ಈ ಮಧ್ಯೆ ದಿ. ೩-೨-೬೭ ಶುಕ್ರವಾರದಂದು ವಿಜಾಪುರ ಶಿವಾನುಭವ ಮಂಟಪದಲ್ಲಿ ಮೂವರು ಮಹಾಶಿವಯೋಗಿಗಳಿಂದ ಮಾನವತೆಯ ಮೌಲ್ಯವನ್ನು ನಿದರ್ಶಿಸುವ ಭಾಷಣಗಳ ಏರ್ಪಾಡಿತ್ತು. ಧಾರವಾಡದ ತಪೋವನದ ಶ್ರೀಕುಮಾರ ಸ್ವಾಮಿಗಳು ಬಂದಿದ್ದರು. ಶ್ರೀ ಬಂಥನಾಳ ಶಿವಯೋಗಿಗಳು ಇದ್ದರು. ನಿತ್ಯ ಪ್ರವಚನ ನಡಿಸುತ್ತಿದ್ದ ಶ್ರೀ ಮಲ್ಲಿಕಾರ್ಜುನ ಶಿವಯೋಗಿಗಳಿದ್ದರು. ವಿಜಾಪುರಕ್ಕೆ ಬಂದಿದ್ದ ಮಾನ್ಯಮಂತ್ರಿ ಶ್ರೀ ಬಿ.ಡಿ. ಜತ್ತಿ ಅವರೂ ಸಭೆಗೆ ಬರುವವರಿದ್ದರು. ಇದೊಂದು ಸುಯೋಗ! ತಪ್ಪಿಸಲಿಕ್ಕಾಗುವದೇ? ಹೋಗಿದ್ದೆನು. ಆ ನಾಲ್ವರ ಭಾಷಣಗಳ ಮುಖ್ಯಾಂಶಗಳು ಹೀಗೆ!

ಶ್ರೀ ಕುಮಾರ ಸ್ವಾಮಿಗಳು: ಶಿವಯೋಗ

ಯೋಗವೆಂದರೆ ಎರಡು ವ್ಯಕ್ತಿಗಳು ಅಥವಾ ಎರಡು ಶಕ್ತಿಗಳು ಕೂಡುವ

ದೆಂದು ಸಾಮಾನ್ಯ ಅರ್ಥ! ಶಿವ ಜೀವರೈಕ್ಯ ಶಿವಯೋಗ. ಸಾಧನಾಕ್ರಮ ಎಲ್ಲರಿಗೂ ಸಾಮಾನ್ಯ. ಅದನ್ನು ನಮ್ಮದನ್ನಾಗಿ ಮಾಡಿಕೊಳ್ಳಬೇಕು. ಅದನ್ನು ಯಾರಾದರೂ ಮಾಡಿಕೊಳ್ಳಬಹುದು.

ಹಠಯೋಗ–ವಾಯು ನಿರೋಧ-ಕಠಿಣ

ರಾಜಯೋಗ–ವೃತ್ತಿ ನಿರೋಧ–ಸ್ವಲ್ಪ ಸುಲಭ

ಶಿವಯೋಗ–ದೃಷ್ಟಿ ನಿರೋಧ–ಇನ್ನೂ ಸುಲಭ

ವಾಯು, ವೃತ್ತಿಗಳೂ ದೃಷ್ಟಿ ನಿರೋಧದಿಂದ ಅಂಕಿತದಲ್ಲಿ ಬರುವವು. ಎಲ್ಲ ಯೋಗಗಳೂ ಮನೋಲಯದಲ್ಲಿ ಫಲಿಸುವವು. ವೀರಶೈವರ ಇಷ್ಟಲಿಂಗವು ದೃಷ್ಟಿಯೋಗಕ್ಕೆ ಸಾಧನ! ಪರಮಾತ್ಮನು ಸಾಕಾರ–ನಿರಾಕಾರ! ಲಿಂಗವು ಆ ಎರಡೂ ರೂಪಗಳ ಕುರುಹು! ಲಿಂಗವು ವಿಶ್ವವ್ಯಾಪಕ! ವಿಶ್ವಾತೀತ! ಅತ್ಯತಿಷ್ಟದಶಾಂಗುಲ! ಈ ಎಲ್ಲ ರೂಪಗಳಿಗೂ ಇಷ್ಟಲಿಂಗವು ಸಾಂಕೇತಿಕವಾಗಿದೆ.

ಬ್ರಹ್ಮಾಂಡ ಪಿಂಡಾಂಡಗಳಲ್ಲಿಯ ಚೈತನ್ಯ ಒಂದೇ! ಪಿಂಡನು ಪೂಜೆಗೆ ಕುಳಿತಾಗ ಸ್ವರೂಪಾರ್ಚನೆಯನ್ನೇ ಮಾಡುವ ಕಾರಣ ಆ ಆಕಾರವೇ ಪೀಠ. ಗೋಮುಖ ಸಂಯುಕ್ತ ಇಷ್ಟಲಿಂಗ! ಲಿಂಗದಿಂದ ಕೂಡಿದವ ಲಿಂಗವಂತ! ಗುರು ಮುಖದಿಂದ ಲಿಂಗ ಬಂದವ ಲಿಂಗಾಯತ!

ಲಿಂಗ ಮುಟ್ಟಿದ ಕೈ ಲಿಂಗ ಕ್ರಿಯೆಗಳಿಗೆ ಮೀಸಲು ಈ ಛಲ ಉಳ್ಳವ ವೀರಶೈವ!

ಮಹಾಲಿಂಗ ಹೃದಯದಲ್ಲಿ ಅಂಗುಷ್ಠ ಮಾತ್ರವಾಗಿದೆ, ಜ್ಯೋತಿ ರೂಪವಾಗಿದೆ.

ಪೂಜೆಗೆ ಕುಳಿತಾಗ ಹಿಮ್ಮಗ್ಗಲಿನ ದೀಪ ಇಷ್ಟಲಿಂಗದಲ್ಲಿ ಪ್ರತಿಬಿಂಬಿಸಬೇಕು. ಆ ಬಿಂಬ ಪ್ರಕಾಶವನ್ನು ರೆಪ್ಪೆ ಬಡಿಯದೆ (ನಿರ್ನಿಮಿಷವಾಗಿ) ನೋಡಬೇಕು. ದೃಷ್ಟಿ ಸ್ಥಿರವಾದಾಗ ಪ್ರತಿಫಲಿತ ಪ್ರಕಾಶವು ಒಳಗೆ ಮೂಡುವದು. ಆತ್ಮ ಜ್ಯೋತಿಯನ್ನು ಜಾಗ್ರತಗೊಳಿಸುವದು. ಅದರಲ್ಲಿ ಕೂಡುವದು ಅಲ್ಲಿ ಮನ ಮುಳುಗಿದರೆ ಪ್ರಾಣಲಿಂಗ ಅದು.

ಇಷ್ಟದಲ್ಲಿ ನೋಟ. ಪ್ರಾಣದಲ್ಲಿ ಕೂಟ, ಹೀಗೆ ಒಳಹೊರ ಒಂದಾದಾಗ (ಏಕಾರ್ಥವಾದಾಗ) ದೇಹಭಾನ ನಾಶವಾಗುವದು. ಅಂದರೆ ಅಜ್ಞಾನ ನಿಶ್ಶೇಷವಾಗಿ ಕಳಚುವದು. ಪ್ರಾಣಲಿಂಗ ಅಳವಟ್ಟುದಾದರೆ ಅದರ ಹಿಂದೆ ಭಾವಲಿಂಗ ಸಹಜ

ವಾಗಿದೆ. ಶರಣ-ಐಕ್ಯ ಸ್ಥಲಗಳು ತಾವಾಗಿ ನೆಲೆದೋರುವವು. ಅಲ್ಲಿಗೆ ಲಿಂಗಾಂಗ ಸಾಮರಸ್ಯ!

ಶ್ರೀ ಬಂಥನಾಳ ಶಿವಯೋಗಿಗಳು-ಕರ್ಮ-ಜ್ಞಾನ (ಕ್ರಿಯಾಜ್ಞಾನ)

ಗೀತೆ ಹೇಳುವ ಕರ್ಮ ಜ್ಞಾನಗಳೆರಡೂ ಶಿವಯೋಗದಲ್ಲಿವೆ. ಲಿಂಗ ಕ್ರಿಯೆಗಳೆಲ್ಲ ಕರ್ಮಗಳಾಗಿವೆ. ಸತ್ಯಶೀಲ ಕಾಯಕವೂ ಲಿಂಗಕ್ರಿಯೆ ಅರ್ಥಾತ ಆತ್ಮ ಸಾಧನೆಯು ಕರ್ಮಗಳು........ಶಿವಾಗಮಗಳ ಶ್ಲೋಕಗಳನ್ನು ಉದಾಹರಿಸಿ ವಿವರಿಸಿದರು.

ಶ್ರೀ ಮಲ್ಲಿಕಾರ್ಜುನ ಶಿವಯೋಗಿಗಳು: ಅರಿತರೆ ಶರಣ ಮರೆತರೆ ಮಾನವ ಎಂಬುದರ ಮೇಲೆ ತಮ್ಮ ಅಮೋಘಶೈಲಿಯ ಪ್ರವಚನ ನೀಡಿದರು.

ಶ್ರೀ ಬಿ.ಡಿ. ಜತ್ತಿಯವರು : ಆತ್ಮಜ್ಞಾನ, ವಿಜ್ಞಾನ ವ್ಯಕ್ತಿಯ ಏಳಿಗೆಗೆ, ರಕ್ಷಣೆಗೆ, ಸಾಮಾಜಿಕ ಅಭಿವೃದ್ಧಿಗೆ ಆತ್ಮಜ್ಞಾನ ವಿಜ್ಞಾಗಳೆರಡೂ ಸಮುಚ್ಚಯವಾಗಿ ಅಗತ್ಯವೆಂಬುದನ್ನು ಪ್ರತಿಪಾದಿಸಿದರು.

ಇವುಗಳ ಶ್ರವಣದಿಂದ ಮನಸ್ಸು ಆನಂದದಲ್ಲಿ ತೇಲಿತ್ತು ನಿಜ! ಮನೆಗೆ ಬಂದು, ಮುಂಜಾನೆ ಎದ್ದರೆ ಮತ್ತೆ ಪ್ರಪಂಚಯೋಗ! ಭ್ರಮಾತ್ಮಕ ಸುಖಕ್ಕಾಗಿ ಪ್ರಪಂಚಯೋಗ, ನಿಜ ಸುಖಕ್ಕಾಗಿ ಶಿವಯೋಗವಷ್ಟೆ!

* * * *

ಬಸವರಾಜ ದೇವರು ಅಚ್ಚಾದ ಗ್ರಂಥ

'ಬಸವರಾಜ ದೇವರು' ಪುಸ್ತಕದ ಪ್ರತಿಗಳು ಶ್ರೀ ಬಂಥನಾಳ ಶಿವಯೋಗಿಗಳ ಗುರುಕುಲಕ್ಕೆ ಬಂದಿದ್ದವು ಕಾರ್ಯದರ್ಶಿ ಶ್ರೀ ಮ.ಚ. ಕೋರಿಯವರು ಶಿವಯೋಗಿಗಳ ಮಾರ್ಗ ನಿರೀಕ್ಷಿಸುತ್ತಿದ್ದರು. ಶಿವಯೋಗಿಗಳು ದಿ. ೧೯-೬-೬೭ ರಂದು ಬಂದರು. ಹೋಗಿ ದರ್ಶನ ಪಡೆದೆವು. ಕೋರಿಯವರು ಲೇಖಕರಿಗೆ ಪ್ರತಿ ಕೊಡುವ ಬಗೆಗೆ ಪ್ರಸ್ತಾಪ ಮಾಡಿದಾಗ 'ಅವರೇನೂ ಮಾರುವವರಲ್ಲ; ಅವರಿಗೆ ೫೦ ಕೊಡಿರಿ!' ಎಂದರು ನೂರನ್ನಾದರೂ ಕೊಡಬೇಕು ಎಂದು ಕಾರ್ಯದರ್ಶಿ ಹೇಳಿದಾಗ ೭೫ಕ್ಕೆ ಅಪ್ಪಣೆಯಾಯಿತು. ಪ್ರತಿಗಳನ್ನು ನೋಡಲಿಕ್ಕೆ ತೆಗೆದರು. ಒಂದು ಪ್ರತಿಯನ್ನು ಸಾಂಕೇತಿಕವಾಗಿ ಶಿವಯೋಗಿಗಳಿಗೆ ಅರ್ಪಿಸಿದೆನು. ಉದ್ಘಾಟನೆಯ ವಿಧಾನ ನಡೆಸುವ ಬಗೆಗೆ ಆಲೋಚಿಸಿದರು. ಬಾಗೇವಾಡಿಯಲ್ಲಿ ಮಾಡಲು ಕಾರ್ಯದರ್ಶಿಯವರಿಗೆ ಸೂಚಿಸಿದರು. ನಿಯಮಿಸಿದ ದಿನ ಉದ್ಘಾಟನೆಗೆ

ಶಾಸಕರು ಬರಲಿಲ್ಲ. ಕಾರ್ಯದರ್ಶಿಯವರು 'ನಿಮ್ಮ ಪ್ರತಿಗಳನ್ನು ಒಯ್ದು ಬಿಡಿರಿ' ಎಂದು ಕೊಟ್ಟುಬಿಟ್ಟರು. (೧–೭–೬೭)

ಗುರು ತೋರಿದ ದಾರಿ: ಪ್ರತಿಗಳು ಕೈಗೆ ಬಂದಕೂಡಲೆ (ಅವುಗಳಿಗಾಗಿ ತಡೆದಿದ್ದ) ನಾನು ದಿ. ೨–೭–೬೭ ರಂದು ಗುರುದರ್ಶನಕ್ಕೆ ಶಿವಶಂಕರನನ್ನು ಕರ ಕೊಂಡು ಹೊರಟೆನು. ಸಂಜೆ ಶೇಗುಣಸಿ ಬಸ್ಸಿನಿಂದ ಇಳಿದು ಕೃಷ್ಣಪಕ್ಷದ ಕತ್ತಲಲ್ಲಿ ಆಶ್ರಮಕ್ಕೆ ನಡೆದಾಗ ಮರಡಿಯಲ್ಲಿ ದಾರೀ ತಪ್ಪಿಸಿಕೊಂಡೆವು. ಸ್ವಲ್ಪವೇ ತಡವರಿಸುವದರೊಳಗಾಗಿ ಗುರುಕೃಪೆಯಿಂದ ಕಾಲಿಗೆ ದಾರಿಸಿಕ್ಕು ಆಶ್ರಮ ಸೇರಿದೆವು. ಗುರುಗಳ ಪಾದಕ್ಕೆರಗಿ ಪ್ರತಿ ಅರ್ಪಿಸಿದೆನು. ಕುಶಲವಾರ್ತೆಗಳಾದವು.

ಮರುದಿನ ಗುರುಗಳು ಪುಸ್ತಕದ ಹೊದಿಕೆಯ ಮೇಲಿನ ಲೇಖನ, ಅನುಬಂಧ ಮುಂತಾದವುಗಳನ್ನು ಓದಿಸಿ ಕೇಳಿ ಸಂತೋಷಪಟ್ಟರು. ಶ್ರೀಶಾಂತರಸರಿಗೆ ಒಂದು ಪ್ರತಿಯನ್ನು ಕಳಿಸಲು ಅಪ್ಪಣೆ ಮಾಡಿದರು. ಈ ಮೊದಲು 'ನೂರೊಂದು ನೆಲೆಯ ನಿಲವು' ತಾವೇ ಅವರಿಗೆ ಕಳಿಸಿದ್ದರು.

ಶ್ರೀ ಶಾಂತರಸರು ರಾಯಚೂರಿನ ಖ್ಯಾತ ಕವಿಗಳು. ಅವರ ಮನೆಯವರ ತವರು ಬಬಲೇಶ್ವರ ಇಬ್ಬರೂ ದಂಪತಿಗಳು ಶ್ರೀಗಳವರ ನಿಷ್ಠಭಕ್ತರು.

ಬೇಗನೇ ಶಾಂತರಸರಿಗೆ ಪೋಸ್ಟಿನಿಂದ ಕಾಣಿಕೆಯಾಗಿ ಬಸವರಾಜ ದೇವರು ಪ್ರತಿಯನ್ನು ಕಳಿಸಿದ್ದೆನು. ಶಾಂತರಸರೂ ಅವರ ಗೆಳೆಯರೂ ಓದಿ, ಅವರು ಗುರುಗಳಿಗೆ ಮೆಚ್ಚುಗೆಯ ದೀರ್ಘ ಪತ್ರ ಬರೆದಿದ್ದರು. ಗುರುಗಳು ಅದನ್ನು ನನಗೆ ಕಳಿಸಿದರು. ಪ್ರಶಂಸೆ ಮತ್ತು ವಿಮರ್ಶೆಗೆ ಈ ಪತ್ರವೆ ನಾಂದಿಯಾಯಿತು. ಹರ್ಷ ಹೃದಯತುಂಬಿತ್ತು. ಅದು ಗುರು ನೀಡಿದ ಬೆಳಕು!

ಶಿವಯೋಗಿಗಳ ದರ್ಶನಕ್ಕಾಗಿ ಬಂದ ಮುಖ್ಯಮಂತ್ರಿಗಳು (ಶ್ರೀ ಕಂಠಿ ಶ್ರೀ ಜತ್ತಿ) ಅವರಿಗೆ ಗುರುಕುಲದಲ್ಲಿ ಶಿವಯೋಗಿಗಳ ಹಸ್ತದಿಂದ ಬಸವರಾಜ ದೇವರು ಪುಸ್ತಕ ಪ್ರತಿಗಳನ್ನು ಗೌರವಯುತವಾಗಿ ಅರ್ಪಿಸಲಾಯಿತು.

ಮತ್ತೊಂದು ಕೃತಿ ರಚನೆ

'ಬಸವರಾಜ ದೇವರು' ಬರೆವಾಗಲೇ ಬಸವಣ್ಣನವರನ್ನು ಬಿಟ್ಟರೆ ಅಕ್ಕ ನಾಗಮ್ಮನವರ ಪಾತ್ರ ಆ ಕ್ರಾಂತಿಯಲ್ಲಿ ಹಿರಿಯದಾಗಿ ನನ್ನ ಮನದಲ್ಲಿ ಮೂಡಿತ್ತು. ಆಕೆಯ ಬಹುಮುಖ ಘನತೆ ಸ್ಫುಟವಾಗಿ ಎದ್ದು ತೋರಿತ್ತು. 'ಆದರ್ಶ ಮಹಿಳೆ ಅಕ್ಕ ನಾಗಮ್ಮ' ಎಂದು ಆಕೆಯನ್ನು ಕುರಿತು ಚಾರಿತ್ರಿಕ ಗ್ರಂಥ ಬರೆವ ಅಭಿಲಾಷೆ

ಉಂಟಾಗಿತ್ತು. ನನಗೇ ಆಶ್ಚರ್ಯ–ಆಶ್ಚರ್ಯವೇನು? ನನ್ನಲ್ಲಿ ಹೆಪ್ಪುಗಟ್ಟಿದ ಗುರುಕರುಣೆ ಅದು. ಆಸಕ್ತಿಯಲ್ಲಿಯೇ ಕರಡುಗೀಚು ಬರೆಹದಲ್ಲಿ ಬಹುಭಾಗ ಬರೆದಿದ್ದೆನು. ಎರಡು ವಾರಗಳ ಹಿಂದೆ ಗುರುಸನ್ನಿಧಿಗೆ ಹೋದಾಗ ಈ ಅಭಿಲಾಷೆ ವ್ಯಕ್ತಮಾಡಿ ಆಶೀರ್ವಾದ ಕೇಳಿದ್ದೆ, 'ಓಹೋ ಬಹಳ ಚೆನ್ನಾಗುವದು, ಅವಶ್ಯ ಬರೆಯಿರಿ ಎಂದು ಪ್ರೋತ್ಸಾಹದ ವಾಣಿ ಚಿಮ್ಮಿ ಬಂದಿತ್ತು, ಗುರುಗಳಿಂದ! ಆಗ ಬೆನ್ನ ಮೇಲೆ ಅವರ ಹಸ್ತ ಆಡುತ್ತಲೇ ಇತ್ತು. ಈಗ ಅದರ ಪರಿಶೀಲನೆಯ ಹಸ್ತ ಪ್ರತಿ ಬರೆಯಲು ಆರಂಭಿಸಿದೇನು. (ದಿ ೧೭–೭–೬೭)

ಪ್ರಕೃತಿ ಆರಾಮವಿತ್ತು ಅಕ್ಕನಾಗಮ್ಮ ಕುರಿತ ಬರೆಹ ಮುಂದುವರೆದಿತ್ತು. ನನ್ನ ಬರೆಹಗಳ ಪ್ರಥಮ ವಾಚನ ಗುರುಸನ್ನಿಧಿಯಲ್ಲಿ ಆಗಬೇಕೆಂಬ ನೇಮ ನನ್ನದಾಗಿತ್ತು. ಗುರುಸನ್ನಿಧಾನ ದರ್ಶನಕ್ಕಾಗಿ ದಿ. ೧೦–೧೦–೬೭ ರಂದು ಸಾಯಂಕಾಲ ಹರಳೇಶ್ವರ ತಲುಪುವಂತೆ ಪ್ರಯಾಣಿಸಿದೆ. ಸನ್ನಿಧಾನ ಸೇರಿ ವಂದಿಸಿದೆ. ಆರೋಗ್ಯ ವಿಚಾರಿಸಿದರು. ನನ್ನ ಎರಡೂ ರಟ್ಟೆಗಳನ್ನು ಹಿಚುಕಿದರು 'ಎಲ್ಲಿ ಇನ್ನೂ ತುಂಬಿಲ್ಲ' ಎಂದರು 'ಕರಗಿದಷ್ಟು ಬಂದಿದೆ ಅಪ್ಪಾ ಅವರ!' ಎಂದೆ. ನಕ್ಕು ನಲಿದೆವು ತಾವು ಅಷ್ಟು ಆರಾಮವಿಲ್ಲದಿದ್ದರೂ 'ಆರಾಮವಾಗಿದ್ದೇನೆ' ಎಂದು ಹೇಳಿದರು. 'ನಾಗಮ್ಮ ಚರಿತ್ರೆ ಬರೆಯುತ್ತಿದ್ದೀರಾ?' ಎನಲು 'ಅರ್ಧಭಾಗ ಆಗಿದೆ' ಎಂದು ಅವರ ಕೈಗಿತ್ತೆ. 'ನಾಳೆ ಓದುಗೇಳುವವೇ ಮುಖ್ಯ ಕೆಲಸ' ಎಂದರು 'ಆಗಲಿ ತಮ್ಮಿಚ್ಛೆಯಂತೆ' ಎಂದೆ ಅದರಂತೆ ಮರುದಿನ ಬೆಳಗಿನಲ್ಲಿ, ಬೇಗಿನಲ್ಲಿ ಎರಡೆರಡು ತಾಸು ಗಮನವಿಟ್ಟು ಆಲಿಸಿದರು. 'ಸೊಗಸಾಗಿದೆ ಪೂರ್ಣ ಮಾಡಿ ತಕ್ಕೊಂಡು ಬನ್ನಿರಿ' ಎಂದು ಉತ್ತೇಜಿಸಿದರು. ಮುಂದೆ ಬಹಳ ಹೊತ್ತು ಶ್ರೀಗಳ ಅಡಿಯಲ್ಲಿ ಶಿವಗೋಷ್ಠಿ ಸಲ್ಲಾಪಗಳು ನಡೆದವು.

ಅಕ್ಕನಾಗಮ್ಮ ಚರಿತ್ರೆ ಪರಿಶೀಲಕ ಹಸ್ತಪ್ರತಿ ಪೂರ್ಣ ಬರೆದಾಗಿತ್ತು ಜೋಡಿಸಿ ಹೊತ್ತಿಗೆಯಾಗಿಸಿತ್ತು. ೨೭–೧೧–೬೭ರಂದು ಹರಳೇಶ್ವರಾಶ್ರಮಕ್ಕೆ ಹೋದೆನು. ಗುರುಸನ್ನಿಧಾನದಲ್ಲಿ ನಾಗಮ್ಮ ಚರಿತ್ರೆ ಪೂರ್ಣ ಓದಿದೆ. ಅಪ್ಪನವರಲ್ಲಿ ಅದರ ಯೋಚನೆ ಮೂಡಿತೆಂಬುದು ಮುಂದೆ ಗೊತ್ತಾಯಿತು.

ಮರುದಿನ ಶೇಗುಣಶಿಯ ಶ್ರೀ ನಾನಾಸಾಹೇಬರು(ಶ್ರೀ ಭೀ.ಬಾ. ಪಾಟೀಲರು) ಆಶ್ರಮಕ್ಕೆ ಬಂದಿದ್ದರು. ಅಪ್ಪನವರ ಹಸ್ತದಿಂದ ಅವರಿಗೆ ಬಸವರಾಜದೇವರು ಪುಸ್ತಕ ಪ್ರತಿ ಕೊಡಲಾಯಿತು. ಹರಳೇಶ್ವರ ಕ್ಷೇತ್ರ ಪರಿಚಯ ಕುರಿತು ಲೇಖನ

ತಯಾರಿಸಿ ಕೊಟ್ಟರೆ ವಿಜಾಪುರ ಜಿಲ್ಲಾ ಗ್ಯಾರಿಝಟೀಯರಕ್ಕೆ ಕಳಿಸುವೆವು ಎಂದರು. (ಆಗ ಅವರು ತಾ. ಬೋರ್ಡಿನ ಅಧ್ಯಕ್ಷರೂ ಆಗಿದ್ದರು. ಅವರೊಡನೆ ಅಪ್ಪನವರ ಆದೇಶವೂ ದನಿಗೂಡಿತ್ತು ಪ್ರಯತ್ನಿಸುವೆ ಎಂದೆನು. ಸ್ಥಳೀಯ ಸ್ಮಾರಕ ಮತ್ತು ಜನಜನಿತ ಹೇಳಿಕೆ, ತರ್ಕಬದ್ಧ ಊಹೆಗಳ ಮೇಲಿಂದ ಹರಳೇಶ್ವರ ಲೇಖನ ತಯಾರಿಸಿ ವಿಜಾಪುರ ಶ್ರೀ ನಾನಾಸಾಹೇಬರಿಗೆ ಕೊಟ್ಟೆನು ಅದು ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು.

ಮಾರ್ಚದಲ್ಲಿ (೧೬-೩-೬೮) ಹೋದಾಗ ಗುರುಗಳು 'ಮುಂದೆ ಬರುವಾಗ ನಾಗಮ್ಮ ಚರಿತ್ರೆಯನ್ನು ಮತ್ತೊಮ್ಮೆ ಓದುಗೇಳುವದಕ್ಕೆ ಆ ಹಸ್ತಪ್ರತಿ ತರಬೇಕೆಂದು ಸೂಚಿಸಿದ್ದರು.'

ದಿ ೨೫-೬-೬೮ ರಂದು ನಾನೂ ಶಿವಶಂಕರನೂ ಹೊರಟು ಗುರುಗಳ ದರ್ಶನ ಪಡೆದೆವು ಅಂದು ಅಮವಾಸಿ. ದರ್ಶನಕ್ಕೆ ಬರುವವರ ಗದ್ದಲವೇ ಸಂಜೆಯವರೆಗಿತ್ತು. ದಿ. ೨೬ ಶಿವಶಂಕರನು ನಾಗಮ್ಮ ಚರಿತ್ರೆಯನ್ನು ಅಪ್ಪನವರ ಹತ್ತಿರ ಪೂರ್ಣವಾಗಿ ಓದಿದನು. ಗುರುಗಳು ಬೇಸರವಿಲ್ಲದೆ ಕುಳಿತು ಕೇಳಿದರು.

ವೃದ್ಧ ಶಿವಯೋಗಿಣಿ ಅಕ್ಕನಾಗಮ್ಮನವರ ಬದುಕಿನ ಕೊನೆಯ ಹಂತದಲ್ಲಿ ಎಣ್ಣೆ ಹೊಳೆ ಆಶ್ರಮದಲ್ಲಿ ಅವರ ಸೇವೆಗೆ 'ಗೌರಮ್ಮ' ಹೆಸರಿನ ದಕ್ಷ ನಿಷ್ಠೆ ಸೇವಿಕೆ ಇದ್ದುದು ಓದುವಾಗ ಬರುತ್ತದೆ. ಆಗ ಸಮೀಪದಲ್ಲಿದ್ದ ಆಶ್ರಮದ ಹಿರಿಯ ಪರಿಚಾರಿಕೆ ಗೌರಮ್ಮನನ್ನು ನೋಡಿ ಅಪ್ಪನವರು 'ಗೌರವ್ವಾ, ನಾಗಮ್ಮನವರ ಒಳ್ಳೆಯ ಸೇವಿಕೆಯ ಹೆಸರು ಏನು ಇಡಬೇಕೆಂದು ಸಾಹೇಬರು ಯೋಚಿಸುತ್ತಿರುವಾಗ, ಇಲ್ಲಿ ದಕ್ಷ ಸೇವಾಕಾರ್ಯ ಮಾಡುತ್ತಿರುವ ನಿನ್ನ ನೆನಪಾಗಿ ನಿನ್ನ ಹೆಸರನ್ನೇ ಇಟ್ಟಿದ್ದಾರೆ ನೋಡು' ಎಂದು ನಗುತ್ತ ಹರ್ಷದಿಂದ ನುಡಿದರು. ನಮಗೂ ಆನಂದ ವಿನೋದ! 'ಆ ಗೌರವ್ವನ ದೊಡ್ಡತನ ನಮಗೆಲ್ಲಿ ಬಂದೀತು ಅಪ್ಪಾ?' ಎಂದು ಕೈಮುಗಿದಳು. ಆನಂದದ ಸುಳಿಗಾಳಿ ಸುಳಿದಿತ್ತು!

ಕಡೆಮನಿ ರಚನೆಯ ಪ್ರಸ್ತಾಪ ಮಾಡಿ ಅದರ ಉದ್ದೇಶ, ರೀತಿ ಕ್ರಮಗಳನ್ನು ಗುರುಗಳ ಸನ್ನಿಧಿಯಲ್ಲಿ ನಿವೇದಿಸಿದೆ. ಬಳಿಕ ತೊರವಿಯಲ್ಲಿ ಶ್ರಾವಣಮಾಸದ ಪುರಾಣ ಪ್ರವಚನಕ್ಕೆ ಸಂಭಾವನೆ ಬಯಸದೆ ಇರುವ ಒಬ್ಬ ಸಾಧಾರಣ ಹೇಳುವವರು ಬೇಕಾಗಿದೆ. ಮೊದಲು ಅಲ್ಲಿ ಆ ಬಗ್ಗೆ ಅಭಿರುಚಿ ಹುಟ್ಟಿಸಬೇಕಾಗಿದೆ ಎಂದು ಅಪ್ಪನವರ ಹತ್ತಿರ ಚರ್ಚಿಸಿ ಮಾತನಾಡಿದೆವು. ದಿ. ೨೭ ರಂದು

ವಿಜಾಪುರಕ್ಕೆ ಬಂದೆವು.

ಶ್ರೀ ಶಾಂತವೀರ ಸ್ವಾಮಿಗಳ ಹತ್ತಿರ ನಮ್ಮಲ್ಲಿ ಪುರಾಣ ಹೇಳುವವರ ವಿಷಯವಾಗಿ ಪ್ರಸ್ತಾಪಿಸಿದ್ದನ್ನು ಊರಲ್ಲಿ ಗೌಡರು ಮುಂತಾದ ಪ್ರಮುಖರಲ್ಲಿ ತಿಳಿಸಿದ್ದೆವು. ಹರಳೇಶ್ವರದಲ್ಲಿ ಗುರುಗಳು ಶ್ರೀ ಭೀಮಾಶಂಕರ ಸ್ವಾಮಿಗಳನ್ನು ಸಿದ್ಧ ಮಾಡಿದ್ದರು. ಅವರು ಬಂದರು ಗ್ರಾಮದ ಮಧ್ಯದ ಮಲ್ಲಿಕಾರ್ಜುನ ಗುಡಿಯಲ್ಲಿ ೨೫-೭-೬೮ ರಂದು ಪುರಾಣ ಆರಂಭವಾಯಿತು. ಅದು ತೀರ ಸಣ್ಣ ಜಾಗ, ಆದ್ದರಿಂದ ಮರುದಿನದಿಂದ ಶ್ರೀ ಬಾಳಾಸಾಹೇಬ ದಾನಗೊಂಡ ಅವರ ವಿಶಾಲ ಮನೆಯಲ್ಲಿ ಪುರಾಣ ನಡೆಯುವ ವ್ಯವಸ್ಥೆಯಾಯಿತು. ವರುವರುಷಕ್ಕೆ ಈ ಕಾರ್ಯಕ್ರಮ ವೃದ್ಧಿಗೊಳ್ಳುತ್ತ ೧೧ ವರ್ಷ ಪುರಾಣ ಪ್ರವಚನ ಅಲ್ಲಿಯೇ ನಡೆಯಿತು. ಈ ಶ್ರೀ ಮಲ್ಲಿಕಾರ್ಜುನ ದೇವಾಲಯದ ಪ್ರಶಸ್ತ ಅಂಗಳ ಭಾಗದಲ್ಲಿ ಶ್ರೀ ಬಸವೇಶ್ವರ ಅನುಭವಮಂಟಪ ಕಟ್ಟಡವಾಗಿ ಪುರಾಣವಲ್ಲದೆ ಇನ್ನಿತರ ಪುಣ್ಯ ಕಾರ್ಯಗಳು ಜರುಗುತ್ತಲಿವೆ.

ದಿ. ೩೦-೯-೬೮ ರಂದು ಗುರುಗಳ ಸನ್ನಿಧಿ ಸೇರಿದಾಗ ಗುರುಗಳು ಸ್ನಾನ ಮಾಡಿ ಮಡಿ ಬಟ್ಟೆ ಸರಿಪಡಿಸಿ ಧರಿಸುತ್ತ ನಿಂತಿದ್ದರು ನಾನು ಅಲ್ಲೇ ಬಾಗಿಲ ಹತ್ತಿರ ಇದ್ದೆನು. 'ನಿಮ್ಮ ಕಡೆಮನಿ ಸಮಾಧಿ ಆದ ಮೇಲೆ ಅಲ್ಲಿ ಇಡುವದಕ್ಕೆ ನಾಲ್ಕು ಸಾಲಿನ ಒಂದು ಚಿಕ್ಕ ಶ್ಲೋಕ ಮಾಡಿದ್ದೇನೆ ಎಂದು ಅದನ್ನು ನುಡಿದರು. 'ಬರಿಸಿ ಇಟ್ಟಿದ್ದೇನೆ ಕೊಡುತ್ತೇನೆ' ಎಂದರು 'ಅದೆಲ್ಲ ಯಾಕರಿ ಅಪ್ಪಾ ಪಾಮರರಾದ ನಮಗೆ? ಆಯತ ಸಮಯದಲ್ಲಿ ನಮ್ಮವರಿಗೆ ಶ್ರಮವಾಗದಿರಲೆಂದು ಕಡೆಮನಿ ಮಾಡಿಸಿದ್ದೇನೆ ಅಷ್ಟೇ!' ಎಂಬೆನು.

ಅರ್ಪಿತ ಮಾಡಿ ಹೊರಗೆ ಕಾಟಿನ ಮೇಲೆ ಬಂದಾಗ ಪುಸ್ತಕದ ಕೆಳಗಿಟ್ಟಿದ್ದ ಆ ಕಾಗದ ಕೈಯಾಡಿಸಿ ತೆಗೆದುಕೊಟ್ಟರು. ಒಬ್ಬರೇ ಕುಳಿತಾಗ ಮನಸ್ಸಿನಲ್ಲಿ ಮೂಡಿಸಿಕೊಂಡ ಸಾಲುಗಳನ್ನು ತಾವೇ ಕೈಯಾಡಿಸಿ ಕಾಗದ ತುಂಡೊಂದನ್ನು, ಪೆನ್ನು ತಕ್ಕೊಂಡು ಒಮ್ಮೆ ಹಿಡಿದ ಕಾಗದದಲ್ಲಿ ಸ್ವಲ್ಪ ಬರೆದು ಮತ್ತೆ ಬರೆವಾಗ ಕಾಗದ ತಲೆಕೆಳಗೆ ಮಾಡಿ ಬರೆಯಲು ಪ್ರಯತ್ನಿಸಿದ್ದಾರೆ. ಅಷ್ಟರಲ್ಲಿ ಸೇವಕ ಬಂದಿರ ಬೇಕು. ಅದೇ ಕಾಗದದಲ್ಲಿ ಅವನಿಂದ ಮತ್ತೆ ಹೇಳಿ ಬರೆಸಿದ್ದಾರೆ. ಅದು ಸ್ಪಷ್ಟ ವಾಗಿದೆ. ಆ ಸಂದೇಶ ಹೀಗಿದೆ.

'ಯೋ ಶ್ರೀ ಭೂಯಾತ್ ಶರಣ ಮಾರ್ಗಸ್ಥೋ
ಲಕ್ಕಪಾಖ್ಯಃ ಸ್ಥಲ ಪ್ರಿಯಃ
ಸೋಯಂ ಸ್ವಸ್ಥಃ ಸಮಾಧಿಸ್ಥಃ
ಸತೀ ಚಿನ್ನಮಾಂಬಯಾ ಸಹ.'

ಬೇಗನೆ ಕಡೆಮನೆಯ ಉಳಿದ ಕೆಲಸ ಪೂರೈಸಿ ಸುಣ್ಣ ಸಾರಿಸಿ ಶುಚಿಗೊಳಿಸ ಲಾಯಿತು. ದಿನಾಂಕ ೨೨-೧೦-೬೮ ಕಾರ್ತಿಕ ಶು. ಪ್ರತಿಪದೆ (ಪಾಡ್ಯ) ಅದರ ಶಾಂತಿ ಗೈದೆವು ಹೇಗೆ? ಅಂತರಂಗದಲ್ಲಿ ಗುರುಪ್ರೇರಣೆ ಮೂಡಿದಂತೆ.

ಎರಡೂ ಮಾಡಗಳಲ್ಲಿ(ಗವಿಗಳಲ್ಲಿ) ಮುಂದೆ ನಮ್ಮ ಶರೀರ ಇಡಲ್ಪಡುವಂತೆ ನಾವು ಇಬ್ಬರೂ ಕುಳಿತುಕೊಂಡೆವು. ಮುಂದೆ ಇದ್ದ ಪರಿಚಾರಕ ಮಹಾದೇವನಿಂದ ಅಗ್ಗವಣಿ, ಭಸ್ಮ, ಪತ್ರಿ, ಪುಷ್ಪ, ಧೂಪ, ದೀಪಗಳನ್ನು ಪಡೆದುಕೊಳ್ಳುತ್ತ ಲಿಂಗಾರ್ಚನೆ ಮಾಡಿಕೊಂಡೆವು. ಬಳಿಕ ಹೊರಗೆ ಬಂದು ಆ ಸ್ಥಳಗಳಲ್ಲಿ ಮಣ್ಣಿನ ಲಿಂಗಗಳನ್ನು ಮಾಡಿಟ್ಟು ಪತ್ರಿ ಪುಷ್ಪಗಳಿಂದ ಅಲಂಕರಿಸಿ ಪೂಜಿಸಿ ನೈವೇದ್ಯ ಮಾಡಿ ಪ್ರಸಾದ ಸ್ವೀಕರಿಸಿದೆವು. ಇದುವೇ ನನ್ನ ಮನಸ್ಸಿನ ಶಾಂತಿ ವಿಧಾನ! ನಮ್ಮಿಷ್ಟಕ್ಕೆ ನಡೆದುದು.

ಹೀಗೆ ಮಾಡಿದುದನ್ನೆಲ್ಲ ಗುರುಗಳ ಸನ್ನಿಧಿಗೆ ವಿವರವಾಗಿ ಬರೆದು ತಿಳಿಸಿದೆನು. ಅವರಿಂದ ದಿ. ೩೧-೧೦-೬೮ರ ಪತ್ರ ಬಂದಿತು ಅದು

ಕ್ಷೇಮ ಶ್ರೀ ಹರಳೇಶ್ವರ ಆಶ್ರಮ ತಾ|| ೩೧-೧೦-೬೮

ಶ್ರೀ ಶಾಂತವೀರ ಸ್ವಾಮಿಗಳಿಂದ ಶ್ರೀಮಾನ್ ಲ.ಅ. ಶಿರಹಟ್ಟಿ ಮಹಾಶಯರಿಗೆ ಆಶೀರ್ವಾದಗಳು-ನಿಮ್ಮ ಪತ್ರ ಮತ್ತು ಮನಿಯಾರ್ಡರುಗಳು ಮುಟ್ಟಿವೆ· ಚಿರಶಿವಯೋಗದ ಮಹಾಮಂದಿರದ ಶಾಂತಿಕಾರ್ಯವನ್ನು ಈಗಲೇ ಪೂರೈಸಿ ಶಿವನ ಅಪ್ಪಣೆಯವರೆಗೆ ಬಾಹ್ಯವಾದ ಯೋಗಮಂದಿರದಲ್ಲಿ ಶಿವಯೋಗನಿಷ್ಠವಾಗಿರುವ ದಾಂಪತ್ಯವು ಆದರ್ಶ ದಾಂಪತ್ಯವು. ಇದು ಒಂದು ಹೊಸತು. ಶರಣರ ಮೆಚ್ಚಿಗೆ ಯಲ್ಲಿ ಅವರ ಮಾರ್ಗದಲ್ಲಿ ಅವರ ನೆನಹಿನಲ್ಲಿ ಕಾಲ ನಿರೀಕ್ಷಿಸುವ ದಾಂಪತ್ಯವು ಈಗಿದ್ದರೂ ಅವರು ಪುರಾತನರು.

ಸತೀ ದೇವಿಯರು ಪತಿಯ ಇಚ್ಛೆಗೆ ಅನುಸರಣವಾಗಿ ಭಯಪಡದೆ ಆ ಚಿರ ಸಮಾಧಿ ಯೋಗ ಮಂದಿರವನ್ನು ಸಂತಸದಿಂದ ಪ್ರವೇಶಿಸಿ, ಪತಿಯ ಅಂತರಾಳದಲ್ಲಿ ಒಂದುಗೂಡಿ ಯೋಗಾನಂದದಲ್ಲಿ ವಿಲಯನವಾಗುವದು ನನಗೆ ಹೇಳಲು

ಹೆಮ್ಮೆಯಾಗುವದು.

ನನ್ನ ಪ್ರಕೃತಿಯು ಇದನ್ನು ಬರೆಯಿಸುವಾಗ ಚೆನ್ನಾಗಿ ಆರೋಗ್ಯದಲ್ಲಿತ್ತು.

ಇಂತೀ ಆಶೀರ್ವಾದ

ಪತ್ರದ ಗರ್ಭದಲ್ಲಿರುವ ಗುರುಗಳ ಕೃಪಾಸಾಗರದಲ್ಲಿ ನಾನು ಮುಳುಗಿದೆ ತೇಲಿದೆ ನಿಜ! ಆದರೆ ಅದರ ಓದು ನನ್ನನ್ನು ದಿಗಿಲುಗೊಳಿಸಿತು. ಬುದ್ಧಿಗೆ ತಿಳಿಯ ದಾಯಿತು. ನಮ್ಮ ಕಡೆಮನಿ ಶಾಂತಿ ವಿಧಾನ ಗುರುಗಳಿಗೆ ಹೊಸತೆನಿಸಿದೆ. ಆದರೆ ಅವರ ಸೂಕ್ಷ್ಮಾಂತರಂಗದಿಂದ ಕರುಣೆಯಾಗಿ ಹರಿದು ಬಂದ ಸ್ಫೂರ್ತಿಯೇ ಅದು. ಅವರ ಬಾಹ್ಯ ಪ್ರಜ್ಞೆಗೆ ಇದಿರಾದಾಗ ಹೊಸದು. ಅವರು ನಮಗಾಗಿ ನಿರೂಪಿಸಿದ ರೂಪಕ, ಹೋಲಿಸಿದ ಹೋಲಿಕೆ ಹೊರಲಾರದ ಅತಿಯೆನಿಸಿತು. ಮಗುವಿನ ಲಲ್ಲೆಗಾಗಿ ಅದಕ್ಕೆ ಕೊಡುವ ಪ್ರೀತಿಯ ಏಟುಗಳು ತಾಳಲಾರದಷ್ಟು ನೋವಾ ಗುವಷ್ಟು ಇರಬೇಕೇ? ಎನಿಸಿ ಅವರ ಹೊಗಳಿಕೆಯನ್ನು ಸ್ವೀಕರಿಸದೇ ವಿನಮ್ರವಾಗಿ ಪತ್ರ ಬರೆದೆನು. ಅದಕ್ಕೆ ಉತ್ತರವಾಗಿ ಗುರುಗಳಿಂದ ಮತ್ತೊಂದು ಪತ್ರ ಬಂದಿತು.

ಕ್ಷೇಮ ಶ್ರೀ ಹರಳೇಶ್ವರ ಆಶ್ರಮ ೮-೧೧-೬೮

ಶ್ರೀ ಶಾಂತವೀರ ಸ್ವಾಮಿಗಳಿಂದ ಶ್ರೀಮಾನ್ ಲ. ಅ. ಶಿರಹಟ್ಟಿಯವರಿಗೆ ಆಶೀರ್ವಾದಗಳು ನಿಮ್ಮ ಪತ್ರ ಮುಟ್ಟಿದೆ ಸಾಧಾರಣ ಆರಾಮವದೆ. ಆಶ್ರಮದಲ್ಲಿ ಎಲ್ಲವೂ ಒಳಿತು. ನಿಮ್ಮ ಹೊಂಬೆಳಗಿನ ಬಾಳನ್ನು ಚೆನ್ನಿಗ ಜಾಣ ಮಕ್ಕಳಿಗೆ ಹೊಂದಿಸಿ, ವಿರಮಿತರಾಗಿ ದೈವ ದಾರಿಯಲ್ಲಿ ಸೋಲನ್ನಪ್ಪದ ನಿಮ್ಮ ಜಾಣ ಕೋಕಲೆಗೆ ಮುಂಬೆಳಗಿನ ಬಾಳಿನಲ್ಲಿ ಸೋಲುಂಟದಂತೆ ಜಾಗ್ರತಗೊಳಿಸಿ ಶಕ್ತಿ ಉತ್ಸಾಹಗಳನ್ನು ತುಂಬುವ ಉದ್ದೇಶಿಸಿ ಹಿಂದಿನ ಪತ್ರದಲ್ಲಿ ಬರೆದ ವಿಶೇಷಣಗಳು. ಅವು ಈ ಯುಗ್ಮದ ಸ್ತುತಿಯಲ್ಲ. ಆ ವಿಶೇಷಣಗಳು ಭಾರವೆಂದು ತಿಳಿಯ ಬಾರದು. ಸಾರವೆಂದು ತಿಳಿಯಬೇಕು. ವಾರ್ದಿಕ್ಯದ ಹೊಯ್ದಾಟದಲ್ಲಿ ದೇಹವು ಹೊಯ್ದಾಡುವದು....

ಇಂತೀ ಆಶೀರ್ವಾದಗಳು

ಈ ಪತ್ರದಿಂದ ಎಚ್ಚರಿಸುವ ಮತ್ತು ಪ್ರೋತ್ಸಾಹಿಸುವದು ಅಪ್ಪನವರ ಹಿಂದಿನ ಪತ್ರದ ಉದ್ದೇಶವೆಂದು ತಿಳಿದು ಸಾಕಷ್ಟು ಸಮಾಧಾನವಾಯಿತು.

ಅಕ್ಕನಾಗಮ್ಮ ಚರಿತ್ರೆ ಬಗೆಗೆ ಶ್ರೀಗಳ ಸಂಚಾಲಕತ್ವ

ಬಬಲೇಶ್ವರ ಗ್ರಾಮಾಂತರ ವಿದ್ಯಾವರ್ಧಕ ಸಂಸ್ಥೆಯ ಶ್ರೀ ಶಾಂತವೀರ ಹಾಯಸ್ಕೂಲ ಪ್ರಿನ್ಸಿಪಾಲ ಕುಮಟಗಿಯವರ ಬಂಧುಗಳು ಎಂಭತ್ತನಾಳದಲ್ಲಿ ಒಂದು ಆಸ್ಪತ್ರೆಯನ್ನು ಆರಂಭಿಸಿದರು ಅದರ ಉದ್ಘಾಟನೆ ಶ್ರೀ ಶಾಂತವೀರ ಸ್ವಾಮಿಗಳ ಸನ್ನಿಧಿಯಲ್ಲಿ ಜಿಲ್ಹಾ ಸಿವಿಲ್ ಸರ್ಜನ ಡಾ|| ಕೆ. ಮುದ್ದಣ್ಣ ಅವರಿಂದ ನೆರವೇರಿತು. ಈ ಸಂದರ್ಭದಲ್ಲಿ ಶ್ರೀಗಳವರಿಗೆ ಡಾ|| ಕೆ. ಮುದ್ದಣ್ಣ ಅವರು ಕವಿಗಳು. ಸತ್ಯಾನಂದ ಅವರ ಕಾವ್ಯನಾಮ. ಸಾಹಿತ್ಯ ಪ್ರಿಯರು ಎಂದು ಪರಿಚಯವಾಯಿತು. ಆಗ ತಾವು ಅಕ್ಕನಾಗಮ್ಮ ಚರಿತ್ರೆಯ ಬಗೆಗೆ ಹೇಳಬೇಕೆಂದರೂ ತಮ್ಮ ಅನಾರೋಗ್ಯ ವೇಳೆಯ ಅಭಾವ ಕಾರಣದಿಂದ ಸಾಧ್ಯವಾಗಿರಲಿಲ್ಲವಂತೆ. ಈ ವರೆಗೆ ಅದರ ಆತುರ ಮನದಲ್ಲಿ ಉಳಿದೇ ಇತ್ತು. ಸತ್ಯಾನಂದರಿಗೆ ಪತ್ರ ಬರೆಯಬೇಕೆಂಬ ಹವಣಿಕೆಯಲ್ಲಿದ್ದರು.

ನಾನು ದರ್ಶನಕ್ಕಾಗಿ ಹೋದಾಗ ನನ್ನಿಂದ ಹೇಳಿ ಬರೆಯಿಸಿದರು ಅದು ಹೀಗಿದೆ.

ಸುಕ್ಷೇತ್ರ ಹರಳೇಶ್ವರಾಶ್ರಮ ದಿನಾಂಕ ೧೫–೫–೭೯

ಶ್ರೀ ಶಾಂತವೀರ ಸ್ವಾಮಿಗಳವರಿಂದ ಶ್ರೀಮಾನ್ ಡಾ|| ಕೆ. ಮುದ್ದಣ್ಣ ಸಿವಿಲ್ ಸರ್ಜನ ವಿಜಾಪುರ ಇವರಿಗೆ ಕೃ. ಮಂಗಲಾಶೀರ್ವಾದಗಳು.

ಕಳೆದ ತಿಂಗಳು ಎಂಭತ್ತನಾಳದಲ್ಲಿ ಪ್ರತ್ಯಕ್ಷವಾಗಿ ನನಗೆ ತಮ್ಮ ವ್ಯಕ್ತಿತ್ವದ ಮತ್ತು ತಮ್ಮ ಸಾಹಿತ್ಯದ ಪರಿಚಯವಾಗಿ ಅದು ಬಹಳ ಆನಂದವನ್ನುಂಟು ಮಾಡಿತು. ಅದರಂತೆ ತಮ್ಮಲ್ಲಿರುವ ಸಾಹಿತ್ಯ ಪ್ರೇಮದಿಂದಲೂ ಅಭಿಮಾನ ವೆನಿಸಿತು. ಅಂದಿನ ಸಭಾಂತ್ಯದಲ್ಲಿ ಅವಸರಕ್ಕಾಗಿಯೂ, ನನ್ನ ಅನಾರೋಗ್ಯದ ಸಂದರ್ಭಕ್ಕಾಗಿಯೂ ಇನ್ನಿಷ್ಟು ತಮ್ಮೊಡನೆ ಸಂಭಾಷಿಸಲು ಅವಕಾಶವಿಲ್ಲದಾಯಿತು.

ಇಂತಹ ತಮಗೆ, ನನಗೆ ಗೊತ್ತಿದ್ದ ಒಂದು ಸಾಹಿತ್ಯ ಕೃತಿಯನ್ನು ಅವಲೋಕನಕ್ಕೆ ಒದಗಿಸಬೇಕೆಂದು ಬಯಸಿರುವೆನು.

ಶ್ರೀ ಲ. ಆ. ಶಿರಹಟ್ಟಿ (ರಿ|| ಅ.ಸಿ.ಡೆ.ಎ.ಇ) ಎಂಬವರು 'ಆದರ್ಶ ಮಹಿಳೆ ಅಕ್ಕನಾಗಮ್ಮ' ಐತಿಹಾಸಿಕ ಅಂಶಗಳನ್ನು ಒಳಗೊಂಡ ರೂಪಕಾ ಗ್ರಂಥವನ್ನು ಬರೆದಿದ್ದಾರೆ. ಅದನ್ನು ನಾನು ಅವರಿಂದ ಎರಡು ಸಲ ಓದಿಸಿ ಕೇಳಿದ್ದೇನೆ. ಅದು ನನ್ನ ಮನಸ್ಸಿಗೆ ಹಿಡಿಸಿದೆ. ಮೆಚ್ಚುಗೆಯಾಗಿದೆ. ಸಾಹಿತ್ಯ ಪ್ರೇಮಿಗಳಾದ ತಾವೂ

ಅದನ್ನು ಅವಶ್ಯ ನೋಡಿ ಆನಂದಿಸಬಹುದೆಂದು ನಮ್ಮಾಶೆ!

ತಾವು ಒಪ್ಪುವದಾದರೆ, ಅದನ್ನು ತಿಳಿಸಿದರೆ, ಲೇಖಕರಿಗೆ ತಮ್ಮ ಕಡೆಗೆ ಅದನ್ನು ಮುಟ್ಟಿಸಲು ತಿಳಿಸುವೆನು. ಅದು ಕೈಬರೆಹದ ರೂಪದಲ್ಲಿದೆ. ಅವರಿಂದಲೇ ಓದಿಸಿದರೆ ಹೆಚ್ಚು ಚನ್ನಾಗಿ!

ಇದೇ ಲೇಖಕರು ಬರೆದಿರುವ 'ನೂರೊಂದು ನೆಲೆಯ ನಿಲವು' 'ಬಸವರಾಜ ದೇವರು' ಗ್ರಂಥಗಳ ಪ್ರತಿಗಳು ತಮಗೆ ಸಲ್ಲಿಸಲ್ಪಡಲಿವೆ.

ತಮ್ಮ ಉತ್ತರ ಬಂದ ಕೂಡಲೆ ಆ ಹಸ್ತಪ್ರತಿಯನ್ನು ಒಯ್ದು ತಮ್ಮ ಮುಂದೆ ಓದಲು ತಿಳಿಸುವೆ. ಇಂತು ಆಶೀರ್ವಾದಗಳು ಶಾಂತವೀರಸ್ವಾಮಿ (ಅಂಕಿತ) ಅದಕ್ಕೆ ಅಂಕಿತ ಹಾಕಿಕೊಟ್ಟರು. ಪೋಸ್ಟಿಗೆ ಹಾಕಲು ಹೇಳಿದರು. ಬೆಳಿಗ್ಗೆ ಶ್ರೀಗುರುಪಾದ ವಂದನೆಗೈದು ಅಪ್ಪಣೆ ಪಡೆದು ಬಂದೆನು. ಹರಳೇಶ್ವರದಲ್ಲಿ ಗುರುಸನ್ನಿಧಾನ ದರ್ಶನವಾದುದು ಇದೇ ಕೊನೆಯದಾಯಿತು.

ಹರಳೇಶ್ವರದಿಂದ ಗುರುಗಳ ೨೦-೫-೬೯ರ ಪತ್ರ ಬಂದಿತು ಅದರಲ್ಲಿ 'ಡಾ॥ ಕೆ. ಮುದ್ದಣ್ಣ ಅವರ ಉತ್ತರ ಬಂದಿದೆ. ನಮ್ಮ ಕೋರಿಕೆಯನ್ನು ಸಂತೋಷ ದಿಂದ ಸ್ವೀಕರಿಸಿ ವಿನಯಪೂರ್ವಕವಾಗಿ ಬರೆದಿದ್ದಾರೆ. ನೀವು ನಾಗಮ್ಮ ಚರಿತ್ರೆ ಯೊಡನೆ ಹೋಗಿ ಅವರ ಹತ್ತಿರ ಓದಬೇಕು' ಎಂದು ಆದೇಶಿಸಿದ್ದರು. ಅದರಂತೆ ನಾನು ಹೋಗಿ ಶ್ರೀ ಮುದ್ದಣ್ಣ ಅವರನ್ನು ಭೆಟ್ಟಿಯಾಗಿ ಅವರಿಗೆ ಅನುಕೂಲ ವಿದ್ದಂತೆ ೪ ದಿನಗಳಲ್ಲಿ ಅವರ ಹತ್ತಿರ ಓದಿ ಮುಗಿಸಿದೆನು.

"ಇದು ಅಚ್ಚಾಗಬೇಕಲ್ಲ! ಪ್ರಕಟನೆಗೆ ತುಂಬ ಯೋಗ್ಯವಾಗಿದೆ" ಎಂದರು ಡಾ॥ರವರು.

"ಗುರುಗಳು ತಮ್ಮ ಹತ್ತಿರ ಕಳಿಸುವಾಗ ಈ ವಿಚಾರವನ್ನೇನೂ ಎತ್ತಿಲ್ಲ" ಎಂದೆ.

"ಒಳ್ಳೇದು ಅಚ್ಚಿನ ಪ್ರತಿ ಮಾಡಿಕೊಡಿರಿ, ಶಿವಕೃಪೆಯಿಂದ ಏನಾದರೂ ಅನುಕೂಲ ಆದೀತು ನೋಡೋಣ" ಎಂದರು ಡಾ॥ ಮುದ್ದಣ್ಣ ಅವರು. ಅಚ್ಚಿನ ಪ್ರತಿ ಬರೆದು ದಿ. ೧೬-೬-೬೯ ರಂದು ಅವರಿಗೆ ಕೊಟ್ಟೆನು.

* * * *

ಹರಳೇಶ್ವರಕ್ಕೆ ಗುರುವಿಯೋಗ

ಮುಂದೆ ಗುರುಗಳು ತಮ್ಮ ಅನಾರೋಗ್ಯದ ಅವಸರಕ್ಕೆ ವೈದ್ಯರು ಒದಗುವದು ತೊಂದರೆದಾಗುತ್ತಿರುವ ಕಾರಣದಿಂದಲೂ, ಕಣ್ಣಿಲ್ಲದ ಕಾಲಿಲ್ಲದ

ಅವರ ಸೇವೆಗೆ ಸ್ಥಿರವಾಗಿ ನಿಂತು ಮಾಡುವ ಸೇವಕರ ಅಭಾವದಿಂದಲೂ ಅನಿವಾರ್ಯವಾಗಿ ಹರಳೇಶ್ವರವನ್ನು ಬಿಡಬೇಕಾಯಿತು. ಬಬಲೇಶ್ವರದ ಹೊರಗಿನ ಮಠದಲ್ಲಿ ಬಂದು ನಿಂತರು. ತಮ್ಮ ಮನೆಯು ಹೊಲ, ಅಪ್ಪನವರ ಸೇವೆ ಒಂದೇ ಕಡೆ ಇದ್ದು ಮಾಡಲು ನೀಲಮ್ಮ ತಾಯಿಯವರಿಗೂ ಅನುಕೂಲವಾಯಿತು. ಬಬಲೇಶ್ವರದ ಹಿರಿಯರಿಗೂ ಕಳೆದು ಹೋದ ಅಮೌಲ್ಯ ವಸ್ತು ಮರಳಿ ಸಿಕ್ಕ ಆನಂದ ಭರವಾಗಿತ್ತು. ಅಪ್ಪನವರ ಸಲುವಾಗಿ ಏನೆಲ್ಲ ಮಾಡಲು ಸಿದ್ಧರಾದರು. ಅದು ಬೇಗನೆ ನಿದರ್ಶನಕ್ಕೂ ಬರಹತ್ತಿತು.

ಶ್ರೀಗಳು ಈ ಮಠವನ್ನು ಜಮೀನು ಸಹಿತ ಹಾಯಸ್ಕೂಲಿಗೆ ದಾನ ಮಾಡಿದ್ದರು, ಆದರೆ ಹಾಯಸ್ಕೂಲಿನ ಮಠದ ಹಿಂದಿನ ಮೂರು ಕೋಣೆಗಳನ್ನು ಅಪ್ಪನವರಿಗಾಗಿ ಬಿಟ್ಟುಕೊಟ್ಟಿದ್ದರು.

ಹರಳಯ್ಯನ ಗುಡಿ ಗುಂಡ ಎಂಬ ಸ್ಥಳ ಇದು ವರೆಗೆ ಹತ್ತು (೧೯೫೫–೬೯) ವರ್ಷಗಳಲ್ಲಿ ಅಭಿವೃದ್ಧಿ ಹೊಂದಿ ಪುಣ್ಯಾಶ್ರಮವಾಗಿತ್ತು. ನಾಡಿನ ಗಣ್ಯರಲ್ಲಿ ಕ್ಷೇತ್ರವೆಂದು ಹೆಸರು ಗಳಿಸಿತ್ತು. ಈಗ ಅಪ್ಪನವರ ನಿವಾಸಮಂದಿರ, ಜಲಸೌಕರ್ಯ ವಿಸ್ತರಣೆ, ಯೋಗಮಂದಿರ, ನಾಗಮ್ಮನ ಹೊಸಗುಡಿ ಉದ್ಯಾನದ ಬೆಳವಣಿಗೆ, ಪ್ರಸಾದ ವಿತರಣೆಯ ಕಟ್ಟಡಗಳು ಇವು ಅಲ್ಲದೆ ಸರಕಾರದಿಂದ ಸಿದ್ಧವಾಗುತ್ತಿದ್ದ ನೀರಿನ ತೊಟ್ಟಿ ನಳಗಳು, ಗಣ್ಯರ ಆಗಮನಗಳು ಈ ಎಲ್ಲ ರೀತಿಯಿಂದಲೂ ಪ್ರತಿಷ್ಠೆ ಪಡೆದು ಪುಣ್ಯಾಶ್ರಮವೆನಿಸಿತು.

ಈಗೇನಿದೆ? ಶ್ರೀ ಶಾಂತವೀರ ಸ್ವಾಮಿಗಳ ನಿರ್ಗಮನದಿಂದ ಪ್ರಾಣ ಚೇತನವನ್ನೇ ಅದು ಕಳೆದುಕೊಂಡಂತಾಗಿದೆ. ಮತ್ತೆ ಕಾಡು ಪರಿಸರಕ್ಕೆ ಎದುರಾಗಿ ಉಳಿದಿದೆ.

ಇಲ್ಲಿಗೆ ಗುರುಕರುಣೆ ಗುರುಸ್ಮರಣೆ ಸಮುಚ್ಚಯ ಲೇಖನದಲ್ಲಿ ಹರಳೇಶ್ವರ ಖಂಡ (ವಿಭಾಗ) ಮುಕ್ತಾಯ.

ಬಬಲೇಶ್ವರ

ಬಬಲೇಶ್ವರದಲ್ಲಿ ಗುರುಪಾದ ದರ್ಶನ

ಸದ್ಗುರು ಶ್ರೀ ಶಾಂತವೀರ ಸ್ವಾಮಿಗಳವರು ಬಬಲೇಶ್ವರದಲ್ಲಿ ಹೊರಗಿನ ಮಠದಲ್ಲಿ ಬಂದು ನಿಂತುದು ಗೊತ್ತಾಗಿತ್ತು ದಿ. ೨೯-೬-೬೯ ಗುರುವಾರ ಗುರುಪಾದ ದರ್ಶನಕ್ಕಾಗಿ ಅಲ್ಲಿಗೆ ಹೋದೆನು. ವಂದಿಸಿದೆನು. ಡಾ|| ಕೆ. ಮುದ್ದಣ್ಣ ನವರು ಪ್ರೇಮದಿಂದ ಬರಮಾಡಿಕೊಂಡದ್ದನ್ನು ಅವರ ಹತ್ತಿರ ನಾಗಮ್ಮ ಚರಿತ್ರೆ ಓದಿದುದನ್ನು ಹೇಳಿದೆ. ಅವರು ಮೆಚ್ಚಿ ಅದರ ಮುದ್ರಣಕ್ಕೆ ಅನುಕೂಲ ಕಲ್ಪಿಸಲು ಆಲೋಚಿಸುತ್ತಿದ್ದಾರೆ. ಅಚ್ಚಿನ ಪ್ರತಿ ಮಾಡಿಸಿಕೊಂಡಿದ್ದಾರೆ ಎಂದು ತಿಳಿಸಿದೆ. ಅಪ್ಪನವರು ತಮ್ಮ ಇಚ್ಛೆ ಈಡೇರುವ ದಾರಿ ಕಂಡಂತೆ ಸಮಾಧಾನ ಸೂಚಿಸಿದರು.

ಅಂದು ನಾನು ಅಲ್ಲಿಯೇ ಉಳಿದು ಅಪ್ಪನವರಿಗೆ ಒದಗಿಸಿದ್ದ ಸೇವಾ ವ್ಯವಸ್ಥೆ ನೋಡಿದೆ. ಅಂದು ಬಬಲೇಶ್ವರದಲ್ಲಿ ಪುರಾಣ ಹೇಳುವವರು ಯಾರು ಎಂದು ಶ್ರೀಗಳ ಹತ್ತಿರ ಪ್ರಮುಖರ ಆಲೋಚನೆ ನಡೆದಿತ್ತು. ಒಬ್ಬ ತರುಣ ಸ್ವಾಮಿ ಬಂದಿದ್ದರು. ಅವರ ಸಲುವಾಗಿ ಮಂಟೂರ ಶಿಕ್ಷಕರು ಸ್ವಾಮಿಗಳಿಗೆ ಪತ್ರ ಬರೆದಿದ್ದರು. ಇವರು ಈಗ ಇಲ್ಲಿ ಪುರಾಣ ಹೇಳುವದಕ್ಕೆ ಒಪ್ಪಿ ನಮಸ್ಕಾರ ಮಾಡಿದರು ನಾನು ಮರುದಿನ ಮರಳಿದ್ದೆ.

ದಿ. ೧೦-೭-೬೯ ಶ್ರೀ ಶಾಂತವೀರ ಸ್ವಾಮಿಗಳು ವಿಜಾಪುರ ನ್ಯೂ ಆರ್ಟ ಕಾಲೇಜ ಉದ್ಘಾಟಿಸಲು ಬಂದಿದ್ದರು. ನನಗೆ ಅಸ್ವಾಸ್ಥ್ಯ ಹೋಗಿರಲಿಲ್ಲ. ಗುರುಗಳೇ ನಮ್ಮ ಮನೆಯ ಕಡೆಯ ದಾರಿಯಿಂದ ಬಂದು ಮನೆಯ ಹತ್ತಿರ ಕಾರು ನಿಲ್ಲಿಸಿ ದರ್ಶನವಿತ್ತರು. ಆರೋಗ್ಯವನ್ನು ವಿಚಾರಿಸಿದರು. ಎಲ್ಲರೂ ನಮಿಸಿ ಆಶೀರ್ವಾದ ಪಡೆದೆವು.

ಬೊಮ್ಮನಹಳ್ಳಿ (ವಿಜಾಪುರ ತಾಲೂಕ) ಪಟ್ಟಾಧ್ಯಕ್ಷರು ಶ್ರೀ ಶಾಂತಲಿಂಗ ಶಿವಾಚಾರ್ಯಸ್ವಾಮಿಗಳವರು. ತಮ್ಮಲ್ಲಿ ಪ್ರಾಮುಖ್ಯರೊಡನೆ ಕೂಡಿ ಶ್ರೀ ಜಡೆಯ ಶಾಂತೇಶ್ವರ ಗುಡಿಯ ಮೇಲೆ ಕಳಸಾರೋಹಣ, ತಮ್ಮ ಗವಿಮಠದಲ್ಲಿ ಹನ್ನೊಂದು ಮಂಟಪಪೂಜೆ ಪುರಾಣ ಮಂಗಲಾಚರಣೆ ಇವೆಲ್ಲವುಗಳ ಸನ್ನಿಧಿಗಾಗಿ

ಹುಬ್ಬಳ್ಳಿ ಮೂರುಸಾವಿರಮಠದ ಜಗದ್ಗುರು ಮಹಾಸ್ವಾಮಿಗಳನ್ನು ಬಿಜಯಂಗೈಸಿ ಕೊಳ್ಳುವದು. ಈ ಕಾರ್ಯಗಳ ವಿಶೇಷ ಸಮಾರಂಭ ಹಮ್ಮಿಕೊಂಡಿದ್ದರು. ಶ್ರೀ ಶಾಂತವೀರಪ್ಪ ಮುರಗುಂಡಿ ಇವರು ಪ್ರಮುಖ ಸಂಚಾಲಕರು. ಈ ಎಲ್ಲ ಕಾರ್ಯಕ್ರಮಗಳಿಗೆ ಅವಶ್ಯವಿದ್ದ ಪ್ರಕಟನೆ, ಆಮಂತ್ರಣ, ಧನದಾತ ಉದಾರ ಗುಣಕಿಯ ಗಣ್ಯ ಸದ್‌ಗೃಹಸ್ಥ ಶ್ರೀ ಚೆನ್ನಗೌಡರ ಪರಿಚಯ ಪುಸ್ತಿಕೆ ಇತ್ಯಾದಿ ಲೇಖನಗಳನ್ನು ಬರೆದು ಸಹಾಯವಾಗುವದಕ್ಕೆ ಗುರುಗಳಿಂದ ಆದೇಶ ತಂದಿದ್ದರು. ದಿ. ೧೨–೯–೬೯ನೆಯ ದಿನ ಬೊಮ್ಮನಹಳ್ಳಿ ಶ್ರೀ ಸ್ವಾಮಿಗಳು ಶ್ರೀ ಶಾಂತವೀರ ಮುರಗುಂಡಿ ಪ್ರಮುಖರೊಡನೆ ತೊರವಿಗೇ ಬಂದರು. ಅವರಿಂದ ಬರೆಯತಕ್ಕ ಲೇಖನ ಯಾವವೆಂಬುದನ್ನೂ ಅವುಗಳಿಗೆ ಅವಶ್ಯವಿದ್ದ ಮಾಹಿತಿಗಳನ್ನು ಸಂಗ್ರಹಿಸಿ ಕೊಂಡೆನು. ಬಳಿಕ ಅವರೊಡನೆ ಕಾರಿನಲ್ಲಿ ಬಬಲೇಶ್ವರಕ್ಕೆ ಹೋದೆವು. ಅಲ್ಲಿ ಅವರ ಸಮಾರಂಭಗಳ ಬಗೆಗೆ ಮತ್ತಿಷ್ಟು ಚರ್ಚೆ ನಡೆಯಿತು. ಗುರುಗಳು ಆಗ ಬೊಮ್ಮನಹಳ್ಳಿಗೆ ದಯಮಾಡಿಸುವ ಆಮಂತ್ರಣ ಸ್ವೀಕರಿಸಿದರು. ಹೋದವರು ಮರಳಿ ಬಂದೆವು.

ಬಬಲೇಶ್ವರದಲ್ಲಿ ನಡೆದ ತರುಣಸ್ವಾಮಿಯ ಪುರಾಣ ಒಮ್ಮೆ ಕೇಳಬೇಕೆಂಬ ಆಪೇಕ್ಷೆ. ನಾನೂ ಮನೆಯವರೂ ಹೋಗಿ ದರ್ಶನ ಪಡೆದೆವು. ಶ್ರೀ ತರುಣ ಪುರಾಣಿಕರ ಪ್ರವಚನ ಕೇಳಿದೆವು. ನಾವು ಹೊರಗಿನ ಮಠಕ್ಕೆ ಅಪ್ಪನವರ ಹತ್ತಿರ ಬಂದೆವು. ಅಂದು ಪುರಾಣ ಸ್ವಾಮಿಗೆ ಅಭಿನಂದನೆ ಪತ್ರ ಅರ್ಪಿಸಬೇಕೆಂದು ಮಾತನಾಡಿದೆವು. ಬರೆಹಕ್ಕಾಗಿ ಗುರುಗಳಿಂದ ಟಿಪ್ಪಣೆ ಪಡೆದುಕೊಂಡೆನು. ಮರುದಿನ ವಿಜಾಪುರಕ್ಕೆ ಬಂದ ಬಳಿಕ ಅಭಿನಂದನಾ ಪತ್ರ ತಯಾರಿಸಿ ಗುರುಗಳ ಕಡೆಗೆ ಕಳಿಸಿದೆನು. ಅದನ್ನು ಕಾರ್ಯಕಾರಿ ಭಕ್ತಮಂಡಳಿ ವಿಜಾಪುರದಲ್ಲಿ ಅಚ್ಚಿಗಾಗಿ ಕೊಟ್ಟಿದ್ದರು. ಆಗ ಪುರಾಣ ಸ್ವಾಮಿ ಅಚ್ಚಿನ ಕರಡು ಪ್ರತಿಯಲ್ಲಿ ತಮ್ಮ ಬಗೆಗೆ ಹೆಚ್ಚಿನ ಪ್ರತಿಷ್ಠೆಯ ಶಬ್ದಗಳನ್ನು ಸೇರಿಸಿಕೊಟ್ಟಿದ್ದರು. ಅಂತು ಅವರಿಗೆ ಮಂಗಲದ ದಿನ ಅದು ಅರ್ಪಿತವಾಯಿತು.

ಬೇ–ಸರ ಸರಸವಾಯಿತು

ಡಾ|| ಕೆ. ಮುದ್ದಣ್ಣ (ಸತ್ಯಾನಂದ) ಅವರ ಸದಿಚ್ಛೆಯಂತೆ ನಾಗಮ್ಮ ಚರಿತ್ರೆಯ ಅಚ್ಚಿನ ಪ್ರತಿ ಬರೆದುಕೊಟ್ಟು ಮೂರು ತಿಂಗಳಾಗುತ್ತ ಬಂದಿತ್ತು. ಅವರ

ಕಡೆಯ ಆಶೆಯ ಸುಳಿವೂ ಬಂದಿರಲಿಲ್ಲ. ಪ್ರತಿಯನ್ನು ತಂದು ಮನೆಯಲ್ಲಿಟ್ಟ ರಾಯಿತೆಂದು ದಿ. ೧೬–೯–೬೯ ಮುಂಜಾನೆ ಡಾಕ್ಟರರ ಬಂಗಲೆಗೆ ಹೋದೆನು. ಅಟ್ಟದ ಮೇಲಕ್ಕೆ ಹೋಗುತ್ತಿರಲು ಆ ಸರ್ಜನ್ ಸಾಹೇಬರೇ ಇಳಿದು ಬರಲು ಆರಂಭಿಸಿದ್ದರು ನೋಡಿ ನಮಸ್ಕಾರ ಎಂದು 'ಹಸ್ತಪ್ರತಿಯನ್ನೊಯ್ದು ಮನೆಯಲ್ಲಿಡ ಬೇಕೆಂದು ಬಂದಿದ್ದೇನೆ' ಎಂದು ಬೇಗನೆ ಹೇಳಿದೆ. ಯಾಕಂದರೆ ಅದನ್ನು ತರಲು ಅವರು ಮರಳಿ ಮೇಲೆ ಏರಬೇಕಾಗುತ್ತಿತ್ತಲ್ಲ! ಆ ಸೌಜನ್ಯಮೂರ್ತಿ ಸತ್ಯಾನಂದರು ಮುಗಳು ನಗುತ್ತ "ನಿಮ್ಮ ಪುಸ್ತಕ ಮುದ್ರಣಾಲಯದಲ್ಲಿದೆ ಬನ್ನಿರಿ" ಎನ್ನುತ್ತ ಕೆಳಗೇ ಬಂದರು. ಅವರ ಕಾರು ಗೂಡಿನಿಂದ ಹೊರಬರುವ ಒಂದು ನಿಮಿಷದಲ್ಲಿ ರಾಯಚೂರ ಕಂಟ್ರಾಕ್ಟರರೊಬ್ಬರು ತಾಯಿಯ ಪುಣ್ಯ ದಿನಾಚರಣೆಯ ಸ್ಮಾರಕವಾಗಿ ಅದನ್ನು ಮುದ್ರಿಸುತ್ತಾರೆ. ಅವರ ಪತ್ರ ತೋರಿಸುತ್ತೇನೆ ಬರ್ರಿ! ಎಂದು ತಮ್ಮ ಕಾರಿನಲ್ಲಿಯೇ ನನ್ನನ್ನು ಕರಕೊಂಡು ಸಿವ್ಹಿಲ್ ಹಾಸ್ಪಿಟಲಿಗೆ ಬಂದರು. ತಮ್ಮ ಆಫೀಸ ಕೋಣೆಗೆ ಹೋಗಿ ಕೂಡ್ರಿಸಿ, ಪತ್ರ ಕೊಟ್ಟು 'ಓದಿರಿ ಸಾವಕಾಶ' ಎಂದು ಆ ದೊಡ್ಡ ಅಧಿಕಾರಿಗಳು ತಮ್ಮ ಕರ್ತವ್ಯದಲ್ಲಿ ನಿರತರಾದರು. ನಾನು ಓದಿದೆ, ಸಂತೋಷದಲ್ಲಿ ಮತ್ತೊಮ್ಮೆ ಓದಿದೆ. ಬಳಿಕ ಅದನ್ನು ತಿರುಗಿ ಕೊಡುತ್ತ ಆನಂದ ಪ್ರದರ್ಶಿಸಿ, ಕೃತಜ್ಞತೆ ಸೂಚಿಸಿ ಕೈಮುಗಿದು ಮನೆಗೆ ಬಂದೆನು. ಅಂದಿನ ದಿನವೆಲ್ಲ ನನ್ನಲ್ಲಿ ಹಿಗ್ಗಿನ ಬುಗ್ಗೆ ಪುಟಿಯುತ್ತಲೇ ಇತ್ತು ಗುರು ಕೃಪೆಯ ಅನೇಕ ಅಲೆಗಳಂತೆ ಇದೊಂದು ಅಲೆಯಾಗಿತ್ತು. ಗುರು ಕೃಪೆಯ ಸುದಿನವಾಗಿತ್ತು ಗುರುವಿನ ಬಾಹ್ಯ ಸಾಹಸವೂ ನೆನಪಿಗೆ ಬರುತ್ತಿತ್ತು ಅದರ ಹಿನ್ನೆಲೆ ಹೀಗಿತ್ತು.

ರಾಯಚೂರಲ್ಲಿ ಶ್ರೀ ಸಿ. ಎಸ್. ಉಮಾಪತಿ ಎಂಬವರು ಕಂಟ್ರಾಕ್ಟರರು ಮತ್ತು ಜಿಲ್ಲಾ ಕಾಂಗ್ರೆಸ್ಸಿನ ಕಾರ್ಯದರ್ಶಿ. ಅವರು ಕೆ. ಮುದ್ದಣ್ಣ ಅವರ ಗೆಳೆಯರು! ಅವರು ತಮ್ಮ ತಾಯಿಯ ವಾರ್ಷಿಕ ಪುಣ್ಯತಿಥಿಯನ್ನು ಸಮಾರಂಭ ಏರ್ಪಡಿಸಿ ಖರ್ಚುಮಾಡಿ ಆಚರಿಸುತ್ತಿದ್ದರು. ಒಮ್ಮೆ ಮುದ್ದಣ್ಣನವರು ಅವರಿಗೆ 'ಅಂದಿನ ಮಟ್ಟಿನ ಸಂತೋಷಕ್ಕಾಗಿ ಮಾಡುವ ಖರ್ಚಿನ ಒಂದು ಭಾಗವನ್ನು ಒಂದು ಒಳ್ಳೇ ಪುಸ್ತಕ ಹೊರತರುವದಕ್ಕೆ ದಾನ ಮಾಡಿದರೆ ಬಹು ದಿವಸ ಉಳಿಯುತ್ತದೆ' ಎಂದು ಸಲಹೆ ಮಾಡಿದ್ದರಂತೆ. ಅದಕ್ಕವರು ಅಂತಹ ಒಂದು ಪುಸ್ತಕ ಸೂಚಿಸಿರಿ ಮಾಡೋಣ ಎಂದಿದ್ದರಂತೆ. ಈಗ ಡಾಕ್ಟರು ಈ ನಾಗಮ್ಮ ಚರಿತ್ರೆ ಹಸ್ತಪ್ರತಿ ಅವರ ಕಡೆಗೆ

ಕಳಿಸಿದ್ದರು. ಅದನ್ನು ಪರಿಶೀಲಿಸಿ ನೋಡಲು ತಮ್ಮ ಗೆಳೆಯ ಖ್ಯಾತ ಸಾಹಿತಿ ಶ್ರೀಶಾಂತರಸರಿಗೆ ಕೊಟ್ಟಿದ್ದರು. ಶಾಂತರಸರು ಅದನ್ನು ಓದಿ ಒಳ್ಳೆಯದೆಂದು ಅಭಿಪ್ರಾಯಪಟ್ಟಿದ್ದರು. ಮೊದಲಿನ ಎರಡು ಕೃತಿಗಳನ್ನು ನೋಡಿ ಶಾಂತರಸರಿಗೆ ನನ್ನಲ್ಲಿ ಪ್ರೇಮ ಉಂಟಾಗಿತ್ತು ಶ್ರೀ ಶಾಂತವೀರ ಸ್ವಾಮಿಗಳ ಬಗೆಗಿನ ಪೂಜ್ಯಭಾವ ಸಂಬಂಧದಿಂದ ಆ ಪುಸ್ತಕ ಮೇಲ್ವಿಚಾರಣೆ ಮಾಡುವದಕ್ಕೂ, ತಾವೇ ಅಚ್ಚಿನ ಕರಡು ತಿದ್ದುವದಕ್ಕೂ ಒಪ್ಪಿಕೊಂಡಿದ್ದರು. ಇದನ್ನೆಲ್ಲ ಶ್ರೀ ಉಮಾಪತಿ ಅವರು ಡಾಕ್ಟರರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದರು. ಸರಿ. ಗುರುಗಳ ಅಪೇಕ್ಷೆ ಸಮನಿಸಿತ್ತು ಗುರುಗಳಿಗೂ ಶಾಂತರಸರಿಗೂ ಸಂತೋಷ ಸೂಚಿಸಿ ಪತ್ರ ಬರೆದನು. ಬೊಮ್ಮನಹಳ್ಳಿ ಉತ್ಸವ ಕುರಿತ ಲೇಖನಗಳ ಅಚ್ಚಿನ ಕರಡು ತಿದ್ದುವ ಕೆಲಸವೂ ನಡೆದಿತ್ತು.

೨೨-೯-೬೯ ಸೋಮವಾರ ತೊರವಿಯಲ್ಲಿ ಪೂರ್ವಾಸ್ನ ಪುರಾಣ ಮಂಗಲ ಸಮಾರಂಭ! ಅಲ್ಲಿದ್ದು ಬಳಿಕ ಬಬಲೇಶ್ವರಕ್ಕೆ ಹೋಗಿ ಶ್ರೀಗುರು ಸನ್ನಿಧಿ ಸೇರಿ ವಂದಿಸಿದೆನು. ಡಾಕ್ಟರರು ಅಚ್ಚಿಗೆ ಹೊಂದಿಕೆ ಮಾಡಿದುದನ್ನು ನೆನೆಸಿದೆವು. "ಒಳ್ಳೆಯ ಕೆಲಸಕ್ಕೆ ಶಿವನು ದಾರಿ ಮಾಡಿಯೇ ಇರುತ್ತಾನೆ" ಎಂದರು. ಗುರುಗಳು! ಬೊಮ್ಮನಹಳ್ಳಿ ಅವರ ಕಾರ್ಯಕ್ರಮಕ್ಕೆ ತಾವೂ ಬರುವದಾಗಿ ಹೇಳಿದರು. ಅಂದು ರಾತ್ರಿ ಶಿವ ಸಂಭಾಷಣೆಗಳಲ್ಲಿ ಕಳೆದು ಮರುದಿನ ಬೆಳಿಗ್ಗೆ ಮರಳಿದೆನು.

ಬೊಮ್ಮನಹಳ್ಳಿಯಲ್ಲಿ ಮಹೋತ್ಸವಗಳು

ಬೊಮ್ಮನಹಳ್ಳಿ ಚಿಕ್ಕ ಗ್ರಾಮವಾದರೂ ಭಕ್ತರ ಉತ್ಸಾಹದಿಂದ ಸಮಾರಂಭಕ್ಕೆ ಭಾರೀ ಸಿದ್ಧತೆಯಾಗಿತ್ತು. ೨೫,೨೬ ಸಪ್ಟಂಬರ ಉತ್ಸವದ ದಿನಗಳು. ಮುದ್ರಣದ ಕೆಲಸ ಮುಗಿದಿತ್ತು. ದಿ. ೨೪ರಂದೇ ನನ್ನನ್ನು ಕರೆದೊಯ್ದರು. ಅಂದೇ ಸಂಜೆಗೆ ಹುಬ್ಬಳ್ಳಿ 'ಮೂ.ಜ.ಗಂ' ಮಹಾಸನ್ನಿಧಿಯವರು ದಯಮಾಡಿಸಿದರು. ಮೂರು ದಿನ ಮೊದಲೇ ಹೊರಟ ಆನೆ ಆಗಲೇ ಅಲ್ಲಿಗೆ ಬಂದಿತ್ತು. ಇಲಕಲ್ಲ ಗುರು ಮಹಾಂತ ಶಿವಯೋಗಿಗಳೂ, ಇಂಚಗೇರಿ ಪಟ್ಟದ ದೇವರು ಇನ್ನೂ ಬೇರೆ ಕೆಲವು ಸ್ವಾಮಿಗಳೂ ಆಗಮಿಸಿದ್ದರು.

ರಾತ್ರಿಯೆಲ್ಲ ಗ್ರಾಮ ಮತ್ತು ಗವಿಮಠ ನಡುವಿನ ಪ್ರದೇಶದಲ್ಲಿ ಜನರ ನೆರವಿ, ಕಾರ್ಯಕರ್ತರ ಉತ್ಸಾಹದರ್ಶನ! ಗ್ರಾಮಾಂತರದ ಅಗಣಿತ ಜನರು ಬಂದು ಇಳಿಯುತ್ತಿದ್ದರು.

ದಿ. ೨೫ ಮುಂಜಾನೆ ಶಾಂತವೀರಪ್ಪನವರ ಹಿರಿತನದಲ್ಲಿ ಮೂ.ಜ.ಗಂ. ಸ್ವಾಮಿಗಳನ್ನು ಊರಲ್ಲಿ ಬರಮಾಡಿಕೊಳ್ಳುವ, ವಾದ್ಯ ವೈಭವದ ಉತ್ಸವ ನೆರವೇರಿತು. ಬಳಿಕ ದೇವಸ್ಥಾನ ಮೇಲೆ ಕಳಸಾರೋಹಣ, ಸಭೆ, ಪುರಾಣಮಂಗಲ ಸಮಾರಂಭ ಜರುಗಿದವು. ಆ ಮೇಲೆ ಮಠಕ್ಕೆ ಮರಳಿ ೧೧ ಮಂಟಪ ಪೂಜಾ ವೈಭವ! ಮಠದ ತೋಟದಲ್ಲೆಲ್ಲ ಜನಸಾಗರ! ದೊಡ್ಡ ಪ್ರಮಾಣದಲ್ಲಿ ಅನ್ನ ಪ್ರಸಾದ ಸಂತರ್ಪಣೆ ಜರುಗಿದವು. ಬೆಳಗಿನಲ್ಲಿಯೇ ಬಬಲೇಶ್ವರ ಶಾಂತವೀರ ಸ್ವಾಮಿಗಳವರು ಬಂದಿದ್ದರು. ಸಂಜೆಗೆ ಸಭೆಯಾಗಿ ಭಾಷಣಗಳಾದವು. ದಾನಿ ಗುಣಕಿ ಸಾಹುಕಾರ ಚೆನ್ನಗೌಡರನ್ನು ಸತ್ಕರಿಸಲಾಯಿತು. ಶ್ರೀ ಮೂ.ಜ.ಗಂ. ಮಹಾಸನ್ನಿಧಿಯವರು ಕಾರ್ಯಕರ್ತರನ್ನೆಲ್ಲ ಮಾಲೆ ಹಾಕಿ ಆಶೀರ್ವದಿಸಿದರು.

ಶ್ರೀ ಶಾಂತವೀರ ಅಪ್ಪನವರ ಕಾರಿನಲ್ಲಿ ಆ ತರುಣ ಸ್ವಾಮಿ ಬಂದಿದ್ದರು. ಅವರು ಶಾಂತವೀರಸ್ವಾಮಿಗಳ ೮೦ರ ವರ್ಧಂತಿ ಉತ್ಸವ ನೆರವೇರಿಸಬೇಕು, ಹಣ ಕೂಡಿಸಬೇಕು ಎಂಬ ವಾತಾವರಣ ನಿರ್ಮಿಸಲು ಯತ್ನಿಸುತ್ತಿದ್ದರು. ನನ್ನನ್ನು ತಮ್ಮ ಸಹಭಾಗಿ ಮಾಡಿಕೊಳ್ಳಲು ನನ್ನೊಂದಿಗೆ ಎರಡು ಸಾರೆ ಪ್ರಸ್ತಾಪಿಸಿದ್ದರು. ಈಗ ನಮ್ಮ ಗುರುಗಳ ಹತ್ತಿರವೇ ಸುಳಿದಾಡುತ್ತಿರುವದನ್ನು ಗಮನಿಸಿದ ಇಲಕಲ್ಲ ಶ್ರೀಗುರು ಮಹಂತ ಶಿವಯೋಗಿಗಳು ಅವನನ್ನು ನಂಬದಿರುವಂತೆ ಶ್ರೀ ಶಾಂತವೀರ ಸ್ವಾಮಿಗಳಿಗೆ ಸೂಚನೆ ತಲುಪಿಸಿದ್ದರು. ಅಂದೇ ರಾತ್ರಿ ಅಪ್ಪನವರು ಬಬಲೇಶ್ವರಕ್ಕೆ ಮರಳಿದರು.

ದಿ. ೨೬ ಊರ ಪ್ರಮುಖರು ನೆರೆದು ಶ್ರೀ ಮೂ.ಜ.ಗಂ. ಮಹಾಸ್ವಾಮಿಗಳನ್ನು ಉಳಿದ ಗಣ್ಯ ಚರಮೂರ್ತಿಗಳನ್ನು ಗೌರವಪೂರ್ವಕ ಬೀಳ್ಕೊಟ್ಟು ಕೃತಕೃತ್ಯರಾದರು.

* * * *

ದಿ. ೧-೧೦-೬೯ ಪ್ರಿನ್ಸಿಪಾಲ ಪ್ರೊ. ಎಸ್.ಎಸ್. ಕಬ್ಬಿನ ಅವರ ಕಡೆಗೆ ಹೋಗಿ ಅವರ ಮತ್ತು ಅಪ್ಪನವರ ಪರವಾಗಿರುವ ಲೇಖನಗಳನ್ನು ತಂದು ಡಾ|| ಮುದ್ದಣ್ಣ ಅವರಿಗೆ ತೋರಿಸಿ ಅವರಿಂದ ನಾಗಮ್ಮ ಕುರಿತ ಒಂದು ಕವನವನ್ನು ಪಡೆದುಕೊಂಡು ಬಂದೆನು. ಅವುಗಳನ್ನು, ನಾನು ಬರೆಯತಕ್ಕ ಪ್ರಾರಂಭಿಕ ಲೇಖನಗಳನ್ನೂ ರಾಯಚೂರಿಗೆ ಶಾಂತರಸರ ಕಡೆಗೆ ಕಳಿಸಿದೆನು.

ಶ್ರೀ ಶಾಂತರಸರು ವಿಜಯದಶಮಿ ಸಂದರ್ಭ ಉಪಯೋಗಿಸಿಕೊಂಡು ನನಗೆ ಬರೆದ ಪತ್ರ ಬಂದಿತು. ಅದರಲ್ಲಿ 'ನಾನೂ ಸ್ನೇಹಿತರೂ ಓದಿದೆವು ಶೈಲಿ ಚೆನ್ನಾಗಿದೆ ಅಚ್ಚಿಗೆ ಕೊಟ್ಟಿದ್ದೇವೆ. ಗ್ರಂಥದ ಹೆಸರು 'ಕ್ರಾಂತಿ ಗಂಗೋತ್ರಿ' ಎಂದಿಡಬೇಕೆಂದು ಯೋಚಿಸಿದ್ದೇವೆ. ನಿಮ್ಮ ಒಪ್ಪಿಗೆ ತಿಳಿಸಿರಿ' ಎಂದು ಬರೆದಿದ್ದರು ನಾಗಮ್ಮನ ಬದುಕಿಗೆ ಯೋಗ್ಯವಾಗಿರುವ ಒಳ್ಳೆಯ ಮೌಲಿಕ ಪದ 'ಕ್ರಾಂತಿ ಗಂಗೋತ್ರಿ' ತತ್‌ಕ್ಷಣ ಒಪ್ಪಿಗೆ ಸೂಚಿಸಿ ಪತ್ರ ಬರೆದೆನು. ಒಳಮುಖ ಪುಟದಲ್ಲಿ ಉಪನಾಮವಾಗಿ 'ಅಕ್ಕನಾಗಮ್ಮನವರ ಚರಿತ್ರೆ' ಎಂದು ಮುದ್ರಿಸಲು ಕೋರಿದ್ದೆನು.

೨೫–೧೦–೬೯ ಶ್ರೀ ಗುರುಗಳಿಂದ ಪತ್ರ ಬಂದಿತು ಶಾಂತರಸರ ಪತ್ರವನ್ನು ಜೊತೆಗಿಟ್ಟು ಕಳಿಸಿದ್ದಾರೆ. ಶಾಂತರಸರು ತಮ್ಮ ಮನೆಯವರು (ಶ್ರೀಮತಿ ಲಕ್ಷ್ಮೀ ದೇವಿಯವರು ಇವರೂ B.A. ಪದವೀಧರರು. ರಾಯಚೂರ ಗರ್ಲ್ಸ್ ಹಾಯಸ್ಕೂಲಿನ ಹೆಡ್ ಮಿಸ್ಟ್ರೆಸ್ ಆಗಿದ್ದರು) ಬಬಲೇಶ್ವರಕ್ಕೆ ಬರುವರೆಂದು ತಿಳಿಸಿದ್ದರು. ತಮ್ಮ ಪತ್ರದಲ್ಲಿ ಗುರುಗಳು ಶ್ರೀಮತಿ ಅವರು ತೊರವಿಗೂ ಬರ ಬಹುದೆಂದು ಬರೆದಿದ್ದರು. ಅವರು ೨೪ ರಂದು ಧಾರವಾಡ ಬಾನುಲಿಯಲ್ಲಿ 'ಜಾನಪದ ಸಾಹಿತ್ಯದಲ್ಲಿ ಹಾಸ್ಯ' ಎಂಬ ಉಪನ್ಯಾಸ ನೀಡಿದ್ದರು ಅಲ್ಲಿಂದ ಇತ್ತ ಹೊರಟಿರಬಹುದೆಂದು ತರ್ಕಿಸಿದೆನು.

ದಿ. ೨೭–೧೦–೬೯ ರಂದು ಶ್ರೀಮತಿ ಲಕ್ಷ್ಮೀದೇವಿಯವರಿಂದ ಪತ್ರವೇ ನನಗೆ ಬಬಲೇಶ್ವರದಿಂದ ಬಂದಿತು 'ತಾವು ತೊರವಿಗೆ ಬರಬೇಕೆಂದಿದ್ದರೂ ವೇಳೆ ಇಲ್ಲದ್ದರಿಂದ ಪರಭಾರೆ ಹೋಗಬೇಕಾಗಿದೆ. ಕ್ರಾಂತಿ ಗಂಗೋತ್ರಿ ಪುಸ್ತಕ ಪ್ರಕಾಶನ ಸಮಾರಂಭಕ್ಕೆ ಸಿರಿವಾರ (ಉಮಾಪತಿಯವರ ಗ್ರಾಮ)ಕ್ಕೆ ಅತಿ ಅಗತ್ಯವಾಗಿ ಬರಬೇಕು. ಅಲ್ಲಿಂದ ಆಮಂತ್ರಣ ಬರುತ್ತದೆ. ನಾನು ಎರಡು ಮೂರು ದಿನ ಗಳಲ್ಲಿ ಹೋಗುತ್ತೇನೆ' ಎಂದು ಸೋದರಿಯ ಕಕ್ಕುಲತೆಯಿಂದ ಬರೆದಿದ್ದರು.

ಅವರ ಭೆಟ್ಟಿಯೂ ಆಗುವದು ಗುರುಗಳ ದರ್ಶನವೂ ಆಗುವದೆಂದು ದಿ. ೨೮ ಮಂಗಳವಾರವೇ ಬಬಲೇಶ್ವರಕ್ಕೆ ಹೋದೆನು. ಆದರೆ ಅವರು ಅಂದು ಮುಂಜಾನೆಯೇ ಹೋಗಿದ್ದರು. ಅಪ್ಪನವರ ಹತ್ತಿರ ಶ್ರೀಮತಿ ಲಕ್ಷ್ಮೀಬಾಯಿ ಕುಮಟಗಿ ಅವರು ಗುರುಗಳು ಇಚ್ಛಿಸುವ ಪುಸ್ತಕಗಳನ್ನು ಬೇಗಿನಲ್ಲಿ ಓದುತ್ತಿರುವ ಕ್ರಮ ಕೈಕೊಂಡಿದ್ದರು. ನನ್ನಿಂದಾಗಿದ್ದ ಕೊರತೆಯನ್ನು ಅವರು ಭಕ್ತಿಯಿಂದ ಪೂರೈಸುತ್ತಿದ್ದುದನ್ನು ತಿಳಿದು ಸಂತೋಷಿಸಿ ಬಂದೆನು.

ದಿ. ೧ ಮತ್ತು ೨-೧೧-೬೯ ರಾಯಚೂರಿಗೆ ಹೋಗುವ ಸಿದ್ಧತೆ ಮಾಡಿಕೊಂಡೆ. ಆದರೆ 'ಕ್ರಾಂತಿ ಗಂಗೋತ್ರಿ' ಮುದ್ರಿಸುತ್ತಿರುವ ಮುದ್ರಣಾಲಯದ ನೌಕರರು ಮುಷ್ಕರ ಹೂಡಿದ್ದರಿಂದ ಅದರ ಮುದ್ರಣ ನಿಂತು ಹೋಗಿತ್ತು. ಅದನ್ನು ಡಾಕ್ಟರರಿಗೆ ಬರೆದ ಪತ್ರದಲ್ಲಿ ಶ್ರೀ ಉಮಾಪತಿಯವರು ತಿಳಿಸಿ 'ತಾಯಿಯ ಈ ವರ್ಷದ ಪುಣ್ಯತಿಥಿಗೆ ಪುಸ್ತಕ ಒದಗುವದಿಲ್ಲ ಮುಂದಿನ ವರ್ಷ ಮಾಡಿಸುವೆವು' ಎಂದು ಬರೆದಿದ್ದರು. ಡಾಕ್ಟರರು ಆ ಪತ್ರವನ್ನು ನನ್ನ ಕಡೆಗೆ ದಿ. ೩ ರಂದು ಕಳಿಸಿದರು.

ಅಂತು ಸದ್ಯಕ್ಕೆ ರಾಯಚೂರ ಪ್ರವಾಸ ನಿಂತಿತು. ಯಾವದಕ್ಕೂ ಅದರ ಸಮಯ ಬಾರದೇ ಅದು ಆಗದು.

ಪ್ರಪಂಚದ ಸೆಳೆತ

ಶ್ರೀ ಗುರುಗಳು (ಅಪ್ಪನವರು) ಮಾರ್ಚ ೧೫ ರಿಂದ ಮೂರು ವಾರ ಅಸ್ವಸ್ಥತೆಯಿಂದ ವಿಜಾಪುರ ಆಯುರ್ವೇದ ಆಸ್ಪತ್ರೆಯಲ್ಲಿ ಇದ್ದಾಗ ಹೋಗಿ ಬರುತ್ತಿದ್ದುದರ ಹೊರತಾಗಿ ೧೯೭೦ ನೆಯ ವರ್ಷದ ಮೊದಲಿನ ಒಂಬತ್ತು ತಿಂಗಳಲ್ಲಿ ಗುರುದರ್ಶನಕ್ಕೆಂದು ಹೋದುದು ನಾಲ್ಕು ಸಾರೆ ಮಾತ್ರ! ಉಳಿದವಧಿಯಲ್ಲಿ ಪ್ರಪಂಚದ ಬಲಾತ್ಕಾರಕ್ಕೆ ಸಿಲುಕಿದುದೇ ಹೆಚ್ಚು!

ಈ ಸೆಳೆತದ ಪರಿಸ್ಥಿತಿಯನ್ನು ಸ್ವಲ್ಪ ಹೇಳಲೇಬೇಕು. ಕತ್ತಲೆಯು ಗೊತ್ತಿಲ್ಲದಿದ್ದರೆ ಬೆಳಕಿಗೆ ಬೆಲೆಯಿಲ್ಲ! ಸಂಸಾರದ ಹೊಡೆತದ ಅನುಭವವಿಲ್ಲದಿದ್ದರೆ ಮುಮುಕ್ಷುತ್ವವಿಲ್ಲ. ಕೇಳಿರಿ ಈ ಎರಡು ಮಾತುಗಳನ್ನು!

'ತೋಟದಲ್ಲಿ ಹೌದು-ಕಾಲುವೆ ಕಟ್ಟಡಗಳು ಎರೆಹೊಲಗಳಲ್ಲಿ ಒಡ್ಡು ಫರಸಿ, ಹೌದು ಮೋರಿ ಸಾಂಡು ಕಟ್ಟಣೆ, ವಿಜಾಪುರ ಮನೆಯಲ್ಲಿ ಮಾಳಿಗೆಯ ಮೇಲೆ ಕೋಣೆ ರಚನೆ ಇವುಗಳಿಗಾಗಿ ತೊರವಿ ವಿಜಾಪುರ ತೋಟ ಎರೆಹೊಲಗಳಿಗಾಗಿ ತಿರುಗಿ ತಿರುಗಿ ಹೋಗುತ್ತಿರುವದು, ಶರೀರದ ಅಳವನ್ನು ಮೀರಿ ಜಡೆಮಳೆಗಾಳಿಯಲ್ಲಿ ಶ್ರಮವಹಿಸುವದರಿಂದ ನಾಲ್ಕಾರು ದಿವಸಕ್ಕೊಮ್ಮೆ ಅಸ್ವಸ್ಥನಾಗುವದು, ವೈದ್ಯರತ್ತ ಧಾವಿಸುವದು, ಆಪ್ತರಲ್ಲಿ ಮಿತ್ರರಲ್ಲಿ ಹಲವಾರು ಮದುವೆಗಳಲ್ಲಿ ಭಾಗವಹಿಸುವದು, ಹೊಸದಾಗಿ ತಾಯಿತನಕ್ಕೆ ಸಿದ್ಧರಾದವರನ್ನು ಕರೆ ಕರೆದು ಸತ್ಕರಿಸಲು ಯೋಜಿಸುವದು, ಮೊಮ್ಮಕ್ಕಳ ಪ್ರಾಥಮಿಕ ವಿದ್ಯಾಭ್ಯಾಸವನ್ನು ಗಮನಿಸುವದು.... ಅಬ್ಬಾ! ೬೭ ವರ್ಷವಾಗಿರುವಾಗಲೂ ಇವು ಬಿಡಲೊಲ್ಲವಲ್ಲ! ಬಿಡಲೊಲ್ಲೆನಲ್ಲ!! ಶಿವನ ಮಾಯೆಯ ಮಹಿಮೆ!!'

* * * *

ಶ್ರೇಯಾರ್ಪಣೆ

೨೯–೧–೭೦ ಗುರುವಾರ ಬಬಲೇಶ್ವರಕ್ಕೆ ಗುರುಗಳ ಅಡಿಗೆ ವಂದಿಸಿದೆ.

"ಯಾರು?"

"ನಾನು ಲಕ್ಕಪ್ಪನವರ ಅಪ್ಪಾ ಅವರೆ"

"ಓ ಸಾಹೇಬರು ಬರ್ರಿ ಈ ಖುರ್ಚಿಯ ಮೇಲೆ ಕೂಡ್ರಿ" ಕೈಗೆ ನಿಲುಕಿದ ಖುರ್ಚಿಯನ್ನು ತೋರಿಸಿದರು. ಅವರ ಕಾಟಿನ ಹತ್ತಿರ ಮೆಲ್ಗಡೆಗೆ ಒಂದು ಖುರ್ಚಿ, ಅವರ ಹತ್ತಿರ ಓದುವವರು ಕೂಡ್ರುವದಕ್ಕೆಂದು ಇಡಿಸಿದ್ದರು. ನಾನು ಕುಳಿತೆ. ಕುಶಲವಾರ್ತೆಯ ಅನಂತರ ಕಳೆದ ತಿಂಗಳು ಮಾಡಿದ ಬಂಥನಾಳ, ಅವರಾದಿ, ಬೊಮ್ಮನಳ್ಳಿ ಪ್ರವಾಸಗಳನ್ನು ತಿಳಿಸಿದೆ. ಅವರು ಕೇಳಿದ ಹೆಚ್ಚಿನ ಮಾಹಿತಿಯನ್ನು ವಿವರಿಸಿದೆ. ಬಳಿಕ 'ಬಸವರಾಜ ದೇವರು' ಗ್ರಂಥದ ವಿಮರ್ಶೆಯ ಪ್ರಸ್ತಾಪಿಸಿ 'ಅಪ್ಪಾ ಶಾಂತರಸರ, ಉಮರಾಣಿಯವರ ದೀರ್ಘ ವಿಮರ್ಶಾಪತ್ರಗಳನ್ನು ಆವಾಗಲೇ ಕೇಳಿದ್ದೀರಿ ಈಗ ಕರ್ಮವೀರದ ದಿ. ೯–೧೧–೬೯ ರ ಸಂಚಿಕೆಯಲ್ಲಿ ವಿಸ್ತೃತ ವಿಮರ್ಶೆ ಬಂದಿದೆ ಅದನ್ನು ತಂದಿದ್ದೇನೆ' ಎಂದೆ 'ಎಲ್ಲಿ ಓದಿರಿ' ಎಂದರು ಓದಹತ್ತಿದೆ. ಉದ್ಬೋಧಕ ವಾಕ್ಯಗಳು ಬಂದಲ್ಲಿ ಸಂತೋಷದ ಉದ್ಗಾರ ಅವರಿಂದ! ಅವರ ಹಸ್ತ ಬೆನ್ನ ಮೇಲೆ ಆಡುತ್ತಿತ್ತು. ಮುಗಿದಾಗ ಗುರುಗಳು "ನಿಮ್ಮ ಸಾಹಿತ್ಯ, ನಿಮ್ಮ ಹೆಸರು ಪ್ರಸಾರಗೊಳ್ಳಹತ್ತಿವೆ" ಎನಲು ನಾನು ಎದ್ದು ಮತ್ತೆ ವಂದಿಸಿ 'ಅಪ್ಪಾ ಇದು ಈ ಪಾದಗಳ ಆಶೀರ್ವಾದದಿಂದ ಆದುದು. ಪ್ರೇರಿಸಿದವರು, ಪ್ರೋತ್ಸಾಹಿಸಿದವರು, ಪೋಷಿಸಿದವರು ತಾವೇ ಅಲ್ಲವೇ?'.... ಶ್ರೇಯಾರ್ಪಣೆ ಮಾಡಿದೆ........

'ಕ್ರಾಂತಿ ಗಂಗೋತ್ರಿ' ಬಿಡುಗಡೆ ಸಮಾರಂಭ

ರಾಯಚೂರಿನಿಂದ ೮ ಮೈಲಿಗೆ, ಬಾಗಲಕೋಟೆ ಮಾರ್ಗದಲ್ಲಿ 'ಸಿರಿವಾರ' ದೊಡ್ಡ ಗ್ರಾಮ! ಅದು ಶ್ರೀ ಚುಕ್ಕಿ. ಎಸ್. ಉಮಾಪತಿಯವರ ಊರು. ಅಲ್ಲಿ ಅವರ ತಾಯಿ ಪುಣ್ಯೋದರಿ ಲಿಂ. ಶಿವಮ್ಮನವರ ಪುಣ್ಯತಿಥಿ ಸಮಾರಂಭ ದಿ. ೯–೧೧–೭೦ ರಂದು ನಡೆಯತಕ್ಕದ್ದು, ಅಂದು ಧಾರ್ಮಿಕ ಕಾರ್ಯ, ಅನ್ನ ಸಂತರ್ಪಣೆ ಅಲ್ಲದೆ ಅದಕ್ಕೆ ಹೊಂದಿ 'ಕ್ರಾಂತಿ ಗಂಗೋತ್ರಿ' ಪುಸ್ತಕದ ಬಿಡುಗಡೆ, ಕವಿ ಗೋಷ್ಠಿ, ಸಂಗೀತ ಕಚೇರಿಗಳು ಜರುಗಬೇಕಿದ್ದವು. ಗ್ರಂಥ ಬಿಡುಗಡೆ ಸಮಾರಂಭವು ಶ್ರೀ ಶರಣಬಸಪ್ಪ ಅಪ್ಪ M.A ಅವರ ಅಧ್ಯಕ್ಷತೆಯಲ್ಲಿ, ಶ್ರೀ ನಿ. ಪ್ರ ನಾರದಗಡ್ಡೆ

ಚೆನ್ನಬಸವೇಶ್ವರ ಶಿವಯೋಗಿಗಳ ಸನ್ನಿಧಿಯಲ್ಲಿ ನಡೆಯುವದು. ಕವಿಗೋಷ್ಠಿ ಅಧ್ಯಕ್ಷರು ಕವಿ ಸತ್ಯಾನಂದ (ಡಾ|| ಕೆ. ಮುದ್ದಣ್ಣ) ಅವರು. ಸಂಗೀತ ಕಚೇರಿ ಶ್ರೀ ಸಿದ್ಧರಾಮ ಜಂಬಲದಿನ್ನಿ ಅವರದು.

ಇದೆಲ್ಲ ನಮಗೆ ಶ್ರೀ ಶಾಂತರಸರ ಪತ್ರದಿಂದ ತಿಳಿದಿದ್ದವಷ್ಟೇ! ಕಾರ್ಯಕರ್ತರಿಂದ ಅಧಿಕೃತ ಆಮಂತ್ರಣ ಕಾರ್ಯಕ್ರಮ ಪಟ್ಟಿ ಕೊನೆಯವರೆಗೂ ಬರಲಿಲ್ಲ. ಅವರು ಡಾಕ್ಟರರಿಗೆ ಬರೆದ ಪತ್ರದಲ್ಲಿ ನನ್ನನ್ನು ಕರಕೊಂಡು ಬರಲು ತಿಳಿಸಿದ್ದರಂತೆ! ಡಾಕ್ಟರರು ೭–೧೧–೭೦ ಸಾಯಂಕಾಲ ೪ ಗಂಟೆಗೆ ವಿಜಾಪುರದಲ್ಲಿ ನಮ್ಮ ಮನೆ ಹುಡುಕಿಸಿ, ತಮ್ಮ ಕಾಗದದಿಂದ ತಿಳಿಸಿದ್ದರು. ಚಿ|| ಶಿವಶಂಕರನು ತೊರವಿಗೆ ಬಂದು ಅದನ್ನು ಕೊಟ್ಟನು.

ದಿ. ೮ ರಂದು ನಾನೂ ಈಶ್ವರನೂ ರಾಯಚೂರಿಗೆ ಹೊರಟು ಸಂಜೆ ತಲುಪಿ ಶಾಂತರಸರ ಮನೆ ಹುಡುಕಿಕೊಂಡು ಹೋದೆವು ದಂಪತಿಗಳು ಬಹಳ ಆದರದಿಂದ ಕಂಡು ಉಪಚರಿಸಿದರು. ಮರುದಿನ ಸಂಜೆ ೫ ಗಂಟೆಗೆ ಕರೆಯಬಂದ ಚುಕ್ಕಿಯವರ ಕಾರಿನಲ್ಲಿ ಶ್ರೀ ನಾರದಗಡ್ಡೆ ಶಿವಯೋಗಿಗಳೂ ಶಾಂತರಸರು ನಾವು ಸಿರಿವಾರಕ್ಕೆ ಹೋದೆವು ಶ್ರೀ ಉಮಾಪತಪ್ಪನವರು ಪ್ರೇಮದಿಂದ ಬರಮಾಡಿಕೊಂಡರು. ಡಾ|| ಕೆ. ಮುದ್ದಣ್ಣ ಅವರು ಶ್ರೀಗಳಾದ ವಜ್ರಮಟ್ಟಿ, ಶಂ. ಗು. ಬಿರಾದಾರ, ದಾನಪ್ಪ ಜತ್ತಿ ಈ ಮೂವರೊಡನೆ ಅಷ್ಟರಲ್ಲಿ ವಿಜಾಪುರದಿಂದ ಬಂದಿದ್ದರು.

ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಶ್ರೀ ವಜ್ರಮಟ್ಟಿ ಅವರು, ಶಾಂತರಸರು, ಶ್ರೀ ಶಿವಯೋಗಿಗಳು, ಡಾಕ್ಟರು ನಾಲ್ವರು ಗ್ರಂಥದ ಬಗೆಗೆ ಪ್ರಶಂಸಿಸಿ ಮಾತನಾಡಿದರು. ಅಧ್ಯಕ್ಷ ಶ್ರೀ ಶರಣಬಸಪ್ಪ ಅಪ್ಪ ಅವರು ತಮ್ಮ ಭಾಷಣದಲ್ಲಿ 'ನಾವು ಯಾವದೇ ಪುಸ್ತಕವನ್ನು ಆಗಷ್ಟು ಈಗಷ್ಟು ಓದಿ ಮುಗಿಸುತ್ತೇವೆ. ಆದರೆ ಈ ಪುಸ್ತಕ ಕೈಯಲ್ಲಿ ತಕ್ಕೊಂಡ ಮೇಲೆ ಮುಗಿಯುವವರೆಗೆ ಬಿಡಲಾಗಲಿಲ್ಲ' ಎಂದು ಶೈಲಿಯ ಗುಣವನ್ನು ಪರ್ಯಾಯವಾಗಿ ಪ್ರಕಟಿಸಿದರು ನನ್ನನ್ನು ಶಾಲು ಹೊದಿಸಿ ಸನ್ಮಾನಿಸಿ ೨೦೦ ರೂ ಸಂಭಾವನೆ ೧೦೦ ಪ್ರತಿಗಳನ್ನು ಕೊಡ ಮಾಡಿದರು. ಆ ಹಣವನ್ನು 'ಸತ್ಯಸ್ನೇಹಿ' ಗ್ರಂಥಮಾಲೆಗೆ ಕೊಡುಗೆಯಾಗಿ ಶಾಂತರಸರಿಗೆ ಸಲ್ಲಿಸಿದೆನು. ರಾತ್ರಿಯೇ ಮರಳಿ ರಾಯಚೂರಿಗೆ ಬಂದು ಮರುದಿನ ಶಾಂತರಸರಿಂದ ಬೀಳ್ಕೊಂಡು ವಿಜಾಪುರಕ್ಕೆ ಬಂದೆವು.

ಶ್ರೀ ಶಾಂತರಸರು ಮುಂತಾದವರ ಸಲಹೆಯಂತೆ ಶ್ರೀ ಚುಕ್ಕಿ ಅವರು ಮತ್ತೆ ನೂರು ಪ್ರತಿಗಳನ್ನು ನನಗೆ ವಿಜಾಪುರಕ್ಕೆ ತಂದುಕೊಟ್ಟರು.

* * * *

೧೨–೧೧–೭೦ ರಂದು ಬಬಲೇಶ್ವರಕ್ಕೆ ಹೋದೆ ಹೆಸರು ಹೇಳಿ ವಂದಿಸಿದೆ. 'ಅಪ್ಪಾ! ಹರಳೇಶ್ವರದ ಸಸಿ. ಎಲ್ಲಿ ಎಂಭತ್ತನಾಳ? ಎಲ್ಲಿ ಸಿರಿವಾರ ನಡುವೆ ಕೆ. ಮುದ್ದಣ್ಣ, ಶಾಂತರಸ, ಆ ಸಸಿ ನೆಟ್ಟು ಇಲ್ಲಿಂದಲ್ಲಿಯವರೆಗೆ ನೀವು ಬೆಳಸಿದ ಬಳ್ಳಿಯು ಅರಳಿದ 'ಹೂವಿದು' ಎಂದು ಕ್ರಾಂತಿ ಗಂಗೋತ್ರಿಯ ಪ್ರತಿಯನ್ನು ಅವರ ಕೈಯಲ್ಲಿರಿಸಿ ಪುನಃ ವಂದಿಸಿದೆ.

ಕೈ ಹಿಡಿದು ಖುರ್ಚಿಗೆ ಎಳೆದು 'ಕೂಡ್ರಿ ಯಾವಾಗ ಬಂದಿರಿ ರಾಯಚೂರಿನಿಂದ?'

"ಮೊನ್ನೆ ಬಂದೇವ್ರಿ ಈಶ್ವರನನ್ನು ಕರಕೊಂಡು ಹೋಗಿದ್ದೆ ನಿನ್ನೆ ದಣಿವಾರಿಸಿಕೊಂಡೆ."

"ಎಲ್ಲ ಸರಿ ಸಂತೋಷವೇ?" "ತಮ್ಮ ಸಕ್ರಿಯಾಶೀರ್ವಾದದ ಫಲ ತುಂಬ ಸಂತೋಷ ಸಂಭ್ರಮ" ಎಂದೆ. ಅವರ ಪುಣ್ಯ–ಪ್ರದ ಹಸ್ತ ಮೈದಡವಿತ್ತು.

ಪುಸ್ತಕ ಬಿಡುಗಡೆ ಸಮಾರಂಭದಲ್ಲಿಯ ಭಾಷಣಗಳಲ್ಲಿಯ ಮುಖ್ಯಾಂಶಗಳನ್ನಲ್ಲದೆ, ಉಮಾಪತಿಯವರ ಜನಪ್ರಿಯತೆ, ಶಾಂತರಸ ದಂಪತಿಗಳು ನಮಗೆ ತೋರಿದ ಪ್ರೇಮಾದರ, ಕಾರ್ಯದಲ್ಲಿ ಸಹಕಾರ ಇವನ್ನೆಲ್ಲ ವಿವರವಾಗಿ ವರ್ಣಿಸಿದೆ. ಅಂದು ಅಲ್ಲಿಯೇ ಶಿವಸಂಕಥಾವಿ ನೋದದಲ್ಲಿ ಉಳಿದು ಮರುದಿನ ಬಂದೆನು.

೨೪–೧೧–೭೦ ಮುಂಜಾನೆ ಶಿವಶಂಕರನು ಪೂಜ್ಯ ಜ.ಚ.ನಿ. ಮಹಾಸ್ವಾಮಿಗಳು ವಿಜಾಪುರಕ್ಕೆ ಬಂದಿರುವದನ್ನು ತಿಳಿಸಿದನು ಕೂಡಲೆ ವಿಜಾಪುರಕ್ಕೆ ಹೋಗಿ ಶ್ರೀ ಹಳ್ಳದ ಅವರ ಮನೆಯಲ್ಲಿ ದರ್ಶನಮಾಡಿ 'ಬಸವರಾಜ ದೇವರು' 'ಕ್ರಾಂತಿ ಗಂಗೋತ್ರಿ' ಪ್ರತಿಗಳನ್ನು ಅರ್ಪಿಸಿ ವಂದಿಸಿದೆನು.

ಮರುದಿನ ಗುರುಲಿಂಗಪ್ಪ ಚಿಕ್ಕಂಜಿ ಅವರಲ್ಲಿ ಶ್ರೀ ಜ.ಚ.ನಿ. ಸನ್ನಿಧಿಯವರ ಲಿಂಗಾರ್ಚನೆ ಇತ್ತು ಆಮಂತ್ರಣವಿತ್ತರು. ದಿ. ೨೫ ಅಲ್ಲಿಗೆ ಹೋದೆವು. ಪ್ರಸಾದ, ಅನುಭಾವಗಳ ಆನಂದ, ಶ್ರೀ ಸಂಗಪ್ಪ ಮನಗೂಳಿ ಅವರಿಂದ ಹೃದಯಂಗಮವಾಗಿ ಎಷ್ಟೋ ವಚನಗಳ ಪಠಣ ನಡೆಯಿತು. ಅವರ ನಿಷ್ಠೆ ಸಾಧನೆಗಳ ಬಗೆಗೆ ಆಶ್ಚರ್ಯವಾಯಿತು. ಅಂದು ಸಂಜೆಗೆ ಶಿವಾನುಭವ ಮಂಟಪದಲ್ಲಿ ಶ್ರೀ ಬಂಥನಾಳ ಶಿವಯೋಗಿ

ಗಳಿಂದ ಶ್ರೀ ಲಿಂಗಾನಂದ ಸ್ವಾಮಿಗಳ ಪ್ರವಚನ ಕಾರ್ಯಕ್ರಮ ಉದ್ಘಾಟನೆಯಾಯಿತು. ಶ್ರೀ ಜ.ಚ.ನಿ. ಸ್ವಾಮಿಗಳವರಿಂದ ಆಶೀರ್ವಚನ ಭಾಷಣವಾಯಿತು.

* * * *

ಹೊಲದಲ್ಲಿ ೧ ತಿಂಗಳಿದ್ದು ನಿತ್ಯ ಬೆಳಸಿ ತಿನ್ನಬೇಕು ಎಂಬ ಸಂಕಲ್ಪ ಕಾರ್ಯಗತವಾಗಿ ಭದ್ರವಾದ ಗುಡಿಸಲು ಸಿದ್ಧವಾಗಿತ್ತು. ದಿ. ೧೬–೧–೭೧ ರಂದು ಹೋಗಿ ನಿಂತೆನು. ಆ ಬೆಳೆಯು ಮರಗಿನಲ್ಲಿ ಲಿಂಗಾರ್ಚನೆ! ಆ ವಾಸದ ಸೊಗಸು ಸೊಬಗು ಎಷ್ಟೆಂದು ಹೇಳಬೇಕೇ?

ದಿ. ೧೮ರಂದು ಮೋಳಿಗೆ ಮಾರಯ್ಯ ಚರಿತ್ರೆ (ಮುಂದೆ ಹೆಸರು ಕಾಯಕವೀರ) ಬರೆವುದಕ್ಕೆ ಮುಹೂರ್ತ ಮಾಡಿದೆ.

ಬಂಥನಾಳ ಮಠದ ಶಿವರಾತ್ರಿಯ ಉತ್ಸವ ಕಾಲಕ್ಕೆ ಬರಬೇಕೆಂದು ನನಗೂ ಕೋರಿಯವರಿಗೂ ಶಿವಯೋಗಿಗಳಿಂದ ಆದೇಶ ಬಂದಿತ್ತು. ೨೭–೨–೭೧ರಂದು ಹೋದೆವು ಅನುಭವಮಂಟಪ ಪತ್ರಿಕೆ (ಮಾಸಿಕ) ಬಗೆಗೆ ಚರ್ಚೆಯಾಯಿತು. "ಸಂಪಾದಕರ ಮನೆಗೆ ಹೋಗಿ ಅವರ ಕಣ್ಣರಿಕೆಯಲ್ಲಿ ಸಹಕರಿಸಿ ಪತ್ರಿಕೆಯ ಕೆಲಸ ಮಾಡಲು ಶಿವಯೋಗಿಗಳು ಸೂಚಿಸಿದರು."

'೬೮ರ ವಯಸ್ಸು, ಅನಾರೋಗ್ಯ, ದೂರದ ಮನೆ, ಹೋದಾಗ ಅವರು ಮನೆಯಲ್ಲಿ ಇರಬೇಕು. ಇದ್ದರೂ ಅವಕಾಶ ಇರಬೇಕು. ಇದು ನನಗೆ ಸಾಧ್ಯವಾಗುವದು ಹೇಗೆ?' ಎಂದು ವಿನಯಪೂರ್ವಕವಾಗಿ ಸಕಾರಣವಾಗಿ ನೀಗದೆಂದು ಅರಿಕೆ ಮಾಡಿದೆನು. 'ಬೇರೆ ವಿಚಾರ ಮಾಡೋಣ' ಎಂದರು ಶಿವಯೋಗಿಗಳು. ಅಪ್ಪಣೆ ಪಡೆದೆವು.

೨೪–೩–೭೧ ಗುರುಗಳ ದರ್ಶನಕ್ಕಾಗಿ ಬಬಲೇಶ್ವರಕ್ಕೆ ಹೋದೆನು. ದರ್ಶನ ಪಡೆದು ವಂದಿಸಿದೆನು. ಕುಶಲ ವಾರ್ತೆಗಳ ಬಳಿಕ 'ಕಲ್ಯಾಣಕಿರಣ' ಮಾಸಿಕದಲ್ಲಿ ಕ್ರಾಂತಿ ಗಂಗೋತ್ರಿಯ ವಿಮರ್ಶೆ ಬಂದಿದೆ. ತಂದಿದ್ದೇನೆ ಅಪ್ಪಾ ಎಂದೆ 'ಬಂದದs ಇಲ್ಲಿ ಕುಳಿತು ಓದಿರಿ' ಎಂದರು. ಹತ್ತಿರದ ಖುರ್ಚಿಯ ಮೇಲೆ ಕುಳಿತು ಓದಿದೆ. ಬಹಳ ಚೆನ್ನಾಗಿದೆ ಎಂದರು. ಈ ಶ್ರೇಯಸ್ಸು ಈ ಪಾದಕ್ಕೆ ಎಂದು ವಂದಿಸಿದೆ. ಬಳಿಕ ಮೋಳಿಗೆಯ ಮಾರಯ್ಯನ ಪ್ರಸ್ತಾಪಮಾಡಿ 'ಅಪ್ಪಾ' ಆತನನ್ನು ಕುರಿತು ಬರೆಯಹತ್ತಿದ್ದೇನೆ. ಹೊಲದಲ್ಲಿದ್ದೇ ಆರಂಭಿಸಿದೆ. ಅರ್ಧದಷ್ಟು ಆಗಿದೆ ಎನ್ನುತ್ತಿರಲು ಮತ್ತೆ ಅವರು ಹಸ್ತ ಬೆನ್ನಮೇಲೆ 'ಭಲಾ ತಂದಿದ್ದೀರಾ?' ಎಂದರು. ಹೌದು

ತಂದಿದ್ದೇನೆ ಪ್ರಥಮ ವಾಚನ ಇಲ್ಲಿಯೇ ಆಗಬೇಕಲ್ಲರೀ, ಎನಲು ನಗುತ್ತ 'ಓದಿರಿ' ಎಂದರು. ಓದಹತ್ತಿದೆ.

ಭಾವಾವೇಶದ ಸನ್ನಿವೇಶವಿದ್ದಲೆಲ್ಲ ಗುರುಗಳು ಭಾವ ಪೂರಿತರಾಗಿಯೇ ಇರುತ್ತಿದ್ದರು. ಕಾಶ್ಮೀರದ ಮಹಾದೇವ ಭೂಪಾಲ ರಾಜ್ಯ ತ್ಯಾಗ ಮಾಡಿ ರಾಣಿ ಗಂಗಾದೇವಿಯೊಡನೆ ಕಲ್ಯಾಣಕ್ಕೆ ಹೊರಟಿದ್ದಾನೆ. ನಡೆಯುತ್ತ ಬರುತ್ತಿದ್ದಾರೆ. ಆಗ ಅವರು ಮೋಳಿಗೆಯ ಮಾರಯ್ಯ ಮಹಾದೇವಿ ಎಂಬುದಾಗಿ ಹೆಸರು ಪಡೆದಿದ್ದಾರೆ. ಕಟ್ಟಿಗೆ ಕಾಯಕ ಮಾಡುತ್ತ ಮಡಿಕೆಯಲ್ಲಿ ಅಡಿಗೆ ಮಾಡುತ್ತ, ಲಿಂಗಪ್ರಸಾದ ಸೇವಿಸುತ್ತ ಪ್ರಯಾಣಿಸುತ್ತಿದ್ದಾರೆ. ಈ ಸಮಾಚಾರ ಮಹಮನೆಗೆ ತಿಳಿದಿತ್ತು. ಬಸವಣ್ಣ ಅವರನ್ನು ಸತ್ಕಾರ ಪೂರ್ವಕ ಸ್ವಾಗತಿಸಿ ಕರಕೊಂಡು ಬರಲು ಶರಣ ಸಂದೋಹದೊಡನೆ ಸಂಭ್ರಮದಿಂದ ಹೊರಟಿದ್ದಾನೆ. ಈ ಸತ್ಕಾರದಿಂದ ತಪ್ಪಿಸಿ ಕೊಳ್ಳಲು ಮಾರಯ್ಯ ದಂಪತಿಗಳು ತಡವರಿಸುತ್ತಿರುವ ಸಂದರ್ಭದ ಸನ್ನಿವೇಶ! ವರ್ಣನೆ ಹಂತ ಹಂತವಾಗಿ ಭಾವಾವೇಶಕ್ಕೆ ಏರುತ್ತ ಬಂದು, 'ಬಸವಣ್ಣ ಗಂಗಾಂಬಿಕೆಯರು ಆ ಇಬ್ಬರು ದಂಪತಿಗಳ ಪಾದ ತೊಳೆದು ಹೂವಿಟ್ಟು ಆರತಿ ಬೆಳಗಿದರು' ಎಂಬ ವಾಕ್ಯ ಓದುವಾಗ ಅಪ್ಪನವರು 'ಅವ ಪಾದ ಕೊಟ್ಟಿರಲಿಕ್ಕಿಲ್ಲ, ಬಸವಣ್ಣ ಬಿಟ್ಟಿರಲಿಕ್ಕಿಲ್ಲ, ಕೊಸರ್ಯಾಟವಾಗಿರಬಹುದು' ಎಂದು ಗಹಗಹಿಸಿ ನಕ್ಕು ನುಡಿದರು. ಕುಳಿತವರೂ ನಕ್ಕರು. ತುದಿ ಬರಹದಲ್ಲಿಯ ಕೊಂಚ ಕೊರತೆ ನನಗೆ ಹೊಳೆಯಿತು ಅಪ್ಪನವರ ಉದ್ಗಾರದ ಭಾವವನ್ನು ಅಲ್ಲಿ ಅಳವಡಿಸಿ ಮುಂದೆ ತಿದ್ದಿಕೊಂಡೆನು. ಓದು ಮುಗಿದಾಗ ರಾಜರಾಣಿಯರ ಅದ್ಭುತ ತ್ಯಾಗವನ್ನೂ ಕಠೋರ ಕಾಯಕ ನಿಷ್ಠೆಯನ್ನೂ ಶ್ರೀ ಗುರುಗಳು ಮನದಲ್ಲಿ ನೆನೆಸುತ್ತಲೇ ಇದ್ದರು. ಬೇಗಿನ ಹೊತ್ತಿನಲ್ಲಿ ಉಳಿದಷ್ಟು ಬರೆಹ ಓದಿ ಮುಗಿಸಲಾಯಿತು.

ಮರುದಿನ ಮುಂಜಾನೆ 'ಅನುಭವಮಂಟಪ' ಮಾಸಿಕ ನಡಿಸುವ ವಿಷಯದಲ್ಲಿ ಬಂಥನಾಳ ಶಿವಯೋಗಿಗಳ ಸಲಹೆ, ಚರ್ಚೆ ಮುಂತಾದವನ್ನು ಅರಿಕೆ ಮಾಡಿದೆನು. 'ಸ್ವಾತಂತ್ರ್ಯವಿಲ್ಲದೆ ಈ ಮಾನಸಿಕ ಕಾರ್ಯ ಈ ವಯಸ್ಸಿನಲ್ಲಿ ನಿಮ್ಮ ಮೆದುಳಿಗೆ ತ್ರಾಸವಾದೀತು!' ಎಂದರಷ್ಟೇ!

ಅನುಭವಮಂಟಪ ಸಂಪಾದಕತ್ವ

ಮುಂದೆ ಹತ್ತೆಂಟು ದಿವಸಗಳ ಬಳಿಕ ಶ್ರೀ ಕೋರಿಯವರು 'ಅನುಭವ ಮಂಟಪ' ಸಂಪಾದಕನ ಕಾರ್ಯದ ಎಲ್ಲ ಕಾಗದಗಳನ್ನೂ ಲೇಖನಗಳ ಸುರಳಿ

ಯನ್ನೂ ಹಾಕಿದ ಚೀಲವನ್ನು ತಕ್ಕೊಂಡು ಬಂದರು. ಪೂರ್ಣವಾಗಿ ನಾನೇ ವಹಿಸಿಕೊಂಡು ಮಾಡಬೇಕೆಂಬ ಶ್ರೀ ಶಿವಯೋಗಿಗಳ ಆದೇಶವನ್ನೂ ತಂದಿದ್ದರು. ಶಿವಯೋಗಿಗಳ ಅಪ್ಪಣೆ! ವಹಿಸಿಕೊಂಡೆ. ಬಬಲೇಶ್ವರಕ್ಕೆ ಪತ್ರ ಬರೆದು ಗುರುಗಳಿಗೆ ತಿಳಿಸಿದೆನು. ಎರಡು ತಿಂಗಳದಷ್ಟು ಕೆಲಸ ಹಿಂದುಳಿದಿತ್ತು. ಮಾರ್ಚ ಎಪ್ರಿಲ್ ತಿಂಗಳಗಳ ಸಂಯುಕ್ತ ಸಂಚಿಕೆಯನ್ನು ಮೇ ೧ ಕ್ಕೆ ಮೇ ಜೂನ ಸಂಯುಕ್ತ ಸಂಚಿಕೆಯನ್ನು ಜೂನ ೧ ಕ್ಕೆ ಒದಗಿಸುವ ಸಂಕಲ್ಪ ಮಾಡಿ ಗುರುಗಳ ಆಶೀರ್ವಾದದ ಬಲವನ್ನು ನಂಬಿ ಕಾರ್ಯಕ್ರಮ ಹಮ್ಮಿಕೊಂಡೆ. ರಾತ್ರಿ ಹಗಲು ಕೂಡಿ ಬಿದ್ದ ಲೇಖನಗಳನ್ನು ಓದುವದು ಪರಿಶೀಲಿಸುವದು ಸರಿಪಡಿಸುವದು ಮತ್ತೆ ಕೆಲವು ಬರೆಯುವದು. ಶಿವಯೋಗಿಗಳ ಪ್ರಸಾದವಾಣಿ ಸಹಿತ ಇವೆಲ್ಲವನ್ನು ಅಚ್ಚಿಗೆ ಕೊಟ್ಟು ಮಾರ್ಚ ಎಪ್ರಿಲ್ ಸಂಯುಕ್ತ ಸಂಚಿಕೆಯನ್ನು ಮೇ ೧ ರಂದು ಮುಖ ಪುಟದಲ್ಲಿ ಬಸವಣ್ಣನ ಭಾವಚಿತ್ರ ಹಾಕಿ ಬಸವ ಜಯಂತಿ ಸಂಚಿಕೆಯೆಂದೇ ಹೊರತರಲಾಯಿತು. ಗುರುಬಸವರ ಕೃಪೆಯಿಂದ ಮೈಮನ ಹಗುರಾಯಿತು.

ಶ್ರೀಗುರು ಸನ್ನಿಧಿಯ ದಿ. ೫–೫–೭೧ರ ಪತ್ರ ತಲುಪಿತು. ಅದರ ಮುಖ್ಯಾಂಶವಿದು. ....ಆಶೀರ್ವಾದಗಳು....ನನ್ನ ಪ್ರಕೃತಿ ಸಾಧಾರಣ ಮಟ್ಟಿಗೆ ಗುಣವಿದೆ. ನಿಮ್ಮದನ್ನು ತಿಳಿಸಬೇಕು. ಅನುಭವಮಂಟಪ ಪತ್ರಿಕೆಯ ಎಲ್ಲ ಕಾರ್ಯವನ್ನು ನೀವೇ ವಹಿಸಿಕೊಂಡದ್ದು ವಾರ್ಧಕ್ಯದ ಜೀವನಕ್ಕೆ ಭಾರವಾದರೂ ನಿಮ್ಮ ಶೀಲ ಸ್ವಭಾವಕ್ಕೆ ಹೊಂದಿಕೆಯಾಗುವ ಈ ಧಾರ್ಮಿಕ ಪತ್ರಿಕೆಯನ್ನು ವಹಿಸಿಕೊಂಡದ್ದು ನನಗೆ ಬಹಳ ಸಂತೋಷವಾಗಿದೆ. ಶರಣ ಸಂಪ್ರದಾಯದಲ್ಲಿ ನಿಮ್ಮ ಸಾಹಸ ಇಮ್ಮಡಿ ಮುಮ್ಮಡಿಯಾಗಿ ಬೆಳೆಯಲೆಂದು ಅಪೇಕ್ಷಿಸುತ್ತೇವೆ.... ಆಶೀರ್ವಾದಗಳು.

೨೮–೯–೭೧ ವಿಜಯದಶಮಿ ಅನುಭವಮಂಟಪ ಸಂಚಿಕೆ ಹೊರಹಾಕುವ ಸಲುವಾಗಿ ಕೆಲಸದ ಒತ್ತಡ! ಚಿ! ಈಶ್ವರನೇ ಬಬಲೇಶ್ವರಕ್ಕೆ ಹೋಗಿ ಗುರು ಸಾನ್ನಿಧ್ಯಕ್ಕೆ ಎಲ್ಲರ ಪ್ರಣಾಮ ಸಲ್ಲಿಸಿ ಎಲ್ಲರಿಗೂ ಆಶೀರ್ವಾದ ತಂದನು. **ಗುರುಗಳು ಈಗ ಹೊರಗಿನ ಮಠದಿಂದ ಊರೊಳಗಿನ ಮಠಕ್ಕೆ ಬಂದಿದ್ದಾರೆ.**

ಕಾಯಕ ವೀರ

ಬರೆಹದೊಡನೆ ಬರೆಹ! ಮೋಳಿಗೆಯ ಮಾರಯ್ಯ ಚರಿತ್ರೆ ಮುಂದಿನ ಭಾಗ ಬರೆದು ಪೂರ್ಣವಾಗಿತ್ತು. ಪ್ರಥಮ ವಾಚನ ಗುರು ಸನ್ನಿಧಿಯಲ್ಲಿ. ದಿ. ೬-೧೧-೭೧

ಬಬಲೇಶ್ವರಕ್ಕೆ ಹೋಗಿ ದರ್ಶನ ಪಡೆದು ಅಂದು ಪೂರ್ಣವಾಗಿ ಓದಿವೆ. ಎಂದಿನಂತೆ ಸಂತೋಷಿಸಿ ಪ್ರೋತ್ಸಾಹನೆಯ ಹಸ್ತದಿಂದ ಆಶೀರ್ವಾದ ಮಾಡಿದರು. ಈ ಗ್ರಂಥಕ್ಕೆ 'ಕಾಯಕ ವೀರ' ಎಂದು ಹೆಸರಿಡುವ ನಿರ್ಣಯವಾಯಿತು. ಬಳಿಕ ಅನುಭವಮಂಟಪ ಪತ್ರಿಕೆಯ ಕಾರ್ಯ ಚರ್ಚೆಯಾಯಿತು. ಒಳ್ಳೆಯ ಲೇಖನಗಳು ಬರುತ್ತಿಲ್ಲ. ಮತ್ತೆ ಮತ್ತೆ ನಾವೇ ನಾಲ್ಕಾರು ಮಂದಿ ಬರೆಯುತ್ತಿದ್ದೇವೆ. ಬಾಹ್ಯಾಕರ್ಷಣೆಗೂ ಹಣ ದೊರೆಯುವದಿಲ್ಲ. ಚಂದಾದಾರರ ಸಂಖ್ಯೆ ಸಾಕಷ್ಟಿಲ್ಲ ಎಂದೆ.

ಜಿಲ್ಲಾ ಸಾಹಿತ್ಯ ಸಮ್ಮೇಲನ

ಕನ್ನಡ ಸಾಹಿತ್ಯ ಪರಿಷತ್ತಿನ ವಿಜಾಪುರ ಜಿಲ್ಲಾ ಶಾಖೆಯ ಅಧ್ಯಕ್ಷರು ಮಾನ್ಯಶ್ರೀ ಪ್ರೊ. ಸಂಗಮನಾಥ ಹಂಡಿ M.A. ಅವರು ಇದ್ದರು. ಇವರು ತಮ್ಮ ಸಾಹಿತಿ ಸಹೋದ್ಯೋಗಿಗಳೊಡಗೂಡಿ ವಿಜಾಪುರ ಜಿಲ್ಲಾ ಸಾಹಿತ್ಯ ಸಮ್ಮೇಲನವನ್ನು ವಿವಿಧ ಅಂಗ ಗೋಷ್ಠಿಗಳೊಡನೆ ಜರುಗಿಸಲು ಹಮ್ಮಿಕೊಂಡರು ಅದು ಡಿಸೆಂಬರ ಮೊದಲಭಾಗದಲ್ಲಿ ನಡೆಯತಕ್ಕದ್ದಿತ್ತು.

ಅದರ ಸ್ಮರಣ ಸಂಚಿಕೆಗಾಗಿ 'ವಿಜಾಪುರ ಜಿಲ್ಲೆಯ ಪವಿತ್ರಕ್ಷೇತ್ರಗಳು' ಕುರಿತು ಸಂಗ್ರಹ ಲೇಖನ ಬರೆಯಲು ನನಗೆ ಒಪ್ಪಿಸಿದರು. ಗುರು ಕರುಣೆಯ ಬಲದಿಂದ ಒಪ್ಪಿಕೊಂಡೆನು. ಮಾಹಿತಿಯನ್ನು ಪತ್ರಿಕೆಗಳಲ್ಲಿ, ಗ್ರಂಥಗಳಲ್ಲಿ, ಪಠ್ಯ ಪುಸ್ತಕಗಳಲ್ಲಿ, ಸಾಧ್ಯವಾದಷ್ಟು ಆಯಾ ಸ್ಥಳದ ಜನರ ಭೆಟ್ಟಿಯಲ್ಲಿ ಸಂಗ್ರಹಿಸಬೇಕಾಯಿತು. ಸಂಗ್ರಹಿಸಿ ಬರೆದೆನು. ಅದರ ನಂತರ 'ವಿಜಾಪುರ ಜಿಲ್ಲೆಯ ಶಿವಶರಣರು' ಎಂಬುದಾಗಿ ಅದರಂತೆ ಬರೆಯಲು ಕೋರಿದರು ಆಗಲಿ ಎಂದೆ. ಗುರುಗಳ ಕರುಣೆಯ ಹಸ್ತ ಬೆನ್ನ ಮೇಲೆ ಇದ್ದುದನ್ನು ಸ್ಮರಿಸಿ, ಹಗಲಿರುಳು (ನಮ್ಮ ಪತ್ರಿಕೆಯ ಕೆಲಸದೊಡನೆ ಶ್ರಮಿಸಿ) ಬರೆದೆನು. ಎರಡೂ ಒಪ್ಪಿಗೆಯಾದವು.

ಶ್ರೀ ಪ್ರೊ. ಸ. ಸ. ಮಾಳವಾಡ ಸಮ್ಮೇಲನಾಧ್ಯಕ್ಷರು. ಪೂಜ್ಯ ಬಂಥನಾಳ ಶಿವಯೋಗಿಗಳು ಉದ್ಘಾಟಕರು. ಶ್ರೀ ಸಿದ್ಧೇಶ್ವರ ಸ್ವಾಮೀಜಿ ಸ್ವಾಗತಾಧ್ಯಕ್ಷರು. ನಿಯಾಮಕರಾಗಿದ್ದರು. ಶ್ರೀ ಸಿದ್ಧೇಶ್ವರ ಸ್ವಾಮೀಜಿ ಅವರಿಗೆ ಈ ಜಿಲ್ಲೆಯ ಅಂದಿಂದಿನ ಸಾಹಿತ್ಯ ಸೇವಕರ ಪರಿಚಯ ಒದಗಿಸುವದು ನನ್ನ ಪಾಲಿಗೆ ಬಂದಿತ್ತು. ಆರೋಗ್ಯ ಚೆನ್ನಾಗಿತ್ತು. ಸಂತೋಷದ ಆ ಕಾರ್ಯವನ್ನೂ ಶ್ರೀ ಗುರು ಕೃಪೆಯಿಂದ ಮಾಡಿದ್ದೆನು. ಸಮ್ಮೇಲನದ ಸಿದ್ಧತೆ ಅದ್ದೂರಿಯಿಂದ ನಡೆದಿತ್ತು.

ಆದರೆ ಭಾರತ ಪಾಕಿಸ್ತಾನ ಸಮರ ಸಂದರ್ಭದಿಂದ ಸಮ್ಮೇಲನ ಮುಂದೂಡಲ್ಪಟ್ಟಿತು. ಬೇಗನೆ ಸಮರ ಅಂತ್ಯಗೊಂಡದ್ದರಿಂದ ಸಮ್ಮೇಲನವನ್ನು ೧೯೭೨ರ ಜನವರಿ ೨೪, ೨೫ ಮತ್ತು ೨೬ ಈ ಮೂರು ದಿನಗಳಲ್ಲಿ ನಡೆಯುವಂತೆ ನಿರ್ಣಯಿಸಿ ಪ್ರಕಟಿಸಿದರು. ಕಾರ್ಯಕರ್ತರಿಗೆ ಮತ್ತಿಷ್ಟು ಅವಕಾಶ ದೊರೆಯಿತು ಸರ್ವಸಿದ್ಧತೆಗೆ ಅನುಕೂಲವಾಯಿತು.

ಸ್ಮರಣ ಸಂಚಿಕೆ 'ಪಂಚಗಂಗಾ' ವಿವಿಧ ಬಗೆಯ ವಿದ್ವಾಂಸರ ಲೇಖನ ಗಳನ್ನೊಳಗೊಂಡು ಸಿದ್ಧವಾಗಿತ್ತು ನಮ್ಮ ಶ್ರೀ ಶಿವಯೋಗಿಶ್ವರ ಮುದ್ರಣಾಲಯದಲ್ಲಿ ಮುದ್ರಣಗೊಂಡ ಅದರ ಭಾಗದ ಕರಡು ನೋಡುವ ಕಾರ್ಯ ನನ್ನ ಪಾಲಿಗೆ ಇತ್ತು. ನಮ್ಮ ಮಾಸಿಕದ ಕಾರ್ಯದೊಡನೆ ಅದನ್ನೂ ಮಾಡಿದೆ.

ಪ್ರೊ. ಶ್ರೀ ಸಂಗಮನಾಥ ಹಂಡಿ ಮತ್ತು ಸಹಕಾರಿಗಳ ಶ್ರಮ ಮತ್ತು ಕೌಶಲ್ಯಯುತ ಪ್ರಯತ್ನಗಳಿಂದ ಸಾಹಿತ್ಯ ಸಮ್ಮೇಲನವು ವಿಜಾಪುರ ಜಿಲ್ಲೆಗೆ ಅಪೂರ್ವವೆನಿಸಿ ಜರುಗಿತು. ಸಾಹಿತ್ಯಗೋಷ್ಠಿ, ಮಹಿಳಾಗೋಷ್ಠಿ, ಕವಿಗೋಷ್ಠಿ, ಶೈಕ್ಷಣಿಕವಿಚಾರಗೋಷ್ಠಿ, ವಿನೋದಗೋಷ್ಠಿ ಬಯಲರಂಗ ಸಭೆ ಇವೆಲ್ಲವು ಭವ್ಯವಾದ ಮಂಟಪದಲ್ಲಿ ಸುಂದರವಾಗಿ ಮನೋರಂಜಕವಾಗಿ ಸಾಂಗವಾದವು. ಈ ಜಿಲ್ಲೆಯ ೧೪ ಜನ ಸಾಹಿತಿಗಳನ್ನು ಕನ್ನಡ ಸರಸತಿಯ ಪೀಠದ ಮುಂದೆ ಕರೆದು ಆ ದೇವಿಯ ವಿಶೇಷ ಪ್ರಸಾದದಿಂದ ಸನ್ಮಾನಿಸಲಾಯಿತು. ಅವರಲ್ಲಿ ನಾನೂ ಒಬ್ಬನಾಗಿದ್ದೆನು. ನನ್ನ ಸಂಬಂಧದ ಪರಿಚಯ ಲೇಖನವನ್ನು ಶ್ರೀ ಶಾಂತರಸರು ಬರೆದು ಕಳಿಸಿದ್ದರು. ಅದನ್ನು ಅವರ ಧರ್ಮಪತ್ನಿ ಶ್ರೀಮತಿ ಲಕ್ಷ್ಮೀದೇವಿ ಶಾಂತರಸರು ಸಭೆಯಲ್ಲಿ ಓದಿ ದರು. ಪರಮ ಪೂಜ್ಯ ಜ.ಚ.ನಿ. ಮಹಾಸನ್ನಿಧಿಯವರ ಅಮರ ಹಸ್ತದಿಂದ ನಾನು ಫಲಪುಷ್ಪ, ಶಾಲುಗಳಿಂದ ಸನ್ಮಾನಿತನಾಗುವಾಗ, ಗೌರವಯುತವಾಗಿ ವೇದಿಕೆಯ ಮೇಲಿದ್ದು ಇದನ್ನು ನೋಡಿ ಅಕ್ಕರೆ ಪಡೆಯುವದಕ್ಕೆ ನನ್ನ ಗುರುಗಳ ದೇಹಸ್ಥಿತಿ ಅನುಕೂಲವಿಲ್ಲದಿರುವದರಿಂದ ನನ್ನ ಮನಸ್ಸಿನ ಒಂದು ಮೂಲೆಯಲ್ಲಿ ಕಳವಳವೆದ್ದಿತ್ತು. ಹಾಗೆಯೇ ಶ್ರೀ ಬಂಥನಾಳ ಶಿವಯೋಗಿಗಳನ್ನು ಕುರಿತೂ.........

೨೮–೧–೭೨ ರಂದು ಗುರು ಸನ್ನಿಧಾನ ದರ್ಶನಕ್ಕಾಗಿ ಬಬಲೇಶ್ವರಕ್ಕೆ ಹೋದೆನು ಗುರುಪಾದಕ್ಕೆ ವಂದಿಸಿದೆ. ನನ್ನ ತೋಳು ಹಿಡಿದು ಖುರ್ಚಿಯತ್ತ ಸೆಳೆದು ಕೂಡ್ರ ಹೇಳಿದರು. ಸಮ್ಮೇಲನ ಕಾರ್ಯಕಲಾಪ ಅಷ್ಟಷ್ಟು ಕೇಳುತ್ತ ಬಂದಿದ್ದರು. ಆಮೂಲಾಗ್ರವಾಗಿ ಎಲ್ಲವನ್ನೂ ವಿವರಿಸಿ ತಮ್ಮ ಆಶೀರ್ವಾದದಿಂದ

ನನಗಾದ ಪುರಸ್ಕಾರದ ಶ್ರೇಯಸ್ಸನ್ನು ಶ್ರೀಪಾದಕ್ಕೆ ಅರ್ಪಿಸುವೆ ಎಂದು ವಂದಿಸಿದೆ.

ಹಾಗೆ ವಂದಿಸಿದ ಕೂಡಲೆ "ಅಲ್ಲರಿ ಸಾಹೇಬರ ನಿಮ್ಮ ಸಾಹಿತ್ಯ ರಚನೆಗೆ ಪ್ರಶಂಸೆ ಪುರಸ್ಕಾರ ಬಂದಾಗಲೆಲ್ಲ ನಿಮ್ಮ ಆಶೀರ್ವಾದದಿಂದಲೇ ಎನ್ನುತ್ತೀರಿ, ನಿಮ್ಮದೇನೂ ಇಲ್ಲವೇನು?"

"ನನ್ನದೇಕಿಲ್ಲ, ನನ್ನದೂ ಇದೆ ಅಪ್ಪಾ ಅವರ! ಹಗ್ಗ ಹಿಡಿದು ಮೇಲೆ ಕೂತವ ಈ ಕಡೆ ಜಗ್ಗಿದರೆ ಈ ಕಡೆಗೆ ತಿರುಗುವದು ಆ ಕಡೆ ಜಗ್ಗಿದರೆ ಆ ಕಡೆ ತಿರುಗುವದು 'ಭಲೆ ಬಸವ' ಎಂದು ಡುಬ್ಬ ಥಪ್ಪರಿಸಿದರೆ ಓಡುವದು, ಗಾಡಿ ಎಳೆಯುವದು ಇದು ನನ್ನದೂ ಇದೆ ಇದರಾಗ" ಎಂದೆ. ಮಾತಿನ ಆರಂಭ ವಿನೋದಾಂಶವಾಗಿದ್ದರೂ ಮುಗಿದಾಗ ವಸ್ತುನಿಷ್ಠ ಪರಿಪೂರ್ಣವೇ ಆಗಿತ್ತು! ಅದೆಂತಹ ಆನಂದ! ಆಗ ಗುರುಗಳ ಮುಖದಲ್ಲಿ ಒಂದು ಅಪೂರ್ವ ತೇಜಸ್ಸು ಮೂಡಿತ್ತು ನೋಡಿ ಧನ್ಯನಾದೆ. ಒಂದು ಕ್ಷಣ ಮೌನವಾಗಿ ಕಳೆಯಿತು ಬಳಿಕ 'ಸ್ಮರಣ ಸಂಚಿಕೆ ಪೂರ್ಣ ಸಿದ್ಧವಾಗಿರಲಿಲ್ಲ ಸಾಂಕೇತಿಕವಾಗಿ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಬಿಡುಗಡೆ ಮಾಡಿದರು. ಅಷ್ಟೇ! ಪೂರ್ಣ ಸಿದ್ಧವಾಗಿ ನನ್ನ ಪ್ರತಿ ಬಂದ ಮೇಲೆ ತರುವೆನು.'

"ಅದರಲ್ಲಿ ನಿಮ್ಮ ಬರೆಹಗಳು ಏನು ಇವೆ?!" ಎಂದರು ಗುರುಗಳು.

"ವಿಜಾಪುರ ಜಿಲ್ಲೆಯ ಪವಿತ್ರ ಕ್ಷೇತ್ರಗಳು, ವಿಜಾಪುರ ಜಿಲ್ಲೆಯ ಶಿವ ಶರಣರು, ಇವೆರಡಿವೆ. ಶಾಂತರಸರು ನನ್ನ ಪರಿಚಯ ಕುರಿತು ಬರೆದ ಲೇಖನವೂ ಉಳಿದ ೧೪ ಜನರ ಪರಿಚಯ ಲೇಖನದೊಡನೆ ಇದೆ" ಹರ್ಷ ತುಂಬಿದ ಗುರುಗಳ ಹಸ್ತ ಬೆನ್ನ ಮೇಲೆ ಕೆಲಹೊತ್ತು ಹಾಗೆಯೇ ಇತ್ತು.

* * * *

ಬಂಥನಾಳ ಶಿವಯೋಗಿಗಳವರಿಂದ ಸೆಕ್ರೆಟರಿಯವರಿಗೆ ಬಂದ ಪತ್ರದಲ್ಲಿ 'ಕಾಯಕವೀರ' ಮುದ್ರಿಸಿಕೊಡುವ ಆದೇಶವಿತ್ತು ಅದರಂತೆ ೬–೩–೭೨ ರಂದು ಆದರ ಮುದ್ರಣ ಪ್ರಾರಂಭವಾಯಿತು.

ದಿ. ೭–೯–೭೨ ರಂದು ಬಂಥನಾಳದಲ್ಲಿ ಲಿಂ ಶ್ರೀ ನಿ ಪ್ರ ಸಂಗನ ಬಸವ ಮಹಾ ಶಿವಯೋಗಿಗಳ ಪೀಠಸ್ಥಾನದಲ್ಲಿ ಶ್ರೀ ಪಿ. ಎಸ್. ಪಾಟೀಲ ವಕೀಲರ ಅಧ್ಯಕ್ಷತೆಯಲ್ಲಿ 'ಕಾಯಕವೀರ' ಪುಸ್ತಕ ಬಿಡುಗಡೆ ನಡೆಯಿತು ಈ ಸಮಾರಂಭದಲ್ಲಿ ಮಹಾ ಶಿವಯೋಗಿಗಳು ನನ್ನನ್ನು ಸಾಹಿತ್ಯ ಸೇವೆಗೆ ಪ್ರೇರಿಸತೊಡಗಿಸಿದುದನ್ನು 'ಬಸವರಾಜ ದೇವರು', 'ಕಾಯಕವೀರ' ಮುದ್ರಣಕ್ಕೆ ಕಾರಣರಾದುದನ್ನು,

'ಅನುಭವ ಮಂಟಪ' ಪತ್ರಿಕೆಯು ಸಂಪಾದಕತ್ವ ವಹಿಸಿ ಪ್ರೋತ್ಸಾಹಿಸಿದುದನ್ನು ನಾನು ಸ್ಮರಿಸಿ ಮಾತನಾಡಿ ಕೃತಜ್ಞತಾಪೂರ್ವಕ ಶ್ರದ್ಧಾಂಜಲಿ ಅರ್ಪಿಸಿದೆ. ಕಾಯಕವೀರದ ೧೦೦ ಪ್ರತಿಗಳನ್ನು ಮಠಕ್ಕೆ ಅರ್ಪಿಸಿ ಅದೇ ರಾತ್ರಿ ವಕೀಲರೊಡನೆ ವಿಜಾಪುರಕ್ಕೆ ಬಂದೆನು.

ತೆಲಸಂಗ ಶ್ರೀಗಳವರಿಂದ ಈ ಸಲ ಬಬಲೇಶ್ವರದಲ್ಲಿ ಶ್ರಾವಣ ಪುರಾಣ ನಡೆದಿತ್ತು. ಮಂಗಲದ ಮುನ್ನಾದಿನವೇ (೧೦–೯–೭೨) ನಾನು ಬಬಲೇಶ್ವರಕ್ಕೆ ಹೋಗಿ ಶ್ರೀ ಗುರು ಶಾಂತವೀರ ಅಪ್ಪನವರ ದರ್ಶನ ಪಡೆದು ಅವರಿಗೂ, ತೆಲಸಂಗ ಶ್ರೀಗಳಿಗೂ ಕಾಯಕವೀರ ಪ್ರತಿ ಅರ್ಪಿಸಿದೆನು. ನಾಳೆಯೂ ಬರಬೇಕೆಂದು ಅಪ್ಪನವರ ಆದೇಶವಾದ್ದರಿಂದ ಸೋಮವಾರ ದಿ ೧೧ ರಂದು ಮತ್ತೆ ಬಂದು ಮಂಗಲದಲ್ಲಿ ಭಾಗವಹಿಸಿ ಬಂದೆನು.

ಬಬಲೇಶ್ವರದಲ್ಲಿ ಶಿವಾನುಭವಮಂಟಪ ಕಟ್ಟಡದ ಕೋನ ಶಿಲೆಯು ಸ್ಥಾಪನೆಯು ಶ್ರೀ ವೇ. ಕೇ. ಮಲ್ಲಿಕಾರ್ಜುನ ಮಹಾಶಿವಯೋಗಿಗಳ ಅಮೃತ ಹಸ್ತದಿಂದ ದಿ. ೬–೧೧–೭೨ ಕಾರ್ತಿಕ ಶುದ್ಧ ೧ ಸೋಮವಾರ ನೆರವೇರುವ ಏರ್ಪಾಡಾಗಿತ್ತು.

ಶ್ರೀ ಸಿದ್ಧೇಶ್ವರ ಸ್ವಾಮಿಗಳೊಡನೆ ಆಗಮಿಸಿದ ಶ್ರೀ ಮಲ್ಲಿಕಾರ್ಜುನ ಶಿವಯೋಗಿಗಳವರು ನೇರವಾಗಿ ಶ್ರೀ ಶಾಂತವೀರ ಸ್ವಾಮಿಗಳ ದರ್ಶನಕ್ಕೆ ಬಂದರು ಹತ್ತಿರದ ಖುರ್ಚಿಗಳ ಮೇಲೆ ಕುಳಿತಿದ್ದರು. ಒಬ್ಬರು ಶ್ರೀ ಶಾಂತವೀರ ಸ್ವಾಮಿಗಳಿಗೆ ಹೂಮಾಲೆ ಹಾಕಲು ಹೋದಾಗ 'ಹೂಮಾಲೆ ಮದು ಮಗನಿಗೆ ಬಿಟ್ಟು ಮುದುಕನಿಗೇಕೆ ಮೊದಲು?' ಎಂದು ಅವರು ತಡೆಮಾಡಿದರು. 'ಮದುಮಗನ ಅಪ್ಪನಿಗೆ ಮೊದಲು ಹಾಕತಾರ' ಎಂದು ನಗುತ್ತ ಮಲ್ಲಿಕಾರ್ಜುನ ಶಿವಯೋಗಿಗಳು ನುಡಿದರು. ಕುಳಿತವರು ಸೈ ಎಂದು ಕರತಾಡನ ಮಾಡಿದರು. ಸ್ವಾಮಿಗಳಿಬ್ಬರ ಅತ್ಯುದಾತ್ತ ಭಾವನೆಗಳು ಎಲ್ಲರ ಮನಸ್ಸಿಗೆ ಆಮೋದ ಬೀರಿದ್ದವು.

ಶ್ರೀ ಗುರುಪಾದೇಶ್ವರ ಗದ್ದುಗೆಯ ಎದುರಿಗಿನ ಸಮತಿಷ್ಟಗೊಳಿಸಿದ ವಿಶಾಲ ಸ್ಥಳದಲ್ಲಿ ಶಿವಾನುಭವ ಕಟ್ಟಡ ನಿರ್ಮಾಣಕ್ಕೆ ಶ್ರೀ ಶಾಂತವೀರ ಸ್ವಾಮಿಗಳ ಸನ್ನಿಧಿಯಲ್ಲಿ ಶ್ರೀ ಮಲ್ಲಿಕಾರ್ಜುನ ಮಹಾಶಿವಯೋಗಿಗಳು ವಿಧ್ಯುಕ್ತ ಪೂಜಾದಿಗಳಿಂದ ಕೋನ ಶಿಲೆ ಸ್ಥಾಪಿಸಿದರು. ಆಗ ಅವರು ಮಾತನಾಡುತ್ತ, ಭವಿಷ್ಯತ್ತಿನಲ್ಲಿ ಈ ಕಟ್ಟಡದಲ್ಲಿ ಉನ್ನತ ಮಟ್ಟದ ಶಿವಾನುಭವ ಗೋಷ್ಠಿಗಳು ಸದಾ ನಡೆಯುತ್ತಿರಲಿ ಎಂದು ಹಾರೈಸಿದರು. ಗುರುಗಳು ಆಶೀರ್ವಚನ ನೀಡಿದರು.

ಬಸವನಬಾಗೇವಾಡಿ ಕ್ಷೇತ್ರ ದರ್ಶನ

ಬಾಗೇವಾಡಿಯ 'ಬಸವೇಶ್ವರ ದೇವಸ್ಥಾನ ಸಮಿತಿ'ಯವರಿಂದ ಒಂದು ಮನವಿ ಪತ್ರ ಬಂದಿತು. 'ನೀವು ಬರೆದ ಬಸವರಾಜದೇವರು, ಕ್ರಾಂತಿ ಗಂಗೋತ್ರಿಗಳನ್ನು ನೋಡಿದ್ದೇವೆ. ಈಗ ಪ್ರತಿಷ್ಠಿತ ಪ್ರವಾಸಿಗಳು ಬಂದು ಕೇಳಿದರೆ, ನಮ್ಮ ದೇವಸ್ಥಾನದ ಪೌರಾಣಿಕ-ಐತಿಹಾಸಿಕ ಪೂರ್ವಾಪರ ಪರಿಚಯವುಳ್ಳ ಮಧ್ಯಮ ಗಾತ್ರದ ಪುಸ್ತಕವೊಂದನ್ನು ಅವರ ಕೈಗೆ ಕೊಡಲು ಅಗತ್ಯವಾಗಿದೆ. ಅಂಥ ಪುಸ್ತಕವನ್ನು ನೀವು ಬರೆದುಕೊಡಬೇಕು' ಎಂದು ಕೋರಿದ್ದರು. 'ನೀವು ಒಪ್ಪಿ ಇಲ್ಲಿಗೆ ಬರುವದಾದರೆ ನಾವು ದೇವಸ್ಥಾನ ಮತ್ತು ಸುತ್ತಲಿನ ಐತಿಹಾಸಿಕ ಅವಶೇಷಗಳನ್ನು ತೋರಿಸುವದಲ್ಲದೆ ಮತ್ತೆ ಉಳಿದ ಎಲ್ಲ ಮಾಹಿತಿ ಒದಗಿಸುವೆವು' ಎಂದು ಕೇಳಿಕೊಂಡಿದ್ದರು. ಉತ್ತಮ ಪ್ರಸಂಗ! ಒಪ್ಪಿಗೆಯೊಡನೆ ೧೭-೧೧-೭೨ರಂದು ಬರುವೆನೆಂದು ಉತ್ತರ ಬರೆದೆನು.

ದಿ. ೧೭-೧೧-೭೨ ರಂದು ನಾನು ಬಾಗೇವಾಡಿಗೆ ಹೋದೆನು. ಬಸವೇಶ್ವರ ದೇವಸ್ಥಾನ ಚೇರ್‌ಮನ್‌ರಾದ ಶ್ರೀ ಕುಮಾರಗೌಡರು. ಅ. ಪಾಟೀಲ ಎಕ್ಸ್ M.L.A. ಅವರೂ ಪ್ರಮುಖರೂ ಪ್ರೇಮದಿಂದ ನನ್ನನ್ನು ಕಂಡರು. ಅವರು ಮೊದಲು ದೇವಸ್ಥಾನ ಕಟ್ಟಡ, ಸುತ್ತಲಿನ ಪರಿಸರ, ಅಲ್ಲಿಯ ಸ್ಮಾರಕಗಳು ಅವಶೇಷಗಳನ್ನು ತೋರಿಸಿ ಸಂಬಂಧಿಸಿದ ಸಂಗತಿಗಳನ್ನು ವಿವರಿಸಿದರು. ಪರಂಪರಾಗತವಾಗಿ ಬಂದ ಆಖ್ಯಾಯಿಕೆಗಳನ್ನು ಅವರಿಂದ ಸಂಗ್ರಹಿಸಿದೆನು. ಇಲ್ಲಿಗೆ ಮಾಹಿತಿ ಸಂಗ್ರಹದ ಒಂದು ಸುತ್ತಾಯಿತು. ಮುಂದೆ ೭,೮,೯ ದಿನಾಂಕಗಳಂದು ಮತ್ತೆ ಅಲ್ಲಿಗೆ ಹೋಗಿದ್ದೆ. ಆಗ ಶ್ರೀ ಕುಮಾರಗೌಡರು ಜೀಪಿನಲ್ಲಿ ನನ್ನನ್ನು ಕರಕೊಂಡು ಇಂಗಳೇಶ್ವರ, ತಿಂಗಳೇಶ್ವರದ ಅವಶೇಷಗಳು. ಗುಡ್ಡದಲ್ಲಿಯ ರೇವಣಸಿದ್ಧರ ಗುಹೆ, ಗುಹಾಮಾರ್ಗ, ನಾಗಮ್ಮನ ಯೋಗ ಸಾಧನ ಸ್ಥಾನ ಇವುಗಳನ್ನೂ, ಶರಣರು ಉಳಿವೆಗೆ ಹೋಗುವಾಗ ಅಲ್ಲಲ್ಲಿ ನಡೆದ ಕದನಗಳ ಸ್ಮಾರಕವನ್ನೂ ತೋರಿಸಿದರು. ದಿ. ೧೩-೨-೭೩ರಂದು ಮತ್ತೆ ಹೋಗಿ ಸಮಿತಿ ಸದಸ್ಯರೊಡನೆ ಚರ್ಚಿಸಿದೆನು. ಗೌಡರು ಶಾಸನ ಇಲಾಖೆಯವರಿಂದ ದೊರೆತಷ್ಟು ಮಾಹಿತಿ ತರಿಸಿಕೊಟ್ಟರು. ಇವೆಲ್ಲವುಗಳನ್ನು ಪರಿಶೀಲಿಸಿದೆನು. ಸಂದೇಹ ಬಂದಲ್ಲಿ ಸಂಬಂಧಪಟ್ಟಲ್ಲಿ ಕೇಳಿದೆ ನೋಡಿದೆ. ಭೌಗೋಲಿಕ ವಿವರ, ಮಾರ್ಗಸೌಕರ್ಯ, ಸಂಪ್ರದಾಯಕ ಉತ್ಸವ ಕ್ರಮಗಳಲ್ಲಿರುವ ಐತಿಹಾಸಿಕ ಅಂಶಗಳು ಇವೆಲ್ಲವು

ಹೊಂದಿಸಿನೋಡಿದೆ. ಮುಂದೆ ಅದನ್ನು ಸಿದ್ಧಮಾಡಿ ಸಮಿತಿಯ ಸದಸ್ಯರ ಹತ್ತಿರ ಬರೆಹ ಓದಿದೆ. ಸಣ್ಣ ಪುಟ್ಟ ಸೂಚನೆಗಳನ್ನು ಸ್ವೀಕರಿಸಿ ಸರಿಪಡಿಸಿಕೊಂಡೆನು. ಅವರಿಗೆ ಒಪ್ಪಿಸಿ ಮರಳಿದೆನು. ಮುಂದೆ ಬೇರೆ ವಿದ್ವಾಂಸರ ಅಭಿಪ್ರಾಯಕ್ಕೆ ಕಳಹಲ್ಪಟ್ಟು ಮುನ್ನುಡಿ ಹೊಂದಿ ದಿನಾಂಕ ೧೮–೧–೭೫ನೇ ದಿನ ಶ್ರೀ ವೇ. ಕೆ. ಮಲ್ಲಿಕಾರ್ಜುನ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ನ್ಯಾಯಾಧೀಶರಾದ ಕೋ. ಚನ್ನಬಸವಪ್ಪ ಅವರಿಂದ ಬಸವನಬಾಗೇವಾಡಿಯಲ್ಲಿ ಉದ್ಘಾಟಿಸಲ್ಪಟ್ಟಿತು. ಆಗ ಇದರ ಐದು ಸಾವಿರ ಪ್ರತಿ ಮುದ್ರಣದ ವೆಚ್ಚವನ್ನು ನೀಡಿದ ಶ್ರೀ ಚೆನ್ನಪ್ಪ ನಾಯಕವಾಡಿ ಅವರನ್ನೂ, ಲೇಖಕನಾದ ನನ್ನನ್ನೂ ಸನ್ಮಾನಿಸಿ ಗೌರವಿಸಲಾಯಿತು. ಇದು ನನ್ನ ಗುರುಗಳ ಕೃಪಾಶೀರ್ವಾದದಿಂದ ಬಂದ ಶ್ರೇಯಸ್ಸು.

* * * *

ಈ ಕಾರ್ಯ ಆರಂಭವಾದಾಗಲೇ ದಿ. ೨೫–೧೨–೭೨ರಂದು ಬಬಲೇಶ್ವರಕ್ಕೆ ಹೋಗಿ ಗುರುಗಳ ದರ್ಶನ ಪಡೆದು ಈ ಪ್ರಯತ್ನದ ಯೋಚನೆ ಅರಿಕೆ ಗೊಳಿಸಿದ್ದೆನು. ಮುಂದೆ ಮತ್ತೆ ದರ್ಶನಕ್ಕೆ ಹೋದಾಗ ತಾವಾಗಿಯೇ ಈ ಪ್ರಯತ್ನದ ಬೆಳವಣಿಗೆಯ ಬಗೆಗೆ ಪ್ರಶ್ನೆ ಮಾಡಿ ವಿವರ ಪಡೆಯುತ್ತಿದ್ದರು. ಮೇಲೆ ಹೇಳಿದಂತೆ ಸ್ಮಾರಕಗಳ, ಪ್ರತ್ಯಕ್ಷದರ್ಶನ, ಹಲವು ಮೂಲಗಳ ಮಾಹಿತಿಗಳ ಮೇಲಿಂದ 'ಕ್ಷೇತ್ರ ದರ್ಶನ' ಪೂರ್ಣಗೊಂಡಿತು. ಮೊದಲು ನನ್ನ ಪ್ರಥಮ ವಾಚನದ ನೇಮದಂತೆ ಗುರುಸನ್ನಿಧಿಯಲ್ಲಿ ಅದನ್ನು ಓದಬೇಕು. ಅದರಂತೆ ಬಬಲೇಶ್ವರಕ್ಕೆ ಹೋಗಿ ಗುರುಪಾದ ದರ್ಶನ ಮಾಡಿದೆ. ಬರೆಹದ ಕೆಲಸ ವಿವರಿಸಿ ಕ್ಷೇತ್ರ ದರ್ಶನವನ್ನು ಪೂರ್ಣವಾಗಿ ಓದಿದೆ. ಪೂರ್ವ ಕಾಲದಲ್ಲಿ ಇಂಗಳೇಶ್ವರ ಬಾಗೇವಾಡಿಗಳಿಗಿದ್ದ ಮಹತ್ವವನ್ನೂ, ಈ ಪ್ರಾಂತಕ್ಕೂ, ಶರಣರ ವಿಪ್ಲವಕ್ಕೂ ಸಂಬಂಧವಿದ್ದ ಸಂಗತಿಗಳನ್ನೂ ಕುತೂಹಲ ಪೂರ್ವಕ ಗುರುಗಳು ಆಲಿಸಿದರು. ಕ್ಷೇತ್ರ ಪರಿಚಯದ ಈ ಗ್ರಂಥ ಕುತೂಹಲಕಾರಿಯಾಗಿದೆ ಎಂದರು.

* * * *

ಶ್ರಾವಣಮಾಸದ ವಿಶೇಷ ಪೂಜೆ ಮುಕ್ತಾಯವಾಗಿತ್ತು ಕೂಡಲೇ ೭–೯–೭೩ ಶುಕ್ರವಾರ ಗುರುಗಳ ದರ್ಶನಕ್ಕಾಗಿ ಬಬಲೇಶ್ವರ ದರ್ಶನಕ್ಕೆ ಹೋದೆನು. ಅಂದು ಅಪ್ಪನವರಿಗೆ ಅಷ್ಟು ಆರಾಮವಿರಲಿಲ್ಲ ಮರುದಿನ ಆರಾಮವಾಗಿದ್ದರು. ಅಂದು 'ಚರವರೇಣ್ಯ' (ಚರಚಕ್ರವರ್ತಿ) ಪುಸ್ತಕವಾಗಿ ಬರೆದಷ್ಟು ಭಾಗ ಸ್ವಲ್ಪ ವೇಳೆ

ಓದಿದೆ. (ನರಗುಂದ ಚೆನ್ನಬಸವ ಶಿವಯೋಗಿಗಳು)

೧೯೭೪ನೆಯ ವರ್ಷದ ತನ್ನ ಪ್ರಾಪಂಚಿಕ ಜೀವನದ ಮಾರ್ಗವು ತುಂಬ ಕತ್ತಲೆಯದೇ ಆಗಿತ್ತು ಸಂಸಾರದಲ್ಲಿ ಬಹುಶಃ ಕಷ್ಟ ದುಃಖಗಳೇ ತುಂಬಿರುತ್ತವೆ. ಸುಖ–ಆನಂದವೆಂಬುದು ಅತ್ಯಲ್ಪ ಎಂದು ವಿವೇಕಿಗಳು ಹೇಳುತ್ತಾರೆ. ಅಂತಹ ಅಲ್ಪಾನಂದದ ಮಿಂಚುಗಿಡಿಗಳಾದರೂ ಈ ವರ್ಷದ ಪ್ರಾಪಂಚಿಕ ಜೀವನದಲ್ಲಿ ನನಗೆ ತೀರ ಅಪರೂಪ! ಇಲ್ಲವೆಂದೂ ಹೇಳಬಹುದು. ದಾರಿಯುದ್ದಕ್ಕೂ ದಟ್ಟವಾದ ಕತ್ತಲೆಯೇ ಸರಿ! ಇಂತಹ ದುರ್ಘಟ ದಾರಿಯಲ್ಲಿ ಹಿಂಜರಿಯದೆ ನಡೆಯುವ ಧೈರ್ಯಕ್ಕೆ ಶ್ರೀ ಗುರುವಿನ ಕರುಣೆಯೇ ಕಾರಣವಾಗಿತ್ತು. ಈ ಕ್ರಮಣ ದಲ್ಲಿಯ ಕಷ್ಟ, ವ್ಯಥೆಗಳನ್ನು ಸದ್ಗುರುವಿನ ಹಿತಚಿಂತಕ ಕೃಪೆಯಿಂದ ಒದಗಿ ಬರುತ್ತಿದ್ದ ಇನ್ನೊಂದು ಬದಿಯ ಬೆಳಕಿನ ಕಾರ್ಯಕಲಾಪಗಳತ್ತ ಮನಸ್ಸನ್ನು ತೊಡಗಿಸಿ ಮರೆಯುತ್ತಿರುವದಕ್ಕೆ ಸಾಧ್ಯವಾಗಿತ್ತು.

ಇದು ಶ್ರೀಗುರು ಸನ್ನಿಧಿಯ ಸಂಯೋಗದಲ್ಲಿ, ಸ್ಮರಣೆಯಲ್ಲಿ ನಡೆದದ್ದು ಇದುವೇ ಕತ್ತಲೆಯಲ್ಲಿ ಎದೆಗುಂದದಂತೆ ಕಾಪಾಡಿದ್ದು ಗುರುವಿನ ಕೃಪೆಯು ಈ ವರ್ಷದ ಮುಖ್ಯ ಕಾರ್ಯಗಳು.

೧) 'ಕ್ಷೇತ್ರ ದರ್ಶನ' ಮುದ್ರಣ ಮುಗಿಯುವವರೆಗಿನ ಅದರ ಎಲ್ಲ ನಿರ್ವಹಣೆ.

೨) ಶ್ರೀ ಗುರುಪಾದೇಶ್ವರ ಚರಿತ್ರೆ (ಜೀವನ ಕಾದಂಬರಿ) ಬರೆದುದು.

೩) ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳ ಆದೇಶದಂತೆ 'ಭಗವದ್ಗೀತಾ ಹಾಗೂ ಮಲ್ಲಿಕಾರ್ಜುನ ವಚನಾಮೃತ' ಈ ಗ್ರಂಥದ ಅಚ್ಚಿಗೆ ಸಿದ್ಧವಾಗಿದ್ದ ಹಸ್ತಪ್ರತಿಯನ್ನು (ಸುಮಾರು ಸಾವಿರ ಪುಟ) ಓದಿ ನೋಡಿದೆ. ದೃಷ್ಟಿ–ಹಸ್ತ ದೋಷಗಳಿಂದ ಆದ ಅಕ್ಷರ ಸ್ಖಾಲಿತ್ಯ, ಅಸಮರ್ಪಕ ಚಿಹ್ನ ಮುಂತಾದ ದೋಷ ಗಳನ್ನು ಸರಿಪಡಿಸುವದು. ಬುದ್ಧೀಜಿ ಅವರ ಅಪ್ಪಣೆಯು ಉದ್ದೇಶವಾಗಿತ್ತು. ಆದರೆ ಆ ಮಹಾಗ್ರಂಥವನ್ನು ದಿಟ್ಟಿಸಿಟ್ಟು, ಮನವಿಟ್ಟು ಓದುವ ಭಾಗ್ಯ ನನಗೆ ಲಭಿಸಿತ್ತು. ಆಗಾಗ ಆಶ್ರಮಕ್ಕೆ ಹೋಗಿ ಮೂರು ನಾಲ್ಕು ತಾಸು ಓದುತ್ತ ದಿ. ೧೭–೧೧–೭೪ರಂದು ಅದನ್ನು ಒಪ್ಪಿಸಿದ್ದೆನು.

೪) 'ಚರವರೇಣ್ಯ' ಪುಸ್ತಕ (ನರಗುಂದ ಚೆನ್ನಬಸವ ಶಿವಯೋಗಿ) ಬರೆದೆನು.

೫) 'ಧರ್ಮದರ್ಶಿ' (ಚೆನ್ನಬಸವೇಶ್ವರ ಚರಿತ್ರೆ) ಬರೆಹ ಪೂರ್ಣಗೊಳಿಸಿದೆನು.

೬) 'ಬಬಲೇಶ್ವರದ ಶಿವಯೋಗಿಗಳು' ಗ್ರಂಥದ ಸಂಪಾದಕ ಮಂಡಳಿಯಲ್ಲಿ ಸೇವೆ!

೭) ಶ್ರಾವಣಮಾಸದ ವಿಶೇಷ ಪೂಜೆ.

೮) ಗಣ್ಯ ವಿದ್ವಾಂಸರ, ಶಿವಯೋಗಿಗಳವರ ಭಾಷಣ-ಉಪನ್ಯಾಸ ಶ್ರವಣ!

೯) ಈ ಒಂದು ವರ್ಷದಲ್ಲಿ ಶ್ರೀ ಗುರುಗಳ ಸನ್ನಿಧಾನ ದರ್ಶನಕ್ಕೆ ಹತ್ತು ಸಾರೆ ಪ್ರಯಾಣ.

೧೦) ವಿಜಾಪುರದ ಖ್ಯಾತ ಕಾಗದ ವ್ಯಾಪಾರಿಗಳು ಶ್ರೀ ಬಿ.ಪಿ. ಹಿರೇಮಠ ಅವರ ಪರವಾಗಿ ಅವರ ಅಳಿಯಂದಿರಾದ, ಶ್ರೀ ಎಸ್. ಜಿ. ಹಿರೇಮಠ ನಿವೃತ್ತ ಮಾಮಲೇದಾರ ಇವರು ನನ್ನ ಒಂದು ಕೃತಿಯ ಮುದ್ರಣ ವೆಚ್ಚಕ್ಕೆ ಧನಸಹಾಯ ಮಾಡಲು ಸ್ವಯಂ ಪ್ರೇರಣೆಯಿಂದ ವಾಗ್ದಾನ ಮಾಡಿದರು. ಕೃತಜ್ಞತೆಯಿಂದ ಅದನ್ನು 'ಧರ್ಮದರ್ಶಿ' ಮುದ್ರಣಕ್ಕೆ ಬಳಸಿಕೊಳ್ಳಲು ಯೋಚಿಸಿ ಆ ಸಂಬಂಧದ ಕಾರ್ಯನಿರ್ವಹಣೆ.

೧೧) ಮರಡಿ ತೋಟದಲ್ಲಿ ಪತ್ರಿ ಗಿಡಗಳ ಸೇವೆ (ಬಿಲ್ವ ವೃಕ್ಷ ಸೇವೆ).

ಇನ್ನುಳಿದ ಸಂಗತಿಗಳು ಕಾಲಾನುಕ್ರಮದಿಂದ

ಶ್ರೀಗುರು ಕುಮಾರರ ಪಟ್ಟಾಧ್ಯಕ್ಷ ಪದತ್ಯಾಗ

ದಿ. ೨೯-೧-೭೪ ಗುರುಪಾದ ದರ್ಶನಕ್ಕೆಂದು ಬಬಲೇಶ್ವರಕ್ಕೆ ಹೋದೆನು ಮಠದಲ್ಲಿ ಕಾನೂನು ಸಂಬಂಧದ ವಿಶೇಷ ಕಾರ್ಯವೊಂದು ನಡೆದಿತ್ತು. ಅದರ ಹಿನ್ನೆಲೆ ಹೀಗಿದೆ.

೧೯೬೩ರಲ್ಲಿ ಶ್ರೀ ಅಪ್ಪಾ ಅವರು ಅಪಘಾತದಿಂದ ಉಂಟಾದ ದೀರ್ಘ ಅಸ್ವಾಸ್ಥ್ಯದಲ್ಲಿದ್ದರು. ಆಗ ಶ್ರೀ ಹಿರೇಮಠ ಡಾಕ್ಟರರ ಚಿರಂಜೀವ ಗುರುಕುಮಾರ ಮರಿಯನ್ನು ತಮ್ಮ ಉತ್ತರಾಧಿಕಾರಿಯಾಗಿ ಮಾಡಿಕೊಂಡಿದ್ದರು. ಬೇಗನೆ ವಿಧ್ಯುಕ್ತ ಪಟ್ಟಾಭಿಷೇಕ ಸಮಾರಂಭ ನೆರವೇರಿಸಿ ತಮ್ಮ ಎಲ್ಲ ಅಧಿಕಾರವನ್ನು ಅವಂಗೆ ವಹಿಸಿಕೊಟ್ಟಿದ್ದರು. ಹೊಸ ಸ್ವಾಮಿಗಳು ವಿದ್ಯಾಭ್ಯಾಸಕ್ಕಾಗಿ ತಂದೆಯ

ಮನೆಯಲ್ಲಿಯೇ ಇದ್ದರು. ಇಂದಿಗೆ ಹತ್ತು ವರ್ಷಗಳಾಗಿರಬೇಕು. ಕೆಲವು ತಿಂಗಳ ಹಿಂದೆ ಡಾಕ್ಟರರು ಹೃದಯಾಘಾತದಿಂದ ಶಿವೈಕ್ಯರಾದರು. ಶ್ರೀ ಗುರುಕುಮಾರರ ತಾಯಿಯವರು ದುಃಖಿತರಾಗಿ ಶ್ರೀ ಶಾಂತವೀರ ಸ್ವಾಮಿಗಳ ಹತ್ತಿರ ಬಂದು, "ಅಪ್ಪಾ ನಮ್ಮ ಕುಟುಂಬವನ್ನು ನೋಡಿಕೊಂಡು ಹೋಗಲು ಗುರುಕುಮಾರನ ಹೊರತು ಬೇರೆ ಗತಿಯಿಲ್ಲ. ಅವನನ್ನು ತಮ್ಮ ಈ ಗುರುಪೀಠಾಧಿಕಾರದಿಂದ ಮುಕ್ತನನ್ನಾಗಿ ಮಾಡಬೇಕು. ಆತನಿಗೆ ವಹಿಸಿದ ಗುರುಸ್ಥಾನ ಹಾಗೂ ಆಸ್ತಿಯ ಹಕ್ಕು ಇವುಗಳನ್ನು ತಾವು ಹಿಂದಿರುಗಿಸಿಕೊಳ್ಳಬೇಕು. ಅವನನ್ನು ಗೃಹಸ್ಥನನ್ನಾಗಿ ಮಾಡಿ, ನಮ್ಮ ಪೋಷಣೆ ಮಾಡಿಕೊಳ್ಳುತ್ತೇವೆ" ಎಂದು ಮೊರೆಯಿಟ್ಟರು. ಶ್ರೀಗಳು ಆ ತಾಯಿಗೆ ಮತ್ತೆ ಮತ್ತೆ ವಿಚಾರ ಮಾಡಲು ಅವಕಾಶ ಕೊಟ್ಟು ಕಳಿಸಿದರು. ಆದರೂ ಆ ತಾಯಿ ಅಭಿಪ್ರಾಯ ಬದಲಿಸಲಿಲ್ಲ. ಅಪ್ಪನವರಿಗೆ ಅನಿವಾರ್ಯವಾಯಿತು. ಹಾಗೆ ಮಾಡುವ ನಿರ್ಣಯವಾಗಿತ್ತು.

ಇಂದು ಆ ಸಂಬಂಧದ ಹಕ್ಕು ಮರಳಿಸುವ ಕಾಗದ ಪತ್ರ ನಿರ್ಮಾಣ ಮಠದಲ್ಲಿ ನಡೆದಿತ್ತು. ಸಬ್‌ರಜಿಸ್ಟ್ರಾರರು ಅಲ್ಲಿಯೇ ಬಂದು ನೋಂದಣಿ ಮಾಡಿದರು.

ಮತ್ತೆ ಉತ್ತರಾಧಿಕಾರಿಯ ಆಯ್ಕೆ

ದಿ. ೪-೪-೭೪ ಗುರುಗಳ ದರ್ಶನ ಮಾಡಿ ಗುರುಪಾದೇಶ್ವರ ಚರಿತ್ರೆ ಬರೆದಾಗಿದ್ದ ನಾಲ್ಕು ಪ್ರಕರಣಗಳನ್ನು ಸನ್ನಿಧಾನದಲ್ಲಿ ಓದಿದೆ.

ಈ ಮಧ್ಯೆ ಗುರುಪೀಠದ ಉತ್ತರಾಧಿಕಾರಿ ವಟುವಿನ ಪುನರಾಯ್ಕೆಯಾಗಿತ್ತು. ಶರಣ ಶ್ರೀ ಮುತ್ತಪ್ಪ ಸಂಕಣ್ಣನವರ ತನುಜಾತ "ಅರವಿಂದ" ಶ್ರೀ ವೇ. ಕೇ. ಶ್ರೀ ಮಲ್ಲಿಕಾರ್ಜುನ ಮಹಾಶಿವಯೋಗಿಗಳ ಆಶ್ರಮದಲ್ಲಿ ವಟುವಾಗಿದ್ದರು. ಸದ್ಗುಣ ಸಂಪನ್ನ! ವಿಜ್ಞಾನ ವಿಷಯ ಪದವೀಧರ! ಈ ಸಲ ಗ್ರಾಮದ ಹಿರಿಯರು, ಶ್ರೀಗಳವರು ತುಂಬ ಮತ್ಯೈಕ್ಯದಿಂದ ಈ ವಟುವನ್ನು ಹಿರೇಮಠ ಗುರುಪೀಠಕ್ಕೆ ಉತ್ತರಾಧಿಕಾರಿಯನ್ನಾಗಿ ನೇಮಕ ಮಾಡಿದ್ದರು.

ಶ್ರೀಗುರುಗಳಿಂದ ದಿ. ೧೫-೫-೭೪ರಂದು ಒಂದು ಪತ್ರ ಬಂದಿತು. ದಿ. ೨೩-೫-೭೪ರಂದು ಜರುಗುವ ವಟುಗಳ ದೀಕ್ಷಾ ಸಮಾರಂಭಕ್ಕೆ ಬರಬೇಕೆಂದು ಅಪ್ಪಣೆಯಾಗಿತ್ತು ಅದರಂತೆ ಹೋದೆನು.

ಶ್ರೀ ಅರವಿಂದ ವಟುವಿಗೆ ಮಹೇಶ್ವರ ದೀಕ್ಷಾ ಸಮಾರಂಭವು ವಿಧ್ಯುಕ್ತವಾಗಿ ಶ್ರೀಗುರಚರ ಸಮುದಾಯದಲ್ಲಿ ಜರುಗಿತು. ಈ ಸಮಯದಲ್ಲಿ ಅವರಿಗೆ 'ಮಹಾದೇವ' ಮರಿದೇವರು ಎಂದು ನಾಮಕರಣವಾಯಿತು. ನಮ್ಮ ನೂತನ ಮರಿದೇವರನ್ನು ಕಣ್ತುಂಬ ನೋಡಿ ಸಂತೋಷಿಸುವದಾಯಿತು. ಆನಂದ ಸುಖದಲ್ಲಿ ಪ್ರಸಾದ ಭೋಜನವಾಯಿತು. ಪ್ರಮುಖ ಭಕ್ತರು ಆಗಮಿಸಿದ್ದರು.

೨೯-೭-೭೪ನೆಯ ದಿವಸ ಬಬಲೇಶ್ವರ ಹಿರೇಮಠದ ಪಟ್ಟಾಧಿಕಾರೋತ್ಸವ ಅತೀ ವಿಜೃಂಭಣೆಯಿಂದ ನೆರವೇರಿತು. ೭ ಗಂಟೆಗೆ ಬಹು ದೊಡ್ಡ ಸಾರ್ವಜನಿಕ ಸಮಾರಂಭದಲ್ಲಿ ಗುರುಪೀಠಾರೋಹಣ ಜರುಗಿತು. ನೂತನ ಗುರುಗಳ ಪಲ್ಲಕ್ಕಿ ಉತ್ಸವ ನೋಡುತ್ತ ಅಲೆದು ಸಂಜೆಯ ಸಭೆಯಲ್ಲಿ ಭಾಗವಹಿಸಿದ್ದೆನು.

೨೮-೮-೭೪ರಂದು ಗುರುಸನ್ನಿಧಾನದಲ್ಲಿ 'ಧರ್ಮದರ್ಶಿ' ಬರೆಹ ಓದಿದೆ.

೨೪-೧೨-೭೪ ಶ್ರೀ ಗುರುದರ್ಶನಕ್ಕೆ ಬಬಲೇಶ್ವರಕ್ಕೆ ಹೋದೆನು 'ಧರ್ಮದರ್ಶಿ' ಅಚ್ಚಿನ ವೆಚ್ಚಕ್ಕೆ ಉದಾರ ದಾನ ದೊರೆತ ಹಾಗೂ ಅದರ ಮುದ್ರಣ ವ್ಯವಸ್ಥೆ ನಡೆದಿರುವ ವಿಷಯ ಅರಿಕೆಗೊಳಿಸಿದೆ. ಶ್ರೀ ಗುರುಗಳು ಎಂದಿನಂತೆ ನನ್ನ ಸಾಹಿತ್ಯ ಪ್ರಕಟನೆಗೆ ಅತ್ಯಾನಂದ ಪ್ರದರ್ಶಿಸಿದರು. ಅವರ ಹಸ್ತ ನನ್ನ ಬೆನ್ನಮೇಲೆ ಬಂದೇ ಬಿಟ್ಟಿತ್ತು 'ಇಲ್ಲಿಗೆ ಎಷ್ಟು ಕುಸುಮಗಳು ಅರಳಿದಂತಾದವು?' ಎಂದು ಕೇಳಿದರು ಹದಿನಾಲ್ಕು ಎಂದು ಉತ್ತರಿಸಿದರು.

ಈ ವರ್ಷದಲ್ಲಿ ಅಪ್ಪನವರ ಆರೋಗ್ಯ ಬಹುಮಟ್ಟಿಗೆ ಚೆನ್ನಾಗಿದೆ. ಹರಳೇಶ್ವರದಲ್ಲಿ ಇದ್ದಾಗ ಕಾಡುತ್ತಿದ್ದ ಅಸ್ತಮಾ ಬಾಧೆ ಈಗಿಲ್ಲದಂತಾಗಿದೆ. ಗುರುಗಳ ಯೋಗಕ್ಷೇಮವನ್ನು ಪೂರ್ಣ ಆಸಕ್ತಿಯಿಂದ ವಹಿಸಿ ಸೇವಿಸುತ್ತಿರುವ ಶ್ರೀ ಮಹಾದೇವ ಸ್ವಾಮಿಗಳವರು ಭಕ್ತರ ಮನಗಳಿಗೆ ಆನಂದವನ್ನು ತುಂಬಿ ತಂದಿದ್ದಾರೆ.

ತನು ಬಳಲಿದರೂ ಮನ ಉಲ್ಲಾಸದಲ್ಲಿ

೧೯೭೫ನೆಯ ವರ್ಷದಲ್ಲಿ ನನಗೆ ಫೆಬ್ರುವರಿ ಮಾರ್ಚ ತಿಂಗಳಗಳಲ್ಲಿ ದೀರ್ಘಕಾಲ ಜ್ವರಬಾಧೆ ಇದನ್ನು ಬಿಟ್ಟರೆ ನನ್ನ ಬೆಳಕಿನ ಭಾಗದ ಜೀವನ ಯಥಾ ರೀತಿ ನಡೆದಿತ್ತು. ಅಂತಹ ಅನಾರೋಗ್ಯ ಕಾಲದಲ್ಲಿಯೂ ಮಾನಸಿಕ ಉಲ್ಲಾಸ ಜಾಗೃತವಾಗಿಯೇ ಇತ್ತು ಶ್ರೀಗಳ ಕೃಪೆಯಿಂದ! ಕೈಲಾದಷ್ಟು ಆತ್ಮ ಸಾಹಿತ್ಯಸೇವೆ ಸಾಗಿಯೇ ಇತ್ತು.

'ಧರ್ಮದರ್ಶಿ'ಯ ಅಚ್ಚಿನ ಪ್ರತಿಯನ್ನು ಬರೆಯುತ್ತಲೇ, ಬರೆಬರೆದಷ್ಟು ಅಚ್ಚುಕೂಟಕ್ಕೆ ಒದಗಿಸುತ್ತಲೇ ಇದ್ದೆನು. ಅಚ್ಚಿನ ಕರಡು ತಿದ್ದುತ್ತಲೂ ಇದ್ದೆನು. ಶ್ರೀ ಸಿದ್ಧೇಶ್ವರ ಸ್ವಾಮಿಗಳವರ ಸೂಚನೆಯಂತೆ ಗೀತಾ ಗ್ರಂಥದಲ್ಲಿ ಸೇರಿಸಲು ಹಿರಿಯ ಶಿವಯೋಗಿಗಳ ಕುರಿತ ಚಿಕ್ಕ ಅಭಿನಂದನಾ ಲೇಖನ ಬರೆದೆನು.

ಗುರುಗಳ ಕರುಳು

ಸ್ಥಳ ಬದಲಾವಣೆಗೆಂದು ತೊರವಿಗೆ ಬಂದಿದ್ದೆನು. ೨೯-೩-೭೫ರಂದು ನನ್ನನ್ನು ನೋಡಲು ಮುಂಜಾನೆ ತೊರವಿಗೆ ಬರುವೆನೆಂದು ಹಿಂದಿನ ಸಂಜೆ ವಿಜಾಪುರದ ನಮ್ಮ ಮನೆಗೆ ಗುರುಗಳು ಹೇಳಿ ಕಳುಹಿಸಿದ್ದರು. ತೊರವಿಯಲ್ಲಿ ಈಶ್ವರನು ಸ್ವಾಗತ ವ್ಯವಸ್ಥೆ ಮಾಡಿದನು. ೧೦ ಗಂಟೆಗೆ ಶ್ರೀ ಗುರುಗಳ ಕಾರು ಬಂದಿತು. ಸದ್ಗುರು ಶ್ರೀ ಶಾಂತವೀರ ಮಹಾಸ್ವಾಮಿಗಳೊಡನೆ ಶ್ರೀ ಮಹಾದೇವ ಸ್ವಾಮಿಗಳವರು, ಶ್ರೀ ಮಿರ್ಜಿ ಸಂಗಪ್ಪನವರು ಬಂದಿದ್ದರು ಏನು ನನ್ನ ಪುಣ್ಯ!! ಊರ ಪ್ರಮುಖರೂ, ಬಳಗದವರೂ ಶ್ರೀಗಳ ದರ್ಶನಕ್ಕೆ ಬಂದರು. ಶ್ರೀಗಳವರು ಕ್ಷೇಮವನ್ನು ವಿಚಾರಿಸಿ ಮೈದಡವಿ ಆಶೀರ್ವದಿಸಿ ೧೨ ಗಂಟೆಗೆ ಪರಿವಾರದೊಡನೆ ಮರಳಿ ದಯಮಾಡಿಸಿದರು.

ಶರೀರದಲ್ಲಿ ಚೇತರಿಕೆಯುಂಟಾಯಿತು. ದಿ. ೯-೪-೭೫ ಬಬಲೇಶ್ವರಕ್ಕೆ ಹೋಗಿ ಗುರುಗಳಡಿಯಲ್ಲಿ ಮುಡಿಯಿಟ್ಟೆನು. ಮೈ-ದಡವಿ ಕಟ್ಟೆಗಳನ್ನು ಹಿಚುಕಿ ಎಷ್ಟು ಕರಗಿದೆ? ಎಂದು ನಗೆಯಾಡಿದರು. ಕುಶಲವ ಕೇಳಿದರು.

* * * *

ನನ್ನ ಕೋರಿಕೆಯಂತೆ ಶ್ರೀ ಜ. ಚ. ನಿ. ಸನ್ನಿಧಿಯವರಿಂದ ಧರ್ಮದರ್ಶಿಗೆ ಆಶೀರ್ವಚನ ಲೇಖನ ಬಂದಿತು. ಪ್ರೊ. ಸ. ಸ. ಮಾಳವಾಡ ಅವರಿಂದ ಮುನ್ನುಡಿ ಲೇಖನ ಬಂದಿತು. ಅವುಗಳನ್ನು ದಾನಿಗಳ ಪರಿಚಯ ಲೇಖನ ಮುಂತಾದ ಪೂರಕ ಲೇಖನ ಬರೆದವುಗಳನ್ನು ಅಚ್ಚಿಗೆ ಕಳಿಸಿದೆನು.

ಶಿವಕ್ರಿಯಾ ಕಿರಣ!

ಮನೆಯಲ್ಲಿ ಕೆಲವು ಶಿವಕಾರ್ಯಕ್ರಮಗಳನ್ನು ನಡಿಸುವ ವಿಚಾರ ಮನಸ್ಸಿನಲ್ಲಿ ಮೂಡಿತ್ತು. ೧) ಗುರುಗಳನ್ನು ಬರಮಾಡಿಕೊಳ್ಳುವದು ೨) ಗಣಾರಾಧನೆ

೩) ಪತ್ರೀ ಗಿಡದ ಪೂಜೆ (ಶಾಂತಿ) ೪) ಶಿವಾನುಭವ ಗೋಷ್ಠಿ ೫) ಧರ್ಮದರ್ಶಿ ಪುಸ್ತಕ ಬಿಡುಗಡೆ. ಇವು ಮುಖ್ಯವಾದವು. ಆಲೋಚನೆ ಆರಂಭ.

ದಿ. ೨೪-೬-೭೫ ಚಿ|| ಈಶ್ವರನೊಡನೆ ಶ್ರೀ ಕಾಶೀರಾಯಗೌಡರನ್ನು ಭೆಟ್ಟಿ ಯಾದೆನು. ಈ ಯೋಚನೆ ಅವರ ಮುಂದಿಟ್ಟು ಅಭಿಪ್ರಾಯಕ್ಕಾಗಿ ಚರ್ಚೆ ಮಾಡಿದೆವು. ಅವರು ಒಳ್ಳೆಯ ಕಾರ್ಯವೆಂದು ಸಹಾನುಭೂತಿಪೂರ್ವಕ ಮಾತನಾಡಿ ಮುಖಂಡರಾಗಿ ನೆರವೇರಿಸಲು ಒಪ್ಪಿಕೊಂಡರು. ಅಗಸ್ಟ ೧೪ ರಂದು ಜರುಗಿಸುವ ದನ್ನು ನಿಶ್ಚಿತಗೊಳಿಸಲಾಯಿತು. ಮನೆಯಲ್ಲಿ ಸಾರಣೆಯ-ಓರಣದ ಕೆಲಸ ಆರಂಭವಾಯಿತು.

೨-೭-೭೫ರಂದು ಬಬಲೇಶ್ವರಕ್ಕೆ ಹೋಗಿ ಶ್ರೀಗುರುಗಳ ದರ್ಶನ ಪಡೆದು, ಉದ್ದೇಶಿತ ಕಾರ್ಯಕ್ರಮಗಳನ್ನು ವಿವರಿಸಿದೆನು. ಅವುಗಳಿಗೆ ಅವರ ಅನುಮೋದನೆ ಯನ್ನೂ, ಅವರು ಆಗಮಿಸುವದಕ್ಕೆ ಬಿನ್ನವಿಸಿ ಒಪ್ಪಿಗೆಯನ್ನೂ ಪಡೆದೆನು. ಅತ್ಯಂತ ಸಂತೋಷದಿಂದ ಆಶೀರ್ವಾದ ಪಡೆದು ಮರಳಿದೆನು.

ಬರಮಾಡಿಕೊಳ್ಳಬೇಕಾಗಿದ್ದ ಮಹನೀಯರ ಪಟ್ಟಿ ಮಾಡಿ ಕ್ರಮವಾಗಿ ಅವರಿಗೆಲ್ಲರಿಗೆ ಬಿನ್ನವಿಸಿಕೊಂಡೆನು. ಪುಸ್ತಕದ ಮುದ್ರಣಕ್ಕೆ ಕೊಡುಗೆ ನೀಡಿದ ಶ್ರೀ ಬಿ. ಪಿ. ಹಿರೇಮಠ ಶ್ರೀ ಎಸ್. ಜಿ. ಹಿರೇಮಠ ಸಾಹೇಬರು ಉಭಯ ಮಹನೀಯರಿಗೆ ಭೆಟ್ಟಿಯಾಗಿ ಕಾರ್ಯಕ್ರಮಗಳ ಉದ್ದೇಶ ತಿಳಿಸಿ ಆಗಮಿಸಬೇಕೆಂದು ಬಿನ್ನವಿಸಿದೆನು.

ಜ್ಞಾನ ಯೋಗಾಶ್ರಮಕ್ಕೆ ಹೋಗಿ ಶ್ರೀಶ್ರೀ ಮಲ್ಲಿಕಾರ್ಜುನ ಶಿವಯೋಗಿಗಳ ದರ್ಶನ ಮಾಡಿ ಅಂದಿನ ಸಮಾರಂಭಕ್ಕೆ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಅಧ್ಯಕ್ಷರಾಗಿ ನೆರವೇರಿಸಿಕೊಡುವಂತೆ ಅಪ್ಪಣೆಯಾಗಬೇಕೆಂದು ಪ್ರಾರ್ಥಿಸಿದೆನು ಕೂಡಲೆ ಆ ತಮ್ಮ ವರಶಿಷ್ಯರನ್ನು ಕರೆದು ಹಾಗೆ ಅಪ್ಪಣೆ ಮಾಡಿಬಿಟ್ಟರು. ಬಹಳ ಸಂತೋಷವಾಯಿತು. ಆಮಂತ್ರಣ ಪತ್ರಿಕೆ ಮುದ್ರಣ ಮಾಡಿ, ಪರಸ್ಥಳದ ಮಿತ್ರರಿಗೆ, ಬಂಧು ವರ್ಗ ದವರಿಗೂ ಕಳಿಸಿತು.

೨೬-೭-೭೫ ಬಬಲೇಶ್ವರಕ್ಕೆ ಹೋಗಿ ಶ್ರೀ ಅಪ್ಪಾ ಅವರೊಡನೆ ಅಗಸ್ಟ ೧೪ರ ಕಾರ್ಯಕ್ರಮಗಳ ಬಗೆಗೆ ವಿಶೇಷ ವಿಚಾರ ನಡೆಯಿಸಿ ಮತ್ತೆ ಕೆಲವು ಸಲಹೆ ಗಳನ್ನು ಪಡೆದು ಬಂದೆನು.

ಆತ್ಮೀಯ ಬಂಧುಗಳಾದ ಶ್ರೀ ಎಸ್. ಕೆ. ಬಿರಾದಾರ ಸಾಹೇಬರು ಪ್ರಮುಖ ಆಮಂತ್ರಿತರನ್ನು ವಾಹನ ವ್ಯವಸ್ಥೆ ಮಾಡಿ ತೊರವಿಗೆ ಕರಕೊಂಡು ಬರುವ ಕಾರ್ಯ

ವಹಿಸಿಕೊಂಡರು. ಉಪನ್ಯಾಸಕರಾಗಿ ಪ್ರೊ. ಪ್ರಿನ್ಸಿಪಾಲ ಶ್ರೀ ಎಸ್. ಎಸ್. ಕಬ್ಬಿನ, ಪ್ರೊ. ಶ್ರೀ ಸಂಗಮನಾಥ ಹಂಡಿ ಅವರಿಗೆ ಬಿನ್ನವಿಸಿದೆ.

ಇಬ್ಬರೂ ಮಕ್ಕಳು ಅವರ ಗೆಳೆಯರು, ಕಾರ್ಮಿಕ ಗೆಳೆಯರು ಶ್ರಮವಹಿಸಿ ಸಕಲ ಸಿದ್ಧತೆ ಮಾಡಿದರು. ಶ್ರೀ ಕಾಶೀರಾಯಗೌಡರು ಶ್ರೀ ಅಪ್ಪಾರಾಯಗೌಡರು ಅವರು ಅಡುಗೆಯ ಊಟ ಉಪಚಾರಗಳ ವ್ಯವಸ್ಥೆ ವಹಿಸಿದರು. ಮನೆಯವರೂ ಮೂರೂ ಕಡೆಯ ಬೀಗರೂ ಸಮಾವೇಶಗೊಂಡಿದ್ದರು. ಸಂಜೆಯ ಸಭೆ ಸಮಾರಂಭದ ಹೊತ್ತಿಗೆ ಬರುವ ಹಿರಿಯ ಮುಖಂಡರಿಗೆ ಉಪಹಾರ ವ್ಯವಸ್ಥೆ ಯೋಚಿಸಿತ್ತು. ಜ್ಞಾನ ಯೋಗಾಶ್ರಮದ ಸಾಧಕ ಶಿವಯೋಗಿಗಳಿಗೆ ಮಧ್ಯಾಹ್ನದ ಪ್ರಸಾದದ ಔತಣಕ್ಕಾಗಿಯೇ ಆಮಂತ್ರಿಸಿ ಬಿನ್ನವಿಸಲಾಗಿತ್ತು.

೧೪–೮–೭೫

ಇಂದು ಮನೆಯಲ್ಲಿ ಶಿವನ ಕೃಪೆಯಿಂದ ಗುರುವಿನೊಲುಮೆಯಿಂದ ಬಸವಣ್ಣನ ದಯೆಯಿಂದ ಹಬ್ಬದ ದಿನ! ಬೆಳಗಿನಲ್ಲಿ ಮೊಮ್ಮಕ್ಕಳೊಡನೆ ಮರಡಿಯ ತೋಟಕ್ಕೆ ಹೋಗಿ ಪತ್ರಿ ಗಿಡಗಳಿಗೆ ಅಭಿಷೇಕ ಪೂಜಾದಿಗಳನ್ನು ಮಾಡಿಕೊಂಡು ಬಂದೆನು. ಇತ್ತ ಮನೆಯಲ್ಲಿ ಹಿರಿಯರೂ ತರುಣರೂ ವಹಿಸಿಕೊಂಡಿದ್ದ ಕಾರ್ಯಗಳು ಸುಗಮವಾಗಿ ಸಾಗಿದ್ದವು.

ಶ್ರೀ ಶಾಂತವೀರ ಅಪ್ಪನವರು ತಂಪು ಹವೆಯಿಂದ ಆರಾಮವಿಲ್ಲದ್ದರಿಂದ ದಯಮಾಡಿಸಿರಲಿಲ್ಲ ಶ್ರೀ ಮಹಾದೇವ ಶಿವಾಚಾರ್ಯ ಸ್ವಾಮಿಯವರು, ಶ್ರೀ ಸಿದ್ಧೇಶ್ವರ ಸ್ವಾಮಿಯವರು ಆಗಮಿಸಿದರು. ಭಕ್ತಿ ಗೌರವಯುತವಾಗಿ ಬಿಜಯಂಗೈಸಿಕೊಂಡೆವು. ಪಾದಪೂಜೆ, ತೀರ್ಥ ಪ್ರಸಾದಗಳ ಪ್ರಾಪ್ತಿ, ಗಣ ತೃಪ್ತಿ, ಸಮುದಾಯ ಭೋಜನ ಜರುಗಿದವು. ಸಾಯಂಕಾಲ ಸಭೆಯ ಸಮಯಕ್ಕೆ ಬಂದ ವಿಜಾಪುರದ ಮಹನೀಯರಿಗೆ ಉಪಾಹಾರ ಸಂತೋಷಕೂಟದ ಏರ್ಪಾಡು ಮಾಡಿದ್ದರು.

ಸಭೆಯಲ್ಲಿ ಬಾಲಿಕೆಯರು 'ನೀಲಲೋಚನೆಯ ವಿವಾಹ' ಏಕಾಂಕ ನಾಟಕ ನೋಡುವದಕ್ಕಾಗಿಯೇ ಊರೊಳಗಿನ ತಾಯಿಯರು, ಸೋದರಿಯರು ವಿಶೇಷ ವಾಗಿ ಬಂದಿದ್ದರು.

ಪ್ರಿನ್ಸಿಪಾಲ ಎಸ್. ಎಸ್. ಕಬ್ಬಿನ ಅವರು 'ಷಟ್‌ಸ್ಥಲಾಚರಣೆಯಲ್ಲಿ ಶಿವಯೋಗ' ಕುರಿತು ಸರಳ ಭಾಷೆಯಲ್ಲಿ ಉಪನ್ಯಾಸವಿತ್ತರು.

ಅಧ್ಯಕ್ಷರಾಗಿದ್ದ ಶ್ರೀ ಸಿದ್ಧೇಶ್ವರ ಸ್ವಾಮಿಗಳವರು ಗ್ರಂಥ ಬಿಡುಗಡೆ ಮಾಡಿ ಮೊದಲ ಕಾಣಿಕೆಯಾಗಿ ಶ್ರೀಗುರುಗಳ ಮಠಕ್ಕೆ (ಶ್ರೀ ಮಹಾದೇವ ಶಿವಾಚಾರ್ಯರಿಗೆ) ಅರ್ಪಿಸಿ, ಗಣ್ಯರಿಗೆ ಪ್ರತಿಗಳನ್ನು ಕೊಡಲಾಯಿತು. ಬಳಿಕ ಅಧ್ಯಕ್ಷರು ಶರಣರ ತತ್ವ ಆಚಾರ ವಿಚಾರಗಳನ್ನು ಅರಿಯುವ ಅಗತ್ಯವನ್ನು ಕುರಿತು ತಮ್ಮ ಹೃದಯಂಗಮ ಶೈಲಿಯಲ್ಲಿ ಮಾತನಾಡಿದರು. ದಾಸಿಗಳಿಗೆ ಹೂಮಾಲೆ ಫಲಪುಷ್ಪಗಳನ್ನು ಶ್ರೀ ಆಶೀರ್ವಾದದೊಡನೆ ಅರ್ಪಿಸಲಾಯಿತು ಮಂಗಲ.

* * * *

೧೯–೮–೭೫ ಗುರುಗಳ ಆರೋಗ್ಯ ವಿಚಾರ ಮತ್ತು ಗುರುದರ್ಶನ ಭಾಗ್ಯ ಉದ್ದೇಶದಿಂದ ಬಬಲೇಶ್ವರಕ್ಕೆ ಹೋಗಿ ಬಂದೆನು. ಗುರುಗಳು ಆರಾಮವಾಗಿದ್ದಾರೆ. ದಿ. ೧೪ರ ಕಾರ್ಯಕ್ರಮ ನಡೆದುದರ ವಿಷಯ ಅರಿಕೆಗೊಳಿಸಿದೆನು.

ಕಲಬುರ್ಗಿಯಲ್ಲಿರುವ ಶಿವಶಂಕರನ ಹತ್ತಿರ ಕೆಲ ದಿನದ ಭೆಟ್ಟಿಗೆ ಹೋಗಿದ್ದಾಗ ಕ್ಷೇತ್ರ ದರ್ಶನ ಹಾಗೂ ಗಾಣಗಾಪುರ ಯಾತ್ರೆ ಮಾಡಿದೆನು. ತಿರುಗಿ ಬರುವಾಗ ಜೇವರಿಗಿಗೆ ಇಳಿದು ಅಖಂಡೇಶ್ವರ ಕರ್ತೃ ಶ್ರೀ ಷಣ್ಮುಖ ಶಿವಯೋಗಿಗಳವರ ಮಠದ ದರ್ಶನ ಅಪೇಕ್ಷಿಸಿ ಹೋದೆನು. ಈಗಿನ ಶಿವಯೋಗಿಗಳಾದ ಶ್ರೀ ನಿ. ಪ್ರ. ಶಾಂತಲಿಂಗ ಸ್ವಾಮಿಗಳ ಅಡಿಗಳಿಗೆರಗಿ ನನ್ನ ಮುಖ್ಯ ಸಾಹಿತ್ಯ ಕೃತಿಗಳನ್ನು ಅರ್ಪಿಸಿದೆನು. ಶಿವಯೋಗಿಗಳು ಅವುಗಳನ್ನು ಕೆಲಹೊತ್ತು ವೀಕ್ಷಿಸಿ "ನಿಮ್ಮ ಸೇವೆ ನಮ್ಮ ಮಠಕ್ಕೂ ಸಲ್ಲಬೇಕೆಂದು ನಮ್ಮ ಅಪೇಕ್ಷೆ!" ಎಂದು ಅಪ್ಪಣೆ ಮಾಡಿದರು. ತಮ್ಮ ಆಶೀರ್ವಾದ ಬಲದಿಂದ ಆಗಬಹುದೆಂದು ಒಪ್ಪಿದೆನು. ಸಂತೋಷದಿಂದ ಪರಾಮರಿಕೆ ಮಾಡಿ, ತಮ್ಮ 'ಅಖಂಡೇಶ್ವರ ವಚನಮಾಲೆ', 'ಜೇವರಗಿ ಜ್ಯೋತಿ', 'ಗುರು ನಂಜೇಶ್ವರ ಪುರಾಣ' ಮುಂತಾದ ಪುಸ್ತಕಗಳನ್ನು ಆಶೀರ್ವದಿಸಿ ಕೊಟ್ಟು ಅಪ್ಪಣೆ ಕೊಟ್ಟರು. ಅಂದಿನಿಂದ (ದಿ. ೨೦–೧೧–೭೫) ಆ ಸ್ಥಾನಕ್ಕೆ ಸಂಬಂಧಿಸಿ ಸಾಹಿತ್ಯ ರಚನೆಯ ಸೇವೆಯು ಸ್ವಲ್ಪ ಮಟ್ಟಿಗೆ ನಡೆಯುತ್ತಲಿದೆ.

ದಿ. ೨೯–೧೧–೭೫ ಗುರುಸನ್ನಿಧಾನ ದರ್ಶನಕ್ಕೆ ಹೋಗಿ ಪ್ರವಾಸದ ವಿಷಯ ಮುಖ್ಯವಾಗಿ ಶಿವಯೋಗಿ ಷಣ್ಮುಖಸ್ವಾಮಿಗಳ ಮಠದ ದರ್ಶನ, ಶ್ರೀ ಶಾಂತಲಿಂಗ ಶಿವಯೋಗಿಗಳೊಡನೆ ಉಂಟಾದ ಸಾಹಿತ್ಯ ಸಂಪರ್ಕ ವಿಷಯ ಅರಿಕೆಗೊಳಿಸಿದೆ. ವೈದಡವುತ್ತ 'ನಿಮ್ಮ ಸಾಹಿತ್ಯದ ಸೇವೆ ಮುನ್ನಡೆಯುತ್ತಲಿದೆ' ಎಂದರು. 'ತಾವೇ ತೋರಿಸಿದ ದಾರಿ, ತಾವಿತ್ತುದೇ ನಡೆವ ಶಕ್ತಿ' ಎಂದು ವಂದಿಸಿದೆ.

ತರಳಬಾಳು ಹುಣ್ಣಿಮೆ ಮಹೋತ್ಸವ: ಈ ವರ್ಷ ವಿಜಾಪುರದಲ್ಲಿ ೬–೨–೭೬ ರಿಂದ ೧೫–೨–೭೬ ಹತ್ತು ದಿವಸ ಸಿರಿಗೆರೆಯ ತರಳಬಾಳು ಹುಣ್ಣಿಮೆ ಮಹೋತ್ಸವ ನೆರವೇರಿಸುವ ನಿರ್ಧಾರವಾಗಿತ್ತು. ಸಿದ್ಧತೆಗಳು ಭರದಿಂದ ಸಾಗಿದ್ದವು. ಇಲ್ಲಿಯ ಶಿವಯೋಗಿಗಳು ವಿದ್ಯಾವಂತರು ರಾಜಕೀಯ ಸಾಮಾಜಿಕ ಹಿರಿಯರು ಸಹಕರಿಸಿ ನಡಿಸಲು ಸನ್ನದ್ಧರಾಗಿದ್ದರು. ಸಾಹಿತ್ಯ ವಿಭಾಗದ ಅಧ್ಯಕ್ಷರಾಗಿದ್ದ ಶ್ರೀ ಸಿದ್ಧೇಶ್ವರ ಸ್ವಾಮೀಜಿ ಸ್ಮಾರಕ ಗ್ರಂಥ (ಭಾವ ಸಂಗಮ)ಕ್ಕಾಗಿ ನನಗೂ ಶ್ರೀ ಫ. ಗು. ಹಳಕಟ್ಟಿಯವರ ಸಮಾಜ ಸೇವೆ ಕುರಿತು ಬರೆದುಕೊಡಲು ಅಪ್ಪಣೆ ಮಾಡಿದರು. ಬರೆದು ಸಿದ್ಧಪಡಿಸಿದೆನು. 'ವಿಜಾಪುರ ಜಿಲ್ಲೆಯ ಶಿವಶರಣರು' ಬರೆಯಲು ಹೇಳಿದರು. ಹಿಂದೆ ಜಿಲ್ಲಾ ಸಾಹಿತ್ಯ ಸಮ್ಮೇಲನದ ಸ್ಮಾರಕ ಗ್ರಂಥ 'ಪಂಚ ಗಂಗಾ'ದಲ್ಲಿ ನಾನೇ ಬರೆದುದನ್ನು ಎತ್ತಿಕೊಳ್ಳಲು ಮನವಿ ಮಾಡಿದೆನು.

೧೧–೨–೭೬ ದಿನದ ವಿಚಾರ ಗೋಷ್ಠಿಯಲ್ಲಿ 'ಅಷ್ಟಾವರಣ' ವಿಷಯದ ಉಪನ್ಯಾಸಕನೆಂದು ಕಾರ್ಯ ಭಾಗದಲ್ಲಿ ಸೇರಿಸಿ ತಿಳಿಸಿದರು. 'ಆಗಲಿ' ಎಂದು ಎಂದು ಭಾಷಣ ಅಲ್ಲಿದೆ ಪ್ರಶ್ನೋತ್ತರಗಳಿಗೂ ಸಿದ್ಧತೆ ಮಾಡಿದೆನು. ಶ್ರೀಗುರು ಕೃಪೆಯಿಂದ ವಹಿಸಿಕೊಂಡ ಸೇವೆ ನಿರ್ವಹಿಸಲು ಸಾಧ್ಯವಾಯಿತು.

ಜೇವರಗಿ ಶಿವಯೋಗಿಗಳು ಭರತನೂರಿನ 'ಗುರು ನಂಜೇಶ್ವರ' ಚರಿತ್ರೆ ಬರೆಯಲು ಕೇಳಿಕೊಂಡು ಪತ್ರ ಬರೆದಿದ್ದರು.

೧೫–೬–೭೬ ಗುರು ದರ್ಶನಕ್ಕೆ ಹೋದೆ ವಂದಿಸಿದೆ. ಕಣ್ಣಿನ ಆಪರೇಶನ್ ಪರಿಣಾಮ ವಿಚಾರಿಸಿದರು. ಕೆಲಮಟ್ಟಿಗೆ ಅನುಕೂಲವಾದುದನ್ನು ಅರಿಕೆ ಮಾಡಿದೆ. ಜೇವರಗಿ ಶ್ರೀ ಶಾಂತಲಿಂಗ ಶಿವಯೋಗಿಗಳವರ ಸಾಹಿತ್ಯದ ಆಸಕ್ತಿಯನ್ನು ಪ್ರಸ್ತಾಪಿಸಿದೆ. ಭರತನೂರಿನ ಗುರು ನಂಜೇಶ್ವರ ಬರೆಯಬೇಕಾದ ಸಂದರ್ಭ ವಿವರಿಸಿದೆನು. ತತ್ಕ್ಷಣ ಪ್ರೋತ್ಸಾಹನ ಪರ ಆಶೀರ್ವಾದ ಹಸ್ತ ಬೆನ್ನ ಮೇಲೆ ಬಂದು ಬಿಟ್ಟಿತು. ಉತ್ಸಾಹಗೊಂಡು ವಂದಿಸಿ ಅಪ್ಪಣೆ ಪಡೆದು ಬಂದೆನು.

೧–೭–೭೬ ರಿಂದ ಗುರು ನಂಜೇಶ್ವರ ಚರಿತ್ರೆ ಬರೆಹ ಆರಂಭಿಸಿದೆ ಜುಲೈ ೨೫ ರಿಂದ ಸತತ ಕುಳಿತು ಮುಂದುವರೆಸಿದೆ.

ಪೂಜ್ಯ ಜ.ಚ.ನಿ. ಸನ್ನಿಧಿಯಿಂದ ದಿ. ೨೭–೮–೭೬ ರಂದು 'ಬಬಲೇಶ್ವರ ಶಿವಯೋಗಿಗಳು' ಗ್ರಂಥದ ಉದ್ಘಾಟನೆಯೆಂದು ಶ್ರೀ ಮಿರ್ಜಿಯವರಿಂದ ಪತ್ರ ಬಂದಿತ್ತು. ದಿ. ೨೬ರಂದು ಬೇಗನೆ ಬಬಲೇಶ್ವರಕ್ಕೆ ಹೋಗಿ ಶ್ರೀಗುರು ಸನ್ನಿಧಿಯಲ್ಲಿ

'ಗುರು ನಂಜೇಶ್ವರ' ಬರೆದಷ್ಟು ಭಾಗ ಓದಿದೆ. ಗಮನಿಸಿ ಆಲಿಸಿದರು. ಗುರುಗಳು ಎಂದಿನಂತೆ ವೈದಡವಿ ಪ್ರೋತ್ಸಾಹಿಸಿದರು. ಶ್ರೀ ಶ್ರೀ ಮಲ್ಲಿಕಾರ್ಜುನ ಸಲಹೆ ಯಂತೆ ಹೊರಗಿನವರನ್ನು ಕರೆಯಿಸದೆ ಈ ಸಲದ ಶ್ರಾವಣ ಪುರಾಣ ಪ್ರವಚನವನ್ನು ಬಬಲೇಶ್ವರ ಹಿರೇಮಠದಲ್ಲಿ ಶ್ರೀ ಮಹಾದೇವ ಶಿವಾಚಾರ್ಯರೇ 'ಬಸವರಾಜ ದೇವರು' ಮಾಧ್ಯಮ ಮಾಡಿ ನಡೆಯಿಸಿದ್ದರು. ಶ್ರೋತೃಗಳೊಂದಿಗೆ ಕುಳಿತು ಕೇಳಿದೆ. ಸಾಧನೆಯು ಹಂತವಾದರೂ ಅವರ ವಾಣಿಗೆ ಸಿದ್ಧಿಗೆ ಸನ್ನಿಹಿತವಾಗಿದ್ದು. ಶಿವಾಚಾರ್ಯ ಆದೇಶದಂತೆ ಚಿಕ್ಕ ಭಾಷಣ ಮಾಡಿದೆ. ಮರುದಿನ (ದಿ. ೨೭) ಪೂಜ್ಯ ಜ.ಚ.ನಿ. ಮಹಾಸ್ವಾಮಿಗಳಿಂದ ಬಬಲೇಶ್ವರ ಮಹಾಜನರ ದೊಡ್ಡ ಸಭೆಯಲ್ಲಿ 'ಬಬಲೇಶ್ವರ ಶಿವಯೋಗಿಗಳು' ಗ್ರಂಥದ ಉದ್ಘಾಟನೆ ಸಮಾರಂಭ ಜರುಗಿತು. ರಾತ್ರಿ ವಿಜಾಪುರಕ್ಕೆ ಬಂದೆನು.

ಎಪ್ರಿಲ್ '೭೭'ದಲ್ಲಿ ತೊರವಿಯ ಹಿರೇಮಠದ ಉತ್ತರಾಧಿಕಾರಿ ವಟುವಿನ ಪಟ್ಟಾಧಿಕಾರ ಸಮಾರಂಭ ನಡೆಯತಕ್ಕದಿತ್ತು. ಈ ಕುರಿತು ಬಬಲೇಶ್ವರ ಶಾಂತವೀರ ಸ್ವಾಮಿಗಳವರೊಡನೆ ಆಲೋಚಿಸುವದಕ್ಕೂ, ಅವರಿಗೂ ಶ್ರೀ ಮಹಾದೇವ ಶಿವಾಚಾರ್ಯರಿಗೂ ಬಿನ್ನಹ ಮಾಡುವದಕ್ಕೂ ಇಲ್ಲಿಯ ಹಿರಿಯ ಪಟ್ಟಾಧ್ಯಕ್ಷ ಸ್ವಾಮಿಗಳು ಹೊರಟು, ತಮ್ಮೊಡನೆ ಶ್ರೀ ಕಾಶೀರಾಯಗೌಡರನ್ನೂ ನನ್ನನ್ನೂ ಕರೆದುಕೊಂಡರು. ದಿ. ೨೭–೧–೭೭ ರಂದು ಮೂವರೂ ಬಬಲೇಶ್ವರಕ್ಕೆ ಹೋಗಿದ್ದೆವು. ಶ್ರೀಗುರುಗಳ ದರ್ಶನವಾಯಿತು. ಉದ್ದೇಶಿತ ವಿಚಾರ ವಿನಿಮಯ ಮಾಡಿಕೊಂಡು, ಬಿನ್ನಹ ಮಾಡಿ ಬಂದಿದ್ದೆವು.

ಎಪ್ರಿಲ್ ೨೨, ೨೩ ಎರಡು ದಿನ ತೊರವಿ ಹಿರೇಮಠ ಪಟ್ಟಾಧಿಕಾರ ಸಮಾರಂಭ ನಡೆಯಿತು. ಆರೋಗ್ಯ ಸರಿ ಇಲ್ಲದ್ದರಿಂದ ಶ್ರೀ ಶಾಂತವೀರ ಅಪ್ಪನವರು ಬಂದಿರಲಿಲ್ಲ. ಶ್ರೀ ಮಹಾದೇವ ಶಿವಾಚಾರ್ಯರು ಆಗಮಿಸಿದ್ದರು.

ದಿ. ೨೩–೯–೭೭ ಶ್ರೀ ಸದ್ಗುರು ಶಾಂತವೀರ ಅಪ್ಪನವರ ೯೧ ನೆಯ ವರ್ಧಂತಿ ಉತ್ಸವಕ್ಕೆ ನಾನೂ ಸ್ವಯಂ ಹೋಗಿದ್ದೆವು. ಕಣ್ಣು ಮನಗಳಿಗೆ ತೃಪ್ತಿ!! ಮುಂದಿನ ಎರಡು ದಿನಗಳ ಕಾರ್ಯಕ್ರಮಕ್ಕೆ ಅನಾರೋಗ್ಯದಿಂದ ಹೋಗಲು ಸಾಧ್ಯವಾಗಲಿಲ್ಲ.

ಶ್ರೀಗುರುಗಳ ದರ್ಶನದ ಬಯಕೆಯಾಗಿ ಬಬಲೇಶ್ವರ (ದಿ. ೩೦–೩–೭೮) ಹೋಗಿ ಉಭಯ ಶ್ರೀಗಳ ಪಾದ ವಂದನೆಗೈದು ಅವರೊಡನೆ ಶಿವಸಲ್ಲಾಪ ನಡೆಸುತ್ತ

ಆನಂದದಿಂದ ಅಲ್ಲಿಯೇ ಉಳಿದೆನು. ಅಂತರಂಗದಲ್ಲಿ ತಾವೇ ಪ್ರೇರಿಸಿದಂತೆ 'ಕೆಳದಿಯ ಚೆನ್ನಮ್ಮಾಜಿಯ ಚರಿತ್ರೆ' ಬರೆಯುವ ಸಂಕಲ್ಪವನ್ನು ಅರಿಕೆಗೊಳಿಸಿದೆ. ಅಪ್ಪನವರ ಪ್ರಶ್ನೆಗಳಿಗೆ ಕತೆಯ ಮುಖ್ಯಾಂಶಗಳನ್ನು (ಸನ್ನಿವೇಶಗಳನ್ನು) ವಿವರಿಸಿದೆ. ಆಶೀರ್ವಾದವಾಗಿ ಅಪ್ಪಣೆ ದೊರೆಯಿತು. ಮರುದಿನ ಮರಳಿ ಬಂದೆನು

ದಿ. ೮–೪–೭೮ ಯುಗಾದಿ ಉದ್ದೇಶಿತ 'ಕೆಳದಿಯ ಚೆನ್ನಮ್ಮ' ಚರಿತ್ರೆ ಬರೆಹವನ್ನು ಆರಂಭಿಸಿದೆ. ಅಷ್ಟರಲ್ಲಿ 'ಕೆಳದಿ ನೃಪ ವಿಜಯ' ಓದಿದ್ದೆನು.

ಚೆನ್ನಮ್ಮ ಚರಿತ್ರೆ ಬರೆಹ ಒತ್ತರದಿಂದ ಸಾಗಿತ್ತು ಬರೆದ ಭಾಗ ಪರಿಶೀಲಕ ಪ್ರತಿಯನ್ನು ಮಾಡುತ್ತಲಿದ್ದೆ. ಶ್ರೀ ಗುರುಗಳ ಹತ್ತಿರ ಮೊದಲ ಓದಿಗಾಗಿ ದಿ. ೪–೬–೭೮ ಬಬಲೇಶ್ವರಕ್ಕೆ ಹೋಗಿ ಗುರುಪಾದ ಕಂಡೆನು. ಸನ್ನಿಧಿಯಲ್ಲಿ ಬರೆದಾದಷ್ಟು ಭಾಗ ಓದಿದೆ 'ಪ್ರಕಾರ ಬೇರೆಯಾದರೂ ಆಕರ್ಷಕವಾಗಿದೆ, ರೋಮಾಂಚನಕಾರಿಯಾಗಿದೆ' ಎಂದು ಪ್ರೋತ್ಸಾಹಿಸಿದರು ಗುರುಗಳು.

೧೯೭೯ ಜನೇವರಿ ಮಕರಸಂಕ್ರಮಣ ಮರುದಿನ ಸಂಜೆ ಅಸ್ವಸ್ಥವಾಯಿತು ರಾತ್ರಿ ಚಳಿ ಬಂದು ಜೋರಾಗಿ ಜ್ವರ ಬಂದವು ಜ್ವರ ನಿಲ್ಲಲಿಲ್ಲ ಜನೇವರಿ ಕೊನೆಯಲ್ಲಿ ಪೂರ್ಣ ಹಾಸಿಗೆ ಹಿಡಿಸಿತು. ಫೆಬ್ರುವರಿ ತಿಂಗಳೆಲ್ಲ ಜ್ವರ ನಿಲ್ಲಲೇ ಇಲ್ಲ. ಪ್ರಜ್ಞೆ ತಪ್ಪುತ್ತಲೂ ಇತ್ತಂತೆ. ಶ್ರೀ ಕಾಶೀರಾಯಗೌಡರು ೨, ೩, ದಿವಸಕ್ಕೊಮ್ಮೆ ಬಂದು ನೋಡುತ್ತಿದ್ದರು. ಒಂದು ದಿನ ರಾತ್ರಿಯಂತೂ ಎಲ್ಲರೂ ನಿರಾಶರಾಗಿ ಕಾದಿದ್ದರಂತೆ! ಗುರು ಕರುಣಾಬಲ! ಶಿವನಿಚ್ಛೆ ಹಾಗಿರಲಿಲ್ಲ ಮಾರ್ಚ ೨ರ ನಂತರ ಜ್ವರ ನಿಂತವು.

ಗುರುಗಳಿಗೂ ಕಾಯಿಲೆ

ನನಗೆ ಹೀಗಿರುವಾಗಲೇ ನನ್ನ ಗುರುಗಳಿಗೆ ಗಂಟಲು ನೋವಿನ ಬಾಧೆಯಾಗಿ ನರಳುವಂತಾಗಿತ್ತು. ಆಹಾರ ನುಂಗುವಾಗ ನೋವೆನಿಸುತ್ತಿತ್ತು. ಊಟ ಬಿಟ್ಟು ತೆಳುವಾದ ಗಂಜಿಯನ್ನೂ ನುಂಗುವಾಗ ನೋವೆನಿಸುತ್ತಿತ್ತು. ಬಬಲೇಶ್ವರದ ವೈದ್ಯರಿಂದ ಗುಣವಾಗದ್ದರಿಂದ ಅವರನ್ನು ಮತ್ತೆ ವಿಜಾಪುರ ಸಿಟಿ ಹಾಸ್ಪಿಟಲಿಗೆ ಕರಕೊಂಡು ಬಂದಿದ್ದರಂತೆ ಎಂದು ಯಾವಾಗ ಎಂಬುದು ನನಗೆ ಗೊತ್ತಿಲ್ಲ ನನ್ನ ಕಾಯಿಲೆ ಬಲವತ್ತಾಗಿರುವ ಸಮಯ!

ನನಗೆ ಗೊತ್ತಾದಾಗ 'ಅಯ್ಯೋ ಶಿವ ಶಿವಾ' ಎಂದು ಮಿಡುಕಿದೆ ಹೋಗಲಮ್ಮನು! ಏನು ಮಾಡಲಿ! ಡಾ|| ಎಸ್. ಎಫ್. ಪಾಟೀಲರ ಅವಿರತ ಶ್ರಮದ ಉಪಚಾರದಿಂದ ನೋವು ಕಡಿಮೆಯಾಗಿದೆಯೆಂಬ ಸಮಾಧಾನದ ಕೇಳಿಕೆಯೇ ನನಗೆ ಇದ್ದುದರಲ್ಲಿ ಸಮಾಧಾನ ಕಾರಣವಾಗಿತ್ತು! ಆ ನೋವಿನ ಕಾರಣ ವೇನು ಎಂಬುದು ಭಕ್ತ ಪ್ರಮುಖರಿಗೆ ಸಂದೇಹಕ್ಕೆಡೆ ಮಾಡಿಕೊಟ್ಟಿತ್ತು! ಹುಬ್ಬಳ್ಳಿಗೆ ಕರೆದುಕೊಂಡು ಹೋಗಿ ಡಾ|| ಆರ್. ಬಿ. ಪಾಟೀಲರಿಂದ ಪರೀಕ್ಷಿಸಿ ಸಂಶಯ ಕಳೆದುಕೊಳ್ಳುವ ವಿಚಾರ ತಲೆಹಾಕಿತ್ತು. ಆದರೆ ಇದನ್ನು ಸ್ವಾಮಿಗಳಿಗೆ ತಿಳಿಸ ಬೇಕೋ ಬೇಡವೋ, ತಿಳಿಸಿದರೆ ಒಪ್ಪುವರೋ ಇಲ್ಲವೋ ಈ ಅನುಮಾನವೂ ಉಂಟಾಗಿತ್ತು. ಅದೇ ಕಾಲದಲ್ಲಿ ನನಗೆ ಕಾಯಿಲೆಯಾದುದೂ ಅವರಿಗೆ ಗೊತ್ತಾಗಿ ತಮ್ಮ ಮನಸ್ಸಿಗೆ ಕಳವಳ ಮಾಡಿಕೊಂಡಿದ್ದರು. ಅದರಿಂದ 'ನಾನು ಲಕ್ಕಪ್ಪ ನವರನ್ನು ನೋಡಬೇಕು ನನ್ನನ್ನು ಅವರ ಮನೆಗೆ ಕರಕೊಂಡು ಹೋಗಿರಿ' ಎಂದು ತಮ್ಮನ್ನು ನೋಡಿಕೊಳ್ಳುತ್ತಿರುವವರಿಗೆ ಆಗ್ರಹಪಡಿಸುತ್ತಿದ್ದರು. ಅತಿ ಕ್ಷೀಣ ಶರೀರದ ಅವರನ್ನು ಅತ್ತಿತ್ತ ಕರೆದೊಯ್ಯುವದು ಸರಿಯೂ ಅಲ್ಲ. ಸಾಧ್ಯವೂ ಇರಲಿಲ್ಲ. ಕಾಶೀರಾಯಗೌಡರು ಆಗಾಗ ಶ್ರೀ ಗುರುಗಳ ಹತ್ತಿರವೂ ನನ್ನ ಹತ್ತಿರವೂ ಬಂದು ಹೋಗುತ್ತಿದ್ದರು. ಅವರ ಅಪ್ಪನವರ ಒತ್ತಾಸೆ ತಿಳಿದು 'ಈಗ ಹೋಗುವದು ಬೇಡರಿ ಅಪ್ಪಾ ಅವರ! ನೀವು ಬೇಗನೆ ಬಬಲೇಶ್ವರಕ್ಕೆ ಹೋಗುವ ವರಿದ್ದೀರಿ. ಆಗ ನಿಮ್ಮ ಕಾರನ್ನು ಶಿರಹಟ್ಟಿಯವರ ಮನೆಯ ಮುಂದೆ ಬಾಗಿಲಿಗೆ ಒಯ್ಯೋಣ, ಲಕ್ಕಪ್ಪನವರಿಗೂ ಸ್ವಲ್ಪ ಬಾಗಿಲವರೆಗೆ ಬರುವಷ್ಟು ಈಗ ಶಕ್ಯವಾಗಿದೆ. ಅಲ್ಲಿಯೇ ಗುರು-ಭಕ್ತರ ದರ್ಶನ ನಡೆಯುವದು' ಅವರ ಭಕ್ತ ವಾತ್ಸಲ್ಯತೆಯ ತೀವ್ರತೆಗೆ ತಾತ್ಕಾಲಿಕ ಸಮಾಧಾನ ಹೇಳಿದ್ದರು. ಅದನ್ನು ಗೌಡರು ಬಂದು ನನಗೆ ತಿಳಿಸಿದರು.

ಅಷ್ಟರಲ್ಲಿ ಶ್ರೀಗಳ ಉಪಚಾರಿಕೆ ಶ್ರೀಮತಿ ಬಸಲಿಂಗಮ್ಮನವರು ಶ್ರೀ ಶಾಂತವೀರ ಅಪ್ಪನವರಿಗೆ 'ಶಿರಹಟ್ಟಿ ಸಾಹೇಬರಿಗೆ ಆರಾಮವಾಗ ಹತ್ತಿದೆ ಯೆಂದು ಕೇಳಿದ್ದೇನೆ. ಈಗ ನಾನು ಅವರ ಮನೆಗೆ ಹೋಗಿ ನಿಮ್ಮ ಕಳಕಳಿ ತಿಳಿಸಿ, ಅವರ ಆರೋಗ್ಯವನ್ನು ಪೂರ್ಣವಾಗಿ ವಿಚಾರಿಸಿಕೊಂಡು ಬರುವೆನು' ಎಂದು ಸಮಾಧಾನ ಹೇಳಿದ್ದರು.

ಬಸವಲಿಂಗಮ್ಮನವರು ಮನೆಗೆ ಬಂದರು ಸ್ವಾಮಿಗಳವರು ನಿಮ್ಮನ್ನು

ನೋಡಲು ಬರಬೇಕೆಂದು ಬಯಸಿದ್ದರು. ಅವರನ್ನು ಕರಕೊಂಡು ಬರುವದು ಸುಲಭವಾಗಿಲ್ಲ. ಮೊದಲು ನಾನು ಹೋಗಿ ಅವರ ಆರೋಗ್ಯ ವಿಚಾರಿಸಿಕೊಂಡು ಬರುವೆನು ಎಂದು ಹೇಳಿದ್ದೇನೆ ಎಂದರು.

"ತಂಗೀ ಗುರುಗಳೂ ತೀವ್ರ ಕಾಯಿಲೆಯಲ್ಲಿದ್ದಾರೆ. ಈಗ ಅವರು ಬರಬೇಕೇ? ನಾನು ಹೋಗಬೇಕು ಸದ್ಗುರು ಅಪ್ಪನವರು ಸದಾ ನನ್ನ ಹತ್ತಿರವೇ ಇದ್ದಾರೆ. ನನ್ನಲ್ಲಿಯೇ ಇದ್ದಾರೆ ಅವರು ಕೊಟ್ಟ ಲಿಂಗ ಎದೆಯ ಮೇಲಿದೆ, ಮನದಲ್ಲಿ ಅವರ ನೆನಹು ನೆಲೆಯಾಗಿದೆ. ಭಾವದಲ್ಲಿ ಅವರ ಸ್ಮರಣೆಯು ಬೆಳಕು ಮೂಡಿದೆ. ಕಿವಿಯಲ್ಲಿ ಅವರ ಸೂಕ್ತ ಹಿತೋಕ್ತಿ ಚುಟುಕುಗಳು ನಿನದಿಸುತ್ತದೆ. ಅವರ ಪವಿತ್ರ ಹಸ್ತ ಬೆನ್ನ ಮೇಲೆ ಆಡುತ್ತಿರುವಂತೆಯೇ ಭಾವದಲ್ಲಿದೆ. ತಂಗಿ ಅವರ ಪಾದಗಳಿಗೆ ನನ್ನ ಪ್ರಣಾಮ ಸಲ್ಲಿಸಿರಿ. ಅವರು ಬರುವದು ಬೇಡವೆಂಬ ನನ್ನ ಪ್ರಾರ್ಥನೆ ತಿಳಿಸಿರಿ. ಎರಡು ಮೂರು ದಿನಗಳಲ್ಲಿ ಹೇಗಾದರೂ ಮಾಡಿ ನಾನೇ ಅವರ ದರ್ಶನಕ್ಕೆ ಬರುವೆನು" ಎಂದು ಹೇಳಿ ಕಳಿಸಿದೆನು.

ಮೂರನೆಯ ದಿವಸಕ್ಕೆ ಇಬ್ಬರೂ ಮಕ್ಕಳು ನನ್ನನ್ನು ಎಬ್ಬಿಸಿ ಟಾಂಗಾದಲ್ಲಿ ಕರಕೊಂಡು ಹೋಗಿ ಅಪ್ಪನವರು ಮಲಗಿದ ಆಸ್ಪತ್ರೆಯ ಅಟ್ಟದ ಮೇಲಿನ ಕೋಣೆಗೆ ತಲುಪಿಸಿದರು. ಅದೇನು ಸುದೈವ! ಅದೇ ಸ್ವಲ್ಪ ಮುಂಚೆ ಶ್ರೀಗಳನ್ನು ಕಾಣಲು ಬಂದಿದ್ದ ಶ್ರೀ ಶ್ರೀ ಮಲ್ಲಿಕಾರ್ಜುನ ಶಿವಯೋಗಿಗಳು ಶ್ರೀ ಸಿದ್ಧೇಶ್ವರ ಬುದ್ಧಿಯವರೂ ಅಲ್ಲಿದ್ದರು. ಈ ಮೂವರೂ ಸ್ವಾಮಿಗಳ ಸಮಾಗಮವು ನನ್ನ ಅಶಕ್ತಿಯ ಕಲ್ಪನೆಯನ್ನು ಮೀರಿ ಮೂವರ ಪಾದಗಳಿಗೆ ವಂದಿಸುವಂತೆ ಮಾಡಿತು. ಅಲ್ಲಿದ್ದವರು ನನಗೆ ಕೂಡ್ರಲಿಕ್ಕೆ ಅನುವು ಮಾಡಿಕೊಟ್ಟರು. ಎಲ್ಲರ ಮಾತುಕತೆಗಳಲ್ಲಿ ಗುರುಗಳ ಆರೋಗ್ಯ ವಿಚಾರ ತಿಳಿಯಿತು. ಮತ್ತೆ ಗುರುಪಾದಕ್ಕೆ ವಂದಿಸಿದಾಗ ಪ್ರಯಾಸದಿಂದ ಅವರ ಹಸ್ತ ಮೈದಡವದೆ ಇರಲಿಲ್ಲ. ಅವರ ಸೂಚನೆಯಂತೆ ಮಕ್ಕಳು ಮನೆಗೆ ಕರಕೊಂಡು ಬಂದರು.

ಶ್ರೀ ಶಾಂತವೀರ ಅಪ್ಪನವರನ್ನು ಬಬಲೇಶ್ವರಕ್ಕೆ ಕರಕೊಂಡು ಹೋಗುವಾಗ ಮೊದಲು ಹುಬ್ಬಳ್ಳಿಗೆ, ಡಾ॥ ಆರ್. ಬಿ. ಪಾಟೀಲರ ಕಡೆಗೆ ಹೋಗಿ ಗಂಟಲು ನೋವು ಅರ್ಬುದ ರೋಗವಲ್ಲವೆಂದು ಖಚಿತಪಡಿಸಿಕೊಂಡು ಹೋಗಿದ್ದರು ನೋವು ಕ್ರಮವಾಗಿ ಕಡಿಮೆಯಾಗುತ್ತ ಹೋಗಿತ್ತು.

ದಿ. ೨೩–೪–೭೯ ಸೋಮವಾರ ನಸುಕಿನಲ್ಲಿ ಎದ್ದು ಕುಳಿತು ಲಿಂಗವನ್ನು ವಂದಿಸಿದೆ ತನ್ನಷ್ಟಕ್ಕೆ ತಾನೇ ಬಂದ ಈ ಪಲ್ಲವಿಯನ್ನು ದನಿ ತೆಗೆದು ಹಾಡಿದೆನು.

ಶಾಂತಮೂರ್ತಿ ಧವಳ ಕೀರ್ತಿ ಪರಮಪೂಜ್ಯ ಮಹಿಮರು
ಧಾತ್ರಿ ಪಡೆದ ಶಿವನ ವರವು ಶಾಂತಮೂರ್ತಿ ಸದ್ಗುರು||

ಜೂನ ೩ ರವಿವಾರ ಮೊಮ್ಮಗ ಮಹೇಶನನ್ನು ನೆರವಿಗೆ ಕರಕೊಂಡು ಬಬಲೇಶ್ವರಕ್ಕೆ ಹೋದೆನು. ಉಭಯ ಶ್ರೀಗಳ ದರ್ಶನ ಮಾಡಿದೆನು. ತೀರ್ಥ ಪ್ರಸಾದದಿಂದ ತೃಪ್ತನಾದೆನು. ಗುರುಶಿಷ್ಯರ ಕಾಯಿಲೆಗಳ ಕಾರಣವನ್ನೊಳಗೊಂಡು ಶಿವಸನ್ನಿಧಾನದ ಪಾರಮಾರ್ಥಿಕ ಸಂಭಾಷಣೆಗಳಿಂದ ಆನಂದಿಸಿದೆನು. ತೊರವಿಯ ಶ್ರೀ ಬಸವೇಶ್ವರ ಅನುಭವಮಂಟಪ ಕಟ್ಟಡದ ಹಾಗೂ ಶ್ರೀ ಷಣ್ಮುಖ ಶಿವಯೋಗಿ (ಜೇವರಗಿ) ಚರಿತ್ರೆ ಬರೆಹದ ಪ್ರಸ್ತಾಪಮಾಡಿ ಗುರುಗಳಿಗೆ ವಿವರ ನೀಡಿದೆನು. ಸಾಯಂಕಾಲ ಅಪ್ಪಣೆ ಪಡೆದು ಮರಳಿದೆನು.

ಮಾರ್ಚದಲ್ಲಿ ಆಸ್ಪತ್ರೆಯಿಂದ ಮರಳಿದ ಬಳಿಕ ಗುರುಗಳು ಕೆಲವು ತಿಂಗಳು ಕೆಲಮಟ್ಟಿಗೆ ಆರೋಗ್ಯವಾಗಿದ್ದು ಭಕ್ತರ ಮನಕ್ಕಾನಂದ ನೀಡಿದರು. ಅಕ್ಟೋಬರದಲ್ಲಿ ಅವರ ಶರೀರದ ಹಿಂದಿನ ವಿಕಾರ ಮತ್ತೆ ಉಲ್ಬಣಿಸಿತು. ಏಳು ತಿಂಗಳ ನಂತರ ಮತ್ತೆ ವಿಜಾಪುರ ಸಿಟಿ ಹಾಸ್ಪಿಟಲಿಗೆ ಕರೆದುಕೊಂಡು ಬರಲಾಗಿತ್ತು. ೬೩ ವಯದ ಅಪ್ಪನವರ ಶರೀರ ತೀರ ಸೂಕ್ಷ್ಮವಾಗಿತ್ತು. ಡಾಕ್ಟರರ ಪ್ರಯತ್ನ ಸಾಗದ ಸ್ಥಿತಿ ಕಂಡು ಬಂದಿತ್ತು. ನಗರದ ಭಕ್ತ ಜನರು ನಿತ್ಯ ದರ್ಶನಕ್ಕೆ ಸಾಲು ಸಾಲಾಗಿ ಬರುತ್ತಿದ್ದರು. ಶ್ರೀ ಮಹಾದೇವ ಸ್ವಾಮಿಗಳವರು ವಿಜಾಪುರದಲ್ಲಿ ಗುರುಗಳ ಆರೈಕೆಗೂ, ಅತ್ತ ಬಬಲೇಶ್ವರದ ಮಠದ ವ್ಯವಸ್ಥೆಗೂ ಗಮನ ಹರಿಸುತ್ತ ಅಲೆದಾಡುತ್ತಿದ್ದರು. ಅಪ್ಪನವರ ಆರೈಕೆ ಸೇವೆ ಅನೂನವಾಗಿ ಸಾಗಿತ್ತು.

ಲಿಂಗೈಕ್ಯ ಗುರುಗಳು

ದಿ. ೧೦–೧೧–೭೯ ಮಧ್ಯಾಹ್ನ ನಾನು ದರ್ಶನಕ್ಕೆ ಹೋಗಿದ್ದೆನು. ಹಿಂದಿನ ದಿನಗಳಿಗಿಂತ ಇಂದು ಸ್ವಲ್ಪ ಚೇತರಿಸಿಕೊಂಡಂತೆ ಕಂಡಿತು. ಅದನ್ನು ಶ್ರೀಮತಿ ಬಸವಲಿಂಗಮ್ಮನವರೂ ಹೌದೆಂದರು. ಮುಖದಲ್ಲಿ ಕಳೆ ಮೂಡಿತ್ತು. ಪ್ರಜ್ಞೆ ಅಂತರ್ಮುಖವಾಗಿ ಹಲವು ದಿನವಾಗಿತ್ತು. ಅದು ಬೇರೆ! ನೋಡಿದವರ ಮನಸ್ಸಿಗೆ ಆಶೆ ಕಾಣುತ್ತಿತ್ತು. ಆದರೆ ಅದು ವಾಸ್ತವವಾಗಿರಲಿಕ್ಕಿಲ್ಲ! ಸಾಯಂಕಾಲ

ತೊರವಿಯಿಂದ ದರ್ಶನಕ್ಕೆ ಹೋದ ನಮ್ಮ ಕಾಶೀರಾಯಗೌಡರು, ೫ ಗಂ. ೧೫ ನಿಮಿಷಕ್ಕೆ ಸ್ವಾಮಿಗಳು ಲಿಂಗೈಕ್ಯರಾದರೆಂದು ನಮ್ಮ ಮನೆಗೆ ಹೇಳಿಕಳಿಸಿದರು. ಕೂಡಲೆ ಆಸ್ಪತ್ರೆಗೆ ಧಾವಿಸಿದೆವು. ಕಿಡಕಿಯ ಬೆಳಕಿನಡಿಯಲ್ಲಿ ಗುರುಗಳ ಸತೇಜ ಮುಖ ನೋಡಿದೆ! ಅಂತರಂಗ ಗೋಗರೆಯಿತು.

ಅರ್ಧತಾಸಿನಲ್ಲಿ ಆಸ್ಪತ್ರೆಯ ಆವರಣದಲ್ಲ ಜನತುಂಬಿತು. ಗದ್ದಲ ವಾಗದಂತೆ ಎಲ್ಲರಿಗೆ ದರ್ಶನಾನುಕೂಲ ಮಾಡಿದರು. ೮ ಗಂಟೆಗೆ ಗುರುಗಳ ಪಾರ್ಥಿವ ಶರೀರವನ್ನು ಬಬಲೇಶ್ವರಕ್ಕೆ ಕೊಂಡೊಯ್ದರು

ಮಹಾ ಸಮಾಧಿ

ಭವ್ಯವಾದ ಶಿವಾನುಭವ ಮಂಟಪದ ವೇದಿಕೆಯ ಮೇಲೆ ಸುಂದರವಾದ ಕೈವಲ್ಯ ಮಂಟಪ ರಚಿಸಿ ದೀಪಾಲಂಕಾರದಲ್ಲಿ ಶ್ರೀಗಳವರ ಪುಣ್ಯ ಶರೀರವನ್ನು ಮೂರ್ತಗೊಳಿಸಿದರು. ದಿ. ೧೧ ರವಿವಾರ ಗ್ರಾಮಾಂತರಗಳ ಜನರು ತೆರಪಿಲ್ಲದೆ ಬಂದು ದರ್ಶನ ಪಡೆದರು.

ದಿ. ೧೨ ಸೋಮವಾರ ಬೆಳಗಿನ ಎಂಟುಗಂಟೆ ಸ್ವಾಮಿಗಳವರ ಪವಿತ್ರ ಶರೀರದ ಮೆರವಣಿಗೆ ಹೊರಡಿಸಲಾಯಿತು. ದೊಡ್ಡ ಪಲ್ಲಕ್ಕಿಯಲ್ಲಿಯೇ ಪುಷ್ಪಕ ವಿಮಾನಾಕಾರದ ಮಂಟಪ ಕಟ್ಟಿ ದೂರದಿಂದಲೂ ಮುಖ ಕಾಣುವಂತೆ ವ್ಯವಸ್ಥಿತ ವಾಗಿ ಅಲಂಕರಿಸಿ ಕೂಡ್ರಿಸಿದ್ದರು. ಬಬಲೇಶ್ವರ ದೊಡ್ಡ ಗ್ರಾಮ! ಅಲ್ಲಲ್ಲಿಯ ಭಕ್ತರ ಅಪೇಕ್ಷೆಯಂತೆ ಎಲ್ಲ ಓಣಿಗಳಲ್ಲಿ ಸುತ್ತಾಡಿ ಉತ್ಸವವು ೪ ಗಂಟೆಗೆ ಬಂದಿತು.

ಅಂದು ವಿಜಾಪುರದಿಂದ ಹೆಚ್ಚಿಗೆ ಬಸ್ಸುಗಳನ್ನು ಬಬಲೇಶ್ವರಕ್ಕೆ ಓಡಿಸ ಲಾಗುತ್ತಿತ್ತು. ಶ್ರೀ ಮಲ್ಲಿಕಾರ್ಜುನ ಶಿವಯೋಗಿಗಳವರು ಶಿಷ್ಯರೊಡನೆ ಆಗಮಿಸಿದ್ದರು. ಹಲವಾರು ಮಠಗಳ ಪಟ್ಟಾಧ್ಯಕ್ಷ ಶಿವಾಚಾರ್ಯರು ಆಗಮನ ವಾಗಿತ್ತು.

ಶ್ರೀ ಗುರುಪಾದೇಶ್ವರ ಗದ್ದುಗೆಯ ಎಡಭಾಗದಲ್ಲಿ ಪೂರ್ವಾಭಿಮುಖವಾಗಿ ಮೊದಲೇ ಸಿದ್ಧಪಡಿಸಿಟ್ಟಿದ್ದ ಗವಿಯನ್ನು ತೆರೆದು ಅಲ್ಲಿ ವಿಧ್ಯುಕ್ತವಾಗಿ ಶ್ರೀ ಶಾಂತವೀರ ಸ್ವಾಮಿಗಳಿಗೆ ಮಹಾಸಮಾಧಿ ಕಾರ್ಯ ನೆರವೇರಿಸಲ್ಪಟ್ಟಿತು. ಬಯಲು ಬಯಲ ಬೆರೆಯಿತು ಓಂ.

* * * *

ಸುಮಾರು ಇಪ್ಪತ್ತು ವರ್ಷಕಾಲ ಸದ್ಗುರು ಶ್ರೀ ಶಾಂತವೀರ ಅಪ್ಪನವರ ಅಡಿಗಳ ಬೆಳಕಿನಲ್ಲಿ ಆಡಿದ ಕೂಸು ನಾನು! ಈಗ ಆ ತಂದೆಯನ್ನು ಕಳೆದುಕೊಂಡೆನೆ? ಇಲ್ಲ! ನನ್ನ ಮನದ ನೆನಹಿನಲ್ಲಿ ನೆಲೆಯಾಗಿ ಇದ್ದಾರೆ!! ಅವರ ಬಾಹ್ಯ ದರ್ಶನಾನಂದದ ಕೊರತೆಯನ್ನು ಪೂಜ್ಯ ಶ್ರೀ ಮಹಾದೇವ ಶಿವಾಚಾರ್ಯರು ತುಂಬಿ ತಂದಿದ್ದಾರೆ. ಅವರ ಸೂಚನೆಯ ಸುಳಿವಿಗನುಸರಿಸಿಯೇ ಈ ಸ್ಮರಣೆಯನ್ನು ರೂಪಿಸಲಾಗಿದೆ ಬರೆಹದಲ್ಲಿ! ಶ್ರೀ ಶಾಂತವೀರ ಅಪ್ಪನವರ ಸಾನಿಧ್ಯದಲ್ಲಿ ಅನುಭವಿಸಿದ ಸುಖಾನಂದವನ್ನೇ ಈ ಸ್ಮರಣೆಯಲ್ಲಿ ಅನುಭವಿಸುತ್ತಿದ್ದೇನೆ.

ಅಂತರಾಳದಲ್ಲಿಯ ಶ್ರೀ ಗುರು ಜ್ಯೋತಿಗೆ ಅನಂತ ಪ್ರಣಾಮಗಳು!!

ಪ್ರಾರ್ಥನೆ

ಪರಮ ಪಾವನ ಮೂರ್ತಿ, ಸದಲಾಮರ ಕೀರ್ತಿ
ಸಕಲ ಜೀವಾತ್ಮರಲಿ ನಿನಗಿಹುದು ಪ್ರೀತಿ
ಹೃದಯದೊಳಗನು ಬೆಳಗು ಹಚ್ಚಿ ಚಿಜ್ಜ್ಯೋತಿಯನು
ನಮನವಿದೆ ನಿನ್ನಡಿಗೆ ಶ್ರೀ ಗುರುವೇ ಜಯತು
ಮಹಾಶಿವರಾತ್ರಿ.

ಅನುಬಂಧ

ಶ್ರೀ ಸದ್ಗುರುಗಳ ವರ್ಧಂತಿ ಉತ್ಸವ ೧೯೭೭ ಸಪ್ಟಂಬರ ೨೧ ರಿಂದ ೨೭

ಪರಮಪೂಜ್ಯ ಶ್ರೀ ಶಾಂತವೀರ ಮಹಾಸ್ವಾಮಿಗಳವರು. ಲಿಂಗ, ತತ್ವ, ಜ್ಞಾನ ವರ್ಧನೆ, ಭಕ್ತೋದ್ಧಾರಗಳನ್ನೊಳಗೊಂಡ ತಮ್ಮ ಪರಮ ಪವಿತ್ರ ಬದುಕನ್ನು ಲಿಂಗ ಮೆಚ್ಚುವಂತೆ ನಿರ್ವಹಿಸಿದ್ದರು. ತಮ್ಮ ಮೃದು ಹೃದಯದಿಂದ ನಾಡಿನ ಹೃದಯವನ್ನೇ ಆಕರ್ಷಿಸಿದ್ದರು. ಪ್ರತಿಷ್ಠಾ ಪ್ರೀತಿ, ಪ್ರಚಾರ, ಪ್ರಸಿದ್ಧಿಗಳಿಂದ ಅವರು ಬಹುದೂರ! ತಮ್ಮ ವರ್ಧಂತಿ ಉತ್ಸವ ನಡಿಸಬೇಕೆಂಬ ಭಕ್ತರ ಇಚ್ಛೆಗೆ ತಡೆ ಹಾಕುತ್ತಲೇ ಬಂದಿದ್ದರು. ಒಪ್ಪಿರಲಿಲ್ಲ. ಅವರಿಗೆ ೬೦ ವರ್ಷ ತುಂಬಿ ಮುಂದೆ ನಡೆದಿರುವಾಗ ಸದ್ಭಕ್ತರ ಇಚ್ಛೆ ಪ್ರಬಲವಾಗಲು ಅದನ್ನು ಮೀರಲು ಆಗದೆ ಮೌನ ಸಮ್ಮತಿ ಸೂಚಿಸಿದ್ದರು.

ಆಗ ನಿಷ್ಠ ಭಕ್ತರ ಉತ್ಸಾಹ ಉಕ್ಕೇರಿತು. ನೂರಾರು ಕಾರ್ಯಕರ್ತರು ಸಿದ್ಧರಾಗಿ ನಿಂತರು. ಗ್ರಾಮದ ಪ್ರಮುಖರ ಸಭೆಯಲ್ಲಿ ಕಾರ್ಯಕ್ರಮಗಳ ಪಟ್ಟಿ ಸಿದ್ಧವಾಯಿತು. ಬುದ್ಧಿ ಜ್ಞಾನಗಳಿಂದ ಹಿರಿಯರಾದ ಹಲವರು ಒಂದೊಂದು ಕಾರ್ಯಭಾಗ ಮುಖಂಡರಾಗಿ ಹೊಣೆ ಹೊತ್ತು ನಿರ್ವಹಿಸಲು ಸಿದ್ಧತೆಗೆ ಮುಂದಾದರು.

ಮಠದಲ್ಲಿ ಶ್ರಾವಣ ಮಾಸದ ಪುರಾಣ ಪ್ರವಚನ ನಡೆದಿತ್ತು. ಪುರಾಣ ಕಥಾನಾಯಕರು ಶ್ರೀ ಅಲ್ಲಮ ಪ್ರಭುಗಳು, ಹೇಳುವವರು ರೂಗಿಯ ಶ್ರೀ ಸೋಮಶೇಖರ ಶಾಸ್ತ್ರಿಗಳವರು. ಅದರ ಮುಕ್ತಾಯ ಸಮಾರಂಭ ೨೭–೯–೭೭ ರಂದು ಆಗುವದು ಆ ದಿನವನ್ನೊಳಗೊಂಡು ಹಿಂದಿನ ಏಳು ದಿನಗಳ ವರ್ಧಂತಿ ಉತ್ಸವದ ಕಾರ್ಯಕ್ರಮಗಳ ಪಟ್ಟಿಯು ಅಪೂರ್ವ ರೀತಿಯಲ್ಲಿ ರೂಪಗೊಂಡಿತು. ಅದು ವರ್ಧಂತಿ ಉತ್ಸವದ ಹಿರಿಮೆಯನ್ನು ನಾಡಿನಲ್ಲಿ ಬೀರಿ ಭಕ್ತಿ ಜ್ಞಾನಗಳ ವರ್ಧನೆಗೆ ಪೋಷಕವಾಗುವ ಮಹಾಕಾರ್ಯಗಳನ್ನು ಹೊಂದಿತ್ತು.

ದಿ. ೨೧ರಂದು ವೇ. ಕೀ. ಮಲ್ಲಿಕಾರ್ಜುನ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ವರ್ಣರಂಜಿತ ವಸ್ತ್ರಗಳನ್ನು ಧರಿಸಿದ ೬೨ ಬಾಲಿಕೆಯರಿಂದ ಪೂಜ್ಯ ಶ್ರೀ

ಶಾಂತವೀರ ಸ್ವಾಮಿಗಳವರಿಗೆ ಮಾಲಾರ್ಪಣೆ ಮಾಡುವದರಿಂದ ವರ್ಧಂತಿ ಉತ್ಸವದ ಪ್ರಾರಂಭ ಸಮಾರಂಭ ನಡೆಯಿತು. ಮುಂದಿನ ಐದು ದಿನಗಳಲ್ಲಿ ಬೆಳಗಿನಲ್ಲಿ ಕ್ರಮವಾಗಿ.

ಶ್ರೀ ಗುರುಪಾದೇಶ್ವರ ಗದ್ದುಗೆಗೆ ಸಹಸ್ರ ಕುಂಭಾಭಿಷೇಕ; ಬಣ್ಣ ಉಡುಗೆಯ ಸಹಸ್ರ ಬಾಲಿಕೆಯರಿಂದ ಶ್ರೀಗಳಿಗೆ ಆರತಿ ಬೆಳಗುವದು, ಅಡ್ಡ ಪಲ್ಲಕ್ಕಿಯಲ್ಲಿ ಶ್ರೀಗಳ ಮೆರವಣಿಗೆ, ಸಹಸ್ರ ದಂಪತಿಗಳಿಂದ ಶ್ರೀಗಳ ಪಾದ ಪೂಜೆ, ವೈಭವ ಪೂರ್ವಕವಾದ ಗುರುಪಾದೇಶ್ವರ ಸಾಲಂಕೃತ ಪೂಜೆ, ಪೂಮಾಲೆಗಳಿಂದ ಅಲಂಕರಿಸಿದ ತೊಟ್ಟಿಲಲ್ಲಿ ಶ್ರೀ ಶಾಂತವೀರ ಸ್ವಾಮಿಗಳನ್ನು ಮೂರ್ತಮಾಡಿಸಿ ಭಕ್ತ ಸುಮಂಗಲೆಯರು ತೂಗಿದುದು, ಅಪೂರ್ವವಾಗಿ ಕ್ರಮವಾಗಿ ನಡೆದವು.

ಎಂದೂ ಎಲ್ಲಿಯೂ ಶ್ರೀ ಗುರುಗಳು ಅಡ್ಡ ಪಲ್ಲಕ್ಕಿಯಲ್ಲಿ ಕುಳಿತು ಮೆರೆದವರಲ್ಲ! ಕೆಲವೊಂದು ಕಡೆ ಅತ್ಯಾಗ್ರಹದ ಕೋರಿಕೆಯನ್ನೂ ಕಟುವಾಗಿ ನಿರಾಕರಿಸಿದ್ದುಂಟು. ಆದರೆ ಸ್ವ–ಸ್ಥಳದಲ್ಲಿ–ಕೊನೆಯ ಹಂತದಲ್ಲಿ ಅದೇ ಹಟದಿಂದ ತಮ್ಮ ನೆಚ್ಚಿನ ಸಹಸ್ರಾರು ಭಕ್ತರ ಆನಂದಾಶ್ರುಗಳನ್ನು ಒಣಗಿಸುವದಕ್ಕೆ ಅವರ ಮನಸ್ಸು ಆ ಹೃದಯಗಳ ಕೂಗಿಗೆ ಓಗೊಟ್ಟು ಅಡ್ಡ ಪಲ್ಲಕ್ಕಿಯನ್ನು ಏರಿದರು. ಇರಲಿ.

ಏಳೂ ದಿನಗಳಲ್ಲಿ ಸಾಯಂಕಾಲ ನಡೆದ ಸಭೆಗಳಲ್ಲಿ

ಮಹಾ ಮಹಾ ಸ್ವಾಮಿಗಳ, ವಿದ್ವಾಂಸರ, ಪ್ರಾಧ್ಯಾಪಕರ, ತತ್ವವೇತ್ತರ, ಕಲಾವಿದರ, ಉಪನ್ಯಾಸಗಳು, ಕಲಾ ಪ್ರದರ್ಶನಗಳು ಜರುಗಿ, ಬೇಸರಿಯದೆ ಹೊತ್ತನರಿಯದೆ ಕುಳಿತಿರುವ ಅಸಂಖ್ಯಾತ ಮಹಾಜನರ ಮನಸ್ಸನ್ನು ತಣಿಸಿದವು. ಇವೆಲ್ಲವು ಶ್ರೀ ಶಾಂತವೀರ ಅಪ್ಪನವರ ದಿವ್ಯ ಜೀವನವನ್ನು ಬೆಳಗಿಸಿದವೇ ಆಗಿದ್ದವು. ಕೊನೆಯದಿನ ಡಾ. ಶ್ರೀ ಜ. ಚ. ನಿ. ಸನ್ನಿಧಿಯವರ ಅಧ್ಯಕ್ಷತೆಯ ಮಹಾಸಭೆಯಲ್ಲಿ ಕಾಣಿಕೆಯಾಗಿ ಸಂಗ್ರಹವಾಗಿದ್ದ ಒಂದು ಲಕ್ಷದ ನಿಧಿಯನ್ನು ಶ್ರೀ ಪೂಜ್ಯ ಶಾಂತವೀರ ಸ್ವಾಮಿಗಳಿಗೆ ಅರ್ಪಿಸಲಾಯಿತು. ಶ್ರೀಗಳು ಆ ಹಣ ವನ್ನು ತಮಗಾಗಿ ಇಟ್ಟುಕೊಳ್ಳದೆ ವಿಶಾಲ ಭಾವನೆಯಿಂದ, ಬಹು ಜಾಣ್ಮೆಯಿಂದ ಸಮಾಜಕ್ಕೆ ಅರ್ಪಿಸಿ ಸಾರಿದರು. ಆ ತ್ಯಾಗದಿಂದ ನಾಡಿಗೆ ನಾಡೇ ಮೆಚ್ಚುವಂತೆ ಅದಕ್ಕೆ ಸಂಬಂಧಿಸಿದ ಒಂದು ವ್ಯವಸ್ಥೆಯನ್ನು ಪ್ರಕಟಿಸಿ ಅಪ್ಪಣೆ ಕೊಡಿಸಿದರು,

ಇದೆಲ್ಲವನ್ನು ಒಳಗೊಂಡ ಅವರ ಆಶೀರ್ವಚನ ಶ್ರೇಷ್ಠತಮವಾಣಿಯಾಗಿತ್ತು ದೇವವಾಣಿಯಾಗಿತ್ತು.

ಪರಮಪೂಜ್ಯ ಶ್ರೀ ಶಾಂತವೀರ ಮಹಾಸ್ವಾಮಿಗಳವರು ನಿರೂಪಿಸಿದ ಆಶೀರ್ವಚನ.

"ಇಂದು ನನ್ನ ಜೀವನದಲ್ಲಿ ಪರ್ವಕಾಲ! ನನ್ನ ಭಕ್ತರಾದ ನಿಮ್ಮೆಲ್ಲರ ಜೀವನದಲ್ಲಿಯೂ ಪರ್ವಕಾಲ!! ಬಬಲೇಶ್ವರದ ಹಾಗೂ ಮಠದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವ ದಿನ. ಇಂದು ನೀವೆಲ್ಲರೂ ನಿಮ್ಮ ಭಕ್ತಿ ವಿಶ್ವಾಸ ಗೌರವ ತೋರಿಸಿದ್ದೀರಿ ನಿಮ್ಮ ಗುರುವಿನ ಋಣ ತೀರಿಸಿದ್ದೀರಿ. ನನ್ನ ಮೇಲೆ ಬಹುದೊಡ್ಡ ಭಾರ ಹೊರಿಸಿದ್ದೀರಿ. ನಿಮ್ಮ ಪ್ರೇಮ, ವಿಶ್ವಾಸ, ಭಕ್ತಿ, ಗೌರವ ನೋಡಿ ನಾನು ಮೂಕನಾಗಿದ್ದೇನೆ. ಆದರೆ ನೀವು ಆಚರಿಸುತ್ತಿರುವ ವೈಭವ ಪೂರ್ಣ ಉತ್ಸವವನ್ನು ನೋಡಲು ನನಗೆ ಕಣ್ಣಿಲ್ಲ ಉತ್ಸವದಲ್ಲಿ ಹರ್ಷದಿಂದ ಕುಣಿದಾಡುತ್ತಿರುವ ನಿಮ್ಮೊಡನೆ ಕುಣಿಯಲು ನನಗೆ ಕಾಲಿಲ್ಲ. ನಿಮ್ಮ ಭಕ್ತಿಪೂರ್ಣ ಭಾವಾವೇಶದಿಂದ ತುಂಬಿದ ಮಾತುಗಳನ್ನು ಗಂಟೆಗಟ್ಟಲೆ ಕುಳಿತು ಕೇಳುವ ಸಾಮರ್ಥ್ಯ ನನ್ನ ಈ ಶರೀರಕ್ಕಿಲ್ಲ. ನನ್ನ ಇಂದಿನ ಸ್ಥಿತಿಯಲ್ಲಿ ಸಾಮಾನ್ಯವಾಗಿ ನನ್ನ ಬಳಿ ಯಾರೂ ಸುಳಿಯಬಾರದು. ಯಾಕಂದರೆ ಭಕ್ತರು ಬೇಡಿದರೆ ಕೊಡಲು ನನ್ನ ಬಳಿ ಹಣವಿಲ್ಲ; ಅನುಚಿತವನ್ನು ತಡೆಯಲು ಶಕ್ತಿಯಿಲ್ಲ. ನಾನು ಎಲ್ಲ ಬಗೆಯಿಂದಲೂ ನಿಸ್ಸಹಾಯಕ! ಆದರೆ ನೀವೆಲ್ಲರೂ ಕಣ್ಣಿಲ್ಲದ, ಕಾಲಿಲ್ಲದ, ಕೃಶ ದೇಹದ, ನಿಸ್ಸಹಾಯಕ ಗುರುವನ್ನು ಹೊತ್ತು ಮೆರೆಸಿದ್ದೀರಿ. ಬಾಯಿ ತುಂಬ ಹೊಗಳಿದ್ದೀರಿ. ಶತ ಸಹಸ್ರ ನಿಧಿಯನ್ನು ಸಮರ್ಪಿಸಿ ಗೌರವಿಸಿದ್ದೀರಿ ನನಗಿಂದು ತುಂಬ ಆನಂದ ವಾಗಿದೆ. ಸಂಪೂರ್ಣ ತೃಪ್ತಿಯಾಗಿದೆ. ನನಗಾದ ಈ ಆನಂದ ನೀವು ಹೊತ್ತು ಮೆರಸಿದ್ದಕ್ಕಾಗಿ ಅಲ್ಲ! ಬಾಯಿ ತುಂಬ ಹೊಗಳಿದ್ದಕ್ಕೂ ಅಲ್ಲ! ನಿಮಗೆ ಗೊತ್ತಿದೆ, ಪ್ರಸಿದ್ಧಿಯನ್ನೂ, ಪ್ರಚಾರವನ್ನೂ, ಪಲ್ಲಕ್ಕಿಯನ್ನೂ ನಾನೆಂದೂ ಬಯಸಿದವನಲ್ಲ! ಆದರೆ ನಿಮ್ಮ ಒತ್ತಾಯಕ್ಕೆ ಮಣಿದು ನಾನು ಅಡ್ಡಪಲ್ಲಕ್ಕಿಯನ್ನಲ್ಲ ನಿಮ್ಮ ಹೃದಯ ಪಲ್ಲಕ್ಕಿಯನ್ನು ಏರಿದ್ದೇನೆಂದು ಭಾವಿಸಿದ್ದೇನೆ. ನಿಮ್ಮ ಶತಸಹಸ್ರ ನಿಧಿ ನನಗೆ ಬೇಕಿಲ್ಲ. ಹಣಕ್ಕಾಗಿ ನಾನೆಂದೂ ಯಾರಿಗೂ ಯಾಚಿಸಿದವನಲ್ಲ. ನಿಮ್ಮ ಶ್ರೀಮಂತಿಕೆ ನನಗೆ ಬೇಡ, ನಿಮ್ಮ ಶ್ರೀಮಂತ ಹೃದಯ ನನಗೆ ಬೇಕು. ನಿಮ್ಮ ಮುಕ್ತ ಹಸ್ತ

ನನಗೆ ಬೇಡ; ಮುಕ್ತ ಮನಸ್ಸು ಬೇಕು. ನಿಮ್ಮ ಕುರುಡ ಭಕ್ತಿ ನನಗೆ ಬೇಡ, ಸುಜ್ಞಾನ ನನಗೆ ಬೇಕು. ನಿಮ್ಮ ಬಾಹ್ಯಾಂಡಬರ ನನಗೆ ಬೇಡ, ಸದಾಚಾರ ಬೇಕು. ಶತಸಹಸ್ರ ನಿಧಿ ನನಗೆ ಬೇಡ, ಶತ ಶತ ಹೃದಯುಗಳು ಒಂದಾಗಿ ಬಾಳುವದು ನನಗೆ ಬೇಕು. ನಿಮ್ಮ ಶ್ರೀಮಂತ ಹೃದಯ, ಮುಕ್ತ ಮನಸ್ಸು, ಸುಜ್ಞಾನ ಸಚ್ಚಾರಿತ್ರ್ಯ ಇವು ನಿಮ್ಮ ಗುರುವಿನ ಬಹು ದೊಡ್ಡ ಆಸ್ತಿ ಅದೇ ನಿಮ್ಮ ಬಾಳಿಗೆ ಬೆಳಕು! ತಾವೆಲ್ಲ ಒಂದಾಗಿ ಮುಕ್ತ ಮನಸ್ಸಿನಿಂದ ಧರ್ಮಕಾರ್ಯದಲ್ಲಿ ಭಾಗಿಯಾದುದನ್ನು ನೋಡಿ ನನಗೆ ಅತೀವ ಆನಂದವಾಗಿದೆ.

"ಬಬಲೇಶ್ವರದ ಜನ ನೀವು ಬಹಳ ದೊಡ್ಡವರು. ನಾನು ಈ ಊರಿಗೆ ಬಂದಾಗ ಕೇವಲ ಎಂಟು ವರ್ಷದವ. ದೂರಿನ ನಾಡಿನಿಂದ ಬಂದವ ಆಗ ಈ ಊರಿನ ಹಿರಿಯರು ಸಂಸ್ಕೃತ ಪಾಠಶಾಲೆಯನ್ನಿಟ್ಟು ನನ್ನನ್ನು ಓದಿಸಿ ಅತಿ ಆತ್ಮೀಯತೆಯಿಂದ ಕಂಡು ರಕ್ಷಾಕವಚವನ್ನಿತ್ತು ಮುನ್ನಡಿಸಿದರು. ಅಂದಿನ ಹಿರಿಯರು ಇಂದಿಲ್ಲ, ಅವರ ಸಂತಾನ ಸಂಬಂಧದವರೇ ಆದ ನೀವೆಲ್ಲರೂ ಅದೇ ಪ್ರೇಮಗೌರವ ದಿಂದ ಕಾಣುತ್ತಿದ್ದೀರಿ....."

"ಬಬಲೇಶ್ವರ ನಗಗೆ ಕರ್ಮಭೂಮಿ! ಹರಳೇಶ್ವರ ತಪೋಭೂಮಿ! ಮನಸ್ಸಿನ ನೆಮ್ಮದಿಗಾಗಿ ಏಕಾಂತಕ್ಕಾಗಿ ಹರಳೇಶ್ವರ ಕ್ಷೇತ್ರಕ್ಕೆ ಹೋಗಿ ಅಲ್ಲಿ ಅನೇಕ ವರ್ಷ ಇದ್ದು ಆಧ್ಯಾತ್ಮ ಚಿಂತನೆಯಲ್ಲಿ ಕಾಲ ಕಳೆದಿದ್ದೇನೆ, ಜ್ಞಾನ ಸಂಪಾದನೆಗಾಗಿ ಹಂಬಲಿಸಿದ್ದೇನೆ. ನನ್ನ ಸಾಧನೆ ಅತ್ಯಲ್ಪ. ಅದನ್ನೇ ದೊಡ್ಡದನ್ನಾಗಿ ಮಾಡಿ ಜಗದ್ಗುರುಗಳು ಮೊದಲಾಗಿ ಮಹಾಸ್ವಾಮಿಗಳು ವಿದ್ವಾಂಸರು ಒಂದು ವಾರ ತಮ್ಮ ಭಾಷಣಗಳ ಉದ್ದಕ್ಕೂ ಅನೇಕ ಮಹಾಶಿವಯೋಗಿಗಳ ಅನೇಕ ಗುಣಗಳನ್ನು ನನ್ನಲ್ಲಿ ಕಲ್ಪಿಸಿ ಹೊಗಳಿದ್ದಾರೆ. ನಾನು ಸಿದ್ಧನಲ್ಲ; ಬದ್ಧನು! ಬದ್ಧನ ಮೇಲೆ ಮುತ್ತಿನ ಮಳೆ ಕರೆದಿದ್ದಾರೆ. ಆ ಎತ್ತರಕ್ಕೆ ನಾನು ಮುಟ್ಟಬಲ್ಲೆನೇ? ಶ್ರೀಗುರುಪಾದೇಶ್ವರ ಕರುಣೆದೋರಿ ಆ ಮಹಾಗುಣಗಳಲ್ಲಿ ಒಂದನ್ನಾದರೂ ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ.

"ಅಜ್ಞಾನದಿಂದ ಸುಜ್ಞಾನದ ಕಡೆಗೆ ಭಕ್ತರನ್ನು ಮುನ್ನಡೆಸುವದೇ ಮಠಗಳ ಹಾಗೂ ಮಠಾಧೀಶರ ಧರ್ಮ! ಮಠಗಳು ಜ್ಞಾನ ದಾಸೋಹದ ಕೇಂದ್ರಗಳಾಗ ಬೇಕು. ಮುಗ್ಧ ಭಕ್ತರ ಶೋಷಣೆಯಾಗಬಾರದು."

"ವಿದ್ಯಾವಂತರನ್ನು ವಿದ್ಯಾಸಂಸ್ಥೆಗಳನ್ನು ಕಂಡರೆ ನನಗೆ ಎಲ್ಲಿಲ್ಲದ ಸಂತೋಷ! ಪವಿತ್ರ ವಿದ್ಯಾ ಸಂಸ್ಥೆಯೊಂದು ಹುಟ್ಟಿ ಬೆಳೆಯುತ್ತಲಿವೆ. ಅದನ್ನು ಬೆಳಸಿಕೊಂಡು

ಹೋಗುವ ಭಾರ ನಿಮ್ಮದು. ಧರ್ಮದ ಬಗೆಗೆ ನಾನೇನೂ ಹೇಳಲಾರೆ. ಕಾಲಾನುಸಾರ ಧರ್ಮ ಬದಲಾಗಬಹುದು ಅದು ಅವಸರದಿಂದ ಆಗದು. ಶತಶತಮಾನಗಳಲ್ಲಿ ಶೈವ ಧರ್ಮ ಮತ ಪಂಥಗಳು ಅನೇಕ ವಿಚಾರ ಧಾರೆಯಲ್ಲಿ ಅನೇಕ ಸಾಧನಾ ಮಾರ್ಗದಲ್ಲಿ ನಡೆದು ಬಸವಾದಿ ಪ್ರಮಥರಿಂದ (ಶಿವಶರಣರಿಂದ) ಪುಷ್ಟಿಗೊಂಡು ಈಗಿನ ವೀರಶೈವ ಧರ್ಮವು ರೂಪಗೊಂಡಿದೆ. ಈ ನಿಮ್ಮ ಧರ್ಮವನ್ನು ಭಕ್ತಿಯಿಂದ ಪಾಲಿಸಿರಿ.

"ನಾನು ಬಬಲೇಶ್ವರ ಬೆಳಕಲ್ಲ! ಬಬಲೇಶ್ವರ ಬೆಳಕು ಆ ಮಹಾಶಿವಯೋಗಿ ಶ್ರೀ ಗುರುಪಾದೇಶ್ವರರು. ನೀವು ಅರ್ಪಿಸಿದ ನಿಧಿ ನನಗೆ ಸಲ್ಲದು. ನಿಮ್ಮೆಲ್ಲರಿಗೆ ಬೆಳಕನ್ನಿತ್ತ ಆ ಗುರುಪಾದ ಶಿವಯೋಗಿಗೆ ಸಲ್ಲಬೇಕು. ಅವರದನ್ನು ಅವರಿಗೇ ಅರ್ಪಿಸುವೆ. ಅವರಿಂದ ಮಹಾಪ್ರಸಾದವಾಗಿ ಆ ನಿಧಿ ಸಮಾಜಕ್ಕೆ ಅರ್ಪಿತ! ಜನಸಾಮಾನ್ಯರ ಹಿತಕ್ಕಾಗಿ ಭೇದ ಭಾವವಿಲ್ಲದೆ ಅದರ ಬಳಕೆಯಾಗಬೇಕು. ವಿಶ್ವಸ್ಥ ಮಂಡಲಿಯೊಂದನ್ನು ರಚಿಸಿ, ಸದ್ವಿನಿಯೋಗವಾಗುವಂತೆ ನೋಡಿಕೊಳ್ಳುವಿರೆಂಬ ಭರವಸೆ ನನಗಿದೆ. ನನ್ನ ಎಲ್ಲ ಸದ್ಭಕ್ತರು ಇಂದಿನಂತೆ ಭೇದ ಭಾವಗಳನ್ನು ಬದಿಗೆ ತಳ್ಳಿ ಮರೆತು ಒಂದಾಗಿ ಊರ ಉನ್ನತಿಯನ್ನೂ ಮಠದ ಗೌರವ-ಘನತೆಯನ್ನೂ ಕಾಪಾಡಿಕೊಂಡು ಬರುವ ಹೃದಯ ಶ್ರೀಮಂತಿಕೆಯನ್ನು ಶ್ರೀ ಗುರುಪಾದ ಶಿವಯೋಗೀಶ್ವರ ನಿಮಗೆಲ್ಲರಿಗೆ ಕರುಣಿಸಲಿ. ನಿಮ್ಮ ಬದುಕು ಹಸನಾಗಲಿ! ಶಾಂತಿ ನಿಮ್ಮದಾಗಲಿ!! ಇದು ವರೆಗೆ ನನ್ನ ಮೇಲೆ ಇಟ್ಟ ಶ್ರದ್ಧೆ ಭಕ್ತಿ ವಿಶ್ವಾಸಗಳನ್ನು ನನ್ನ ಉತ್ತರಾಧಿಕಾರಿಯಾದ, ಇನ್ನೂ ಮಗುವಾದ ಮಹಾದೇವ ಸ್ವಾಮಿಯ ಮೇಲೂ ಇಡುವಿರೆಂದು ನಂಬಿದ್ದೇನೆ. ಶುಭವಾಗಲಿ! ಮಂಗಲವಾಗಲಿ!!

ಓಂ ಶಾಂತಿ ಶಾಂತಿ ಶಾಂತಿಃ

ಸಮಾಜದ ಪ್ರಮುಖರ ಕೋರಿಕೆಯಂತೆ ಶ್ರೀ ಶ್ರೀ ಸದ್ಗುರು ಶಾಂತವೀರ ಸ್ವಾಮಿಗಳವರು ತಾವೇ ತಮ್ಮನ್ನೊಳಗೊಂಡು ೫ ಮಂದಿ ಮಹನೀಯರ ಆಜನ್ಮ ಸದಸ್ಯರ ವಿಶ್ವಸ್ಥ ಮಂಡಳಿ (ಟ್ರಸ್ಟ ಕಮೀಟಿ) ರಚಿಸಿದರು. ತಾವೇ ಅಧ್ಯಕ್ಷರಾದರು.

'ಸದಸ್ಯರಲ್ಲಿ ಕಾಲಾನುಸಾರ ತೆರವಾಗುವ ಸ್ಥಳಕ್ಕೆ ಉಳಿದ ಸದಸ್ಯರು ಮತ್ತೊಬ್ಬರನ್ನು ಆಯ್ಕೆ ಮಾಡಿಕೊಳ್ಳಬೇಕು. ಆಯಾ ಕಾಲಕ್ಕೆ ಮಠದ ಪಟ್ಟಾಧ್ಯಕ್ಷರಾಗಿರುವವರು ಒಬ್ಬ ಸದಸ್ಯರಾಗಿರಬೇಕು' ಎಂದು ನಿಯಮನವಾಯಿತು.

ಈ ಸಮಿತಿ ಈಗ ಈ ನಿಧಿಯ ಸದ್ವಿನಿಯೋಗ ಕಾರ್ಯ ನಿರ್ವಹಿಸುತ್ತಿದೆ.

ಸದ್ಗುರು ಶ್ರೀ ಶಾಂತವೀರ ಸ್ವಾಮಿಗಳವರ ಅಪೇಕ್ಷೆಯಂತೆ ಈ ವಿಶ್ವಸ್ಥ ಮಂಡಳಿಯು ವೀರಶೈವ ಧರ್ಮ, ಸಾಹಿತ್ಯದ ಪ್ರಚಾರಕ್ಕಾಗಿ ವಿಶೇಷ ಗಮನ ವೀಯುತ್ತಿದ್ದು ಶ್ರೀ ಸದ್ಗುರು ಗುರುಪಾದ ಶಿವಯೋಗಿಗಳ ಹಾಗೂ ಸದ್ಗುರು ಶ್ರೀ ಶಾಂತವೀರ ಶಿವಯೋಗಿಗಳ ಪವಿತ್ರ ಗದ್ದುಗೆಗಳಿಗೆ ಪ್ರತಿ ದಿನ ನಿರಂತರ ರುದ್ರಾಭಿಷೇಕದ ವ್ಯವಸ್ಥೆಯನ್ನು ಮಾಡಿದೆ. ಅಲ್ಲದೆ ಸಾಹಿತ್ಯ ಸಂಸ್ಕೃತಿ, ಧರ್ಮ ಪ್ರಚಾರಕ್ಕಾಗಿ ಧರ್ಮ, ಸಾಹಿತ್ಯ, ವಿಜ್ಞಾನ, ವೈದ್ಯಕೀಯ ಮೊದಲಾದ ವಿಷಯಗಳ ಮೇಲೆ ಬರೆದ ಗ್ರಂಥಗಳನ್ನು ಸ್ವತಃ ಪ್ರಕಟಿಸುವ ಇಲ್ಲವೆ ಅಂತಹ ಗ್ರಂಥಗಳನ್ನು ಬರೆದ ಲೇಖಕರಿಗೆ ಅವುಗಳನ್ನು ಪ್ರಕಟಿಸಲು ಧನಸಹಾಯ ಮಾಡುವ ಯೋಜನೆ ಯನ್ನು ಹಮ್ಮಿಕೊಂಡಿದೆ. ಶಿಕ್ಷಣ ಕ್ಷೇತ್ರದಲ್ಲಿ ಒಳ್ಳೆಯ ಶಿಕ್ಷಕರನ್ನು ಗೌರವಿಸುವದು, ಪ್ರತಿಭಾಶಾಲಿ ವಿದ್ಯಾರ್ಥಿಗಳಿಗೆ ಪುರಸ್ಕಾರ, ಗ್ರಂಥಾಲಯಗಳಿಗೆ ಸಹಾಯ ಹೀಗೆ ಹಲವಾರು ಯೋಜನೆಗಳನ್ನು ರೂಪಿಸಿಕೊಂಡು ಅವುಗಳನ್ನು ಕಾರ್ಯಗತಗೊಳಿಸಲು ವಿಶ್ವಸ್ಥ ಮಂಡಳಿಯವರು ಪ್ರಯತ್ನಿಸುತ್ತಿದ್ದಾರೆ. ಒಟ್ಟಿನ ಮೇಲೆ ಈಗ ವಿಶ್ವಸ್ಥ ಮಂಡಳಿಯು ಸದ್ಗುರು ಶ್ರೀ ಶಾಂತವೀರ ಮಹಾಸ್ವಾಮಿಗಳೂ ತಮ್ಮ ಜೀವನ ದುದ್ದಕ್ಕೂ ಮಾಡಿದ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗುವ ಹಂಬಲ ಇರಿಸಿಕೊಂಡಿದ್ದು, ಈ ದಿಶೆಯಲ್ಲಿ ಪ್ರಯತ್ನಶೀಲವಾಗಿದೆ.

ಓಂ ಶ್ರೀ ಗುರುವೇ ನಮಃ



ಶ್ರೀ ಶಿರಹಟ್ಟಿಯವರು ೯೧ ಸಂವತ್ಸರಗಳನ್ನು ಕಂಡವರು ಶಿಕ್ಷಣ ಕ್ಷೇತ್ರದಲ್ಲಿ ದುಡಿದು ಹಣ್ಣಾದವರು, ಸಾಹಿತ್ಯದಲ್ಲಿ ಅವರು ಮಾಡಿದ ಕೃಷಿ ಅಪಾರ. ಅವರು ಬರೆದ ತಾತ್ವಿಕ ಕಾವ್ಯಗಳು, ಮಹಾತ್ಮರ ಜೀವನ ಚರಿತ್ರೆಗಳು, ಐತಿಹಾಸಿಕ ಕೃತಿಗಳು ಅತ್ಯಂತ ಉದ್ಬೋಧಕವಾದವುಗಳು. ಚರಿತ್ರೆ ಬರೆಯುವಲ್ಲಿ ಶ್ರೀ ಶಿರಹಟ್ಟಿಯವರು ಎತ್ತಿದ ಕೈ. ಅದರಲ್ಲೂ ಶರಣರ ಚರಿತ್ರೆ ಬರೆಯುವಲ್ಲಿ ಅವರನ್ನು ಮೀರಿಸುವವರು ಬಹಳ ಕಡಿಮೆ.

ಅವರ ಜೀವನವೇ ಒಂದು ಪವಿತ್ರ ಪುಸ್ತಕ. ಅವರದು ಶರಣ ಜೀವನ. ನಯ, ವಿನಯ, ಸರಳತೆ, ಸಜ್ಜನಿಕೆಯ ಸಾಗರ ಮೂರ್ತಿ ಈ ತೊರವಿಯ ಶರಣ. ಕನ್ನಡ ನಾಡಿನ ಧೀಮಂತ ಸಾಹಿತಿಗಳಿಗೆ ಆಶ್ರಯವಿತ್ತ ತೊರವಿ ಶರಣ ಸಾಹಿತಿ ಲಕ್ಕಪ್ಪನವರ ಜನ್ಮಭೂಮಿ.

ಹರಳೇಶ್ವರದ ತಪೋಮೂರ್ತಿ, ಬಬಲೇಶ್ವರದ ಬೆಳಕು ಪೂಜ್ಯ ಶ್ರೀ ಶಾಂತವೀರ ಸ್ವಾಮಿಗಳ ದಿವ್ಯ ಜೀವನದ ಚಾರಿತ್ರಿಕ ಘಟನೆಗಳೂ, ಶ್ರೀ ಶಿರಹಟ್ಟಿಯವರ ಅನುಭವದ ಅಮೃತ ಹಂಚಿಕೊಂಡು ಹೊರಬಂದ "ಗುರುಕರುಣೆ-ಗುರುಸ್ಮರಣೆ" ಸದಾ ಸ್ಮರಿಸಬೇಕಾದ ಗ್ರಂಥ.

—ಶ್ರೀ ಎಸ್. ಎಸ್. ಕಬ್ಬಿನ

ತ್ವರಿತ ಮುದ್ರಣಾಲಯ ಗಂಗಾಪೂರ ಓಣಿ,
ಕುಂಬಾರಗರಡಿ ಹತ್ತಿರ, ಗದಗ–೫೮೨ ೧೦೧